₹6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಭಾನುವಾರ 31.05.2026 ಸಂಪುಟ: 11 ಸಂಚಿಕೆ: 135 ಪುಟಗಳು: 10+4 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ವೈಭವ್ ಸೂರ್ಯವಂಶಿಗೆ ಬಂಪರ್ ಆಫರ್

ಐಪಿಎಲ್ 2026ರಲ್ಲಿ ಸ್ಫೋಟಕ ಬ್ಯಾಟಿಂಗ್‌ನಿಂದ ಭಾರೀ ಸದ್ದು ಮಾಡಿದ 15 ವರ್ಷದ ಬ್ಯಾಟಿಂಗ್ ಸೆನ್ಸೇಷನ್ ವೈಭವ್ ಸೂರ್ಯವಂಶಿ ಜಾರ್ಖಂಡ್ ಆರೋಗ್ಯ ಇಲಾಖೆಯ ಬ್ರ್ಯಾಂಡ್ ರಾಯಭಾರಿಯಾಗಲಿದ್ದಾರೆ. ಜಾರ್ಖಂಡ್ ಆರೋಗ್ಯ ಸಚಿವ ಡಾ.ಇರ್ಫಾನ್ ಅನ್ಸಾರಿ ಅವರು ಶನಿವಾರ ತಮ್ಮ ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಸೂರ್ಯವಂಶಿಗೆ ಬ್ರ್ಯಾಂಡ್ ಅಂಬಾಸಿಡರ್ ಆಫರ್ ಅನ್ನು ಘೋಷಿಸಿದ್ದಾರೆ.

ಜೂನ್ 3ರಂದು ಲೋಕಭವನದಲ್ಲಿಯೇ ಅಧಿಕಾರ ಸ್ವೀಕಾರ | ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಡಿ.ಕೆ.ಶಿವಕುಮಾರ್ ಅವಿರೋಧ ಆಯ್ಕೆ | ಸಿಎಂ ಹಾದಿ ಸಲೀಸಾದರೂ ಸಂಪುಟ ರಚನೆ ದೊಡ್ಡ ಸವಾಲು

ಡಿಕೆ ಪಟ್ಟಾಭಿಷೇಕಕ್ಕೆ ಮುಹೂರ್ತ ನಿಗದಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಡಿಕೆ ಸಾಹೇಬನಿಗೆ ಮುಖ್ಯಮಂತ್ರಿ ಸ್ಥಾನ ಖಚಿತವಾಗಿದ್ದರೂ ಶುಕ್ರವಾರ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಔಪಚಾರಿಕ ಸಭೆಯಲ್ಲಿ ಸರ್ವಾನುಮತದಿಂದ ಅನುಮೋದನೆಯಾಗುವುದರೊಂದಿಗೆ ಡಿ.ಕೆ.ಶಿವಕುಮಾರ್ ರಾಜ್ಯದ ನೂತನ ಮುಖ್ಯಮಂತ್ರಿ ಎಂದು ಘೋಷಣೆಯಾಗಿದೆ. 'ಶುಭ'ಮುಹೂರ್ತದ ಹುಡುಕಾಟದಲ್ಲಿ ಜೂನ್ 3ಕ್ಕೆ 21ನೇ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಲಿದ್ದಾರೆ.

ಸಿದ್ದರಾಮಯ್ಯ ಅವರ ರಾಜೀನಾಮೆಯಿಂದ ತೆರವಾಗಿದ್ದ ಮುಖ್ಯಮಂತ್ರಿ ಸ್ಥಾನಕ್ಕೆ ಡಿ.ಕೆ.ಶಿವಕುಮಾರ್ ಆಯ್ಕೆ ಖಚಿತವಾಗಿದ್ದರೂ, ಸಿಎಲ್‌ಪಿ ಸಭೆಯಲ್ಲಿ ತೀರ್ಮಾನವಾಗಬೇಕಿತ್ತು. ಈ ಕಾರಣಕ್ಕೆ ಒನ್‌ಲೈನ್ ಅಜೆಂಡಾದೊಂದಿಗೆ ಶನಿವಾರ ನಡೆದ ಶಾಸಕಾಂಗ ಪಕ್ಷದ ಸಭೆಯಲ್ಲಿ, ಹಂಗಾಮಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಡಿ.ಕೆ. ಶಿವಕುಮಾರ್ ಹೆಸರನ್ನು ಪ್ರಸ್ತಾಪಿಸಿದರು. ಇದಕ್ಕೆ ಮಾಜಿ ಗೃಹ ಸಚಿವ ಡಾ.ಜಿ.ಪರಮೇಶ್ವರ ಸಹಮತ ವ್ಯಕ್ತಪಡಿಸಿದರು. ಬಳಿಕ ಇಡೀ ಶಾಸಕಾಂಗ ಪಕ್ಷದ ಸಭೆ ಡಿ.ಕೆ.ಶಿವಕುಮಾರ್ ಅವರನ್ನು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಹಾಗೂ ಮುಖ್ಯಮಂತ್ರಿಯನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡುವ ಮೂಲಕ ಸತತ ಮೂರು ವರ್ಷಗಳ ಡಿಕೆಶಿ ಕನಸು ಅಧಿಕೃತವಾಗಿ ನನಸಾಯಿತು.

ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಗೂ ಮೊದಲೇ ಡಿ.ಕೆ.ಶಿವಕುಮಾರ್ ಅವರು ಸಹೋದರ ಡಿ.ಕೆ.ಸುರೇಶ್ ಜತೆ ಲೋಕಭವನಕ್ಕೆ ತೆರಳಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಥ್ ಅವರೊಂದಿಗೆ ಚರ್ಚಿಸಿದ್ದರು. ಈ ವೇಳೆ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲು ಅನೌಪಚಾರಿಕವಾಗಿ ಸಮಯ ಕೇಳಿದ್ದರು. ಜೂನ್.1, 3, 5ರಂದು ಸಮಯವನ್ನು ನೀಡಿದ್ದರು. ಜ್ಯೋತಿಷಿಗಳೊಂದಿಗೆ ಚರ್ಚಿಸಿದ್ದ ಡಿ.ಕೆ.ಶಿವಕುಮಾರ್ ಅವರು ಜೂನ್ 3 ಸಂಜೆ 5.15ಕ್ಕೆ ಪ್ರಮಾಣವಚನ ಸ್ವೀಕರಿಸಲು ನಿರ್ಧರಿಸಿದ್ದಾರೆ.

ಸಿಎಲ್‌ಪಿ ನಾಯಕ ಡಿ.ಕೆ.ಶಿವಕುಮಾರ್ ಅವರು ಲೋಕಭವನಕ್ಕೆ ತೆರಳಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಥ್ ಮುಂದೆ ಸರಕಾರ ರಚನೆಗೆ ಹಕ್ಕು ಮಂಡಿಸಿದರು.

ಸಿಎಲ್‌ಪಿ ಸಭೆಯ ಬಳಿಕ ನಿಯೋಜಿತ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ನಿರ್ಗಮಿತ ಮುಖ್ಯಮಂತ್ರಿ ಸಿದ್ದರಾಮಯ್ಯ, ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಸೇರಿದಂತೆ 10 ಮಂದಿ ಲೋಕಭವನಕ್ಕೆ ತೆರಳಿ ನೂತನ ನಾಯಕನ ಆಯ್ಕೆಯ ಮಾಹಿತಿ ನೀಡಿ, ಜೂನ್ 3ಕ್ಕೆ ಪ್ರಮಾಣ ವಚನ ಬೋಧಿಸಲು ಮನವಿ ಮಾಡಿದ್ದಾರೆ.

ಲೋಕಭವನದಲ್ಲಿಯೇ ಪ್ರಮಾಣವಚನ: ಈ ಹಿಂದೆ ಸೋಮವಾರವೇ ಡಿ.ಕೆ.ಶಿವಕುಮಾರ್ ಅವರು ಪ್ರಮಾಣ ವಚನ ಸ್ವೀಕರಿಸಲಿದ್ದಾರೆ ಎಂದು ಹೇಳಲಾಗಿತ್ತು. ಆದರೆ, ಶುಭಗಳಿಗೆಯ ಕಾರಣಕ್ಕೆ ಬುಧವಾರಕ್ಕೆ ಮುಂದೂಡಿ ಕೆಯಾಗಿದೆ. ಇನ್ನು ವಿಧಾನಸೌಧದ ಮೆಟ್ಟಿಲುಗಳ ಮುಂಭಾಗ ಡಿಕೆಶಿ ಪ್ರಮಾಣ ವಚನ ಸ್ವೀಕರಿಸಲಿ ದ್ದಾರೆಂದು ಕಾರ್ಯಕ್ರಮಕ್ಕೆ ತಯಾರಿ ಆರಂಭಿಸಲಾಗಿತ್ತು. ಆದರೆ ಅಂತಿಮವಾಗಿ ಲೋಕಭವನದಲ್ಲಿಯೇ ಸರಳ ಕಾರ್ಯಕ್ರಮದಲ್ಲಿ ಪ್ರಮಾಣ ವಚನ ಸ್ವೀಕರಲಿಸಿದ್ದಾರೆ ಎಂದು ಹೇಳಲಾಗಿದೆ. ಕಾರ್ಯಕ್ರಮವನ್ನು ಲೋಕಭವನಕ್ಕೆ ಸ್ಥಳಾಂತರಿಸುವುದಕ್ಕೆ ಸ್ಪಷ್ಟ ಕಾರಣ ನೀಡದಿದ್ದರೂ, ಬೆಂಗಳೂರಿನಲ್ಲಿ ಕಳೆದ ಕೆಲ ದಿನಗಳಿಂದ ನಿತ್ಯ ಸಂಜೆ ಮಳೆಯಾಗುತ್ತಿದೆ. ಆದ್ದರಿಂದ ಬುಧವಾರವೂ ಮಳೆಯಾದರೆ ಇಡೀ ಕಾರ್ಯಕ್ರಮಕ್ಕೆ ಸಮಸ್ಯೆ ಯಾಗುತ್ತದೆ ಎನ್ನುವ ಕಾರಣಕ್ಕೆ ಲೋಕಭವನದಲ್ಲಿ ಅಧಿಕಾರ ಸ್ವೀಕರಿಸಲು ತೀರ್ಮಾನಿಸಿದ್ದಾರೆ ಎಂದು ಹೇಳಲಾಗಿದೆ.

ಬುಧವಾರ ಡಿ.ಕೆ.ಶಿವಕುಮಾರ್ ಅವರೊಂದಿಗೆ ಎಷ್ಟು ಮಂದಿ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ ಎನ್ನುವ ಬಗ್ಗೆ ಈವರೆಗೆ ಸ್ಪಷ್ಟನೆ ಸಿಕ್ಕಿಲ್ಲ. ಮೂಲಗಳ ಪ್ರಕಾರ ಆರರಿಂದ 10 ಮಂದಿಯನ್ನು ಮಾತ್ರ ಮೊದಲ ಹಂತದಲ್ಲಿ ಸಂಪುಟಕ್ಕೆ ಸೇರಿಸಿಕೊಂಡು ಒಂದೆರಡು ವಾರಗಳ ಬಳಿಕ ಪೂರ್ಣ ಪ್ರಮಾಣದ ಸಂಪುಟವನ್ನು ಅಸ್ತಿತ್ವಕ್ಕೆ ತರುವ ಆಲೋಚನೆಯಲ್ಲಿ ಡಿ.ಕೆ. ಶಿವಕುಮಾರ್ ಇದ್ದಾರೆ. ಜೂನ್ 12ಕ್ಕೆ ರಾಜ್ಯಸಭಾ ಚುನಾವಣೆಗೆ ನಾಮಪತ್ರ ಸಲ್ಲಿಕೆಗೆ ಅಂತಿಮ ದಿನವಾಗಿದ್ದು, 18ಕ್ಕೆ ಮತದಾನ ನಡೆಯಲಿದೆ. ಈ ಪ್ರಕ್ರಿಯೆ ಬಳಿಕವೇ ಕರ್ನಾಟಕದಲ್ಲಿ ಪೂರ್ಣ ಪ್ರಮಾಣದ ಸಂಪುಟ ಅಸ್ತಿತ್ವಕ್ಕೆ ಬರಲಿದೆ ಎಂದು ಹೇಳಲಾಗಿದೆ.

ಕೆಪಿಸಿಸಿ ರೇಸ್‌ಗೆ ಇನ್ನಷ್ಟು ಹೆಸರು?

ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಿ ಆಯ್ಕೆಯಾಗುತ್ತಿದ್ದಂತೆ ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಯಾರು ಎನ್ನುವ ಕುತೂಹಲ ಮುಂದುವರಿದಿದೆ. ಈ ಹಿಂದೆ ಸತೀಶ್ ಜಾರಕಿಹೊಳಿ ಅವರ ಹೆಸರು ಮುನ್ನೆಲೆಗೆ ಬಂದಿತ್ತಾದರೂ, ಇದೀಗ ಇವರೊಂದಿಗೆ ಡಾ.ಜಿ.ಪರಮೇಶ್ವರ, ಶಿವರಾಜ್ ತಂಗಡಗಿ, ಈಶ್ವರ್ ಖಂಡ್ರೆ ಹೆಸರು ಕೇಳಿಬರುತ್ತಿದೆ. ಸತೀಶ್ ಜಾರಕಿಹೊಳಿ ಅವರು ಅಧ್ಯಕ್ಷ ಸ್ಥಾನದೊಂದಿಗೆ ಸಚಿವ ಸ್ಥಾನ ಕೇಳಿದ್ದರಿಂದ ಹಾಗೂ ಕೆಲ ನಾಯಕರು ಆಕ್ಷೇಪ ವ್ಯಕ್ತಪಡಿಸಿದ ಕಾರಣಕ್ಕೆ ಹೊಸ ಹೆಸರು ಮುನ್ನೆಲೆಗೆ ಬರುತ್ತಿದೆ ಎನ್ನಲಾಗಿದೆ.

ಡಿಸಿಎಂ ಸ್ಥಾನದ ಮೇಲೆ ಹೆಚ್ಚಿದ ಒತ್ತಡ

3-4 ಡಿಸಿಎಂ ಸ್ಥಾನ ಸೃಷ್ಟಿಸಬೇಕು ಎನ್ನುವ ಚರ್ಚೆ ಸಿದ್ದರಾಮಯ್ಯನವರ ವಲಯದಿಂದ ಶುರುವಾಗಿದೆ. ಡಾ.ಜಿ.ಪರಮೇಶ್ವರ, ಈಶ್ವರ್ ಖಂಡ್ರೆ, ಜಮೀರ್ ಅಹ್ಮದ್, ಎಂ.ಬಿ. ಪಾಟೀಲ್ ಸೇರಿ ಹಲವರು ತಮಗೆ ಡಿಸಿಎಂ ಸ್ಥಾನ ನೀಡಿ ಎನ್ನುವ ಬೇಡಿಕೆಯಿಟ್ಟಿದ್ದಾರೆ. ಆದರೆ ಪಕ್ಷದ ಹೈಕಮಾಂಡ್ ಡಿಸಿಎಂ ಸ್ಥಾನವೇ ಬೇಡ ಎನ್ನುವ ಆಲೋಚನೆಯಲ್ಲಿದೆ ಎನ್ನಲಾಗಿದೆ. ಆದ್ದರಿಂದ ಡಿ.ಕೆ.ಶಿವಕುಮಾರ್ ಅವರ ಸಂಪುಟದಲ್ಲಿ ಉಪಮುಖ್ಯಮಂತ್ರಿ ಸ್ಥಾನವಿರುವುದೋ ಇಲ್ಲವೋ ಎನ್ನುವ ಕುತೂಹಲ ಅನೇಕರಲ್ಲಿದೆ.

ಸಿಎಲ್‌ಪಿಯಲ್ಲಿ ಏನಾಯಿತು?

- 8 ವರ್ಷ ಸಿಎಂ ಆಗಿದ್ದ ಸಿದ್ದರಾಮಯ್ಯ ಅವರಿಗೆ ಅಭಿನಂದನೆ ನಿರ್ಣಯ
- ಕೇಂದ್ರ ಸರಕಾರದಿಂದ ರಾಜ್ಯಕ್ಕೆ ಆದ ಅನ್ಯಾಯಗಳ ಬಗ್ಗೆ ಪ್ರಸ್ತಾಪ ಸಿದ್ದರಾಮಯ್ಯ ಪ್ರಸ್ತಾಪ
- ಹೈಕಮಾಂಡ್‌ನ ಎಲ್ಲ ನಾಯಕರಿಗೆ ಧನ್ಯವಾದ ಸಲ್ಲಿಸಿದ ಸಿದ್ದರಾಮಯ್ಯ
- ಡಿ.ಕೆ.ಶಿವಕುಮಾರ್ ಅವರನ್ನು ಸಿಎಲ್‌ಪಿ ನಾಯಕನಾಗಿ ಆಯ್ಕೆ ಮಾಡಲು ಪ್ರಸ್ತಾಪ
- ಡಾ.ಜಿ.ಪರಮೇಶ್ವರ ಅವರಿಂದ ಬೆಂಬಲ; ಎಲ್ಲ ಶಾಸಕರಿಂದ ಬೆಂಬಲ

ಸೊಂಪಾದ ಪುಟಗಳು

ಅಮೆರಿಕ ಮತ್ತು ಇರಾನ್ ಯುದ್ಧಕ್ಕೂ, ಬಿಯರ್ ಬಾಟಲಿಗೂ ಏನು ಸಂಬಂಧ?

ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್ 6

ಇದು ಸಂಕ್ಷಿಪ್ತ ಹಾಲುಮತ ಪುರಾಣದ ಕತೆ!

ವಚನಾಮೃತ
ರವಿ ಹಂಜ್ 7

ದಾರಿದೀಪೋಕ್ತಿ

ಬದಲಾವಣೆಯ ಗಾಳಿ ಬೀಸಲಾರಂಭಿಸಿದಾಗ ಕೆಲವರು ಅದನ್ನು ತಡೆಯಲು ಗೋಡೆಯನ್ನು ಕಟ್ಟುತ್ತಾರೆ. ಇನ್ನು ಕೆಲವರು ಗಾಳಿಯಂತ್ರವನ್ನು ನಿಲ್ಲಿಸುತ್ತಾರೆ. ಏನು ಮಾಡಬೇಕು ಎಂಬ ಆಯ್ಕೆ ಮತ್ತು ವಿವೇಚನೆ ನಿಮಗೆ ಬಿಟ್ಟದ್ದು.

ವಕ್ರತುಂಡೋಕ್ತಿ

ಅಡುಗೆ ರುಚಿಯಿಲ್ಲದಿದ್ದರೂ ಪರವಾಗಿಲ್ಲ, ಅದು ಫೋಟೋದಲ್ಲಿ ಚೆನ್ನಾಗಿ ಕಾಣಿಸಬಹುದು. ಕಾರಣ ಫೇಸ್ ಬುಕ್‌ನಲ್ಲಿ ರುಚಿ ಬಗ್ಗೆ ಯಾರೂ ತಲೆಕೆಡಿಸಿಕೊಳ್ಳುವುದಿಲ್ಲ.

ಸ್ಫೋಟಕ್ಕೆ ಸಂಚು 9 ಉಗ್ರರ ಸೆರೆ

ದೆಹಲಿ: ದೆಹಲಿ, ಮುಂಬೈ ಸೇರಿದಂತೆ ದೇಶದ ವಿವಿಧ ಮಹಾನಗರಗಳಲ್ಲಿ ಸರಣಿ ಸ್ಫೋಟಕ್ಕೆ ಸಂಚು ನಡೆಸಿದ್ದ ಪಾಕಿಸ್ತಾನದ ಬೇಹುಗಾರಿಕಾ ಸಂಸ್ಥೆ 'ಐಎಸ್‌ಐ' ಮತ್ತು ಪಾತಕಿ ದಾವೂದ್ ಇಬ್ರಾಹಿಂ ಜತೆ ನಂಟು ಹೊಂದಿದ್ದ ಮುಂಬೈ ಭೂಗತಲೋಕದ ಪಾತಕಿಗಳು ಸೇರಿದಂತೆ 9 ಉಗ್ರರನ್ನು ದೆಹಲಿ ಪೊಲೀಸರ ವಿಶೇಷ ತಂಡ ರಾಷ್ಟ್ರ ರಾಜಧಾನಿಯಲ್ಲಿ ಬಂಧಿಸಿದೆ. ಬಂಧಿತರು ದೆಹಲಿ, ಮುಂಬೈ ಮತ್ತು ಪಂಜಾಬ್ ನಿವಾಸಿಗಳು. ಕೆಲವರು ವಿದೇಶಿ ಪ್ರಜೆಗಳು ಇದ್ದಾರೆ ಎಂದು ದೆಹಲಿ ಪೊಲೀಸರ ವಿಶೇಷ ಘಟಕ ತಿಳಿಸಿದೆ. ಬಂಧಿತರಿಂದ ಅಪಾರ ಪ್ರಮಾಣದ ಮದ್ದುಗುಂಡುಗಳು ಮತ್ತು ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ.

ಸಿಎನ್‌ಜಿ ಬೆಲೆ ಮತ್ತೆ ಹೆಚ್ಚಳ

ಮುಂಬೈ: ಸತತ ತೈಲ ಬೆಲೆ ಏರಿಕೆ ಮಾದರಿಯಲ್ಲೇ ಸಂಕುಚಿತ ನೈಸರ್ಗಿಕ ಅನಿಲ (ಸಿಎನ್‌ಜಿ) ದರ ಕೂಡ ಮತ್ತೆ ಏರಿಕೆಯಾಗಿದೆ. ಸರಕಾರಿ ಅನಿಲ ವಿತರಕ ಮಹಾನಗರ ಗ್ಯಾಸ್ ಲಿಮಿಟೆಡ್ ಸಂಸ್ಥೆಯು ಪ್ರತಿ ಒಂದು ಕೆಜಿ ಸಿಎನ್‌ಜಿಗೆ ಎರಡು ರುಪಾಯಿಗಳಷ್ಟು ಹೆಚ್ಚಳ ಮಾಡಿದೆ. ಮುಂಬೈ ವ್ಯಾಪ್ತಿಯಲ್ಲಿ ಅನ್ವಯವಾಗುವಂತೆ ಹೊಸ ದರ ಘೋಷಿಸಿದ್ದು, ಪರಿಷ್ಕೃತ ದರವು ಮುಂಬೈ, ಥಾಣೆ, ನವಿ ಮುಂಬೈ ಮತ್ತು ಮುಂಬೈ ಮೆಟ್ರೋಪಾಲಿಟನ್ ಪ್ರದೇಶದ ಇತರ ಭಾಗಗಳಿಗೆ ಅನ್ವಯವಾಗಲಿದೆ. ಪರಿಷ್ಕೃತ ದರದಲ್ಲಿ ಸಿಎನ್‌ಜಿ ಬೆಲೆ ಪ್ರತಿ ಕೆಜಿಗೆ 2 ರು. ಹೆಚ್ಚಿಸಲಾಗಿದ್ದು, 86 ರು.ಗಳಿಗೆ ಏರಿಕೆಯಾಗಿದೆ. ಇನ್ನೂ ಗೃಹ ಬಳಕೆಯ ಪಿಎನ್‌ಜಿ ಸ್ಟ್ಯಾಂಡರ್ಡ್ ಕ್ಯೂಬಿಕ್ ಮೀಟರ್‌ಗೆ 50 ಪೈಸೆ ಹೆಚ್ಚಿಸಲಾಗಿದೆ. ಪರಿಷ್ಕೃತ ದರಗಳು ಶನಿವಾರದಿಂದಲೇ ಜಾರಿಗೆ ಬರಲಿದೆ.

ಫನ್‌ತರಂಗ
- ರಘುಪತಿ ಶೃಂಗೇರಿ -

ಸಚಿವ ಸ್ಥಾನಕ್ಕೆ ಮೊದಲ ಸುತ್ತಲ್ಲಿ ಕೆಲವರ ಹೆಸರು ಬಹುತೇಕ ಅಂತಿಮ



ಅಗತ್ಯವಿದ್ದಲ್ಲಿ ಸಿಂಧೂರ 2.0ಗೆ ಭಾರತ ಸನ್ನದ್ಧ

ಪುಣೆ: ಅಗತ್ಯವಿದ್ದಲ್ಲಿ ಸಿಂಧೂರ ಕಾರ್ಯಾಚರಣೆ 2.0ಗೆ ನಮ್ಮ ಸಶಸ್ತ್ರ ಪಡೆಗಳು ಸಂಪೂರ್ಣ ಸನ್ನದ್ಧಗೊಂಡಿವೆ ಎಂದು ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಯುದ್ಧಕ್ಕಾಗಿ ಮೂರೂ ಪಡೆಗಳು ಸಮನ್ವಯತೆ ಸಾಧಿಸಿವೆ. ಮೂರು ಪಡೆಗಳು ತೀವ್ರ ತಯಾರಿ ನಡೆಸಿದ್ದು, ಯುದ್ಧ ನಡೆದರೆ ಅದಕ್ಕೆ ಸಿದ್ಧವಾಗಿವೆ. ಪಹಲ್ಗಾಮ್‌ನಲ್ಲಿ 26 ಜೀವ ಬಲಿಪಡೆದ ಉಗ್ರರ ದಾಳಿಗೆ ಪ್ರತೀಕಾರವಾಗಿ ಭಾರತವು 'ಸಿಂಧೂರ' ಕಾರ್ಯಾಚರಣೆ ನಡೆಸಿತು. ಈ ಕಾರ್ಯಾಚರಣೆ ಇನ್ನೂ ಮುಂದುವರಿದಿದೆ. ಆದರೆ ಈಗ ಯುದ್ಧವನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿದೆ ಎಂದರು. ಭವಿಷ್ಯದ ಯುದ್ಧಗಳು ಭೂಮಿ, ನೆಲ ಹಾಗೂ ವಾಯುದಾಳಿಗಳಿಗೆ ಮಾತ್ರ ಸೀಮಿತವಾಗಿರುವುದಿಲ್ಲ ಎಂದರು.

ಅಕ್ರಮ ಅದಿರು ಸಾಗಾಟದ ಎರಡು ಪ್ರಕರಣ ಕೈಬಿಟ್ಟ ಕೋರ್ಟ್

ಶಾಸಕ ಗಾಲಿ ಜನಾರ್ದನ ರೆಡ್ಡಿಗೆ ರಿಲೀಫ್

ಬೆಂಗಳೂರು: ಅಕ್ರಮ ಅದಿರು ಸಾಗಾಟ ಪ್ರಕರಣಕ್ಕೆ ಸಂಬಂಧಿಸಿದಂತೆ ಗಂಗಾವತಿ ಶಾಸಕ ಗಾಲಿ ಜನಾರ್ದನ ರೆಡ್ಡಿ ಅವರಿಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ರಿಲೀಫ್ ನೀಡಿದೆ. ಲೋಕಾಯುಕ್ತ ವಿಶೇಷ ತನಿಖಾ ತಂಡ ದಾಖಲಿಸಿದ್ದ ಎರಡು ಪ್ರಕರಣಗಳಿಂದ ತಮ್ಮನ್ನು ಮುಕ್ತಗೊಳಿಸುವಂತೆ ಕೋರಿ ಜನಾರ್ದನ ರೆಡ್ಡಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ, ಜನಾರ್ದನ ರೆಡ್ಡಿ, ಮೆಹಫೂಜ್ ಅಲಿ ಖಾನ್, ಹೊತ್ತೂರ್ ಅಬ್ದುಲ್ ವಹಾಬ್, ಹೊತ್ತೂರ ನೂರ್ ಅಹಮದ್, ಹೊತ್ತೂರ್ ಮೊಹಮ್ಮದ್ ಇಕ್ಬಾಲ್ ಹಾಗೂ ಟ್ರೈಡೆಂಟ್ ಮೈನಿಂಗ್ ಕಂಪನಿ ವಿರುದ್ಧ ದಾಖಲಾಗಿದ್ದ ಪ್ರಕರಣಗಳನ್ನು ಕೈಬಿಟ್ಟು ಮಹತ್ವದ ಆದೇಶ ಹೊರಡಿಸಿದೆ.

ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಯಾವುದೇ ರೀತಿ ಅಗತ್ಯ ಅನುಮತಿಗಳನ್ನು ಪಡೆಯದೇ, ಸರಕಾರಕ್ಕೆ ಪಾವತಿಸಬೇಕಿದ್ದ ರಾಜಧನ (ರಾಯಲ್ಟಿ) ಹಾಗೂ ಇತರ ಶಾಸನಬದ್ಧ ಶುಲ್ಕ ವಂಚಿಸಿ ಆರೋಪಿಗಳು ಭಾರಿ ಪ್ರಮಾಣದ ಅಕ್ರಮ ಎಸಗಿರುವುದು ತನಿಖೆಯಲ್ಲಿ ಬಹಿರಂಗವಾಗಿತ್ತು. ಆರೋಪಿಗಳು ಒಟ್ಟು 1,25,419 ಮೆಟ್ರಿಕ್ ಟನ್ ಕಬ್ಬಿಣದ ಅದಿರನ್ನು ಕಾನೂನುಬಾಹಿರವಾಗಿ ಎನ್ ಶೇಕ್ಸಾಬ್ ಮೈನ್ಸ್ ಮತ್ತು ತಿರುಮಲ ಕನ್ವೇಯರ್ ಸಿಸ್ಟಮ್ಸ್ ಕಂಪನಿಗಳಿಗೆ ಮಾರಾಟ ಮಾಡಿದ್ದಾರೆ ಎಂದು ಆರೋಪಿಸಲಾಗಿತ್ತು.

ಸಿಯುಇಟಿ ಯುಜಿ ಪರೀಕ್ಷೆ 2 ತಾಸು ವಿಳಂಬ

ದೆಹಲಿ: ಶನಿವಾರ ನಡೆದ ಸಿಯುಇಟಿ-ಯುಜಿ ಪರೀಕ್ಷೆಯಲ್ಲಿ ತಾಂತ್ರಿಕ ದೋಷ ಕಂಡುಬಂದಿದ್ದು, 3,765 ಅಭ್ಯರ್ಥಿಗಳು ಪರೀಕ್ಷೆಯಿಂದ ವಂಚಿತರಾಗಿದ್ದಾರೆ. ವಿಶ್ವವಿದ್ಯಾಲಯಗಳಲ್ಲಿನ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ನಡೆಸಲಾಗುವ 2026ರ ಸಾಮಾನ್ಯ ಪ್ರವೇಶ ಪರೀಕ್ಷೆಯು ಶನಿವಾರ ಬೆಳಗ್ಗೆ 9 ಗಂಟೆ ಮತ್ತು ಮಧ್ಯಾಹ್ನ 3 ಗಂಟೆಗೆ ಆರಂಭವಾಗಬೇಕಿದ್ದವು. ಆದರೆ, ತಾಂತ್ರಿಕ ದೋಷಗಳ ಕಾರಣ 2 ತಾಸು ತಡವಾಗಿ ಪರೀಕ್ಷೆ ಆರಂಭವಾಗಿವೆ. ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ಆದ ಅನನುಕೂಲಕ್ಕಾಗಿ ವಿಷಾದವಿದೆ. ದೋಷಗಳನ್ನು ಸರಿಪಡಿಸಿ ಪರೀಕ್ಷೆ ನಡೆಸಲಾಗಿದೆ. ಪರೀಕ್ಷೆಗಳು ತಡವಾಗಿ ಆರಂಭವಾಗಿದ್ದರಿಂದ ವಿದ್ಯಾರ್ಥಿಗಳಿಗೆ ಹೆಚ್ಚಿನ ಸಮಯವನ್ನೂ ನೀಡಲಾಗಿದೆ ಎಂದು ಎನ್‌ಟಿಎ ಹೇಳಿದೆ.



2ನೇ ಟ್ರೋಫಿ ಮೇಲೆ ಕಣ್ಣಿಟ್ಟ ಉಭಯ ತಂಡ

ಇಂದು ಐಪಿಎಲ್ ಫೈನಲ್ ಪಂದ್ಯ

ಅಹಮದಾಬಾದ್: ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟ್ವೆಂಟಿ-20 ಕ್ರಿಕೆಟ್ ಟೂರ್ನಿಯಲ್ಲಿ ಭಾನುವಾರ ನಡೆಯಲಿರುವ ಹೈವೋಲ್ಟೇಜ್ ಫೈನಲ್ ಪಂದ್ಯದಲ್ಲಿ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಗುಜರಾತ್ ಟೈಟನ್ಸ್ ತಂಡದ ಸವಾಲನ್ನು ಎದುರಿಸಲಿದೆ. ಅಹಮದಾಬಾದ್‌ನ ನರೇಂದ್ರ ಮೋದಿ ಸ್ಟೇಡಿಯಂನಲ್ಲಿ ನಡೆಯಲಿರುವ ಫೈನಲ್ ಪಂದ್ಯದಲ್ಲಿ ರಜತ್ ಪಾಟೀದಾರ್ ಬಳಗವು ಸತತ ಎರಡನೇ ಟ್ರೋಫಿ ಮೇಲೆ ಕಣ್ಣಿಟ್ಟಿದ್ದರೆ, ಅತ್ತ ಶುಭಮನ್ ಗಿಲ್ ನೇತೃತ್ವದ ಗುಜರಾತ್ ತಂಡವು ಎರಡನೇ ಸಲ ಪ್ರಶಸ್ತಿ ಗೆಲ್ಲುವ ನಿರೀಕ್ಷೆಯಲ್ಲಿದೆ. 2022ರಲ್ಲಿ ಐಪಿಎಲ್ ಪ್ರವೇಶಿಸಿದ ಗುಜರಾತ್ ಟೈಟಾನ್ಸ್ ಬರೀ 5 ಯತ್ನಗಳಲ್ಲಿ 3ನೇ ಬಾರಿಗೆ ಫೈನಲ್‌ಗೇರಿದೆ. ಬೆಂಗಳೂರು 19 ಬಾರಿ ಐಪಿಎಲ್ ಆಡಿ 4ನೇ ಬಾರಿ ಫೈನಲ್‌ನಲ್ಲಿದೆ.

ತಂಡಗಳ ಬಲಾಬಲ

ಆರ್‌ಸಿಬಿ

ರಜತ್ ಪಾಟೀದಾರ್ (ನಾಯಕ), ವಿರಾಟ್ ಕೊಹ್ಲಿ, ಟಿಮ್ ಡೇವಿಡ್, ರೊಮರಿಯೊ ಶೆಫರ್ಡ್, ಜೋಶ್ ಹ್ಯಾಜಲ್ವುಡ್, ನುವಾನ್ ತುಷಾರಾ, ದೇವದತ್ತ ಪಡಿಕ್ಕಲ್, ಜಿತೇಶ್ ಶರ್ಮಾ, ಕೃಣಾಲ್ ಪಾಂಡ್ಯ, ರಸೀಕ್ ದಾರ್, ಭುವನೇಶ್ವರ್ ಕುಮಾರ್, ಜಾರ್ಡನ್ ಕಾಕ್ಸ್, ಸುಯೇಶ್ ಶರ್ಮಾ, ವೆಂಕಟೇಶ್ ಅಯ್ಯರ್, ಸ್ವಪ್ನಿಲ್ ಸಿಂಗ್, ಜೇಕಬ್ ಡಫಿ, ಕನಿಷ್ಕ್ ಚೌಹಾಣ್, ಅಭಿನಂದನ್ ಸಿಂಗ್, ಮಂಗೇಶ್ ಯಾದವ್, ಫಿಲ್ ಸಾಲ್ಟ್, ಸಾತ್ವಿಕ್ ದೇಸ್ವಾಲ್, ವಿಕ್ಕಿ ಒಸ್ವಾಲ್, ವಿಹಾನ್ ಮಲ್ಹೋತ್ರಾ.

ಗುಜರಾತ್ ಟೈಟನ್ಸ್

ಸಾಯಿ ಸುದರ್ಶನ್, ಶುಭಮನ್ ಗಿಲ್ (ನಾಯಕ), ಶಾರೂಕ್ ಖಾನ್, ಅನುಜ್ ರಾವತ್, ಜೋಸ್ ಬಟ್ಲರ್, ಕುಮಾರ್ ಕುಶಾಗ್ರ, ಟಾಮ್ ಬಂಟನ್, ಗ್ಲೆನ್ ಫಿಲಿಪ್ಸ್, ಜೇಸನ್ ಹೋಲ್ಡರ್, ನಿಶಾಂತ್ ಸಿಂಧು, ರಾಹುಲ್ ತೆವಾಟಿಯಾ, ವಾಷಿಂಗ್ಟನ್ ಸುಂದರ್, ಸಾಯಿ ಕಿಶೋರ್, ಜಯಂತ್ ಯಾದವ್, ಅರ್ಷದ್ ಖಾನ್, ಮಾನವ್ ಸುತಾರ್, ರಶೀದ್ ಖಾನ್, ಮೊಹಮ್ಮದ್ ಸಿರಾಜ್, ಗಗಿಸೊ ರಬಾಡ, ಪ್ರಸಿದ್ಧ ಕೃಷ್ಣ, ಇಶಾಂತ್ ಶರ್ಮಾ, ಗುರ್ನೂರ್ ಬ್ರಾರ್, ಅಶೋಕ್ ಶರ್ಮಾ, ಲ್ಯೂಕ್ ವುಡ್ ಮತ್ತು ಪೃಥ್ವಿ ರಾಜ್ ಯರ್ರಾ.

ಎಷ್ಟು ಗಂಟೆಗೆ ಮ್ಯಾಚ್ ಶುರು?
ಫೈನಲ್ ಪಂದ್ಯವು ರಾತ್ರಿ 7.30 ರಿಂದ ಶುರುವಾಗಲಿದೆ. ಹಾಗೆಯೇ ಟಾಸ್ ಪ್ರಕ್ರಿಯೆ 7 ಗಂಟೆಗೆ ನಡೆಯಲಿದೆ.

ಹಿರಿಯರ ಕೈಬಿಡುವ ಹೈ ಆಲೋಚನೆಗೆ ತೀವ್ರ ವಿರೋಧ ದೆಹಲಿಯಲ್ಲಿಯೇ ಬೀಡುಬಿಟ್ಟಿದ್ದ ಹಲವು ನಾಯಕರು

ಸಂಪುಟ ರಚನೆಯ ಕಸರತ್ತು

ಬೆಂಗಳೂರು: ಯಾವುದೇ ಗೊಂದಲಗಳಿಗೆ ಅವಕಾಶವಿಲ್ಲದೇ ಮುಖ್ಯಮಂತ್ರಿ ಸ್ಥಾನಕ್ಕೆ ಡಿ.ಕೆ. ಶಿವಕುಮಾರ್ ಅವರನ್ನು ಹೈಕಮಾಂಡ್ ಕೂರಿಸಿದೆ. ಆದರೀಗ ಡಿ.ಕೆ.ಶಿವಕುಮಾರ್ ಸಂಪುಟಕ್ಕೆ ಯಾರಿಗೆಲ್ಲ ಎಂಟ್ರಿ ಸಿಗಲಿದೆ ಎನ್ನುವ ವಿಷಯ ಕ್ಷಣಕ್ಷಣಕ್ಕೆ ಜಟಿಲವಾಗುತ್ತಿದ್ದು, ಇದನ್ನು ತಿಳಿಗೊಳಿಸುವ ಕಸರತ್ತನ್ನು ಹೈಕಮಾಂಡ್ ಆರಂಭಿಸಿದೆ.

ಶನಿವಾರ ವಿಧಾನಸೌಧದಲ್ಲಿ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಡಿ.ಕೆ.ಶಿವಕುಮಾರ್ ಅವಿರೋಧವಾಗಿ ಆಯ್ಕೆಯಾಗಿದ್ದು, ರಾಜ್ಯಪಾಲರಿಂದ ಬುಧವಾರ ಪ್ರಮಾಣವಚನವನ್ನೂ ಸ್ವೀಕರಿಸಲಿದ್ದಾರೆ. ಆದರೆ ಪಕ್ಷದಲ್ಲಿ ಹಿರಿ-ಕಿರಿಯ ನಾಯಕರಿಂದ ಸಚಿವ ಸಂಪುಟಕ್ಕೆ ಬೇಡಿಕೆ ತೀವ್ರ ಪ್ರಮಾಣದಲ್ಲಿ ಹೆಚ್ಚಾಗಿರುವುದು ಯಾರ ಹೆಸರನ್ನು ಅಂತಿಮಗೊಳಿಸಬೇಕು ಎನ್ನುವ ಗೊಂದಲಕ್ಕೆ ಸಿಲುಕಿಸುವಂತೆ ಮಾಡಿದೆ. → 4

ಹಿರಿ-ಕಿರಿಯರ ನಡುವೆ ಫೈಟ್

ಚುನಾವಣೆಗೆ ಎರಡು ವರ್ಷವಿರುವುದರಿಂದ ಯುವಕರಿಗೆ ಹೆಚ್ಚಿನ ಆದ್ಯತೆ ನೀಡಬೇಕು ಎನ್ನುವ ಲೆಕ್ಕಾಚಾರದಲ್ಲಿ ಕಾಂಗ್ರೆಸ್ ನಾಯಕರಿದ್ದಾರೆ. ಆದರೆ ಹಿರಿಯ ಸಚಿವರು, ತಮ್ಮನ್ನು ಪುನರಾಯ್ಕೆ ಮಾಡಬೇಕು ಎಂದು ಪಟ್ಟು ಹಿಡಿದಿದ್ದಾರೆ. ಅದರಲ್ಲಿಯೂ ಪರಮೇಶ್ವರ, ಎಂ.ಬಿ. ಪಾಟೀಲ್, ಈಶ್ವರ ಖಂಡ್ರೆ ಸೇರಿದಂತೆ ಹಿರಿಯ ನಾಯಕರು ಡಿಸಿಎಂ ಹುದ್ದೆ ಮೇಲೆ ಕಣ್ಣಿಟ್ಟಿದ್ದಾರೆ. ಇನ್ನು ಕೆಲ ಹಿರಿಯ ಸಚಿವರು ದೆಹಲಿಯಲ್ಲಿಯೇ ಬೀಡುಬಿಟ್ಟು ತಮ್ಮ ಆಪ್ತರ ಮೂಲಕ ಸಂಪುಟಕ್ಕೆ ಸೇರಿಕೊಳ್ಳುವ ಸರ್ಕಸ್ ನಡೆಸಿದ್ದಾರೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆ-2 31080 ವಿದ್ಯಾರ್ಥಿಗಳು ಪಾಸ್

ಬೆಂಗಳೂರು: 2026ರ ಎಸ್‌ಎಸ್‌ಎಲ್‌ಸಿ ಪರೀಕ್ಷೆ-2 ರ ಫಲಿತಾಂಶ ಶನಿವಾರ ಪ್ರಕಟಗೊಂಡಿದ್ದು, ಒಟ್ಟು 49,351 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಈ ಪೈಕಿ 31,080 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.

ಮೇ 18ರಿಂದ 25ರವರೆಗೆ ಒಟ್ಟು 358 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ-2 ನಡೆದಿದ್ದು, ಒಟ್ಟು 49,351 ಶಾಲಾ ವಿದ್ಯಾರ್ಥಿಗಳು, 18,471 ಖಾಸಗಿ, 32,740 ಪುನರಾವರ್ತಿತ ವಿದ್ಯಾರ್ಥಿಗಳು 2,557 ಖಾಸಗಿ ಪುನರಾವರ್ತಿತ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಉತ್ತರ ಪತ್ರಿಕೆಗಳ ಮೌಲ್ಯಮಾಪನವನ್ನು ಮೇ 25 ರಿಂದ 28ರವರೆಗೆ ರಾಜ್ಯದ 8 ಶೈಕ್ಷಣಿಕ ಜಿಲ್ಲೆಗಳ 52 ಮೌಲ್ಯಮಾಪನ ಕೇಂದ್ರ ಗಳಲ್ಲಿ ನಡೆಸಲಾಯಿತು.

ಪರೀಕ್ಷೆ-1ರಲ್ಲಿ ಉತ್ತೀರ್ಣರಾಗಿ ಅಂಕಗಳನ್ನು ಉತ್ತಮಪಡಿಸಿಕೊಳ್ಳಲು ಒಟ್ಟು 11,854 ಶಾಲಾ ವಿದ್ಯಾಥಿಗಳು ಹಾಗೂ 38 ಖಾಸಗಿ ವಿದ್ಯಾರ್ಥಿಗಳು ಪರೀಕ್ಷೆ-2ಕ್ಕೆ ನೋಂದಣಿ ಮಾಡಿಕೊಂಡಿದ್ದರು. ಅವರಲ್ಲಿ 8,393 ವಿದ್ಯಾರ್ಥಿಗಳು ತಮ್ಮ ಫಲಿತಾಂಶವನ್ನು ಉತ್ತಮಪಡಿಸಿಕೊಂಡಿದ್ದು, ಶಾಲಾ ವಿದ್ಯಾರ್ಥಿಗಳಲ್ಲಿ 5 ವಿದ್ಯಾರ್ಥಿಗಳು 625ಕ್ಕೆ 625 ಅಂಕಗಳನ್ನು ಗಳಿಸಿ ಶೇ.100ರಷ್ಟು ಫಲಿತಾಂಶವನ್ನು ಪಡೆದಿದ್ದಾರೆ. ಇದರಲ್ಲಿ ಸರಕಾರಿ ಶಾಲೆಯ 1 ಅನುದಾನರಹಿತ ಶಾಲೆಯ 4 ವಿದ್ಯಾರ್ಥಿಗಳು ಶೇ.100ರಷ್ಟು ಫಲಿತಾಂಶ ಪಡೆದಿದ್ದಾರೆ. ಫಲಿತಾಂಶ ಉತ್ತಮಪಡಿಸಿಕೊಂಡ ವಿದ್ಯಾರ್ಥಿಗಳಲ್ಲಿ ಪ್ರಥಮ ಭಾಷೆಯಲ್ಲಿ 136, ದ್ವಿತೀಯ ಭಾಷೆಯಲ್ಲಿ 76, ತೃತೀಯ ಭಾಷೆಯಲ್ಲಿ 144, ಗಣಿತ ವಿಷಯದಲ್ಲಿ 52, ವಿಜ್ಞಾನ ವಿಷಯದಲ್ಲಿ 126, ಸಮಾಜ ವಿಜ್ಞಾನ ವಿಷಯದಲ್ಲಿ 68 ವಿದ್ಯಾರ್ಥಿಗಳು ಶೇ.100ರಷ್ಟು ಅಂಕಗಳನ್ನು ಪಡೆದಿದ್ದಾರೆ.

ಡಜನ್‌ಗೂ ಹೆಚ್ಚು ಸಚಿವರಿಗೆ ಕೊಕ್ | ಎನ್‌ಡಿಎ ಮಿತ್ರಪಕ್ಷಗಳಿಗೆ ಪ್ರಾತಿನಿಧ್ಯ

ಜೂನ್‌ನಲ್ಲಿ ಕೇಂದ್ರ ಸಂಪುಟ ಪುನಾರಚನೆ

ದೆಹಲಿ: ಜೂನ್ 15 ರಿಂದ 18 ರ ನಡುವೆ ಕೇಂದ್ರ ಸಚಿವ ಸಂಪುಟ ಪುನರ್‌ರಚನೆಯಾಗುವ ಸಾಧ್ಯತೆ ಇದ್ದು, ಹಲವಾರು ರಾಜ್ಯ ಸಚಿವರು ಸೇರಿದಂತೆ ಒಂದು ಡಜನ್‌ಗೂ ಹೆಚ್ಚು ಸಚಿವರನ್ನು ಕೈಬಿಡಬಹುದು ಅಥವಾ ಬದಲಾಯಿಸಬಹುದು ಎಂದು ಮೂಲಗಳು ತಿಳಿಸಿವೆ.

ಎನ್‌ಡಿಎ ಮಿತ್ರಪಕ್ಷಗಳಾದ ಜೆಡಿ(ಯು), ಟಿಡಿಪಿ, ಎನ್‌ಸಿಪಿ ಮತ್ತು ಆರ್‌ಎಲ್‌ಎಮ್ ಪಕ್ಷಗಳು ಸಂಪುಟದಲ್ಲಿ ಪ್ರಾತಿನಿಧ್ಯವನ್ನು ಪಡೆಯಬಹುದು. ಹೆಚ್ಚಿನ ಮಿತ್ರಪಕ್ಷ ಪ್ರತಿನಿಧಿಗಳಿಗೆ ರಾಜ್ಯ ಖಾತೆ ಸಚಿವ ಸ್ಥಾನ ನೀಡುವ ನಿರೀಕ್ಷೆ ಇದೆ. ಆದರೆ ಒಬ್ಬರು ಅಥವಾ ಇಬ್ಬರು ನಾಯಕರನ್ನು ಸಚಿವರನ್ನಾಗಿ ಸೇರಿಸಿಕೊಳ್ಳಬಹುದು. ಉತ್ತರ ಪ್ರದೇಶ ಮತ್ತು ಪಂಜಾಬ್‌ನಂತಹ ಚುನಾವಣೆ ನಡೆಯಲಿರುವ ರಾಜ್ಯಗಳನ್ನು ಗಮನದಲ್ಲಿಟ್ಟುಕೊಂಡು ಪುನರ್‌ರಚನೆಯನ್ನು ಯೋಜಿಸಲಾಗುತ್ತಿದೆ ಎಂದು ಹಿರಿಯ ಬಿಜೆಪಿ ನಾಯಕರೊಬ್ಬರು ತಿಳಿಸಿದ್ದಾರೆ.

ವರದಿಗಳ ಪ್ರಕಾರ ದಕ್ಷಿಣ ರಾಜ್ಯ, ಈಶಾನ್ಯ ಮತ್ತು ಉತ್ತರ ಪ್ರದೇಶದ ತಲಾ ಒಬ್ಬ ಸಚಿವರಿದ್ದಾರೆ. ಪ್ರಮುಖ ಖಾತೆಗಳನ್ನು ನಿರ್ವಹಿಸುವ ಹಲವಾರು ಹಿರಿಯ ಸಚಿವರ ಜವಾಬ್ದಾರಿಗಳಲ್ಲಿಯೂ ಬದಲಾವಣೆ ಕಾಣಬಹುದು. ರೈಲ್ವೆ ಹಣಕಾಸು, ಕಾರ್ಪೊರೇಟ್ ವ್ಯವಹಾರಗಳು, ಕಲ್ಲಿದ್ದಲು, ಜವಳಿ, ಮಾಹಿತಿ ಮತ್ತು ಪ್ರಸಾರ, ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ, ಗ್ರಾಮೀಣಾಭಿವೃದ್ಧಿ, ರಾಸಾಯನಿಕ ಮತ್ತು ರಸಗೊಬ್ಬರಗಳು, ಸಹಕಾರ, ಮೀನುಗಾರಿಕೆ, ಜಲಶಕ್ತಿ, ಕೃಷಿ, ಪರಿಸರ, ಕಾನೂನು ಮತ್ತು ಇತರ ಸಚಿವಾಲಯಗಳು ಬದಲಾವಣೆಗಳಿಗೆ ಸಾಕ್ಷಿಯಾಗುವ ಸಾಧ್ಯತೆ ಇದೆ.

ಕೆಲವು ಸಚಿವಾಲಯಗಳು ಹೆಚ್ಚುವರಿಯಾಗಿ ನಿರ್ವಹಿಸುವ ಬದಲು ಪ್ರತ್ಯೇಕ ಸಚಿವರನ್ನು ಪಡೆಯಬಹುದು. ಬಿಹಾರ ಮೂಲದ ಮಿತ್ರಪಕ್ಷಗಳಿಗೆ ಸಂಬಂಧಿಸಿದ ಸಚಿವ ಸ್ಥಾನಗಳನ್ನು ಹಂಚಿಕೆ ಮಾಡುವ ಬಗ್ಗೆಯೂ ಪಕ್ಷದೊಳಗೆ ಚರ್ಚೆ ನಡೆಯುತ್ತಿದೆ. ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ನಾಗರಿಕ ವಿಮಾನಯಾನ ಸಚಿವಾಲಯಗಳ ಸ್ಥಾನಗಳು ಮೈತ್ರಿ ಪಾಲುದಾರರಿಗೆ ಹೋಗಬಹುದು ಎಂದು ಪಕ್ಷದ ಮೂಲಗಳು ಸೂಚಿಸಿವೆ.

ಈ ವರ್ಷದ ಕೊನೆಯಲ್ಲಿ ಅಥವಾ 2027 ರ ಆರಂಭದಲ್ಲಿ ರಾಜ್ಯಸಭೆಯ ಅವಧಿ ಮುಗಿಯುತ್ತಿರುವ ಹಲವಾರು ಸಚಿವರನ್ನು ಪಕ್ಷ ಸಂಘಟನೆಗೆ ವರ್ಗಾಯಿಸಬಹುದು. 70 ವರ್ಷಕ್ಕಿಂತ ಮೇಲ್ಪಟ್ಟ ಸಚಿವರು ಮತ್ತು ಕೆಲವು ರಾಜ್ಯಸಭಾ ಸದಸ್ಯರನ್ನು ಕಿರಿಯ ನಾಯಕರಿಗೆ ದಾರಿ ಮಾಡಿಕೊಡಲು ಬದಲಿಗಾಗಿ ಪರಿಗಣಿಸ ಲಾಗುತ್ತಿದೆ ಎಂದು ಹೇಳಲಾಗುತ್ತಿದೆ. ರಾಜ್ಯಸಭೆಯ ಮೂಲಕ ಕೇಂದ್ರ ಸಚಿವ ಸಂಪುಟದಲ್ಲಿ ಮಣಿಪುರಕ್ಕೆ ಪ್ರಾತಿನಿಧ್ಯ ಕಲ್ಪಿಸಲು ಬಿಜೆಪಿ ಅವಕಾಶ ನೀಡಬಹುದು ಎಂದು ಮೂಲಗಳು ಸೂಚಿಸಿವೆ.

- ಮಿತ್ರಪಕ್ಷ ಪ್ರತಿನಿಧಿಗಳಿಗೆ ರಾಜ್ಯ ಖಾತೆ ಸಚಿವ ಸ್ಥಾನ ನೀಡುವ ನಿರೀಕ್ಷೆ
- ಹಲವಾರು ಹಿರಿಯ ಸಚಿವರ ಜವಾಬ್ದಾರಿಗಳಲ್ಲೂ ಬದಲಾವಣೆ ಸಾಧ್ಯತೆ
- ಚುನಾವಣೆ ಇರುವ ರಾಜ್ಯಗಳನ್ನು ಗಮನದಲ್ಲಿಟ್ಟುಕೊಂಡು ಪುನರ್‌ರಚನೆ

ಕ್ಯಾಬಿನೆಟ್ ಸಚಿವರೊಬ್ಬರಿಗೆ ಬಿಜೆಪಿ ರಾಜ್ಯಾಧ್ಯಕ್ಷ ಹುದ್ದೆ?

ಪುನರ್‌ರಚನೆಗೆ ಪೂರ್ವಭಾವಿಯಾಗಿ ಸಾಂಸ್ಥಿಕ ಬದಲಾವಣೆಗಳನ್ನು ಬಿಜೆಪಿ ಈಗಾಗಲೇ ಪ್ರಾರಂಭಿಸಿದೆ. ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಅವರನ್ನು ಉತ್ತರ ಪ್ರದೇಶಕ್ಕೆ ಬಿಜೆಪಿ ಮುಖ್ಯಸ್ಥರನ್ನಾಗಿ ನೇಮಿಸಲಾಗಿದೆ. ಅಲ್ಲದೆ ಕಾರ್ಪೊರೇಟ್ ವ್ಯವಹಾರಗಳು ಮತ್ತು ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಖಾತೆ ರಾಜ್ಯ ಸಚಿವ ಹರ್ಷ್ ಮಲ್ಹೋತ್ರಾ ಅವರನ್ನು ದೆಹಲಿ ಬಿಜೆಪಿ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಈ ಸ್ಥಾನಗಳನ್ನು ಸಂಸತ್ತಿನ ಎರಡೂ ಸದನಗಳ ಹೊಸಬರಿಗೆ ನೀಡುವ ನಿರೀಕ್ಷೆಯಿದೆ. ಅನುಭವ ಮತ್ತು ಹಿರಿತನವನ್ನು ಅವಲಂಬಿಸಿ, ಕೆಲವು ಬಿಜೆಪಿ ಮೋರ್ಚಾ ನಾಯಕರನ್ನು ಮೊದಲ ಬಾರಿಗೆ ಸಂಪುಟಕ್ಕೆ ಸೇರಿಸಿಕೊಳ್ಳಬಹುದು ಎಂದು ಮೂಲಗಳು ತಿಳಿಸಿವೆ. ಬಿಹಾರದ ಒಬ್ಬ ಸಚಿವರ ಬದಲಿಗೆ ಅದೇ ಜಾತಿಯ ಮತ್ತೊಬ್ಬ ಸಂಸದರನ್ನು ನೇಮಿಸಿಕೊಳ್ಳುವ ಸಾಧ್ಯತೆಯಿದೆ. ಕರ್ನಾಟಕದ ಬಿಜೆಪಿ ಮುಖ್ಯಸ್ಥರಾಗಿ ಕ್ಯಾಬಿನೆಟ್ ಸಚಿವರನ್ನು ನೇಮಿಸುವ ಸಾಧ್ಯತೆಯಿದೆ. ಮಣಿಪುರ ಬಿಜೆಪಿಗೆ ಹೊಸ ಅಧ್ಯಕ್ಷರನ್ನು ಘೋಷಿಸಲು ಸಿದ್ಧತೆ ನಡೆಸುತ್ತಿದೆ.

ಸಮಾಚಾರ ಸಣ್ಣದಲ್ಲ

ಕನಿಷ್ಠ ವೇತನ 36 ಸಾವಿರಕ್ಕೆ ಆಗ್ರಹ

ಬೆಂಗಳೂರು: ತಿಂಗಳಿಗೆ ಸರಾಸರಿ 36 ಸಾವಿರ ಕನಿಷ್ಠ ವೇತನ ನಿಗದಿ ಸೇರಿ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ನೇತೃತ್ವದಲ್ಲಿ ಕಾರ್ಮಿಕರ ಭವನದ ಎದುರು ಕಾರ್ಮಿಕರು ಶನಿವಾರ ಪ್ರತಿಭಟನೆ ನಡೆಸಿದರು. ರಾಜ್ಯ ಸರ್ಕಾರ ಹೆಚ್ಚಳ ಮಾಡಿರುವ ಕನಿಷ್ಠ ವೇತನ ಸುಪ್ರೀಂ ಕೋರ್ಟ್ ನಿಗದಿಪಡಿಸಿದ ಮಾನದಂಡಗಳಿಗೆ ಪೂರಕವಾಗಿಲ್ಲ. ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗಿದೆ. ಜೀವನ ಮಟ್ಟಕ್ಕೆ ಅನುಗುಣವಾಗಿ ತಿಂಗಳಿಗೆ 36 ಸಾವಿರ ಕನಿಷ್ಠ ವೇತನ ನಿಗದಿ ಮಾಡಬೇಕು ಹಾಗೂ ಕನಿಷ್ಠ ವೇತನವನ್ನು 2025ರ ಏಪ್ರಿಲ್‌ನಿಂದ ಜಾರಿಗೆ ಬರುವಂತೆ ತಿದ್ದುಪಡಿ ಮಾಡಿ ಅಧಿಸೂಚನೆ ಹೊರಡಿಸಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು. 19 ವಿಭಾಗದ ಉದ್ದಿಮೆಗಳನ್ನು ಹೊರಗಿಟ್ಟಿರುವ ರಾಜ್ಯ ಸರಕಾರದ ಕ್ರಮದಿಂದ ಮಹಿಳಾ ಕಾರ್ಮಿಕರು ಕನಿಷ್ಠ ವೇತನ ಹೆಚ್ಚಳದಿಂದ ವಂಚಿತರಾಗಲಿದ್ದಾರೆ. ಹಾಗಾಗಿ 19 ಉದ್ದಿಮೆಗಳಿಗೂ ವಿಸ್ತರಿಸಿ ಅಧಿಸೂಚನೆ ಹೊರಡಿಸಬೇಕು. ಮಾಲೀಕರ ಒತ್ತಡಕ್ಕೆ ಮಣಿಯದೆ ಪರಿಷ್ಕೃತ ವೇತನದ ಆದೇಶವನ್ನು ರಾಜ್ಯ ಸರಕಾರ ಅನುಷ್ಠಾನಕ್ಕೆ ತರಬೇಕು ಎಂದು ಒತ್ತಾಯಿಸಿದರು.

ಬ್ಯಾಂಕ್ ಕಟ್ಟಡದಲ್ಲೇ ಸೆಕ್ಯೂರಿಟಿ ಆತ್ಮಹತ್ಯೆ

ಬೆಂಗಳೂರು: ಬ್ಯಾಂಕ್ ಕಟ್ಟಡದಲ್ಲೇ ಸೆಕ್ಯುರಿಟಿ ಗಾರ್ಡ್ ಆತ್ಮಹತ್ಯೆಗೆ ಶರಣಾದ ಘಟನೆ ರಾಜಾಜಿ ನಗರದಲ್ಲಿ ನಡೆದಿದೆ.

ಬಿಹಾರ ಮೂಲದ ಪಿಂಟು (22) ಆತ್ಮಹತ್ಯೆಗೆ ಶರಣಾದ ಸೆಕ್ಯೂರಿಟಿ ಗಾರ್ಡ್. ಹರಿಶ್ಚಂದ್ರ ಘಾಟ್ ಬಳಿಯ ಎಚ್‌ಡಿಎಫ್‌ಸಿ ಬ್ಯಾಂಕ್ ಕೆಳಭಾಗದ ರೈಲಿಂಗ್ ನಲ್ಲಿ ಆತ ನೇಣಿಗೆ ಶರಣಾಗಿದ್ದಾನೆ. ಜಿಐಎಸ್ ಸೆಕ್ಯೂರಿಟಿ ಏಜೆನ್ಸಿಯಲ್ಲಿ ಆತ ಕೆಲಸ ಮಾಡಿಕೊಂಡಿದ್ದ. ಶನಿವಾರ ಸಂಜೆ 5:30ರ ಸುಮಾರಿಗೆ ಈ ಘಟನೆ ನಡೆದಿದೆ. ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ. ಸ್ಥಳಕ್ಕೆ ಸುಬ್ರಹ್ಮಣ್ಯನಗರ ಠಾಣೆ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ.

{ ಎಚ್.ಸಿ.ಬಾಲಕೃಷ್ಣ } ಮಾಗಡಿ ಶಾಸಕ

ಡಿ.ಕೆ,ಶಿವಕುಮಾರ್ ಅವರು ಸಿಎಂ ಆಗ್ತಿರೋದು ಸಂತೋಷ ಆಗ್ತಿದೆ. ಇದೊಂದು ಹೊಸ ಜವಾಬ್ದಾರಿ. ಸಿದ್ದರಾಮಯ್ಯ ಅವರಿಗೂ ನಾವು ಅಭಿನಂದನೆ ಸಲ್ಲಿಸುತ್ತೇವೆ. ಯಾವುದೇ ಗೊಂದಲ ಇಲ್ಲದೇ ಅಧಿಕಾರ ಹಸ್ತಾಂತರ ಆಗಿದೆ. ವಿಪಕ್ಷಗಳು ಏನೋ ಆಗುತ್ತೆ ಅಂತ ಆಸೆಯಲ್ಲಿ ಇದ್ದರು. ಅವರ ನಿರೀಕ್ಷೆಗಳೇಲ್ಲ ಹುಸಿ ಆಗಿವೆ.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ನನ್ನ ಕಕ್ಷಿದಾರರಾದ ಶ್ರೀಮತಿ ಸುಜಾತ. ಎಸ್, ಕೋಂ ಆದಿನಾರಾಯಣ ರೆಡ್ಡಿ. ಇವರು ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ಥಿರಾಸ್ತಿಯ ಮಾಲೀಕರಾಗಿದ್ದು ಇವರು ಬೆಂಗಳೂರು ದಕ್ಷಿಣ ತಾಲ್ಲೂಕಿನ ಉಪ-ನೋಂದಣಿ ಕಚೇರಿಯಲ್ಲಿ ನೋಂದಾಯಿಸಲಾದ ದಿನಾಂಕ 24/6/1974, ದಾಸ್ತವೇಜು ನಂ. 2995/ 1974-75, ಪುಸ್ತಕ-1, ಸಂಪುಟ 1064, ಪುಟಗಳು 188-190, ಹೊಂದಿರುವ ಈ ಸ್ವತ್ತನ್ನು ಶ್ರೀ.ಪಿ.ಸಿ.ಥಾಮಸ್ ಅವರು ಶ್ರೀಮತಿ ಸುವರ್ಣಮ್ಮ ಅವರ ಹೆಸರಿಗೆ ಬರೆದುಕೊಟ್ಟಿರುತ್ತಾರೆ. ಮತ್ತು ಈ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾರಾದರೂ ಸ್ವತ್ತಿನ ಮೇಲೆ ಸ್ವಾಧೀನವನ್ನು ಹೊಂದಿದ್ದರೆ, ಅದನ್ನು ಈ ದಿನಾಂಕದಿಂದ ನೋಟೀಸು ಪ್ರಕಟವಾದ ಏಳು ದಿನಗಳ ಒಳಗಾಗಿ ಕೆಳಸಹಿದಾರರಿಗೆ ತಲುಪಿಸಬೇಕೆಂದು ಈ ಮೂಲಕ ತಿಳಿಸಲಾಗಿದೆ.

ಷೆಡ್ಯೂಲ್ ಸ್ವತ್ತು

ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿಯ ನಾಯಂಡಹಳ್ಳಿ ಗ್ರಾಮದಲ್ಲಿರುವ ಪ್ರಸ್ತುತ ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಸ್ವತ್ತಿನ ಹಳೆಯ ಆಸ್ತಿ ಸಂಖ್ಯೆ.15, ಹಳೆಯ ಖಾತಾ ಸಂಖ್ಯೆ.43/3, ಪುರಸಭೆಯ ಹೊಸ ಸಂಖ್ಯೆ.33/1, ಪಿಐಡಿ ಸಂಖ್ಯೆ.39-137-33/1, ಹೊಂದಿರುವ ಈ ಸ್ವತ್ತಿನ ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 40 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 25 ಅಡಿ ಒಟ್ಟು 1000 ಚದರ ಅಡಿ ಸ್ವತ್ತಿಗೆ ಚಕ್ಕುಬಂದಿ:-ಪೂರ್ವಕ್ಕೆ: ಆಸ್ತಿ ಸಂಖ್ಯೆ.30, ಪಶ್ಚಿಮಕ್ಕೆ: 20 ಅಡಿ ರಸ್ತೆ, ಉತ್ತರಕ್ಕೆ: ಆಸ್ತಿ ಸಂಖ್ಯೆ.14, ದಕ್ಷಿಣಕ್ಕೆ: ಆಸ್ತಿ ಸಂಖ್ಯೆ.16,

ಎನ್. ಜಗದೀಶ್ ಕುಮಾರ್, ವಕೀಲರು
ನಂ.30/1, 2ನೇ ಮಹಡಿ, 7ನೇ ಕ್ರಾಸ್,
ಎನ್.ಆರ್. ಕಾಲೋನಿ ಹತ್ತಿರ ಬಸ್ ನಿಲ್ದಾಣ,
ಹೋಟೆಲ್ ದ್ವಾರಕ ಎದುರು, ಬೆಂಗಳೂರು-560019.

PUBLIC NOTICE

It is brought to the notice of the General Public at large that, our client **Mr. Sri. ZABIULLA,** Aged about 54 Years, S/o. Mr. Abdul Rehman, Residing at No. Flat No. G-1, V Block, RK Saniya Apartment, 12th Cross, Pillanna Garden 3rd Block, Arabic College, Bangalore-560 045 is the lawful owner of the Schedule Property. Our client being the lawful owner had entered into a Joint Development Agreement with **M/s. Thrishul Builders and Developers Pvt Ltd,** Duly represented by its Director, **Sri. G.N. PAVAN KUMAR,** Aged about 23 Years, S/o. G.V. Narayanaswamy No. 38, 1st Floor, K.R. Defence Colony, Phase-2, Cheemasandra, Virgonagar Post Bangalore- 560 049. That due to the dispute aroused among our client and the Developer stated above our client has approached the Hon'ble City Civil Judge, Bangalore (CCH-73, Mayo hall) in O.S. No. 25501/2026 seeking Cancellation Joint Development Agreement and GPA which is pending consideration before the Hon'ble Court.

Wherefore General Public hereby noticed and cautioned not to venture for Purchase of any Flat constructed in the Schedule Property during pendency of the above case.

SCHEDULE OF THE PROPERTY

All that piece and parcel of the **Site No. 12,** House list Khatha no. 288, formed in Converted Sy. No. 104/2, Old Sy. No. 104, (Converted from agricultural to Non-Agricultural Residential Purpose vide conversion Order bearing No. ALN.SR.(E)157/2002-2003, Dated 26/12/2002) Situated at: **P.N.B. Enclave, Hoysala Nagar, Horamavu Village, K.R. Puram Hobli, Earlier Bangalore South Taluk,** present Bangalore East Taluk, presently within administrative jurisdiction of BBMP (GBA) Bangalore and bounded on the:
East by : Site No. 13, **West by :** Site No. 11
North by : 30 feet Road, **South by :** Property belongs to Mr. Venkataswamy Reddy and Siddappa Reddy and Siddappa Reddy's Property

B.I. KHAN, Advocate,
KHAN & CO,
No. 42/2 First Floor, Sai Baba Temple Road, Cambridge Layout, Halasuru, Bangalore- 08
Mob: 9108008001

Hearing Date: 16/06/2026

IN THE HON'BLE COURT OF THE XVIII ADDL. JUDGE, COURT OF SMALL CAUSES AND ACJM, SCCH-04, AT BENGALURU
S. C. No.677/2023

BETWEEN
SRI. A T MANOHAR.
PETITIONER/PLAINTIFF
AND
SRI.SHIVANANDA.
RESPONDENT/ DEFENDANT

NOTICE TO DEFENDANT

Sri. Shivananda Residing at No. 6, 7th Main, Bagalagunte, Near Hesaraghatta Main Road,Nagasandra Post, Bangalore - 560073.

Whereas the petitioner instituted a petition against the Respondent seeking recovery of sum of **Rs. 1,41,000/- (Rupees One Lakh Forty One Thousand)** with future interest at the agreed rate of 12% PA from the date of suit till the date of realization. Wherein you have been arrayed as Respondent. Hence, you are hereby summoned to appear before this Hon'ble **XVIII ADDL. JUDGE, COURT OF SMALL CAUSES AND ACJM, SCCH-04,** AT Bengaluru, in person or by a pleader duly instructed **on 16/06/2026 at 11:00 AM** along with your objections if any.

Take notice that in default of your appearance on that day before mentioned, the suit will be heard and determined in your absence.

Given under my hand and Seal of the court that this **29th day of May 2026.**

By Order of court
Assistant Registrar
Court of Small Causes
Bangalore

Advocate for Petitioner
I.Devananda B.A.L., LL.B.,
Advocate
Office at No. 11/3, Sanjeeva Naik Lane, Avenue Road Cross, Near Hotel Ganesh Prasad, Bangalore-560002.

ಇಂದು ವಿಶ್ವ ತಂಬಾಕು ರಹಿತ ದಿನ | ಕಳೆದ 10 ವರ್ಷಗಳಲ್ಲಿ 10 ಸಾವಿರ ಮಂದಿ ತಂಬಾಕಿಗೆ ಬಲಿ

ತಂಬಾಕು ಸೇವನೆ: ಕ್ಯಾನ್ಸರ್ ಪ್ರಕರಣ ಹೆಚ್ಚಳ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದಲ್ಲಿ ಕಳೆದ ವರ್ಷ ತಂಬಾಕು ಸೇವನೆ ಹಿನ್ನೆಲೆಯುಳ್ಳ 10 ಸಾವಿರಕ್ಕೂ ಅಧಿಕ ಮಂದಿ ವಿವಿಧ ಕ್ಯಾನ್ಸರ್‌ಗಳಿಗೆ ಬಲಿಯಾಗಿದ್ದಾರೆ. ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ದಾಖಲೆಯಿಂದ ಈ ಆತಂಕಕಾರಿ ವಿಚಾರ ಬೆಳಕಿಗೆ ಬಂದಿದೆ.

ಧೂಮಪಾನ, ಗುಟ್ಕಾ ಸೇರಿದಂತೆ ತಂಬಾಕು ಉತ್ಪನ್ನಗಳ ಸೇವನೆ ಕ್ಯಾನ್ಸರ್‌ಗೆ ಪ್ರಮುಖ ಕಾರಣವಾಗಿದೆ. ಪುರುಷರು ಶ್ವಾಸಕೋಶ, ಬಾಯಿ ಮತ್ತು ನಾಲಿಗೆ ಕ್ಯಾನ್ಸರ್‌ಗೆ ತುತ್ತಾಗುತ್ತಿದ್ದರೆ, ಮಹಿಳೆಯರಲ್ಲಿ ಶ್ವಾಸಕೋಶ, ಬಾಯಿ ಹಾಗೂ ಅನ್ನನಾಳದ ಕ್ಯಾನ್ಸರ್ ಪ್ರಧಾನವಾಗಿದೆ. ಇಷ್ಟು ಸಾವುಗಳಿಗೆ ತಂಬಾಕು ಸೇವನೆಯೇ ನೇರವಾಗಿ ಕಾರಣ ಎನ್ನಲಾಗಲ್ಲ. ಆದರೆ, ತಂಬಾಕು ಸೇವನೆಯ ಹಿನ್ನೆಲೆ ಇಷ್ಟು ಜನರಿಗಿತ್ತು. ಸಿಗರೇಟ್, ಬೀಡಿಯಂತಹ ಧೂಮಪಾನದಿಂದ ಮುಖ ಸುಕ್ಕುಗಟ್ಟುವುದರಿಂದ ಹಿಡಿದು ಹೃದಯ ರಕ್ತನಾಳದ ಕಾಯಿಲೆ, ಶ್ವಾಸಕೋಶ, ಮೂತ್ರಪಿಂಡ, ಗಂಟಲು, ಬಾಯಿ, ಹೊಟ್ಟೆ ಮತ್ತು ಮೇದೋಜೀರಕ ಗ್ರಂಥಿಯ ಕ್ಯಾನ್ಸರ್‌ಗೆ ಕಾರಣವಾಗುತ್ತಿದೆ. ಇದಲ್ಲದೆ, ಆಸ್ಟಿಯೊಪೊರೋಸಿಸ್, ಹಲ್ಲುಗಳ ನಿಶ್ಯಕ್ತಿ, ಅಂಧತ್ವ, ಉಬ್ಬಸ, ಕೆಮ್ಮು ಉಂಟು ಮಾಡುವ, ರೋಗ ನಿರೋಧಕ ಶಕ್ತಿ ಕುಂದಿಸುತ್ತಿದೆ.

ಶೇ. 52ರಷ್ಟು ತಂಬಾಕು ಕ್ಯಾನ್ಸರ್ ರಾಜ್ಯದಲ್ಲಿಕಳೆದ ವರ್ಷ ಹೊಸದಾಗಿ 39,371 ಪುರುಷರಲ್ಲಿ ಕ್ಯಾನ್ಸರ್ ಪತ್ತೆಯಾಗಿದೆ. ಈ ಪೈಕಿ ಶೇ. 52ರಷ್ಟು ಅಂದರೆ 20,652 ಜನ ತಂಬಾಕು ಸೇವನೆ ಹಿನ್ನೆಲೆಯುಳ್ಳವರು. ಇನ್ನು, ಮಹಿಳೆಯರ ಸಂಖ್ಯೆಯೂ ಅಧಿಕವಾಗಿದೆ. 49,442ರ ಪೈಕಿ ಶೇ. 30.7ರಷ್ಟು ಅಂದರೆ 15,187 ತಂಬಾಕು ಸಂಬಂಧಿತ ಕ್ಯಾನ್ಸರ್ ಪ್ರಕರಣಗಳಾಗಿವೆ. ಇದೇ ಕಾರಣದಿಂದ 5,814 ಪುರುಷರು (ಶೇ.51), ಮಹಿಳೆಯರು 4,230 (ಶೇ. 37.5) ಮೃತಪಟ್ಟಿದ್ದಾರೆ. ರಾಜಧಾನಿ ಬೆಂಗಳೂರಿನಲ್ಲೂ ಅಧಿಕವಾಗಿ ತಂಬಾಕು ಸೇವನೆ ಹಿನ್ನೆಲೆಯುಳ್ಳ ಪುರುಷರ ಕ್ಯಾನ್ಸರ್ ಪ್ರಕರಣ ಹೆಚ್ಚಾಗಿ ದಾಖಲಾಗಿವೆ. 2025ರಲ್ಲಿ ಪುರುಷರಲ್ಲಿ 3,734 (ಒಟ್ಟಾರೆ 7,119) ಹಾಗೂ ಮಹಿಳೆಯರಲ್ಲಿ 2,634 (ಒಟ್ಟಾರೆ 8,574) ಕ್ಯಾನ್ಸರ್‌ಗೆ ತಂಬಾಕು ಸೇವನೆಯ ಹಿನ್ನೆಲೆಯಿದೆ. 1,775 ಜನ ಸಾವನ್ನಪ್ಪಿದ್ದಾರೆ.

ಶೇ.44ರಷ್ಟು ಸಾವು ದಾಖಲು

ರಾಜ್ಯದಲ್ಲಿ ಕಳೆದ ವರ್ಷ 88,800ಕ್ಕೂ ಅಧಿಕ ಕ್ಯಾನ್ಸರ್ ಪ್ರಕರಣ ಪತ್ತೆಯಾಗಿದ್ದು, ಇದರಲ್ಲಿ22,582 (ಶೇ.40.4ರಷ್ಟು) ಜನ ತಂಬಾಕು ಸೇವನೆ ಹಿನ್ನೆಲೆಯುಳ್ಳವರಾಗಿದ್ದಾರೆ. ಬೇರೆಲ್ಲಾ ಕ್ಯಾನ್ಸರ್‌ನಿಂದ ಒಟ್ಟಾರೆ 22,583 ಜನ ಮೃತಪಟ್ಟಿದ್ದರೆ, ಅದರಲ್ಲಿ10,004 (ಶೇ. 44.3) ಜನ ತಂಬಾಕು ಸಂಬಂಧಿತ ವಿವಿಧ ಕ್ಯಾನ್ಸರ್‌ಗೆ ಬಲಿಯಾಗಿದ್ದಾರೆ. ದೇಶಕ್ಕೆ ಹೋಲಿಸಿದರೆ (ಶೇ.28.6) ರಾಜ್ಯದಲ್ಲಿ ತಂಬಾಕು ಉತ್ಪನ್ನ ಸೇವಿಸುವವರ ಸಂಖ್ಯೆ ಕಡಿಮೆ ಇದೆ. ಇಲ್ಲಿಶೇ.16.8ರಷ್ಟು ಪುರುಷರು ಹಾಗೂ ಶೇ. 0.7ರಷ್ಟು ಮಹಿಳೆಯರು ಸೇರಿ ಒಟ್ಟಾರೆ ಜನಸಂಖ್ಯೆಯಲ್ಲಿಶೇ. 8.8ರಷ್ಟು ಮಂದಿ ತಂಬಾಕನ್ನು ವಿವಿಧ ಸ್ವರೂಪದಲ್ಲಿಸೇವಿಸುತ್ತಿದ್ದಾರೆ.

ವಿಶ್ವ ತಂಬಾಕು ರಹಿತ ದಿನದ ಇತಿಹಾಸ: ತಂಬಾಕು ಸೇವನೆಯ ವ್ಯಾಪಕ ಸ್ವರೂಪ ಮತ್ತು ಸಾರ್ವಜನಿಕರ ಮೇಲೆ ಅದರ ನಕಾರಾತ್ಮಕ ಪರಿಣಾಮಗಳ ವಿರುದ್ಧ ಜಾಗೃತಿ ಮೂಡಿಸಲು ವಿಶ್ವ ಆರೋಗ್ಯ ಸಂಸ್ಥೆಯು 1987 ರಲ್ಲಿ ವಿಶ್ವ ತಂಬಾಕು ರಹಿತ ದಿನವನ್ನು ಆಚರಿಸಲು ಪ್ರಾರಂಭಿಸಿತು. ಈ ದಿನವು ತಂಬಾಕು ಸೇವನೆಯನ್ನು ನಿಯಂತ್ರಣದಲ್ಲಿಟ್ಟು ಕೊಳ್ಳುವವರಿಗೆ ಮತ್ತು ತಂಬಾಕು ಸೇವನೆಯನ್ನು ನಿಲ್ಲಿಸಲು ಪ್ರಯತ್ನಿಸುವವರಿಗೆ ಸಹಾಯ ಮಾಡುತ್ತದೆ. ವಿಶ್ವ ತಂಬಾಕು ದಿನವು ತಂಬಾಕು ಸೇವನೆಯ ದುಷ್ಪರಿಣಾಮಗಳು ಮತ್ತು ಕ್ಯಾನ್ಸರ್, ಹೃದಯರಕ್ತನಾಳದ ಸಮಸ್ಯೆಗಳು ಮತ್ತು ಉಸಿರಾಟದ ಸಮಸ್ಯೆಗಳಂತಹ ಕಾಯಿಲೆಗಳೊಂದಿಗೆ ಅದರ ಸಂಬಂಧದ ಬಗ್ಗೆ ಜ್ಞಾನವನ್ನು ಹರಡಲು ವೇದಿಕೆಯನ್ನು ಒದಗಿಸುತ್ತದೆ. ಭಾರತದಲ್ಲಿ 40 ಪ್ರತಿಶತದಷ್ಟು ಬಾಯಿ ಮತ್ತು ಶ್ವಾಸಕೋಶದ ಕ್ಯಾನ್ಸರ್‌ಗಳು ತಂಬಾಕು ಮತ್ತು ಧೂಮಪಾನದಿಂದ ಉಂಟಾಗುತ್ತಿದೆ ಎಂದು ಅಧ್ಯಯನಗಳು ತಿಳಿವೆ.

ವಿಶ್ವ ತಂಬಾಕು ರಹಿತ ದಿನವು ತಂಬಾಕು ಸೇವನೆಯ ಹಾನಿಕಾರಕ ಪರಿಣಾಮಗಳ ಬಗ್ಗೆ ಜನರಿಗೆ ಅರಿವು ಮೂಡಿಸುವುದು ಮತ್ತು ಜಾಗತಿಕ ಮಟ್ಟದಲ್ಲಿ ತಂಬಾಕಿನ ಬಳಕೆಯನ್ನು ಕಡಿಮೆ ಮಾಡಲು ಸಹಾಯ ಮಾಡುವ ಪರಿಣಾಮಕಾರಿ ನೀತಿಗಳು ಮತ್ತು ಕಾನೂನುಗಳನ್ನು ಉತ್ತೇಜಿಸುತ್ತದೆ. ನಮ್ಮ ಕಿದ್ವಾಯಿ ಸಂಸ್ಥೆಯಿಂದ ತಂಬಾಕಿನಿಂದಾಗುವ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. ಅಲ್ಲದೆ ಜಾಗೃತಿ ಮತ್ತು ತಪಾಸಣಾ ಶಿಬಿರಗಳನ್ನು ಆಯೋಜಿಸಲಾಗಿದೆ.

-ಡಾ.ಟಿ.ನವೀನ್, ನಿರ್ದೇಶಕರು, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ

ಬ್ರಿಮ್ಸ್ ಅಟೆಂಡರ್ ವಿಕೃತಿ: ಕ್ರಮಕ್ಕೆ ಸೂಚನೆ

ಬೆಂಗಳೂರು: ಬೀದರ್‌ನ ಬ್ರಿಮ್ಸ್ ಆಸ್ಪತ್ರೆಯಲ್ಲಿ ಸತ್ತ ಮಹಿಳೆಯರ ಬೆತ್ತಲೆ ಫೋಟೋ ಕ್ಲಿಕ್ಕಿಸುತ್ತಿದ್ದ ಅಮಾನವೀಯ ಘಟನೆ ನಡೆದಿದ್ದು, ಈ ಘಟನೆಗೆ ರಾಜ್ಯ ಮಹಿಳಾ ಆಯೋಗ ಪ್ರತಿಕ್ರಿಯೆ ನೀಡಿದೆ. ಘಟನೆ ಸಂಬಂಧಿಸಿದಂತೆ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿದ್ದು, ಸಂಬಂಧಪಟ್ಟ ಅಧಿಕಾರಿಗಳು ವರದಿ ನೀಡುವಂತೆ ಆರೋಗ್ಯ ಇಲಾಖೆಗೆ ಕೇಳಿದೆ. ಬೀದರ್ ಜಿಲ್ಲೆಯ ಬ್ರಿಮ್ಸ್ ಆಸ್ಪತ್ರೆಯ ಶವಾಗಾರದಲ್ಲಿ ಅಟೆಂಡರ್ ಮುನೀರ್ ಅಹಮದ್ ಎಂಬಾತ ಸತ್ತ ಮಹಿಳೆಯರ ಬೆತ್ತಲೆ ಫೋಟೋಗಳನ್ನು ಶೂಟ್ ಮಾಡಿ ವಿಕೃತಿ ಮೆರೆದಿರುವ ಅಮಾನುಷ ಕೃತ್ಯದ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ವರದಿಯಾಗಿದೆ. ಈ ಪ್ರಕರಣದ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ಮುನೀರ್ ಅಹಮದ್ ವಿರುದ್ಧ ಸೂಕ್ತ ಕ್ರಮ ಕೈಗೊಂಡು, ವರದಿ ನೀಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡುವಂತೆ ಕೋರಿದೆ ಎಂದು ರಾಜ್ಯ ಮಹಿಳಾ ಆಯೋಗದ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಕೃತ್ಯದಿಂದ ಮಹಿಳೆಯರ ಘನತೆ, ಕುಟುಂಬಸ್ಥರ ಗೌರವ, ವೈದ್ಯಕೀಯ ಗೌಪ್ಯತೆಗೆ ಧಕ್ಕೆಯಾಗಿದೆ. ಸದ್ಯ ಆರೋಪಿ ಮುನೀರ್ ವಿರುದ್ಧ ನ್ಯೂ ಟೌನ್ ಪೊಲೀಸ್ ಠಾಣೆಯಲ್ಲಿ ಬಿಎನ್‌ಎಸ್ ಸೆಕ್ಷನ್ 301, 62 ಅಡಿಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿದಿದೆ.

ಏನಿದು ಘಟನೆ?

ಬ್ರಿಮ್ಸ್ ಆಸ್ಪತ್ರೆಯ ಸಿಬ್ಬಂದಿ ಸತ್ತ ಮಹಿಳೆಯರ ಬೆತ್ತಲೆ ಫೋಟೋ ಶೂಟ್ ಮಾಡಿ ವಿಕೃತಿ ಮೆರೆದಿದ್ದಾನೆ. ಶವಾಗಾರ ಕೋಣೆಯ ಅಟೆಂಡರ್ ಮುನೀರ್ ಅಹ್ಮದ್ ಎಂಬಾತನಿಂದ ಈ ಹೀನ ಕೃತ್ಯವಾ ಗಿದೆ. ಪಿಎಂಇ ಮಾಡುವ ಕಾಲಕ್ಕೆ ಅನುಮತಿ ಇಲ್ಲದೇ ತನ್ನ ಮೊಬೈಲ್‌ನಲ್ಲಿ ಮುನ್ನಿರ್ ಸತ್ತ ಮಹಿಳೆಯರ ಶವದ ಮೇಲಿನ ಬಟ್ಟೆ ತೆಗೆದು ಫೋಟೊ ತೆಗೆದುಕೊಳ್ಳಿದ್ದನಂತೆ. ಮಹಿಳೆಯರ ಬೆತ್ತಲೆ ಫೋಟೋ ಕ್ಲಿಕ್ಕಿಸಿಕೊಂಡು ಮೊಬೈಲ್ ನಲ್ಲಿ ಸಂಗ್ರಹಿಸಿಟ್ಟುಕೊಂಡಿ ದ್ದನಂತೆ ಆರೋಪಿ ಮುನೀರ್.

ಶಾಲೆಗೆ ಬೆಂಕಿ: ರಜೆ ಹಿನ್ನೆಲೆ ತಪ್ಪಿದ ಅನಾಹುತ

ಬೆಂಗಳೂರು: ನಗರದ ರಿಂಗ್ ರಸ್ತೆ ಸಮೀಪದ ನಾಗದೇವನಹಳ್ಳಿಯಲ್ಲಿರುವ ಚಿತ್ರಕಲಾ ಶಾಲೆಯಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ಸ್ಥಳದಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಶಾಲೆಯ ಟಾಪ್ ಫ್ಲೋರ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ಕೆಲವೇ ಕ್ಷಣಗಳಲ್ಲಿ ಜ್ವಾಲೆಗಳು ವ್ಯಾಪಕವಾಗಿ ಹರಡಿತ್ತು. ಮಾಹಿತಿ ತಿಳಿದ ತಕ್ಷಣ ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಬೆಂಕಿ ನಂದಿಸುವ ಕಾರ್ಯದಲ್ಲಿ ತೊಡಗಿದರು. ಘಟನಾ ಸ್ಥಳಕ್ಕೆ ಪೊಲೀಸರು ಕೂಡ ಭೇಟಿ ನೀಡಿ ಪರಿಸ್ಥಿತಿಯನ್ನು ಪರಿಶೀಲಿಸಿದರು. ಬೆಂಕಿ ಕಾಣಿಸಿಕೊಂಡ ಕಾರಣ ಇನ್ನೂ ಸ್ಪಷ್ಟವಾಗಿಲ್ಲ. ಅಗ್ನಿಶಾಮಕ ಸಿಬ್ಬಂದಿ ಬೆಂಕಿಯನ್ನು ನಿಯಂತ್ರಣಕ್ಕೆ ತರಲು ಹರಸಾಹಸ ಪಟ್ಟರು. ಶಾಲೆಗೆ ರಜೆ ಇದ್ದ ಕಾರಣ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ಯಾರೂ ಸ್ಥಳದಲ್ಲಿರಲಿಲ್ಲ. ಇದರಿಂದ ಸಂಭವಿಸಬಹುದಾಗಿದ್ದ ದೊಡ್ಡ ಅನಾಹುತ ತಪ್ಪಿದಂತಾಗಿದೆ. ಇನ್ನೊಂದೆಡೆ, ಶಾಲೆಯ ಸುತ್ತಮುತ್ತ ವಾಸಿಸುವ ನಿವಾಸಿಗಳು ಬೆಂಕಿಯ ಜ್ವಾಲೆ ಮತ್ತು ಹೊಗೆಯನ್ನು ಕಂಡು ಆತಂಕಗೊಂಡಿದ್ದರು. ಬೆಂಕಿಯಿಂದ ಉಂಟಾದ ಹಾನಿಯ ಪ್ರಮಾಣ ಮತ್ತು ಅವಘಡದ ನಿಖರ ಕಾರಣ ಕುರಿತು ಪೊಲೀಸರು ಪರಿಶೀಲನೆ ನಡೆಸಿದ್ದಾರೆ.

ದಾದಿಯರ ಸಬಲೀಕರಣವೇ ರೋಗಿಗಳ ಜೀವಕ್ಕೆ ರಕ್ಷೆ

ಬೆಂಗಳೂರು: ರೋಗಿಗಳ ಆರೈಕೆ ಮತ್ತು ಚಿಕಿತ್ಸಾ ಸೇವೆಯಲ್ಲಿ ದಾದಿಯರ ಪಾತ್ರ ಬಹಳ ಮುಖ್ಯ. ದಾದಿಯರು ಸಬಲೀಕರಣದಿಂದ ರೋಗಿಗಳ ಜೀವಕ್ಕೆ ರಕ್ಷೆ ಎಂದು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ನಿರ್ದೇಶಕರಾದ ಡಾ.ಟಿ.ನವೀನ್ ಅವರು ತಿಳಿಸಿದರು.

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ವತಿಯಿಂದ ಇನ್ಫೋಸಿಸ್ ಸಭಾಂಗಣದಲ್ಲಿ ಶನಿವಾರ ನಡೆದ ಅಂತಾರಾಷ್ಟ್ರೀಯ ಶುಶ್ರೂಷಕರ ದಿನಾಚರಣೆಯಲ್ಲಿ ಮಾತನಾಡಿದ ಅವರು, ನಮ್ಮ ಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡಿದ ಶುಶ್ರೂಷಕರು ವಿಶ್ವದೆಲ್ಲೆಡೆ ಕಾರ್ಯ ನಿರ್ವಹಿಸುತ್ತಿದ್ದಾರೆ. ಕ್ಯಾನ್ಸರ್ ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡುವಲ್ಲಿ ಸಂಸ್ಥೆ ಮುಂಚೂಣಿಯಲ್ಲಿದೆ. ಇದಕ್ಕೆ ಶುಶ್ರೂಷಕರ ಸಹಕಾರವೂ ಒಳಗೊಂಡಿದೆ. ಕೇವಲ ರೋಗಿಗಳ ತಪಾಸಣೆ ನಡೆಸಿದರಷ್ಟೆ ಸಾಲದು. ರೋಗ ಗುಣಮುಖವಾಗಲು ಅವರಿಗೆ ಸೂಕ್ತ ಆರೈಕೆ ಅಗತ್ಯವಾಗಿದ್ದು, ಶುಶ್ರೂಷಕರು ಆ ನಿಟ್ಟಿನಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ ಎಂದು ಹೇಳಿದರು. ಮಣಿಪಾಲ್ ಹೆಲ್ತ್ ಎಂಟರ್‌ಪ್ರೈಸಸ್ ಸಂಸ್ಥೆಯ (ನರ್ಸಿಂಗ್) ವ್ಯವಸ್ಥಾಪಕಿ ಸರೋಜಾ ಜೈಕುಮಾರ್ ಅವರು ಮಾತನಾಡಿ, ಶುಶ್ರೂಷಕಿಯರು ವೈದ್ಯಕೀಯ ಕ್ಷೇತ್ರದ ಅವಿಭಾಜ್ಯ ಅಂಗ, ವೈದ್ಯರು ಮತ್ತು ರೋಗಿಗಳ ನಡುವೆ ಅವರು ಸೇತುವೆಯಂತೆ ಕೆಲಸ ಮಾಡುತ್ತಾರೆ. ರೋಗಿಯ ನಾಡಿ ಮಿಡಿತ, ಅವರ ಚೇತರಿಕೆಯ ಹಾದಿ ವೈದ್ಯರಿಗಿಂತಲೂ ಶುಶ್ರೂಷಕರಿಯರಿಗೆ ಬೇಗ ತಿಳಿಯುತ್ತದೆ. ರೋಗಿಗಳ ಜತೆಗೆ ವೈದ್ಯರಿಗಿಂತಲೂ ಹೆಚ್ಚು ಬಾಂಧವ್ಯ ಹೊಂದಿರುವವರು ಇವರು ಎಂದು ಹೇಳಿದರು.

ನಿವಾಸಿ ವೈದ್ಯಾಧಿಕಾರಿ ಡಾ.ಕೃಷ್ಣಪ್ಪ ಅವರು ಮಾತನಾಡಿ, ಶುಶ್ರೂಷಕರಿಗೆ ನೀಡಬೇಕಾದ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕು. ಕಿದ್ವಾಯಿಗೆ ಕ್ಯಾನ್ಸರ್ ರೋಗಿಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಇದಕ್ಕನುಗುಣವಾಗಿ ವೈದ್ಯಕೀಯ ಸೌಲಭ್ಯಗಳನ್ನು ವಿಸ್ತರಿಸಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಆಯೋಜಿಸಲಾ ಗಿದ್ದ ಅಂತಾರಾಷ್ಟ್ರೀಯ ಶುಶ್ರೂಷಕರ ದಿನಾಚರಣೆಗೆ ಸಂಸ್ಥೆಯ ನಿರ್ದೇಶಕ ಡಾ.ಟಿ.ನವೀನ್ ಚಾಲನೆ ನೀಡಿದರು. ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿ ಆಶಾ ಪರ್ವಿನ್ (ಕೆಎಎಸ್), ಆರ್ಥಿಕ ಸಲಹೆಗಾರರಾದ ಕೆ.ಸಿ.ಸೌಮ್ಯರಾಣಿ, ನಿವಾಸಿ ವೈದ್ಯಾಧಿಕಾರಿ ಡಾ.ಕೃಷ್ಣಪ್ಪ, ಸರೋಜಾ ಜೈಕುಮಾರ್ ಸೇರಿದಂತೆ ಮತ್ತಿತರರಿದ್ದರು.

ರೋಗಿಗಳಿಗೆ ಚಿಕಿತ್ಸೆ ಒದಗಿಸುವ ಶುಶ್ರೂಷಕರ ಪಾತ್ರ ಅನನ್ಯ

ಆಸ್ಪತ್ರೆಗಳಲ್ಲಿ ವೈದ್ಯರು ರೋಗಿಯನ್ನು ತಪಾಸಣೆ ನಡೆಸಿ, ಚಿಕಿತ್ಸೆಯ ಕುರಿತು ಸಲಹೆ, ಸೂಚನೆ ನೀಡುವುದು ಒಂದು ಹಂತವಾದರೆ. ವೈದ್ಯರ ಸಲಹೆ ಸೂಚನೆಗೆ ರೋಗಿಗಳಿಗೆ ಚಿಕಿತ್ಸೆ ಒದಗಿಸುವ ಶುಶ್ರೂಷಕರ ಪಾತ್ರ ಅನನ್ಯವಾದುದು. ರೋಗಿಯ ಮತ್ತು ಶುಶ್ರೂಷಕರ ಸಂಬಂಧ ಒಂದು ರೀತಿ ತಾಯಿ, ಮಕ್ಕಳ ಸಂಬಂಧ ಇದ್ದಂತೆ. ಶುಶ್ರೂಷಕರು ರೋಗಿಯನ್ನು ಪ್ರತಿ ಹಂತದಲ್ಲಿ ಗಮನಿಸುತ್ತಾರೆ. ಶುಶ್ರೂಷಕರ ನಗುಮುಖದ ಸೇವೆಯಿಂದ ರೋಗಿಯು ಬೇಗನೆ ಗುಣಮುಖರಾಗಲು ಸಾಧ್ಯ ಎಂದು ನಿರ್ದೇಶಕ ಡಾ.ಟಿ.ನವೀನ್ ಅವರು ತಿಳಿಸಿದರು.

ಗೋಡೆ ಕುಸಿದು ಆಟೋ ಡ್ರೈವರ್ ಸಾವು

ಬೆಂಗಳೂರು: ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ಶುಕ್ರವಾರ ಸುರಿದ ಮಳೆ ಆರ್ಭಟಕ್ಕೆ ಕಾಂಪೌಂಡ್ ಕುಸಿದು ಮತ್ತೊಬ್ಬ ವ್ಯಕ್ತಿ ಮೃತಪಟ್ಟಿದ್ದಾರೆ. ಕಳೆದ ಕೆಲವು ದಿನಗಳ ಹಿಂದೆ ಬೌರಿಂಗ್ ಆಸ್ಪತ್ರೆ ಗೋಡೆಯ ಕುಸಿದು 7 ಜನರು ಸಾವನ್ನಪ್ಪಿದ ಘಟನೆ ಮಾಸುವ ಮುನ್ನವೇ ವಿಜಯನಗರದ ಪ್ರತಿಷ್ಠಿತ ಕ್ಲಬ್ ಗೋಡೆ ಕುಸಿದು ಆಟೋ ಚಾಲಕನೊಬ್ಬ ಸ್ಥಳದಲ್ಲೇ ಸಾವನ್ನಪ್ಪಿರುವ ಆಘಾತಕಾರಿ ಘಟನೆ ನಡೆದಿದೆ. ಮಳೆಯಿಂದ ರಕ್ಷಣೆ ಪಡೆಯಲು ಆಟೋವನ್ನು ಪಕ್ಕಕ್ಕೆ ನಿಲ್ಲಿಸಿದ್ದೇ ಆ ದುರ್ದೈವಿ ಮಾಡಿದ ತಪ್ಪಾಯಿತು.

ಘಟನೆಯ ವಿವರ: ಮೃತ ವ್ಯಕ್ತಿಯನ್ನು ಗಂಗೊಂಡಹಳ್ಳಿ ನಿವಾಸಿ ಶಿವ ಬೋರಯ್ಯ (55) ಎಂದು ಗುರುತಿಸಲಾಗಿದೆ. ವೃತ್ತಿಯಲ್ಲಿ ಆಟೋ ಚಾಲಕರಾಗಿದ್ದ ಇವರು, ಶುಕ್ರವಾರ ಸಂಜೆ ವಿಜಯನಗರದ ಸುತ್ತಮುತ್ತ ಬಾಡಿಗೆಗಾಗಿ ಸಂಚರಿಸುತ್ತಿದ್ದರು. ಈ ವೇಳೆ ಇದ್ದಕ್ಕಿದ್ದಂತೆ ಜೋರು ಮಳೆ ಶುರುವಾದ ಕಾರಣ, ಮಳೆಯಿಂದ ಬಚಾವಾಗಲು ವಿಜಯನಗರ ಕ್ಲಬ್‌ನ ಈಜುಕೊಳ ಪಕ್ಕದ ಗೋಡೆಯ ಬಳಿ ತಮ್ಮ ಆಟೋವನ್ನು ಪಾರ್ಕ್ ಮಾಡಿದ್ದರು. ಮಳೆ ಕಡಿಮೆಯಾಗಲಿ ಎಂದು ಆಟೋದ ಒಳಗೇ ಕುಳಿತಿದ್ದಾಗ ಈ ದುರಂತ ಸಂಭವಿಸಿದೆ.

ಬೃಹತ್ ಗೋಡೆ ಕುಸಿತ: ಮಳೆಯ ಅಬ್ಬರಕ್ಕೆ ವಿಜಯನಗರ ಕ್ಲಬ್‌ನ ಈಜುಕೊಳ ಆವರಣದ ಬೃಹತ್ ಗೋಡೆ ಸಂಪೂರ್ಣವಾಗಿ ನೆನೆದು ದುರ್ಬಲಗೊಂಡಿತ್ತು. ಶಿವ ಬೋರಯ್ಯ ಅವರು ಆಟೋದಲ್ಲಿ ಕುಳಿತಿದ್ದಾಗಲೇ ಬೃಹತ್ ಗೋಡೆ ರಭಸವಾಗಿ ಆಟೋದ ಮೇಲೆಯೇ ಕುಸಿದು ಬಿದ್ದಿದೆ. ಗೋಡೆಯ ಇಟ್ಟಿಗೆ ಮತ್ತು ಕಲ್ಲುಗಳ ಭಾರಕ್ಕೆ ಆಟೋ ಸಂಪೂರ್ಣವಾಗಿ ನಜ್ಜುಗುಜ್ಜಾಗಿದ್ದು, ಒಳಗೆ ಕುಳಿತಿದ್ದ ಶಿವ ಬೋರಯ್ಯ ಅವರಿಗೆ ತೀವ್ರ ಪೆಟ್ಟು ಬಿದ್ದಿದೆ. ಗೋಡೆ ಬಿದ್ದ ರಭಸಕ್ಕೆ ಅವರು ಸ್ಥಳದಲ್ಲೇ ಕೊನೆಯುಸಿರೆಳೆದಿದ್ದಾರೆ.

ಮೃತ ಚಾಲಕನ ಅವರ ಕುಟುಂಬವನ್ನು ಶಾಸಕ ಎಂ. ಕೃಷ್ಣಪ್ಪ ಅವರ ಪರವಾಗಿ ಅವರ ಪುತ್ರರಾದ ಪ್ರದೀಪ್ ಕೃಷ್ಣ ಅವರು ಭೇಟಿ ನೀಡಿ ಶಾಸಕರ ಕಡೆಯಿಂದ 5 ಲಕ್ಷ ರು. ಪರಿಹಾರ ನೀಡಿದರು.

ಜೀವನದಲ್ಲಿ ಪ್ರಾಮಾಣಿಕತೆ ಮುಖ್ಯ

ಬೆಂಗಳೂರು: ವಿದ್ಯಾರ್ಥಿಗಳ ಜೀವನದಲ್ಲಿ ಕೇವಲ ಶೈಕ್ಷಣಿಕ ಸಾಧನೆ ಮಾತ್ರವಲ್ಲದೆ, ಜೀವನ ಮೌಲ್ಯಗಳು, ಪ್ರಾಮಾಣಿಕತೆ ಮತ್ತು ಸಾಮಾಜಿಕ ಜವಾಬ್ದಾರಿಯೂ ಅತ್ಯಂತ ಮುಖ್ಯ ಎಂದು ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಪಿ.ಎನ್.ದೇಸಾಯಿ ತಿಳಿಸಿದರು.

ಸೌಂದರ್ಯ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಅಂಡ್ ಸೈನ್ಸ್, ಸೌಂದರ್ಯ ಕಾನೂನು ಮಹಾವಿದ್ಯಾಲಯ ಹಾಗೂ ಸೌಂದರ್ಯ ಕಲಾ ಮತ್ತು ವಾಣಿಜ್ಯ ಸಂಜೆ ಮಹಾವಿದ್ಯಾಲಯಗಳ 16ನೇ ಪದವಿ ಪ್ರದಾನ ಸಮಾರಂಭ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಾನವ ಹಕ್ಕುಗಳ ಮಹತ್ವ, ನಾಗರಿಕರ ಹಕ್ಕುಗಳು ಹಾಗೂ ಕರ್ತವ್ಯಗಳ ಬಗ್ಗೆ ಎಲ್ಲರು ತಿಳಿಯಬೇಕು. ವಿದ್ಯಾರ್ಥಿಗಳು ಉತ್ತಮ ನಾಗರಿಕರಾಗಿ ಸಮಾಜದ ಅಭಿವೃದ್ಧಿಗೆ ಕೈಜೋಡಿಸಬೇಕು. ಮಾನವ ಹಕ್ಕುಗಳ ಆಯೋಗದ ಕಾರ್ಯವೈಖರಿ ಮತ್ತು ಉದ್ದೇಶಗಳು ಜನರೇಷನ್-ಝೆಡ್ ವಿದ್ಯಾರ್ಥಿಗಳಿಗೆ ಉಪಯುಕ್ತ ಅರಿವು ಮೂಡಿಸಲಾಗುವುದು ಎಂದರು.

ಹಬನೇರೋ ಫುಡ್ಸ್ ಇಂಟರ್‌ನ್ಯಾಷನಲ್ ಸಂಸ್ಥೆಯ ಸಂಸ್ಥಾಪಕ ಗ್ರಿಫಿತ್ ಡೇವಿಡ್ ಮಾತನಾಡಿ, ನೀವು ಏನು ಮಾಡಬಲ್ಲಿರೋ ಅಥವಾ ಏನಾಗಲು ಕನಸು ಕಾಣುತ್ತೀರೋ, ಅದನ್ನು ಇಂದೇ ಪ್ರಾರಂಭಿಸಿ. ಪದವಿ ಗಳಿಸುವುದು ಅಂತಿಮ ಗುರಿಯಲ್ಲ, ಅದು ಜೀವನದ ಹೊಸ ಪಯಣದ ಆರಂಭ. ಪ್ರತಿಭೆಗಿಂತ ನಿರಂತರತೆ ಮುಖ್ಯ ಎಂಬ ಸಂದೇಶದ ಮೂಲಕ ಯಶಸ್ಸು ಸಾಧಿಸಲು ಶಿಸ್ತು, ಪರಿಶ್ರಮ ಮತ್ತು ನಿರಂತರ ಪ್ರಯತ್ನ ಅಗತ್ಯ ಎಂದರು. ಸೌಂದರ್ಯ ಎಜುಕೇಶನಲ್ ಟ್ರಸ್ಟ್‌ನ ಅಧ್ಯಕ್ಷ ಸೌಂದರ್ಯ ಪಿ. ಮಂಜಪ್ಪ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೀರ್ತನ್ ಕುಮಾರ್ ಎಂ, ಪ್ರಾಂಶುಪಾಲ ಡಾ.ವಿಶ್ವಾಸ್ ಪುಟ್ಟಸ್ವಾಮಿ, ಸೋಮಶೇಖರಪ್ಪ ಸೇರಿದಂತೆ ಇತರರು ಇದ್ದರು.



ಕಾರ್ಯಕ್ರಮದಲ್ಲಿ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಪಿ.ಎನ್.ದೇಸಾಯಿ ಅವರಿಗೆ ಸನ್ಮಾನಿಸಲಾಯಿತು. ಈ ವೇಳೆ ಹಬನೇರೋ ಫುಡ್ಸ್ ಇಂಟರ್‌ನ್ಯಾಷನಲ್ ಸಂಸ್ಥೆಯ ಸಂಸ್ಥಾಪಕ ಗ್ರಿಫಿತ್ ಡೇವಿಡ್, ಸೌಂದರ್ಯ ಎಜುಕೇಶನಲ್ ಟ್ರಸ್ಟ್‌ನ ಅಧ್ಯಕ್ಷ ಸೌಂದರ್ಯ ಪಿ. ಮಂಜಪ್ಪ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೀರ್ತನ್ ಕುಮಾರ್ ಎಂ, ಪ್ರಾಂಶುಪಾಲ ಡಾ.ವಿಶ್ವಾಸ್ ಪುಟ್ಟಸ್ವಾಮಿ, ಸೋಮಶೇಖರಪ್ಪ ಸೇರಿದಂತೆ ಇತರರು ಇದ್ದರು.

ಗರ್ಭಪಾತ ಮಾಡಿಸಿದ ಆರೋಪ | ಜಾಮೀನು ನಿರಾಕರಣೆ

ನೀವೆಂಥಾ ಡಾಕ್ಟರ್: ಕಿಡಿಕಾರಿದ ಹೈ

ಬೆಂಗಳೂರು: ಪ್ರೌಢಶಾಲೆಯ ವಿದ್ಯಾರ್ಥಿನಿಗೆ ಕಾನೂನುಬಾಹಿರವಾಗಿ ಗರ್ಭಪಾತ ಮಾಡಿಸಿದ ಆರೋಪ ಎದುರಿಸುತ್ತಿರುವ 70 ವರ್ಷ ವೈದ್ಯೆಗೆ ನೀವೆಂಥಾ ವೈದ್ಯೆ ಎಂದು ಕಿಡಿಕಾರಿರುವ ಹೈಕೋರ್ಟ್ ಅವರಿಗೆ ನಿರೀಕ್ಷಣಾ ಜಾಮೀನು ನಿರಾಕರಿಸಿದೆ.

ಚಿತ್ರದುರ್ಗದ ಶ್ರೀನಿವಾಸ ನರ್ಸಿಂಗ್ ಹೋಮ್‌ನ ವೈದ್ಯೆ ಡಾ.ಶಂಕರಲಕ್ಷ್ಮಿ ಅವರ ನಡತೆಯ ಬಗ್ಗೆ ನ್ಯಾಯಮೂರ್ತಿ ಆರ್. ನಟರಾಜ್ ಅವರ ಏಕಸದಸ್ಯ ಪೀಠವು ಕಳವಳ ವ್ಯಕ್ತಪಡಿಸಿದೆ. ನೀವು ಘನತೆಯುತ ವೈದ್ಯರು ಎಂದು ಹೇಳಿಕೊಳ್ಳುತ್ತೀರಿ. ಸಂತ್ರಸ್ತ ಬಾಲಕಿಯು ನಿಮ್ಮ ಮುಂದೆ ಗರ್ಭಿಣಿಯಾಗಿ ಬಂದಿದ್ದಾಳೆ. ಆದರೆ, ನೀವು, ಆಕೆ ಋತುಚಕ್ರದಲ್ಲಿ ವ್ಯತ್ಯಾಸಕ್ಕಾಗಿ ಚಿಕಿತ್ಸೆ ಪಡೆಯಲು ಬಂದಿದ್ದಳು ಎನ್ನುತ್ತಿದ್ದೀರಿ. ಇದರ ತನಿಖೆಯಾಗಬೇಕಿದೆ. ಇಂಥ ಪ್ರಕರಣಗಳನ್ನು ಸುಲಭವಾಗಿ ಪರಿಗಣಿಸಲಾಗದು. ನೀವೆಂಥಾ ವೈದ್ಯೆ ಎಂದು ನ್ಯಾಯಾಲಯವು ಆಕ್ರೋಶ ವ್ಯಕ್ತಪಡಿ ಸಿತು. ವೈದ್ಯೆಯನ್ನು ಪ್ರತಿನಿಧಿಸಿದ್ದ ಹಿರಿಯ ವಕೀಲ ಎಂ.ಎಸ್. ಶ್ಯಾಮ್‌ಸುಂದರ್ ಅವರು ಗುಪ್ತಾಂಗದಲ್ಲಿ ರಕ್ತಸ್ರಾವ ಮತ್ತು ಮುಟ್ಟಿನಲ್ಲಿ ವ್ಯತ್ಯಾಸವಾಗಿದೆ ಎಂದು ಹೇಳಿ ಬಾಲಕಿಯನ್ನು ನಮ್ಮ ಆಸ್ಪತ್ರೆಗೆ ಕರೆತರಲಾಗಿತ್ತು. ಆಸ್ಪತ್ರೆಗೆ ಬರುವ ವೇಳೆಗೆ ಗರ್ಭಪಾತವಾಗಿತ್ತು. ವೈದ್ಯೆ ಯು ಚಿಕಿತ್ಸೆ ಮಾತ್ರ ನೀಡಿದ್ದಾರೆ ಎಂದರು.

ಡಾ.ಶಂಕರಲಕ್ಷ್ಮಿ ಅವರು 70 ವರ್ಷಗಳಿಂದ ವೈದ್ಯೆಯಾಗಿ ಕೆಲಸ ಮಾಡುತ್ತಿದ್ದು, ಅಕ್ರಮ ವಾಗಿ ಗರ್ಭಪಾತ ಮಾಡಿಸಿಲ್ಲ ಎಂದರು. ಆಗ ಪೀಠವು ನಿಮಗೆ 70 ವರ್ಷವೋ ಅಥವಾ 700 ವರ್ಷವೋ ನಮಗೆ ಬೇಕಿಲ್ಲ. ನೀವು ನಡೆದು ಕೊಂಡಿರುವ ರೀತಿ ಕಳವಳಕಾರಿಯಾಗಿದೆ. ಸಂತ್ರಸ್ತ ಬಾಲಕಿಯು ಗರ್ಭಧರಿಸಿ ನಿಮ್ಮ ಬಳಿ ಬಂದಿದ್ದರೂ ನೀವು ಋತುಚಕ್ರದಲ್ಲಿ ವ್ಯತ್ಯಾಸಕ್ಕೆ ಬಂದಿದ್ದರು ಎನ್ನುತ್ತಿದ್ದೀರಿ? ಎಂದಿತು.

ಆಗ ಶ್ಯಾಮ್‌ಸುಂದರ್ ಅವರು ವೈದ್ಯೆಯು ತನಿಖೆಗೆ ಸಹಕರಿಸಲಿದ್ದಾರೆ ಮತ್ತು ಆಸ್ಪತ್ರೆ ಯಲ್ಲಿನ ಸಿಸಿಟಿವಿ ದೃಶ್ಯಾವಳಿ ಸಲ್ಲಿಸಲಾ ಗುವುದು. ಅಕ್ರಮವಾಗಿ ಗರ್ಭಪಾತ ಮಾಡಿಸಿದ್ದಾರೆ ಎಂಬ ಆರೋಪದ ಮೇಲೆ ಪೋಕ್ಸೊ ಕಾಯಿದೆ ಅಡಿ ಕಸ್ಟಡಿಗೆ ಪಡೆದು ವೈದ್ಯೆಯನ್ನು ತನಿಖೆ ನಡೆಸುವ ಅಗತ್ಯವಿಲ್ಲ ಎಂದರು. ವಿಚಾರಣೆಯ ಒಂದು ಹಂತದಲ್ಲಿ ಪೀಠವು ನೀವು ಸ್ತ್ರೀರೋಗ ತಜ್ಞೆಯ ಬಳಿಗೆ ಹೋದ ತಕ್ಷಣ ಮೊದಲಿಗೆ ಅವರು ಕೇಳುವುದು ಕೊನೆಯ ಬಾರಿಗೆ ಯಾವಾಗ ಮುಟ್ಟಾಗಿದ್ದಿರಿ ಎಂದಿತು.

ಶಿಕ್ಷಕನಿಂದ ಲೈಂಗಿಕ ದೌರ್ಜನ್ಯ

ಪ್ರೌಢಶಾಲೆಯ ವಿದ್ಯಾರ್ಥಿನಿಯನ್ನು ಶಿಕ್ಷಕ ರಾಜಣ್ಣ ಎಂಬಾತ ಅಜ್ಞಾತ ಸ್ಥಳಕ್ಕೆ ಕರೆದೊಯ್ದು ಆಕೆಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದನು. ಕಾಲ ಕಳೆದಂತೆ ವಿದ್ಯಾರ್ಥಿನಿಯ ದೈಹಿಕ ಬದಲಾವಣೆ ಯನ್ನು ಮಹಿಳಾ ಶಿಕ್ಷಕಿಯೊಬ್ಬರು ಪ್ರಶ್ನಿಸಿದ್ದು, ಆಕೆ ಘಟನೆಯ ಬಗ್ಗೆ ತಿಳಿಸಿದ್ದಳು. ಈ ಹಿನ್ನೆಲೆ ಯಲ್ಲಿ ಮಹಿಳಾ ಶಿಕ್ಷೆಯು ಕಿಟ್ ನೆರವಿನಿಂದ ಆಕೆಯ ಮೂತ್ರ ಪರೀಕ್ಷೆ ಮಾಡಿದ್ದರು. ಇದರಲ್ಲಿ ವಿದ್ಯಾರ್ಥಿನಿ ಗರ್ಭಧರಿಸಿದ್ದು, ಪತ್ತೆಯಾಗಿತ್ತು. ವಿಚಾರ ವನ್ನು ಶಿಕ್ಷಕರು ಸೇರಿ ಸಂತ್ರಸ್ತೆಯ ಗಮನಕ್ಕೆ ತಂದಿದ್ದರು. ನಂತರ ಆಕೆಯನ್ನು ಆಸ್ಪತ್ರೆಗೆ ಕರೆದೊಯ್ದು ಗರ್ಭಪಾತ ಮಾಡಿಸಲಾ ಗಿತ್ತು ಎಂದು ಆರೋಪಿಸಲಾಗಿದೆ.

ಅತ್ಯಾಚಾರ, ಬಲವಂತದ ಮತಾಂತರ ಮಾಡಿಸಿದ ಪ್ರಕರಣ

ಆರೋಪಿ ತಾಯಿಗೆ ಜಾಮೀನು

ಬೆಂಗಳೂರು: ಅತ್ಯಾಚಾರ ಮತ್ತು ಬಲವಂತದ ಮತಾಂತರ ಪ್ರಕರಣದಲ್ಲಿನ ಪ್ರಮುಖ ಆರೋಪಿಯ ತಾಯಿಗೆ ಕರ್ನಾಟಕ ಹೈಕೋರ್ಟ್ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ.

ಅತ್ಯಾಚಾರ ಆರೋಪದಲ್ಲಿ ಅರ್ಜಿದಾರೆ ಜಬೀನ್ ತಾಜ್ ಅವರ ಭಾಗವಹಿಸುವಿಕೆ ಈ ಹಂತದಲ್ಲಿ ಕಾಣುತ್ತಿಲ್ಲ. ಹೀಗಾಗಿ, ಆರೋಪಗಳು ಗಂಭೀರ ಎಂದು ಆಕೆಗೆ ನಿರೀಕ್ಷಣಾ ಜಾಮೀನು ನಿರಾಕರಿಸಲಾ ಗದು ಎಂದು ನ್ಯಾಯಮೂರ್ತಿ ಆರ್. ನಟರಾಜ್ ಅವರ ರಜಾಕಾಲೀನ ಏಕಸದಸ್ಯ ಪೀಠ ಅಭಿಪ್ರಾಯಪಟ್ಟಿದೆ.

ಜಬೀನ್ ತಾಜ್ ಅವರನ್ನು ಅವರನ್ನು ಬಂಧಿಸಿದರೆ 2 ಲಕ್ಷ ರು. ಮೌಲ್ಯದ ವೈಯಕ್ತಿಕ ಬಾಂಡ್, ಒಬ್ಬರ ಭದ್ರತೆ ಪಡೆದು ಬಿಡುಗಡೆ ಮಾಡಬೇಕು. ಆರೋಪ ಪಟ್ಟಿ ಸಲ್ಲಿಸುವವರೆಗೆ ಪ್ರತಿ ಶನಿವಾರ ಬೆಳಗ್ಗೆ 11 ಗಂಟೆಗೆ ತನಿಖಾಧಿಕಾರಿಯ ಮುಂದೆ ಹಾಜರಾಗಬೇಕು. ಇಂಥದ್ದೇ ಪ್ರಕರಣದಲ್ಲಿ ಭಾಗಿಯಾಗಬಾರದು, ಪ್ರಾಸಿಕ್ಯೂಷನ್ ಸಾಕ್ಷಿಯನ್ನು ತಿರುಚಬಾರದು ಎಂದು ನ್ಯಾಯಾಲಯ ಷರತ್ತು ವಿಧಿಸಿದೆ.

ದೂರುದಾರೆ ಮತ್ತು ಮೊದಲನೇ ಆರೋಪಿಯು ಪ್ರೀತಿಸಿ ಮದುವೆಯಾಗಿದ್ದು, ಅದು ವಿಶೇಷ ವಿವಾಹ ಕಾಯಿದೆ ಅಡಿ ನೋಂದಾಯಿಸಲ್ಪಟ್ಟಿದೆ. ಮೊದಲನೇ ಆರೋಪಿಯ ವಿರುದ್ಧದ ಆರೋಪವು ಜೀವಾವಧಿ ಅಥವಾ ಗಲ್ಲು ಶಿಕ್ಷೆ ವಿಧಿಸುವಂಥದ್ದಲ್ಲ ಎಂದು ನ್ಯಾಯಾಲಯ ಆದೇಶದಲ್ಲಿ ದಾಖಲಿಸಿದೆ. ಅರ್ಜಿದಾರೆಯ ಪರ ವಕೀಲರು ಅರ್ಜಿದಾರೆಯು ಮೊದಲನೇ ಆರೋಪಿಯ ತಾಯಿಯಾಗಿದ್ದಾರೆ. ಆರೋಪಿತ ಅಪರಾಧದಲ್ಲಿ ಅವರ ಪಾತ್ರವಿಲ್ಲ. 2025ರ ಜೂನ್ 18ರಂದು ವಿಶೇಷ ವಿವಾಹ ಕಾಯಿದೆ ಅಡಿ ದೂರುದಾರೆ ಮತ್ತು ಮೊದಲನೇ ಆರೋಪಿಯ ವಿವಾಹ ನೋಂದಾಯಿಸಲ್ಪಟ್ಟಿದೆ ಎಂದರು.

ಪ್ರಕರಣದ ಹಿನ್ನೆಲೆ ಏನು?

2025ರ ಫೆಬ್ರವರಿಯ ಒಂದು ದಿನ ಮೊದಲನೇ ಆರೋಪಿಯು ತನಗೆ ಮದ್ಯಸೇವನೆ ಮಾಡಿಸಿ, ಪ್ರಜ್ಞೆ ತಪ್ಪಿಸಿ, ಲೈಂಗಿಕ ದೌರ್ಜನ್ಯ ಎಸಗಿದ್ದಾನೆ. ಆನಂತರ ತನ್ನ ಮೊಬೈಲ್ನಿಂದ ತನ್ನ ಬೆತ್ತಲೆ ಮತ್ತು ಆಕ್ಷೇಪರ್ಹವಾದ ಚಿತ್ರಗಳನ್ನು ತೆಗೆದಿದ್ದಾನೆ. ಇದನ್ನೇ ಇಟ್ಟುಕೊಂಡು ತನ್ನನ್ನು ಬ್ಲಾಕ್ಮೇಲ್ ಮಾಡಿ, ಪದೇಪದೇ ಲೈಂಗಿಕ ದೌರ್ಜನ್ಯ ನಡೆಸಿದ್ದರಿಂದ ಗರ್ಭ ಧರಿಸಿದ್ದೆನು. ಈ ಸಂದರ್ಭದಲ್ಲಿ ದೈಹಿಕ ಹಲ್ಲೆ ನಡೆಸಿದ್ದರಿಂದ ನವಜಾತ ಶಿಶು ಮರಣ ಹೊಂದಿತ್ತು. ಮೊದಲನೇ ಆರೋಪಿಯು ತನ್ನನ್ನು ಹಿಂದೂ ಧರ್ಮದಿಂದ ಇಸ್ಲಾಂಗೆ ಮತಾಂತರಗೊಂಡರೆ ಮಾತ್ರ ಮದುವೆಯಾಗುವುದಾಗಿ ಒತ್ತಾಯಿಸಿದ್ದು, 2025ರ ಜೂನ್ 22ರಂದು ಇಸ್ಲಾಂಗೆ ಮತಾಂತರಗೊಂಡು ಜೈನಾಬ್ ಎಂದು ಬದಲಿಸಿಕೊಂಡು, ಆತನನ್ನು ಮದುವೆಯಾಗಿದ್ದೇನೆ ಎಂದು ದೂರಿದ್ದಾರೆ.

ವಿಶ್ವವಾಣಿ ಪುಸ್ತಕ

QR CODE
ಸ್ಕ್ಯಾನ್ ಮಾಡಿ
ಫೋನ್ ಪೇ/ ಗೂಗಲ್ ಪೇ ಮಾಡಿದ ಸ್ಕ್ರೀನ್ ಶಾಟ್‌ನೊಂದಿಗೆ ನಿಮ್ಮ ವಿಳಾಸವನ್ನು ಕೆಳಗಿನ ವಾಟ್ಸಪ್ ನಂಬರ್‌ಗೆ ಕಳುಹಿಸಿ.
ನಿಮ್ಮ ಮನೆ ಬಾಗಿಲಿಗೆ ಪುಸ್ತಕ ತಲುಪಿಸುತ್ತೇವೆ.
63623 93966

₹ 375

ಹೊಟ್ಟೆ ಹುಣ್ಣಾಗುವಂತೆ ನಗಿಸುವ ನಟನ ಜೀವನ ಅದೆಷ್ಟು ಕರುಣಾಜನಕವಾಗಿರುತ್ತದೆ ಎಂಬ ಕಟುಸತ್ಯ ಬ್ರಹ್ಮಾನಂದಂ ಆತ್ಮಕಥೆಯಲ್ಲಿ ಮನೋಜ್ಞವಾಗಿ ಚಿತ್ರಿತವಾಗಿದೆ. ಬದುಕನ್ನೇ ನಗಿಸುವುದಕ್ಕೆ ಮುಡಿಪಾಗಿಟ್ಟ ಮಹಾನ್ ನಟನ ಕಥೆ ರೋಚಕವಾಗಿದೆ.
-ಕೆ. ಜಯತೀರ್ಥ, ಯುವ ಸಾಹಿತಿ

ಸಮಾಚಾರ ಸಣ್ಣದಲ್ಲ

ಆಹಾರ ಸಂಸ್ಕೃತಿಯ ನಗರ ಬೆಂಗಳೂರು

ಬೆಂಗಳೂರು: ನಮ್ಮ 60ನೇ ಶಾಖೆಯ ಮೈಲಿಗಲ್ಲನ್ನು ತಲುಪಿರುವುದು ನಮ್ಮ ಇಡೀ ತಂಡಕ್ಕೆ ಅತ್ಯಂತ ಹೆಮ್ಮೆಯ ಸಂಗತಿಯಾಗಿದೆ. ಬೆಂಗಳೂರು ಯಾವಾಗಲೂ ಉತ್ತಮ ಆಹಾರ ಸಂಸ್ಕೃತಿ ಪ್ರೋತ್ಸಾಹಿಸುವ ಮತ್ತು ಪ್ರೀತಿಸುವ ನಗರ. ಲೈಟ್ ಬೈಟ್ ಫುಡ್ಸ್ ಪ್ರೈವೇಟ್ ಲಿಮಿಟೆಡ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಂಜಿತ್ ಪಾಲಿಯಾತ್ ಅವರು ತಿಳಿಸಿದರು. ಬಾಗ್ಮನೆ ಸೋಲೇರಿಯಂ ಸಿಟಿಯಲ್ಲಿ ಪಂಜಾಬ್ ಗ್ರಿಲ್‌ನ 60ನೇ ಶಾಖೆ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬಾಗ್ಮನೆ ಸೋಲೇರಿಯಂ ಸಿಟಿಯು ನಮಗೆ ನಗರದ ಕ್ರಿಯಾತ್ಮಕ ಮತ್ತು ವೈವಿಧ್ಯಮಯ ಗ್ರಾಹಕರನ್ನು ತಲುಪಲು ಉತ್ತಮ ವೇದಿಕೆ ಕಲ್ಪಿಸಿದೆ. ಇಷ್ಟು ವರ್ಷಗಳಿಂದ ಪಂಜಾಬ್ ಗ್ರಿಲ್ ಬ್ರ್ಯಾಂಡ್ ಕಾಯ್ದುಕೊಂಡು ಬಂದಿರುವ ಅದೇ ಪ್ರೀತಿ ಮತ್ತು ಅತ್ಯುನ್ನತ ರುಚಿಯೊಂದಿಗೆ ಗ್ರಾಹಕರನ್ನು ಸತ್ಕರಿಸಲು ನಾವು ಉತ್ಸುಕರಾಗಿದ್ದೇವೆ ಎಂದು ಸಂತಸ ಹಂಚಿಕೊಂಡರು.

ಬಿದ್ದ ಮರಗಳ ತೆರವು ಕಾರ್ಯಕ್ಕೆ ವೇಗ

ಬೆಂಗಳೂರು: ಇತ್ತೀಚೆಗೆ ಸುರಿದ ಭಾರಿ ಗಾಳಿ-ಮಳೆಯಿಂದಾಗಿ ಬೆಂಗಳೂರು ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಅನೇಕ ಮರಗಳು ಹಾಗೂ ರೆಂಬೆ-ಕೊಂಬೆಗಳು ಮುರಿದು ಬಿದ್ದಿದ್ದು, ಸಾರ್ವಜನಿಕರ ಸುರಕ್ಷತೆ ಹಾಗೂ ಸುಗಮ ವಾಹನ ಸಂಚಾರಕ್ಕೆ ಅನುವು ಮಾಡಿಕೊಡುವ ಉದ್ದೇಶದಿಂದ ಅವುಗಳನ್ನು ತೆರವುಗೊಳಿಸುವ ಕಾರ್ಯ ಪಶ್ಚಿಮ ನಗರ ಪಾಲಿಕೆ ವೇಗವಾಗಿ ಕೈಗೊಂಡಿದೆ ಎಂದು ಆಯುಕ್ತ ಡಾ.ರಾಜೇಂದ್ರ ಕೆ.ವಿ.ತಿಳಿಸಿದರು.ಈ ಕುರಿತು ಆಯುಕ್ತ ಡಾ. ರಾಜೇಂದ್ರ, ಕೆ.ವಿ ಮಾತನಾಡಿ, ಮುರಿದು ಬಿದ್ದ ಮರಗಳು ಮತ್ತು ಕೊಂಬೆಗಳನ್ನು ಸ್ಥಳದಲ್ಲಿಯೇ ಕತ್ತರಿಸಿ ತೆರವುಗೊಳಿಸಲಾಗಿದ್ದು, ಉಳಿದ ಮರಮುಟ್ಟುಗಳನ್ನು ಸಾಗಾಣಿಕೆ ಮಾಡುವ ಕಾರ್ಯ ಪ್ರಗತಿಯಲ್ಲಿದೆ. ಈ ಹಿನ್ನೆಲೆಯಲ್ಲಿ ರಸ್ತೆ ಬದಿಗಳು, ಪಾದಚಾರಿ ಮಾರ್ಗಗಳು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಮರಮುಟ್ಟುಗಳು ಕಂಡುಬಂದಲ್ಲಿ ತಕ್ಷಣ ಮಾಹಿತಿ ನೀಡುವಂತೆ ಬೆಂಗಳೂರು ಪಶ್ಚಿಮ ನಗರ ಪಾಲಿಕೆ ಸಾರ್ವಜನಿಕರಲ್ಲಿ ಮನವಿ ಮಾಡಿದೆ. ಮರಮುಟ್ಟುಗಳಿರುವ ಸ್ಥಳಗಳ ಕುರಿತು ಸಾರ್ವಜನಿಕರು ಪಾಲಿಕೆಯ ಸಹಾಯವಾಣಿ 1533, ಪಶ್ಚಿಮ ನಗರ ಪಾಲಿಕೆ ನಿಯಂತ್ರಣ ಕೊಠಡಿ ದೂರವಾಣಿ ಸಂಖ್ಯೆ 9480685703 ಅಥವಾ ಸಂಬಂಧಿತ ಅರಣ್ಯ ಇಲಾಖೆ ಅಧಿಕಾರಿಗಳನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಉದ್ಯಮಗಳಿಗೆ ತಕ್ಕಂತೆ ಎಐ ಪ್ರತಿಭೆಗಳು ಬೇಕು

ಬೆಂಗಳೂರು: ಐಬಿಎಮ್, ಬಯೋಕಾನ್, ಕ್ಯಾನೊನಿಕಲ್, ಕ್ರಾಫ್ಟ್‌ಹೈನ್ಸ್ ಇಂಡಿಯಾ ಮತ್ತು ಜೆಎಲ್‌ಎಲ್ ಮುಖ್ಯಸ್ಥರು ಎಐ-ಸಿದ್ಧ ಪ್ರತಿಭೆ ಮತ್ತು ಭವಿಷ್ಯದಲ್ಲಿ ಬೇಕಾಗುವ ಉದ್ಯೋಗಿಗಳು ವಿಷಯಗಳ ಬಗ್ಗೆ ಪುಣೆಯ ಎಂಐಟಿ ವರ್ಲ್ಡ್ ಪೀಸ್‌ಯೂನಿವರ್ಸಿಟಿ (ಎನ್‌ಐಪಿಎಮ್), ಕರ್ನಾಟಕ ಮತ್ತು ರಾಷ್ಟ್ರೀಯ ಸಿಬ್ಬಂದಿ ನಿರ್ವಹಣಾ ಸಂಸ್ಥೆ (ಎನ್‌ಐಪಿಎಮ್) ಜತೆ ಚರ್ಚೆನಡೆಸಿದರು.ಬೆಂಗಳೂರಿನಲ್ಲಿ ನಡೆದ ಈ ಸಮಾವೇಶದಲ್ಲಿ, ಹಿರಿಯ ಮಾನವ ಸಂಪನ್ಮೂಲ ನಾಯಕರು, ಶಿಕ್ಷಣ ತಜ್ಞರು, ತಂತ್ರಜ್ಞಾನ ತಜ್ಞರು, ಉತ್ಪಾದನಾ ವೃತ್ತಿಪರರು ಮತ್ತು ಉದ್ಯಮದ ಪಾಲುದಾರರು ಪಾಲ್ಗೊಂಡಿದ್ದರು. ಕೆಲಸದ ಭವಿಷ್ಯ, ಎಐ ಕಾರಣದಿಂದ ಆಗುತ್ತಿರುವ ಹಠಾತ್ ಬದಲಾವಣೆಗಳು, ಬದಲಾಗುತ್ತಿರುವ ಕಾರ್ಮಿಕರ ನಿರೀಕ್ಷೆಗಳು ಮತ್ತು ನಿರಂತರ ಕೌಶಲ್ಯಗಳ ವರ್ಧನೆ ಮತ್ತು ನವೀಕರಣ ಇತ್ಯಾದಿಗಳ ಬಗ್ಗೆ ಚರ್ಚೆಗಳು ನಡೆದವು. ವಿದ್ಯಾರ್ಥಿಗಳು ಮತ್ತು ವೃತ್ತಿಪರರು, ಅತ್ಯಂತ ವೇಗವಾಗಿ ಬದಲಾಗುತ್ತಿರುವ ಕೆಲಸದ ಬೇಡಿಕೆಗಳಿಗೆ ಸಿದ್ಧಗೊಳ್ಳಬೇಕಿದೆ ಎಂಬುದರ ಕಡೆಗೆ ಗಮನಹರಿಸಬೇಕಿದೆ ಎಂದು ಬಹು ವಿಷಯಗಳ ತಜ್ಞರ ತಂಡಗಳು ಮುಖ್ಯವಾಗಿ ಚರ್ಚಿಸಿದವು. ಜತೆಗೆ, ಉದ್ಯಮ ಹಾಗೂ ಶೈಕ್ಷಣಿಕ ಕ್ಷೇತ್ರಗಳ ಪ್ರತಿನಿಧಿಗಳ ನಡುವೆ ಸಂವಹನಗಳು ನಡೆದವು. ಈ ಸಮಾವೇಶದಲ್ಲಿ ಸೋನಾ ವಲ್ಲಿಯಪ್ಪ ಗ್ರೂಪ್‌ನ ಉಪಾಧ್ಯಕ್ಷ ತ್ಯಾಗು ವಲ್ಲಿಯಪ್ಪ, ಎಮ್‌ಐಟಿ-ಡಬ್ಲ್ಯೂಪಿಯುಚೀಫ್ ಅಕಾಡೆಮಿಕ್ ಆಫೀಸರ್ ಪ್ರೊ. ಪ್ರಸಾದ್ ಡಿ. ಖಾಂಡೇಕರ್, ಎನ್‌ಐಪಿಮ್ ಕರ್ನಾಟಕ ಶಾಖೆಯ ಅಧ್ಯಕ್ಷ ಸಂಜಯ್ ಭಾತ್ರ, ಮತ್ತು ಐಬಿಎಮ್, ಬಯೋಕಾನ್, ಕ್ಯಾನೊನಿಕಲ್, ಕ್ರಾಫ್ಟ್‌ಹೈನ್ಸ್ ಇಂಡಿಯಾ, ಜೆಎಲ್‌ಎಲ್ ಮತ್ತು ಇತರ ಪ್ರಮುಖ ಸಂಸ್ಥೆಗಳ ರಿಯ ವೃತ್ತಿಪರರು ಸೇರಿದಂತೆ ಹಲವಾರು ಉದ್ಯಮದ ನಾಯಕರು ಭಾಗವಹಿಸಿದ್ದರು.

{ ಸುಮಲತಾ ಅಂಬರೀಷ್ } ಮಾಜಿ ಸಂಸದೆ

ಸಿಎಂ ರಾಜೀನಾಮೆ ಎಲ್ಲರೂ ನಿರೀಕ್ಷೆ ಮಾಡಿದ್ದೆವು, ಇದು ಶಾಕ್ ಅಲ್ಲ. 2 ವರ್ಷದಿಂದ ಈ ಚರ್ಚೆ ನಡೆಯುತ್ತಿದೆ. ಇದೇನು ಶಾಕಿಂಗ್ ನ್ಯೂಸ್ ಅಲ್ಲ. ಯಾರೇ ಸಿಎಂ ಆದ್ರೂ ಒಳ್ಳೆಯ ಆಡಳಿತ ಕೊಡಬೇಕು ಅಷ್ಟೇ. ಅದನ್ನೇ ಜನರು ನಿರೀಕ್ಷೆ ಮಾಡೋದು. ಈಗ ನಾನು ಬಿಜೆಪಿ ಪಕ್ಷದಲ್ಲಿ ಇದ್ದೇನೆ. ಪಕ್ಷವು ಏನು ಸೂಚನೆ ನೀಡುತ್ತದೆ ಆ ಪ್ರಕಾರ ಪಕ್ಷದ ಸಂಘಟನೆ ವಿಷಯದಲ್ಲಿ ನಡೆದುಕೊಳ್ಳುತ್ತೇನೆ.

ಜಲಾವೃತ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಲು ಮಹೇಶ್ವರ್ ರಾವ್ ಸೂಚನೆ

ಬನ್ನೇರುಘಟ್ಟ ರಸ್ತೆ ಜಲಾವೃತ ಆಗದಂತೆ ಯೋಜನೆ ರೂಪಿಸಿ

ಬೆಂಗಳೂರು: ಬನ್ನೇರಘಟ್ಟ ರಸ್ತೆಯಲ್ಲಿ ಮಳೆಯ ಸಂದರ್ಭಗಳಲ್ಲಿ ಉಂಟಾಗುವ ಜಲಾವೃತ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸುವ ಉದ್ದೇಶದಿಂದ ಸಮಗ್ರ ಯೋಜನೆ ರೂಪಿಸಲು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬೆಂಗಳೂರು ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯ ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಅವರು, ರೈನ್‌ಬೋ ಮಕ್ಕಳ ಆಸ್ಪತ್ರೆ ಸಮೀಪದ ರಸ್ತೆ ಪ್ರತಿ ಮಳೆಯಲ್ಲೂ ಜಲಾವೃತವಾಗಿ ವಾಹನ ಸಂಚಾರಕ್ಕೆ ತೀವ್ರ ತೊಂದರೆ ಉಂಟುಮಾಡುತ್ತಿರುವುದನ್ನು ಗಮನಿಸಿದರು. ರಸ್ತೆ ರಾಜಕಾಲುವೆಯ ಮಟ್ಟಕ್ಕಿಂತ ತಗ್ಗಿರುವುದರಿಂದ ರಾಜಕಾಲುವೆಯಲ್ಲಿ ನೀರಿನ ಮಟ್ಟ ಹೆಚ್ಚಾದಾಗ ಸೈಡ್ ಡ್ರೈನ್‌ಗಳಿಂದ ನೀರು ಹಿಮ್ಮುಖವಾಗಿ ಹರಿದು ರಸ್ತೆ ಜಲಾವೃತವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಮಳೆನೀರುಗಾಲುವೆಯಲ್ಲಿ ನೀರು ಸರಾಗವಾಗಿ ಹರಿಯುವಂತೆ ಯೋಜನೆ ರೂಪಿಸುವುದರ ಜತೆಗೆ ರಾಜಕಾಲುವೆಯಲ್ಲಿ ಹೂಳೆತ್ತುವ ಕಾರ್ಯ ಕೈಗೊಳ್ಳಬೇಕು ಎಂದರು.

ಹುಳಿಮಾವು ಮೆಟ್ರೋ ನಿಲ್ದಾಣದ ಸಮೀಪದ ಮಳೆನೀರುಗಾಲುವೆಗೆ ಕೊಳಚೆ ನೀರು ಸೇರುತ್ತಿರುವುದನ್ನು ಗಮನಿಸಿದ ಅವರು, ಮೂಲ ಪತ್ತೆಹಚ್ಚಿ ತಕ್ಷಣ ತಡೆಯುವಂತೆ ಜಲಮಂಡಳಿ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಜತೆಗೆ ಮಳೆನೀರುಗಾಲುವೆಗೆ ಅಡ್ಡಿಯಾಗಿರುವ ವಿವಿಧ ಉಪಯುಕ್ತತಾ ಸೇವೆಗಳ ಸ್ಥಳಾಂತರ ಹಾಗೂ ಹೂಳೆತ್ತುವ ಕಾಮಗಾರಿ ಕೈಗೊಳ್ಳುವಂತೆ ಸೂಚಿಸಿದರು.

ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯ ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ವೇಳೆ ಶಾಸಕ ಸತೀಶ್ ರೆಡ್ಡಿ, ವಿಶೇಷ ಆಯುಕ್ತೆ ಸುಷಮಾ ಗೋಡಬೋಲೆ, ಅಪರ ಆಯುಕ್ತ ನವೀನ್ ಕುಮಾರ್ ರಾಜು, ನಗರ ಪಾಲಿಕೆ ಆಯುಕ್ತ ರಮೇಶ್ ಕೆ.ಎನ್. ಹಾಗೂ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಮಡಿವಾಳ ಕೆರೆ ಕಾಮಗಾರಿ ಪರಿಶೀಲನೆ

ಮಡಿವಾಳ ಕೆರೆಯಲ್ಲಿ 15 ಕೋಟಿ ರು. ವೆಚ್ಚದ ಅಭಿವೃದ್ಧಿ ಕಾಮಗಾರಿ ಹಾಗೂ ಈಜೀಪುರ ಮೇಲ್‌ಸೇತುವೆ ಕಾಮಗಾರಿಯ ಪ್ರಗತಿಯನ್ನೂ ಪರಿಶೀಲಿಸಿದ ಅವರು, ನಿಗದಿತ ಅವಧಿಯೊಳಗೆ ಕಾಮಗಾರಿ ಪೂರ್ಣಗೊಳಿಸುವಂತೆ ಗುತ್ತಿಗೆದಾರರು ಮತ್ತು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು. ಪರಿಶೀಲನಾ ಸಂದರ್ಭದಲ್ಲಿ ಶಾಸಕ ಸತೀಶ್ ರೆಡ್ಡಿ, ವಿಶೇಷ ಆಯುಕ್ತೆ ಸುಷಮಾ ಗೋಡಬೋಲೆ, ಅಪರ ಆಯುಕ್ತ ನವೀನ್ ಕುಮಾರ್ ರಾಜು, ನಗರ ಪಾಲಿಕೆ ಆಯುಕ್ತ ರಮೇಶ್ ಕೆ.ಎನ್. ಹಾಗೂ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಬನ್ನೇರಘಟ್ಟ ರಸ್ತೆಯಲ್ಲಿ ಜಲಮಂಡಳಿ ವತಿಯಿಂದ ನಡೆಯುತ್ತಿರುವ 900 ಡಯಾ ಪೈಪ್ ಅಳವಡಿಕೆ ಮತ್ತು ಮನೆಗಳ ಉಪಚರಂಡಿ ಸಂಪರ್ಕ ಕಾಮಗಾರಿ ಎರಡು ದಿನಗಳಲ್ಲಿ ಪೂರ್ಣಗೊಳಿಸಿ. ಮೊದಲ ಹಂತದ ರಸ್ತೆ ಡಾಂಬರೀಕರಣ ಕಾಮಗಾರಿ ಪೂರ್ಣಗೊಂಡ ಬಳಿಕ ಅರಕೆರೆ ಸಿಗ್ನಲ್‌ನಿಂದ ಹುಳಿಮಾವು ಮೆಟ್ರೋ ನಿಲ್ದಾಣದವರೆಗೆ ಎರಡನೇ ಹಂತದ ಕಾಮಗಾರಿ ಆರಂಭಿಸಿ.
-ಮಹೇಶ್ವರ್ ರಾವ್
ಜಿಬಿಎ ಮುಖ್ಯ ಆಯುಕ್ತ

3 ವಾರಗಳಲ್ಲಿ 9,457 ಮಂದಿ ಕೇಂದ್ರಗಳಿಗೆ ಭೇಟಿ

ನನ್ನ ಇ-ಖಾತಾ, ನನ್ನ ಹಕ್ಕು ಅಭಿಯಾನಕ್ಕೆ ಉತ್ತಮ ಸ್ಪಂದನೆ

ಬೆಂಗಳೂರು: ರಾಜ್ಯ ಸರಕಾರದ ಮಹತ್ವಾಕಾಂಕ್ಷಿ ಭೂ ಗ್ಯಾರಂಟಿ ಯೋಜನೆಯಡಿ ಜಾರಿಗೊಂಡಿರುವ ನನ್ನ ಇ-ಖಾತಾ, ನನ್ನ ಹಕ್ಕು ಅಭಿಯಾನಕ್ಕೆ ನಾಗರಿಕರಿಂದ ಉತ್ತಮ ಸ್ಪಂದನೆ ವ್ಯಕ್ತವಾಗಿದ್ದು, ಮೂರು ವಾರಗಳಲ್ಲಿ 9,457 ಮಂದಿ ಅಭಿಯಾನ ಕೇಂದ್ರಗಳಿಗೆ ಭೇಟಿ ನೀಡಿ ವಿವಿಧ ಸೇವೆಗಳ ಪ್ರಯೋಜನ ಪಡೆದಿದ್ದಾರೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯ ಐದು ನಗರ ಪಾಲಿಕೆಗಳಲ್ಲಿ 50 ಸ್ಥಳಗಳಲ್ಲಿ ಈ ವಿಶೇಷ ಅಭಿಯಾನ ನಡೆಯುತ್ತಿದ್ದು, ಇ-ಖಾತಾ, ಮ್ಯುಟೇಷನ್, ಖಾತಾ ತಿದ್ದುಪಡಿ, ಹೊಸ ಇ-ಖಾತಾ, ಬಿ-ಟು-ಎ ಖಾತಾ ಪರಿವರ್ತನೆ ಹಾಗೂ ಇತರೆ ಆಸ್ತಿ ದಾಖಲೆಗಳಿಗೆ ಸಂಬಂಧಿಸಿದ ಸಮಸ್ಯೆಗಳ ಪರಿಹಾರಕ್ಕೆ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಿದ್ದಾರೆ. ಈ ಅವಧಿಯಲ್ಲಿ ಒಟ್ಟು 3,275 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ.

ಮೇ 30ರಂದು ನಡೆದ ಅಭಿಯಾನದಲ್ಲಿ ಮಾತ್ರ 1,842 ಮಂದಿ ವಿವಿಧ ಸೇವೆಗಳಿಗಾಗಿ ಭೇಟಿ ನೀಡಿದ್ದು, ಸ್ಥಳದಲ್ಲಿಯೇ 947 ಅರ್ಜಿಗಳನ್ನು ಅಧಿಕಾರಿಗಳು ವಿಲೇವಾರಿ ಮಾಡಿದ್ದಾರೆ. ಶಿಬಿರಗಳಲ್ಲಿ ದಾಖಲೆಗಳ ಪರಿಶೀಲನೆ, ತಾಂತ್ರಿಕ ದೋಷಗಳ ನಿವಾರಣೆ, ಮಾಹಿತಿ ತಿದ್ದುಪಡಿ ಹಾಗೂ ಅರ್ಜಿಗಳ ತ್ವರಿತ ಪ್ರಕ್ರಿಯೆಗೊಳಿಸುವ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ.

ನಾಗರಿಕರು ವಿವಿಧ ಕಚೇರಿಗಳಿಗೆ ಅಲೆದಾಡುವ ಅಗತ್ಯವಿಲ್ಲದೆ ಒಂದೇ ಸ್ಥಳದಲ್ಲಿ ಅಗತ್ಯ ಸೇವೆಗಳನ್ನು ಪಡೆಯುತ್ತಿರುವುದು ಅಭಿಯಾನದ ಪ್ರಮುಖ ಯಶಸ್ಸಿನ ಅಂಶವಾಗಿದೆ. ಇ-ಖಾತಾ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಜತೆಗೆ ಆಸ್ತಿ ದಾಖಲೆಗಳ ಡಿಜಿಟಲೀಕರಣ ಪ್ರಕ್ರಿಯೆಗೆ ವೇಗ ನೀಡುವಲ್ಲಿ ಈ ಅಭಿಯಾನ ಮಹತ್ವದ ಪಾತ್ರ ವಹಿಸುತ್ತಿದೆ ಎಂದು ಜಿಬಿಎ ತಿಳಿಸಿದೆ.

- 50 ಸ್ಥಳಗಳಲ್ಲಿ ವಿಶೇಷ ಅಭಿಯಾನ
- 3,275 ಅರ್ಜಿಗಳ ವಿಲೇವಾರಿ
- ದಾಖಲೆ ಡಿಜಿಟಲೀಕರಣಕ್ಕೆ ವೇಗ

ಜನಸ್ನೇಹಿ ಆಡಳಿತ ವ್ಯವಸ್ಥೆಗೆ ಮಹತ್ವದ ಹೆಜ್ಜೆ

ರಾಜ್ಯ ಸರಕಾರದ 6ನೇ ಗ್ಯಾರಂಟಿ ಯೋಜನೆಯಾದ ಭೂ ಗ್ಯಾರಂಟಿಯ ಭಾಗವಾಗಿ ಜಾರಿಯಾಗಿರುವ ನನ್ನ ಇ-ಖಾತಾ, ನನ್ನ ಹಕ್ಕು ಕಾರ್ಯಕ್ರಮ ಪಾರದರ್ಶಕ, ತ್ವರಿತ ಹಾಗೂ ಜನಸ್ನೇಹಿ ಆಡಳಿತ ವ್ಯವಸ್ಥೆ ನಿರ್ಮಾಣದತ್ತ ಮಹತ್ವದ ಹೆಜ್ಜೆಯಾಗಿದೆ. ಇ-ಖಾತಾ ಸಂಬಂಧಿತ ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರ ದೊರೆಯುತ್ತಿರುವುದರಿಂದ ಸಾರ್ವಜನಿಕರು ಅಭಿಯಾನವನ್ನು ಸ್ವಾಗತಿಸಿದ್ದು, ಮುಂದಿನ ದಿನಗಳಲ್ಲಿ ಇನ್ನಷ್ಟು ಜನರು ಇದರ ಪ್ರಯೋಜನ ಪಡೆಯುವ ನಿರೀಕ್ಷೆಯಿದೆ ಎಂದು ಜಿಬಿಎ ತಿಳಿಸಿದೆ.

ಸಿಎಸ್‌ಗೆ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಪತ್ರ

ಘನತ್ಯಾಜ್ಯ ಟೆಂಡರ್ ಅಕ್ರಮ: ತನಿಖೆಗೆ ಆಗ್ರಹ

ಬೆಂಗಳೂರು: ಬೆಂಗಳೂರು ಸಮಗ್ರ ಘನತ್ಯಾಜ್ಯ ನಿರ್ವಹಣಾ ಟೆಂಡರ್ ಪ್ರಕ್ರಿಯೆಯಲ್ಲಿ ಸುಮಾರು 39,437 ಕೋಟಿ ಸಾರ್ವಜನಿಕ ವೆಚ್ಚವನ್ನು ಒಳಗೊಂಡ ಗಂಭೀರ ಅಕ್ರಮಗಳ ಆರೋಪದ ಬಗ್ಗೆ ಸಮಗ್ರ ತನಿಖೆ ನಡೆಸುವಂತೆ ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿಗೆ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಪತ್ರ ಬರೆದು ಆಗ್ರಹಿಸಿದ್ದಾರೆ. ಪತ್ರದಲ್ಲಿ ಸಚಿವರು ಟೆಂಡರ್ ಪ್ರಕ್ರಿಯೆಯಲ್ಲಿ ನಡೆದಿರುವ ಗಂಭೀರ ಪ್ರಕ್ರಿಯಾತ್ಮಕ ಲೋಪಗಳು, ಹಣಕಾಸು ಅಕ್ರಮಗಳು, ಕಾನೂನು ಉಲ್ಲಂಘನೆಗಳು ಹಾಗೂ ಆಡಳಿತಾತ್ಮಕ ಪಕ್ಷಪಾತದ ಬಗ್ಗೆ ಉಲ್ಲೇಖಿಸಿದ್ದಾರೆ. ವಿಶೇಷವಾಗಿ ಹಣಕಾಸು ಇಲಾಖೆಯ ಸ್ಪಷ್ಟ ಆಕ್ಷೇಪಣೆ ಮತ್ತು ತಿರಸ್ಕಾರವಿದ್ದರೂ ಪ್ರಸ್ತಾವನೆ ಮುಂದಕ್ಕೆ ತೆಗೆದು ಕೊಂಡು ಅನುಮೋದಿಸಿರುವುದು ಪಾರದರ್ಶಕತೆ ಮತ್ತು ಕಾನೂನುಬದ್ಧತೆಯ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಎಬ್ಬಿಸಿದೆ ಎಂದು ಅವರು ತಿಳಿಸಿದ್ದಾರೆ.

ಈ ಹಿನ್ನೆಲೆಯಲ್ಲಿ, ಟೆಂಡರ್ ಸಂಬಂಧಿತ ಎಲ್ಲಾ ಮುಂದಿನ ಕ್ರಮಗಳನ್ನು ತಕ್ಷಣವೇ ಸ್ಥಗಿತಗೊಳಿಸಿ, ಡಿಪಿಆರ್ ಸಿದ್ಧತೆಯಿಂದ ಅಂತಿಮ ಹಣಕಾಸು ಅನುಮೋದನೆವರೆಗೆ ಸಂಪೂರ್ಣ ಪ್ರಕ್ರಿಯೆಯ ಮೇಲೆ ಸ್ವತಂತ್ರ ಮತ್ತು ಸಮಗ್ರ ತನಿಖೆ ನಡೆಸಬೇಕೆಂದು ಆಗ್ರಹಿಸಿದ್ದಾರೆ. ಅಲ್ಲದೇ., ಹಣಕಾಸು ಮತ್ತು ಕಾನೂನುಬದ್ಧ ಸುರಕ್ಷತಾ ಕ್ರಮಗಳನ್ನು ಉಲ್ಲಂಘಿಸಿದ ಅಧಿಕಾರಿಗಳ ವಿರುದ್ಧ ಹೊಣೆಗಾರಿಕೆ ನಿಗದಿಪಡಿಸುವುದರ ಜತೆಗೆ, ಎಲ್ಲಾ ಅಧಿಕೃತ ದಾಖಲೆಗಳನ್ನು ಸಂರಕ್ಷಿಸುವಂತೆ ಅವರು ಸೂಚಿಸಿದ್ದಾರೆ. ಪ್ರಾಥಮಿಕ ತನಿಖೆಯಲ್ಲಿ ಅಕ್ರಮಗಳು ಸಾಬೀತಾದಲ್ಲಿ, ಪ್ರಕರಣವನ್ನು ಸಿಬಿಐ ಹಾಗೂ ಲೋಕಾಯುಕ್ತ ಸೇರಿದಂತೆ ಸೂಕ್ತ ತನಿಖಾ ಸಂಸ್ಥೆಗಳಿಗೆ ಹಸ್ತಾಂತರಿಸಬೇಕೆಂದು ಅವರು ಒತ್ತಾಯಿಸಿದ್ದಾರೆ. ರಾಜ್ಯದ ಅತಿದೊಡ್ಡ ಪೌರ ಮೂಲಸೌಕರ್ಯ ಯೋಜನೆಗಳಲ್ಲಿ ಒಂದಾದ ಈ ಟೆಂಡರ್ ಕುರಿತು ಕೇಂದ್ರ ಸಚಿವೆಯ ಹಸ್ತಕ್ಷೇಪವು ಪಾರದರ್ಶಕತೆ, ಹಣಕಾಸು ಶಿಸ್ತು ಮತ್ತು ಸಾರ್ವಜನಿಕ ಹೊಣೆಗಾರಿಕೆ ಕುರಿತ ಹೆಚ್ಚುತ್ತಿರುವ ಆತಂಕಗಳನ್ನು ಮತ್ತಷ್ಟು ಗಂಭೀರಗೊಳಿಸಿದೆ ಎಂದಿದ್ದಾರೆ.

ಪತ್ರದಲ್ಲಿ ಉಲ್ಲೇಖಿಸಲಾದ ಪ್ರಮುಖ ಅಂಶಗಳು

- ತಾಂತ್ರಿಕ ಪರಿಶೀಲನೆಯ ನಂತರ ಡಿಪಿಆರ್ ಸಲಹೆಗಾರರನ್ನು ಕಾನೂನುಬಾಹಿರ ಬದಲಾವಣೆ ಆರೋಪ
- ಟೆಂಡರ್ ಪ್ರಕ್ರಿಯೆಯಲ್ಲಿ ತಾಂತ್ರಿಕ ಅರ್ಹತಾ ಮಾನದಂಡಗಳಲ್ಲಿ ಅಸ್ಪಷ್ಟ ಬದಲಾವಣೆಗಳು
- ಕರ್ನಾಟಕ ಸಾರ್ವಜನಿಕ ಖರೀದಿ ಪಾರದರ್ಶಕತಾ ನಿಯಮಗಳ ಅಡಿಯಲ್ಲಿ ಕಡ್ಡಾಯ ಪ್ರಕಟಣಾ ನಿಯಮಗಳ ಉಲ್ಲಂಘನೆ
- ಅಂಗೀಕರಿಸಲಾದ ಬಿಡ್‌ಗಳು ಅನುಮತಿತ ಹಣಕಾಸು ಮಿತಿಗಳನ್ನು ಮೀರಿರುವುದು
- ಭೂಮಿಯ ಮೌಲ್ಯಮಾಪನ ಮತ್ತು ಪರಿಹಾರ ಮೊತ್ತ ಹೆಚ್ಚಳಕ್ಕೆ ಹಣಕಾಸು ಇಲಾಖೆಯ ಸ್ಪಷ್ಟ ವಿರೋಧ

ಸಂಪುಟದಲ್ಲಿ ವೀರಶೈವರಿಗೆ ಪ್ರಾಶಸ್ತ್ಯ ನೀಡಿ

ಬೆಂಗಳೂರು: ರಾಜ್ಯ ಸರಕಾರದ ಸಂಪುಟ ಪುನಾರಚನೆ ವೇಳೆ ವೀರಶೈವ ಲಿಂಗಾಯತ ಸಮುದಾಯಕ್ಕೆ ಹೆಚ್ಚಿನ ಪ್ರಾತಿನಿಧ್ಯ ನೀಡಬೇಕೆಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಷ್ಟ್ರೀಯ ಯುವ ಘಟಕ ಒತ್ತಾಯಿಸಿದೆ.

ಈ ಕುರಿತು ರಾಷ್ಟ್ರೀಯ ಯುವ ಘಟಕದ ಅಧ್ಯಕ್ಷ ವೆಂಕಟರೆಡ್ಡಿ ಡಿ.ಪಾಟೀಲ್ ಮಾತನಾಡಿ, ಹಿಂದಿನ ಕ್ಯಾಬಿನೆಟ್‌ನಲ್ಲಿ ನಮ್ಮ ಸಮುದಾಯದ ಏಳು ಮಂತ್ರಿಗಳು ಅತ್ಯುತ್ತಮವಾಗಿ ಸಾರ್ವಜನಿಕ ಸೇವೆ ನೀಡಿದ್ದಾರೆ. ರಾಜ್ಯದ ಅಭಿವೃದ್ಧಿ, ಪರಿಸರ ರಕ್ಷಣೆ, ದುರ್ಬಲರ ಸಬಲೀಕರಣ ಮತ್ತು ಕರ್ನಾಟಕದ ಆರ್ಥಿಕತೆ ಬಲಪಡಿಸುವಲ್ಲಿ ಅವರ ಕೊಡುಗೆಗಳು ನಿರ್ಣಾಯಕವಾಗಿದ್ದವು.

ಈ ಬಾರಿಯ ಹೊಸ ಕ್ಯಾಬಿನೆಟ್‌ನಲ್ಲೂ ನಮ್ಮ ನಿರೀಕ್ಷೆಗಳು ದೊಡ್ಡದಿವೆ. ಸರಕಾರ ರಚಿಸಲು ಭಾರೀ ಬೆಂಬಲ ನೀಡಿದ ರಾಜ್ಯದ ಅತಿದೊಡ್ಡ ಸಮುದಾಯವಾಗಿರುವುದರಿಂದ, ಹೊಸ ಕ್ಯಾಬಿನೆಟ್‌ನಲ್ಲಿ ಕನಿಷ್ಠ ಎಂಟು ಸ್ಥಾನಗಳನ್ನೊಳಗೊಂಡ ಬಲವಾದ ಪ್ರಾತಿನಿಧ್ಯ ನಿರೀಕ್ಷಿಸುತ್ತಿದ್ದೇವೆ ಎಂದರು.

ರಾಜ್ಯದ ಅತಿದೊಡ್ಡ ಸಮುದಾಯವಾಗಿರುವ ನಾವು, 37 ಲಿಂಗಾಯತ ಶಾಸಕರೊಂದಿಗೆ ಕರ್ನಾಟಕದಾದ್ಯಂತ ಪಕ್ಷಕ್ಕೆ ಭಾರೀ ಬೆಂಬಲ ಒದಗಿಸಿದ್ದೇವೆ. ಈ ಹಿನ್ನೆಲೆಯಲ್ಲಿ ಮುಂಬರುವ ಸಂಪುಟ ಪುನರಚನೆಯಲ್ಲಿ ನಮ್ಮ ಸಮುದಾಯದ ಹೆಚ್ಚಿನ ಶಾಸಕರಿಗೆ ಸಚಿವ ಸ್ಥಾನ ನೀಡಬೇಕು. ನಮ್ಮ ಸಮುದಾಯದ ಯಾರಿಗಾದರೂ ಡಿಸಿಎಂ ಪಟ್ಟ ನೀಡಿದರೂ ನಾವು ಸ್ವಾಗತಿಸುತ್ತೇವೆ. ಆದರೆ, ಕಾಂಗ್ರೆಸ್ ಪಕ್ಷಕ್ಕಾಗಿ ನಿರಂತರವಾಗಿ ಶ್ರಮಿಸುತ್ತಾ, ನೀಡಿದ ಜವಾಬ್ದಾರಿಗಳನ್ನು ಸಮರ್ಥವಾಗಿ ನಿಭಾಯಿಸಿಕೊಂಡು ಬಂದಿರುವ ಹಿರಿಯ ನಾಯಕ ಈಶ್ವರ್ ಖಂಡ್ರೆ ಅವರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡಿದರೆ ಸಮುದಾಯಕ್ಕೆ ಇನ್ನಷ್ಟು ಸಂತೋಷವಾಗಲಿದೆ ಎಂದರು.

ಸಭೆಯಲ್ಲಿ ರಾಜ್ಯ ಯುವ ಘಟಕದ ಅಧ್ಯಕ್ಷ ಮನೋಹರ್ ಅಬ್ಬಿಗೆರೆ, ಕೈಗಾರಿಕಾ ಮತ್ತು ವಾಣಿಜ್ಯ ಘಟಕದ ರಾಜ್ಯಾಧ್ಯಕ್ಷ ವಿಜಯ್ ಕುಮಾರ್ ಪಾಟೀಲ್, ಕಾರ್ಯಕಾರಿ ಸಮಿತಿ ಸದಸ್ಯರಾದ ಸಂದೀಪ್ ಅನಬೇರು, ರಾಜಶೇಖರ್ ಪಾಟೀಲ್ ಸೇರಿದಂತೆ ಇತರರು ಇದ್ದರು.

ಸಭೆಯಲ್ಲಿ ರಾಷ್ಟ್ರೀಯ ಯುವ ಘಟಕದ ಅಧ್ಯಕ್ಷ ವೆಂಕಟರೆಡ್ಡಿ ಡಿ.ಪಾಟೀಲ್ ಪ್ರಕಟಣೆಯನ್ನು ಬಿಡುಗಡೆಗೊಳಿಸಿದರು. ಈ ವೇಳೆ ರಾಜ್ಯ ಯುವ ಘಟಕದ ಅಧ್ಯಕ್ಷ ಮನೋಹರ್ ಅಬ್ಬಿಗೆರೆ, ಕೈಗಾರಿಕಾ ಮತ್ತು ವಾಣಿಜ್ಯ ಘಟಕದ ರಾಜ್ಯಾಧ್ಯಕ್ಷ ವಿಜಯ್ ಕುಮಾರ್ ಪಾಟೀಲ್, ಕಾರ್ಯಕಾರಿ ಸಮಿತಿ ಸದಸ್ಯರಾದ ಸಂದೀಪ್ ಅನಬೇರು, ರಾಜಶೇಖರ್ ಪಾಟೀಲ್ ಸೇರಿದಂತೆ ಇತರರು ಇದ್ದರು.

ವಿಧಾನ ಪರಿಷತ್ ಸದಸ್ಯ ಸ್ಥಾನ ಹಾಗೂ ಸಮುದಾಯದ ವತಿಯಿಂದ ಒಬ್ಬರಿಗೆ ರಾಜ್ಯಸಭಾ ಸದಸ್ಯ ಸ್ಥಾನವನ್ನು ನಾಮನಿರ್ದೇಶನ ಮಾಡಬೇಕು. ಇಂತಹ ಸೂಕ್ತ ಪ್ರಾತಿನಿಧ್ಯವು 2028ರ ಚುನಾವಣೆಯಲ್ಲಿ ಕಾಂಗ್ರೆಸ್ ಸರಕಾರಕ್ಕೆ ನಿರ್ಣಾಯಕ ವಿಜಯದ ಸಾಧ್ಯತೆಗಳನ್ನು ಮತ್ತಷ್ಟು ಬಲಪಡಿಸುತ್ತದೆ.
-ವೆಂಕಟರೆಡ್ಡಿ ಡಿ.ಪಾಟೀಲ್, ರಾಷ್ಟ್ರೀಯ ಯುವ ಘಟಕದ ಅಧ್ಯಕ್ಷ

ಆರ್ಟ್ ಆಫ್ ಲಿವಿಂಗ್ ಫೌಂಡೇಶನ್‌ನ 45 ನೇ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್

ಲಕ್ಷಾಂತರ ಜನರ ಜೀವನ ಸ್ಪರ್ಶಿಸಿದ ಆರ್ಟ್ ಆಫ್ ಲಿವಿಂಗ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಆರ್ಟ್ ಆಫ್ ಲಿವಿಂಗ್ ಆಂದೋಲನವು ಖಂಡಗಳು, ಸಂಸ್ಕೃತಿಗಳು ಮತ್ತು ತಲೆಮಾರುಗಳಾದ್ಯಂತ ಲಕ್ಷಾಂತರ ಜನರ ಜೀವನವನ್ನು ಸ್ಪರ್ಶಿಸಿದೆ ಎಂದು ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ತಿಳಿಸಿದರು.

ನಗರದ ಆರ್ಟ್ ಆಫ್ ಲಿವಿಂಗ್ ಫೌಂಡೇಶನ್‌ನ 45 ನೇ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಆರ್ಟ್ ಆಫ್ ಲಿವಿಂಗ್ ಸುಮಾರು 180 ದೇಶಗಳಲ್ಲಿ ಕೇಂದ್ರಗಳನ್ನು ಹೊಂದಿದೆ. ನಾಲ್ಕೂವರೆ ದಶಕಗಳ ಹಿಂದೆ ಆಂತರಿಕ ಶಾಂತಿಯೇ ಬಾಹ್ಯ ಸಾಮರಸ್ಯದ ಅಡಿಪಾಯ ಎಂಬ ತತ್ವದ ಮೇಲೆ ಸ್ಥಾಪಿತವಾದ ಈ ಆಂದೋಲನವು, ಕರುಣೆ, ಸಹನೆ ಮತ್ತು ಆನಂದವನ್ನು ಉತ್ತೇಜಿಸುವ ಪ್ರಮುಖ ಮಾನವೀಯ ಮತ್ತು ಆಧ್ಯಾತ್ಮಿಕ ಶಕ್ತಿಯಾಗಿ ವಿಕಸನಗೊಂಡಿದೆ. ಭಕ್ತಿ ಎಂದರೆ ಕೇವಲ ಆರಾಧನೆಯಲ್ಲ, ಬದಲಿಗೆ ಸ್ವತಃ ತನ್ನ ಬಗ್ಗೆ, ಕುಟುಂಬ, ಸಮಾಜ, ರಾಷ್ಟ್ರ ಮತ್ತು ಮಾನವೀಯತೆಯೆಡೆಗಿನ ಸಮರ್ಪಣೆಯಾಗಿದೆ. ಆಧ್ಯಾತ್ಮಿಕತೆಯು ಜನರು ಇತರರೊಂದಿಗೆ ಶಾಂತಿಯಿಂದ ಬದುಕುವುದನ್ನು ಕಲಿಸುತ್ತದೆ ಮತ್ತು ಜೀವನವನ್ನು ಅರ್ಥಪೂರ್ಣ ಹಾಗೂ ಪರಿಪೂರ್ಣವಾಗಿಸುತ್ತದೆ ಎಂದರು.

ಸಂಘರ್ಷ ಮತ್ತು ಅನಿಶ್ಚಿತತೆಯಿಂದ ಕೂಡಿದ ಜಗತ್ತಿನಲ್ಲಿ ಗುರುದೇವ ಶ್ರೀ ರವಿಶಂಕರ್ ಅವರ ಜ್ಞಾನ, ಜಾಗೃತಿ, ಶಾಂತಿ ಮತ್ತು ಸಾಮರಸ್ಯದ ಮೌಲ್ಯಗಳೊಂದಿಗೆ ಮಾನವಕುಲಕ್ಕೆ ಪ್ರೇರಣೆ ನೀಡುತ್ತಿದ್ದಾರೆ. ಗುರುದೇವ್ ಅವರ ಸರಳತೆ, ನಮ್ರತೆ ಮತ್ತು ಸಹಾನುಭೂತಿ ವಿಶ್ವದಾದ್ಯಂತ ಲಕ್ಷಾಂತರ ಜನರನ್ನು ಮುಟ್ಟಿದೆ. ಧ್ಯಾನ, ಸೇವೆ, ಶಿಕ್ಷಣ, ಗ್ರಾಮೀಣಾಭಿವೃದ್ಧಿ, ಪರಿಸರ ಉಪಕ್ರಮಗಳು ಮತ್ತು ಸರ್ವಧರ್ಮ ಸಂವಾದಗಳ ಮೂಲಕ ಸಾಮಾಜಿಕ ಪರಿವರ್ತನೆಯಲ್ಲಿ ಆಧ್ಯಾತ್ಮಿಕತೆಯು ವಹಿಸಬಹುದಾದ ಪ್ರಮುಖ ಪಾತ್ರವನ್ನು ಆರ್ಟ್ ಆಫ್ ಲಿವಿಂಗ್ ಪ್ರದರ್ಶಿಸಿದೆ. ಏಕಾಗ್ರತೆಯುಳ್ಳ ಮನಸ್ಸು ಅಸಾಮಾನ್ಯ ಸಾಧನೆಗಳನ್ನು ಮಾಡಬಲ್ಲದು ಎಂದರು.

ಆರ್ಟ್ ಆಫ್ ಲಿವಿಂಗ್ ನ 45ನೇ ವರ್ಷದ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಉಪ ರಾಷ್ಟ್ರಪತಿ ಸಿ.ಪಿ.ರಾಧಕೃಷ್ಣನ್, ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಗುರುದೇವ್ ಶ್ರೀ ರವಿಶಂಕರ್ ಗುರುಜಿ ಗಣಪತಿ ಮೂರ್ತಿಗೆ ಪುಷ್ಪ ನಮನ ಸಲ್ಲಿಸಿದರು.

ಯುವಜನರು ಪ್ರಾಚೀನ ಮತ್ತು ಆಧುನಿಕತೆ ಒಟ್ಟಿಗೆ ಕೊಂಡೊಯ್ಯಬಹುದಾದ ಸ್ಫೂರ್ತಿದಾಯಕ ಮಾದರಿಯನ್ನು ಗುರುದೇವ್ ಅವರು ಸಮಾಜದ ಮುಂದೆ ಇಟ್ಟಿದ್ದಾರೆ. ಆಧುನಿಕತೆ ಮತ್ತು ಪ್ರಾಚೀನ ಪರಂಪರೆಗಳು ಪರಸ್ಪರ ಪೂರಕವಾಗಿವೆ. ಸಂಸ್ಥೆಯ ಸೇವಾ ಆಧಾರಿತ ಉಪಕ್ರಮಗಳಲ್ಲಿ ಯುವಜನರ ಹೆಚ್ಚುತ್ತಿರುವ ಭಾಗವಹಿಸುವಿಕೆ ಶ್ಲಾಘನೀಯ ಎಂದರು.

ಪ್ರೀತಿ, ಶಾಂತಿ ಮತ್ತು ಸೇವೆಯ ಮೌಲ್ಯಗಳನ್ನು ಅಳವಡಿಸಿಕೊಳ್ಳಿ:

ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಮಾತನಾಡಿ ಶಾಂತಿ, ಸೇವೆ ಮತ್ತು ಸಾಮರಸ್ಯದ ಮೌಲ್ಯಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಹಿಂಸಾಚಾರ-ಮುಕ್ತ ಮತ್ತು ಒತ್ತಡ-ಮುಕ್ತ ಸಮಾಜ ನಿರ್ಮಾಣಕ್ಕೆ ಆಧ್ಯಾತ್ಮಿಕತೆ ಮತ್ತು ಮಾನವೀಯ ಸೇವೆಯ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಗುರುದೇವ್ ರವಿಶಂಕರ್ ಜಾಗತಿಕ ಮಾನವೀಯ, ಆಧ್ಯಾತ್ಮಿಕ ಗುರು ಹಾಗೂ ಶಾಂತಿ ರಾಯಭಾರಿಯಾಗಿದ್ದು, ಆರ್ಟ್ ಆಫ್ ಲಿವಿಂಗ್ ಮತ್ತು ಅಂತರರಾಷ್ಟ್ರೀಯ ಮಾನವ ಮೌಲ್ಯಗಳ ಸಂಘದ ಸ್ಥಾಪಕರಾಗಿದ್ದಾರೆ. ಅವರ ಮಾರ್ಗದರ್ಶನದಲ್ಲಿ ಈ ಸಂಸ್ಥೆಗಳು 182 ದೇಶಗಳಲ್ಲಿ ಲಕ್ಷಾಂತರ ಜನರಿಗೆ ಬದುಕಿನ ಕಲೆ ಮತ್ತು ಆಂತರಿಕ ಶಾಂತಿಯ ಸಂದೇಶವನ್ನು ಸಾರುತ್ತಿವೆ ಎಂದರು.

ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ ಜಾಗತಿಕ ಚಳವಳಿ ಕರ್ನಾಟಕದ ಪವಿತ್ರ ನೆಲದಲ್ಲಿ ಬೇರುಬಿಟ್ಟಿರುವುದು ರಾಜ್ಯಕ್ಕೆ ಹೆಮ್ಮೆಯ ಸಂಗತಿಯಾಗಿದೆ. ಬೆಂಗಳೂರಿನಲ್ಲಿರುವ ಸಂಸ್ಥೆಯ ಅಂತರರಾಷ್ಟ್ರೀಯ ಕೇಂದ್ರವು ವಿಶ್ವದಾದ್ಯಂತ ಜನರಿಗೆ ಶಾಂತಿ, ಧ್ಯಾನ ಮತ್ತು ಸಕಾರಾತ್ಮಕ ಶಕ್ತಿಯ ಪ್ರೇರಣಾ ಕೇಂದ್ರವಾಗಿದೆ. ಕಳೆದ ನಾಲ್ಕು ದಶಕಗಳಿಂದ ಸಂಸ್ಥೆಯು ವಿವಿಧ ಕಾರ್ಯಕ್ರಮಗಳ ಮೂಲಕ ವ್ಯಕ್ತಿ, ಸಮುದಾಯ ಹಾಗೂ ಜಾಗತಿಕ ಮಟ್ಟದಲ್ಲಿ ಶಾಂತಿ ಮತ್ತು ಯೋಗಕ್ಷೇಮ ಉತ್ತೇಜಿಸುತ್ತಿದೆ. ಶ್ರೀ ರವಿಶಂಕರ್ ಗುರುದೇವರ ಬೋಧನೆಗಳು ಪ್ರಾಚೀನ ಜ್ಞಾನವನ್ನು ಸರಳ ಮತ್ತು ಪ್ರಾಯೋಗಿಕ ರೀತಿಯಲ್ಲಿ ಜನರಿಗೆ ತಲುಪಿಸುತ್ತಿದ್ದು, ದೈನಂದಿನ ಜೀವನದಲ್ಲಿ ಆಂತರಿಕ ಶಾಂತಿ ಅನುಭವಿಸಲು ಪ್ರೇರೇಪಿಸುತ್ತಿವೆ ಎಂದರು.

ಮಾದಕವಸ್ತು ಮುಕ್ತ ಭಾರತಕ್ಕಾಗಿ ಆರ್ಟ್ ಆಫ್ ಲಿವಿಂಗ್ ಫೌಂಡೇಶನ್ ನ ಅಭಿಯಾನ ಕಾರ್ಯ ಶ್ಲಾಘನೀಯ. ಯುವ ಮನಸ್ಸುಗಳು ಹಾನಿಕಾರಕ ವ್ಯಸನಗಳಿಗಿಂತ ಹೆಚ್ಚಾಗಿ ಆತ್ಮನಿಯಂತ್ರಣ ಮತ್ತು ಸಕಾರಾತ್ಮಕ ಮೌಲ್ಯಗಳಿಂದ ಮಾರ್ಗದರ್ಶನ ಪಡೆಯಬೇಕು.
-ಸಿ.ಪಿ.ರಾಧಾಕೃಷ್ಣನ್, ಉಪರಾಷ್ಟ್ರಪತಿ

ಬರ್ಬರ ಹತ್ಯೆ: 12 ಮಂದಿಯ ಮೇಲೆ ಎಫ್‌ಐಆರ್

ವಿಜಯಪುರ: ಭೀಮಾತೀರದಲ್ಲಿ ನಡೆದ ಭೀಕರ ಹತ್ಯಾಕಾಂಡಕ್ಕೆ ಸಂಬಂಧಿಸಿದಂತೆ ಚಡಚಣ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದ್ದು, ಜಮೀನಿನ ವಿವಾದವೇ ಹತ್ಯೆಗೆ ಪ್ರಮುಖ ಕಾರಣ ಎಂದು ನಮೂದಿಸಲಾಗಿದೆ.

ಚೈತನ್ಯಕುಮಾರ ದುಂಡಪ್ಪ ನಿರಾಳೆ ಎಂಬುವರ ನೀಡಿದ ದೂರಿನ ಅನ್ವಯ ಮೇ 29ರಂದು 12 ಜನರ ಮೇಲೆ ಎಫ್‌ಐಆರ್ ದಾಖಲಿಸಲಾಗಿದೆ. ಗೋಣಿದ ಪುರದ ಕಲ್ಲನಗೌಡ ಈಶ್ವರಗೌಡ ಪಾಟೀಲ, ಅಪ್ಪುಗೌಡ ಲಗಮನಗೌಡ, ಈಶ್ವರಪ್ಪ ಲಗಮನಗೌಡ ಪಾಟೀಲ, ಪ್ರಕಾಶ ಬಸವ ರಾಜ ಮಾಸ್ತರ್, ಪ್ರಶಾಂತ, ಬಸವರಾಜ, ಸಿದ್ದರಾಮ ಕಲ್ಲನಗೌಡ ಪಾಟೀಲ, ಲಾಯಪ್ಪ ನೇಪಪ್ಪಾ ಬಿರಾದಾರ, ಚಿದಾನಂದಗೌಡ ನಾಮದೇವ ಕೋಳಿ, ಶ್ರೀಮಂತ ಬಿರಾದಾರ, ಶಂಕರಪ್ಪ ಬಿರಾದಾರ, ಶಂಕರಪ್ಪ ಮಾದೇವ ಆರಕೇರಿ, ಅಪ್ಪಾಸಾಹೇಬ ಶಂಕರ ಭೋವಿ ಆರೋಪಿಗಳು. ಶುಕ್ರವಾರ ತಡರಾತ್ರಿಯೇ ಉತ್ತರ ವಲಯದ ಐಜಿಪಿ ಸಂದೀಪ ಪಾಟೀಲ ಹಾಗೂ ಎಸ್‌ಪಿ ಲಕ್ಷ್ಮಣ ನಿಂಬರಗಿ ಭೇಟಿ ನೀಡಿ ಪರಿಶೀಲಿಸಿದರು. ತನಿಖೆಗೆ ತಂಡ ರಚಿಸಲಾಗಿದ್ದು, ಶೀಘ್ರದಲ್ಲೇ ಆರೋಪಿಗಳನ್ನು ಬಂಧಿಸುವುದಾಗಿ ಪ್ರತಿಕ್ರಿಯಿಸಿದರು.

ಎಫ್‌ಐಆರ್‌ನಲ್ಲಿ ಏನಿದೆ?: ಗೋಣಿದಪುರದಲ್ಲಿ ನಿರಾಳೆ ಗ್ರಾಮದ ಬ್ರಾಹ್ಮಣರ ಜಮೀನು ಇದೆ. ಸುಮಾರು 5-6 ತಿಂಗಳ ಹಿಂದೆ ತೇಲಿ ಕುಟುಂಬ ನಿರಾಳೆ ಅವರ ಮನೆಗೆ ಬಂದು ಗೋವಿಂದಪುರದಲ್ಲಿ ತಮ್ಮ ಜಮೀನಿದ್ದು, ಈ ಹಿಂದೆ ಕೋರ್ಟ್ ಪ್ರಕರಣವೊಂದರ ಹಿನ್ನೆಲೆ ಅಲ್ಲಿ ಉಳುಮೆ ಮಾಡಲಾಗದೇ ಜಮೀನು ಪಾಳುಬಿದ್ದಿದೆ.

ಕಲ್ಲನಗೌಡ ಈಶ್ವರಗೌಡ ಪಾಟೀಲ ಹಾಗೂ ಅವರ ಕುಟುಂಬಸ್ಥರು ಉಳಮೆಗೆ ತಕರಾರು ಮಾಡುತ್ತಿದ್ದು ತಾವು ಜಮೀನು ತೆಗೆದುಕೊಳ್ಳುವುದಿದ್ದರೆ ಖರೀದಿ ಹಾಕಿ ಕೊಡುವುದಾಗಿ ತಿಳಿಸಿದ್ದರು. ಅದಕ್ಕೆ ಒಪ್ಪಿಕೊಂಡಿದ್ದ ನಿರಾಳೆ ಕುಟುಂಬ ಮೊದಲು ಕಲ್ಲನಗೌಡರಿಗೆ ಈ ಕುರಿತು ತಿಳಿಸಿ ತಂಟೆ-ತಕರಾರು ಏನಾದರೂ ಇದೆಯೇ ಎಂದು ಕೇಳಿತ್ತು. ಆಗ ಯಾವುದೇ ತಕರಾರು ಇಲ್ಲವೆಂದು ಕಲ್ಲನಗೌಡರ ಕುಟುಂಬ ತಿಳಿಸಿತ್ತು. ಹೀಗಾಗಿ ನಿರಾಳೆ ಕುಟುಂಬ ತೇಲಿ ಅವರ ಜಮೀನು ಖರೀದಿಸಿತ್ತು.

ಜಮೀನಿನಲ್ಲಿ ಕೃಷಿ ಚಟುವಟಿಕೆ ನಡೆಸಿದ ವೇಳೆ ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿ 6 ಮಂದಿಯನ್ನು ಹತ್ಯೆ ಮಾಡಲಾಗಿದೆ.

ಕ್ವಾರಿಗಳ ಮೇಲೆ ಲೋಕಾ ದಾಳಿ

ಶಿವಮೊಗ್ಗ: ಜಿಲ್ಲೆಯ ಹಲವೆಡೆ ಮರಳು ಮತ್ತು ಕ್ವಾರಿಗಳ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದ್ದು, ಮರಳು ಗಣಿಗಾರಿಕೆ ಹಾಗೂ ಸಂಗ್ರಹವನ್ನು ಪರಿಶೀಲಿಸಿದ್ದಾರೆ. ಜಿಲ್ಲೆಯಲ್ಲಿ ಅಕ್ರಮ ಮರಳು ಸಾಗಣೆ ಸಂಬಂಧ ಸಾಲು ಸಾಲು ದೂರುಗಳು ಕೇಳಿಬಂದ ಹಿನ್ನೆಲೆ ಶಿವಮೊಗ್ಗ ಜಿಲ್ಲೆಯ ಹೊಸನಗರ, ಸಾಗರ, ತೀರ್ಥಹಳ್ಳಿ, ಭದ್ರಾವತಿ, ನಿದಿಗೆ, ಮಂಗೋಟೆ, ಸನ್ಯಾಸಿ ಕೊಡಮಗ್ಗಿ, ಹಾಡೋನಹಳ್ಳಿ, ಕೂಡಲಿ, ಮಂಡುವಳ್ಳಿ, ತುಡರೂರು, ದಬ್ಬಣಗದ್ದೆ, ಹೊಸನಗರ ತಾಲೂಕಿನ ಹರಿದ್ರಾವತಿ, ಸಂಪಕಟ್ಟೆ ಮತ್ತು ಸಾಗರದ ಆವಿನಹಳ್ಳಿಯ ಕ್ವಾರಿಗಳ ಮೇಲೆ ಅಧಿಕಾರಿಗಳು ಏಕಾಏಕಿ ದಾಳಿ ನಡೆಸಿದ್ದಾರೆ. ಮರಳು ಕ್ವಾರಿಗಳೊಂದಿಗೆ ಶಿವಮೊಗ್ಗದ ಕುವೆಂಪುನಗರದಲ್ಲಿರುವ ಗಣಿ ಮತ್ತು ಭೂವಿಜ್ಞಾನ ಇಲಾಖೆ ಕಚೇರಿ ಮೇಲೆ ಅಧಿಕಾರಿಗಳು ದಾಳಿ ನಡೆಸಿ ಪರಿಶೀಲನೆ ನಡೆಸುತ್ತಿದ್ದಾರೆ. ದಾಳಿಯಲ್ಲಿ ಶಿವಮೊಗ್ಗ ಮತ್ತು ಚಿತ್ರದುರ್ಗದ ಲೋಕಾಯುಕ್ತ ಅಧಿಕಾರಿಗಳು ಭಾಗಿಯಾಗಿದ್ದಾರೆ.

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮಂಡ್ಯ
ಸಂಖ್ಯೆ:ಕಾ.ಇಂ/ಗ್ರಾ.ಕು.ನೀ&ನೈ.ವಿ:ಮಂMVSO&M_TENDER/2026-27/875-879 ದಿನಾಂಕ:29.05.2026

1. ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:02/2026-27 (ದ್ವಿ-ಲಕೋಟೆ ಪದ್ಧತಿ) – (Kppp portal)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕಾ.ಇಂ, ಗ್ರಾ.ಕು.ನೀ & ನೈ ವಿಭಾಗ, ಮಂಡ್ಯರವರಿಂದ ಎಂ.ವಿ.ಎಸ್ ಓ.ಎಂ ಯೋಜನೆಯಡಿ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಕೆ.ಆರ್ ಸಾಗರ ಹಾಗೂ ಕೆ.ಆರ್.ಪೇಟೆ ತಾಲ್ಲೂಕಿನ ಬೂಕನಕೆರೆ ಬಹುಗ್ರಾಮ ಕುಡಿಯುವ ನೀರು ಯೋಜನೆಗಳ 05 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆಯ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಅರ್ಹ ದರ್ಜೆಯ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗಿಟ್ಟ ಗರಿಷ್ಠ ಮೊತ್ತ ರೂ.337.84ಲಕ್ಷಗಳು, ಪೂರ್ವಭಾವಿ ಸಭೆ ದಿನಾಂಕ:05.06.2026 ಸಮಯ:ಬೆಳಿಗ್ಗೆ 11:00 ಗಂಟೆಗೆ (ಸ್ಥಳ:ಕಾ.ಇಂ ಕಛೇರಿ, ಗ್ರಾ.ಕು.ನೀ&ನೈ ವಿಭಾಗ, ಮಂಡ್ಯ), ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:08.06.2026 ಸಂಜೆ:5:00 ಗಂಟೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ:09.06.2026 ಸಂಜೆ: 05:05 ಗಂಟೆ, ಆರ್ಥಿಕ ಬಿಡ್ ತೆರೆಯುವ ದಿನಾಂಕ :12.06.2026 ಸಮಯ ಬೆಳಿಗ್ಗೆ 11:00 ಗಂಟೆ. ಹೆಚ್ಚಿನ ವಿವರಗಳಿಗಾಗಿ www.kppp.karnataka.gov.in ವೆಬ್‌ಸೈಟ್‌ನಲ್ಲಿ ಅಥವಾ ಕಾ.ಇಂ, ಗ್ರಾ.ಕು.ನೀ & ನೈ ವಿ, ಮಂಡ್ಯರವರ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು. ದೂರವಾಣಿ ಸಂಖ್ಯೆ: 08232-222363.

ಸಹಿ/-ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ.&ನೈ.ವಿಭಾಗ, ಮಂಡ್ಯ
ವಾಸಾಸಂಇ/ಹಿಸನಿ-ಮಂ/ಕೆಎಸ್‌ಎಂಸಿ&ಎ/160/2026-27

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಕೊಪ್ಪಳ.
ಸಂ:ಕಾನಿಇಂ:ಲೋಇ:ವಿಕೊ:ಡಿಬಿ:ಟಿಂ:KW-1,2&4:2026-27: 636 ದಿನಾಂಕ:27.05.2026

-:: ಅಲ್ಪಾವಧಿ ಟೆಂಡರ್ ಪ್ರಕಟಣೆ ::-

2026-27ನೇ ಸಾಲಿನ ಲೆಕ್ಕ ಶೀರ್ಷಿಕೆ : 8443-ಠೇವಣಿ ವಂತಿಕೆ, 2059-80-053-4-00-200 ವಿವಿಧ ಇಲಾಖಾ ಕಟ್ಟಡಗಳ ವಸತಿ/ನಿರ್ವಹಣಾ ವೆಚ್ಚ (ಯೋಜನೇತರ) ಮತ್ತು 2024-25ನೇ ಸಾಲಿನ ಲೆಕ್ಕ ಶೀರ್ಷಿಕೆ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಮ್ಯಾಕ್ರೋ ಸಾಂಸ್ಥಿಕ - ಎಸ್‌ಸಿಪಿ ಅಡಿಗಳಲ್ಲಿ ಮಂಜೂರಾದ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999-2000ರ ಪ್ರಕಾರ ಪಾರದರ್ಶಕತೆ ಅಕ್ಟ 2000ರ ನಿಯಮದಂತೆ, ಸ್ಟ್ಯಾಂಡರ್ಡ ಬಿಡ್ ಡಾಕುಮೆಂಟ್ ನಿಯಮಗಳನ್ವಯ ಅರ್ಹ ಗುತ್ತಿಗೆದಾರರಿಂದ ಟೆಂಡರನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು, ಕೆಪಿಪಿ ಪೋರ್ಟಲ್ http://kppp.karnataka.gov.in ಮುಖಾಂತರ ಭಾಗವಹಿಸಬಹುದು. ಒಟ್ಟು 03 ಕಾಮಗಾರಿಗಳಿಗೆ (ವರ್ಕ ಇಂಡೆಂಟ್ ಸಂಖ್ಯೆ: 35829, 35936 & IND0237) ಟೆಂಡರ್ ಆಹ್ವಾನಿಸಲಾಗಿದ್ದು ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ: **03-06-2026** ಸಮಯ 12.30 ಗಂಟೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **04-06-2026** ಸಮಯ 13.30 ಆರ್ಥಿಕ ಬಿಡ್ ತೆರೆಯುವ ದಿನಾಂಕ: **05-06-2026** ಸಮಯ 14.30 ಕನಿಷ್ಠ ಅಂದಾಜು ಮೊತ್ತ ರೂ. **2.00** ಲಕ್ಷಗಳು ಹಾಗೂ ಗರಿಷ್ಠ ಅಂದಾಜು ಮೊತ್ತ ರೂ. **200.00** ಲಕ್ಷಗಳು ಇರುತ್ತದೆ. ಈ ಟೆಂಡರ್ ದಾಖಲೆಗಳನ್ನು ಸದರಿ ವೆಬ್‌ಸೈಟ್‌ನಲ್ಲಿಯ ದಾಖಲೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇ.ಎಂ.ಡಿ, ಟೆಂಡರ್ ಪ್ರೊಸೆಸಿಂಗ್ ಶುಲ್ಕ, ಕಾಮಗಾರಿ ಪೂರ್ಣಗೊಳಿಸಲು ನಿಗದಿತ ಕಾಲಾವಧಿ, ಪ್ರೀಬಿಡ್ ಮೀಟಿಂಗ್ ದಿನಾಂಕ, ಮೀಸಲಾತಿ, ಟೆಂಡರ್ ಅಕ್ಷೇಪಣೆ/ಸ್ಪಷ್ಟೀಕರಣ, ಆರ್ಥಿಕ ಬಿಡ್ ತೆರೆಯುವ ದಿನಾಂಕ ಹಾಗೂ ಇತ್ಯಾದಿಗಳಿಗಾಗಿ ಹೆಚ್ಚಿನ ಮಾಹಿತಿಗಳನ್ನು http://kppp.karnataka.gov.in ನೋಡಿಕೊಳ್ಳುವುದು/ ಕೆಲಸದ ವೇಳೆಯಲ್ಲಿ ಈ ಕಛೇರಿಯಿಂದ ಪಡೆಯಬಹುದು. ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಯಾದಲ್ಲಿ ಗುತ್ತಿಗೆದಾರರು ಕೆಪಿಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರು,
ಲೋ.ಇ ವಿಭಾಗ, ಕೊಪ್ಪಳ
ಡಿಐಪಿಆರ್/ಕೊಪ್ಪಳ/121/ಕೆಎಸ್‌ಎಂಸಿಎ/2026-27

ಸತೀಶ್ ಜಾರಕಿಹೊಳಿ ಜತೆ ಮುನ್ನೆಲೆಗೆ ಬಂದ ನಾಲ್ಕೈದು ಹೆಸರು

ಕೆಪಿಸಿಸಿ ಹುದ್ದೆಗೇರೋದು ಯಾರು?

ಬೆಂಗಳೂರು: ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಆಯ್ಕೆಯ ಬೆನ್ನಲ್ಲೇ ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಯಾರು ಎನ್ನುವ ಕುತೂಹಲ ಶುರುವಾಗಿದೆ. ಆರಂಭದಲ್ಲಿ ಸತೀಶ್ ಜಾರಕಿಹೊಳಿ ಅವರೇ ಎನ್ನುವ ಮಾತುಗಳು ಕೇಳಿಬರುತ್ತಿದೆ.

- ಡಿಸಿಎಂ ಸ್ಥಾನ ಸಿಗದಿದ್ದರೆ ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಪರಂ ಒಲವು
- ಬೋವಿ ಕೋಟದಲ್ಲಿ ತಂಗಡಗಿ, ಲಿಂಗಾಯತ ಕೋಟದಲ್ಲಿ ಖಂಡ್ರೆ
- ನಾಯಕರು ದೆಹಲಿಗೆ ತೆರಳಿದ ಬಳಿಕ ಕೆಪಿಸಿಸಿ ಅಧ್ಯಕ್ಷರ ಹೆಸರು ಅಂತಿಮ

ಉಪಮುಖ್ಯಮಂತ್ರಿ ಸ್ಥಾನದ ಮೇಲೆ ಕಣ್ಣಿಟ್ಟಿದ್ದ ಹಲವು ನಾಯಕರು ಡಿಸಿಎಂ ಸ್ಥಾನ ಸಿಗುವುದು ಕಷ್ಟ ಎನ್ನುತ್ತಿದ್ದಂತೆ ಕೆಪಿಸಿಸಿ ಅಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟಿದ್ದಾರೆ. ಸತೀಶ್ ಜಾರಕಿಹೊಳಿ ಅವರು ಕೆಪಿಸಿಸಿ ಅಧ್ಯಕ್ಷ ಸ್ಥಾನದೊಂದಿಗೆ ಸಚಿವ ಸ್ಥಾನಕ್ಕೆ ಬೇಡಿಕೆ ಇಟ್ಟಿದ್ದು, ಇದನ್ನು ಹೈಕಮಾಂಡ್ ಒಪ್ಪುತ್ತಿಲ್ಲ. ಆದ್ದರಿಂದ ಅವರ ಬದಲಿಗೆ ಪರ್ಯಾಯ ನಾಯಕರ ಹುಡುಕಾಟ ನಡೆಸಿದೆ ಎನ್ನಲಾಗಿದೆ.

ಒಕ್ಕಲಿಗ ಮುಖ್ಯಮಂತ್ರಿಯಾಗಿರುವುದರಿಂದ ದಲಿತ ಅಥವಾ ಒಬಿಸಿ ನಾಯಕರನ್ನು ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ತರಬೇಕು ಎನ್ನುವ ಲೆಕ್ಕಾಚಾರದಲ್ಲಿ ಹೈಕಮಾಂಡ್ ಇದೆ. ಇಲ್ಲವೇ ಲಿಂಗಾಯತ ಸಮುದಾಯದವರನ್ನು ತರಬಹುದು ಎನ್ನುವ ಮಾತಿದೆ. ದಲಿತ ಕೋಟದಲ್ಲಿ ಈಗಾಗಲೇ ಸುದೀರ್ಘ ಅವಧಿಗೆ ಕೆಪಿಸಿಸಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದ, 2013ರಲ್ಲಿ ತಾವೂ ಸೋತರು ಪಕ್ಷವನ್ನು ಗೆಲುವಿನ ದಡ ಮುಟ್ಟಿಸಿದ್ದ ಡಾ.ಜಿ. ಪರಮೇಶ್ವರ ಹೆಸರು ಕೇಳಿಬರುತ್ತಿದೆ. ಇದರೊಂದಿಗೆ ಬೋವಿ ಸಮುದಾಯದ ಶಿವರಾಜ್ ತಂಗಡಗಿ ಅವರನ್ನು ಕೂರಿಸಬಹುದು ಎನ್ನುವ ಆಲೋಚನೆಗಳು ಶುರುವಾಗಿದೆ.

ಈ ಎರಡರ ಹೊರತಾಗಿ ಲಿಂಗಾಯತ ಕೋಟದಲ್ಲಿ ಕೆಪಿಸಿಸಿ ಅಧ್ಯಕ್ಷರಾಗಲು ಈಶ್ವರ್ ಖಂಡ್ರೆ ಬಯಸಿದ್ದಾರೆ. ಖಂಡ್ರೆ ಅವರನ್ನು ಡಿಸಿಎಂ ಮಾಡಬೇಕು ಎನ್ನುವ ಬಗ್ಗೆ ಸ್ವಾಮೀಜಿಗಳು, ಸಮುದಾಯದ ನಾಯಕರಿಂದ ಹೇಳಿಕೆ, ಪತ್ರ ವ್ಯವಹಾರಗಳು ಈಗಾಗಲೇ ನಡೆದಿವೆ. ಒಂದು ವೇಳೆ ಡಿಸಿಎಂ ಪೋಸ್ಟ್ ಸಿಗದೇ ಹೋದರೆ ಕೆಪಿಸಿಸಿ ಅಧ್ಯಕ್ಷರಾಗುವ ಲೆಕ್ಕಾಚಾರದಲ್ಲಿದ್ದಾರೆ ಎಂದು ತಿಳಿದುಬಂದಿದೆ.

ಕೆಪಿಸಿಸಿ ಅಧ್ಯಕ್ಷ ಸ್ಥಾನದ ಬಗ್ಗೆ ಹೈ ತೀರ್ಮಾನ

ಇನ್ನು ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಸಂಬಂಧಿಸಿದಂತೆ ಸತೀಶ್ ಜಾರಕಿಹೊಳಿ ಅವರು ಮಾತನಾಡಿದ್ದು, ಹೈಕಮಾಂಡ್ ನಿರ್ಧಾರದಂತೆ ಶಾಸಕಾಂಗ ಪಕ್ಷದ ಸಭೆಯಲ್ಲಿ ಅಧಿಕೃತವಾಗಿ ಸಿಎಂ ಸ್ಥಾನಕ್ಕೆ ಡಿ. ಕೆ. ಶಿವಕುಮಾರ್ ಅವರ ಹೆಸರು ಘೋಷಣೆಯಾಗಿದೆ. ಪ್ರಮಾಣ ವಚನದ ಬಗ್ಗೆ ಸಮಯ, ದಿನಾಂಕ, ನಿಗದಿ ಮಾಡಿಕೊಳ್ಳಲು ರಾಜ್ಯಪಾಲರರನ್ನು ಡಿ.ಕೆ.ಶಿವಕುಮಾರ್ ಅವರು ಭೇಟಿಯಾಗಿದ್ದಾರೆ. ಮೂರು-ನಾಲ್ಕು ಡಿಸಿಎಂ ಮಾಡುವ ವಿಚಾರ ಸಂಬಂಧ ವರಿಷ್ಠರು ಈ ಬಗ್ಗೆ ತೀರ್ಮಾನಿಸಲಿದ್ದಾರೆ. ಅಂತಿಮವಾಗಿ ಸೋಮವಾರದೊಳಗೆ ಎಲ್ಲವೂ ಅಂತಿಮವಾಗಬಹುದು ಎಂದರು. ಕೆಪಿಸಿಸಿ ಅಧ್ಯಕ್ಷರನ್ನಾಗಿ ಯಾರನ್ನು ಮಾಡುತ್ತಾರೆ ಎಂಬುದು ಗೊತ್ತಿಲ್ಲ, ಅಂತಿಮವಾಗಿ ಹೈಕಮಾಂಡ್ ನಿರ್ಧಾರ ತೆಗೆದುಕೊಳ್ಳುತ್ತೆ. ಸಹಜವಾಗಿ ಇಬ್ಬರ-ಮೂವರು ಹೆಸರಿರುತ್ತದೆ. ಈ ಪೈಕಿ ಯಾರು ಸೂಕ್ತ ಅಂತ ನೋಡಿಕೊಂಡು ನಿರ್ಧರಿಸಲಿದ್ದಾರೆ. ಹೀಗಾಗಿ, ತಾಳ್ಮೆಯಿಂದ ಕಾಯಬೇಕು. ನನಗೆ ಉಪಮುಖ್ಯಮಂತ್ರಿ ಸ್ಥಾನ ನೀಡಬೇಕೆ, ಬೇಡವೋ ಎನ್ನುವ ಬಗ್ಗೆ ಪಕ್ಷ ನಿರ್ಧರಿಸಲಿದೆ. ನಮ್ಮದೇನು ಬೇಡಿಕೆಗಳಿಲ್ಲ. ಪಕ್ಷ ಯಾರಿಗೆ ಯಾವ ಹುದ್ದೆಯನ್ನು ನೀಡಬೇಕು ಎಂದು ನೋಡಿಕೊಂಡು ನೀಡುತ್ತದೆ ಎಂದರು. ಸಿಎಂ ಹಾಗೂ ಕ್ಯಾಬಿನೆಟ್‌ಗೆ ಯಾರು ಸೇರಬೇಕು ಎಂಬುದು ಅಷ್ಟೇ ಚರ್ಚೆಯಾಗಲಿದೆ. ನಾಯಕರು ದೆಹಲಿಗೆ ತೆರಳಿದ ಬಳಿಕ ಕೆಪಿಸಿಸಿ ಅಧ್ಯಕ್ಷರ ಹೆಸರು ಅಂತಿಮವಾಗಲಿದೆ ಎಂದು ಸ್ಪಷ್ಟಪಡಿಸಿದರು.

ಕರ್ನಾಟಕ ಸರ್ಕಾರ
ಆಯುಕ್ತರವರ ಕಛೇರಿ, ಬಳ್ಳಾರಿ ಮಹಾನಗರಪಾಲಿಕೆ,
ಬಳ್ಳಾರಿ ಗಡಿಗಿ ಚೆನ್ನಪ್ಪ ವೃತ್ತ (ರಾಯಲ್ ಸರ್ಕಲ್) ಬಳ್ಳಾರಿ-583101.
ದೂರವಾಣಿ ಸಂಖ್ಯೆ : 08392-273479/278168 ವೆಬ್‌ಸೈಟ್ : www.ballaricity.mrc.gov.in ಇ-ಮೇಲ್: ka.ballari.cc@gmail.com
ಸಂಖ್ಯೆ:ಮನಪಾಬ/ತಾಂತ್ರಿಕ/ಅಮೃತ್-2.0/2025-26 ದಿನಾಂಕ:25.05.2026

ಟೆಂಡರ್ ಪ್ರಕಟಣೆ ಕಾಲ್-4 (ಕೆ.ಪಿ.ಪಿ.ಪಿ. ಮೂಲಕ)

ಬಳ್ಳಾರಿ ಮಹಾನಗರಪಾಲಿಕೆವತಿಯಿಂದ 2025-26ನೇ ಸಾಲಿನ ಕೇಂದ್ರ ಪುರಸ್ಕೃತ ಅನುದಾನದ ಅಮೃತ್ 2.0 ಯೋಜನೆಯಡಿಯಲ್ಲಿ ಟೆಂಡರ್ ಕೆ.ಪಿ.ಪಿ.ಪಿ. ಮೂಲಕ ಕಾಮಗಾರಿ ಇಂಡೆಂಟ್ ಸಂಖ್ಯೆ:1) DMA/2025-26 /OW/ Work_Indent 49795/Call-4-Rs.167.95 Lakhs, 2) DMA/2025-26 /OW/ Work_Indent 49792/Call-4-Rs.62.81 Lakhs, 3) DMA/2025-26/OW/Work_Indent 49788/Call-4-Rs.94.37 Lakhs & 4) DMA/2025-26/OW/ Work_Indent 49790/call-4-Rs.52.36 Lakhs ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ:08.06.2026 ರ ರಂದು ಸಂಜೆ 5.30** ಗಂಟೆಯೊಳಗಾಗಿ ಸಲ್ಲಿಸಬಹುದು. ತಾಂತ್ರಿಕ ಬಿಡ್ ತೆರೆಯುವ **ದಿನಾಂಕ:10.06.2026 ರ ಬೆಳಿಗ್ಗೆ 10.30 ಗಂಟೆಗೆ.** ಅರ್ಹ ಗುತ್ತಿಗೆದಾರರ ಆರ್ಥಿಕ ಬಿಡ್ ತೆರೆಯುವ **ದಿನಾಂಕ:12.06.2026 ರ ಬೆಳಿಗ್ಗೆ 11.00 ಗಂಟೆಗೆ.** ಕಾಮಗಾರಿಯ ಎಲ್ಲಾ ವಿವರಗಳಿಗಾಗಿ, ಟೆಂಡರ್ ಕುರಿತಂತೆ ಹಾಗೂ ಯಾವುದೇ ತಿದ್ದುಪಡಿ ಇದ್ದಲ್ಲಿ ವೆಬ್‌ಸೈಟ್:**http://kppp.karnataka.gov.in** ಅನ್ನು ಅನ್ನು ಗಮನಿಸಲು ಹಾಗೂ ಬಳ್ಳಾರಿ ಮಹಾನಗರಪಾಲಿಕೆಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದು.

ಸಹಿ/-ಆಯುಕ್ತರು, ಬಳ್ಳಾರಿ ಮಹಾನಗರ ಪಾಲಿಕೆ, ಬಳ್ಳಾರಿ
ವಾ.ಸಾ.ಸಂ.ಇ/ಬಳ್ಳಾರಿ/2026-27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/189

ಪೊಲೀಸ್ ಉಪ ಮಹಾನಿರೀಕ್ಷಕರು, ಈಶಾನ್ಯ ವಲಯ ಕಲಬುರಗಿ
ಜಿಲ್ಲಾ ಪೊಲೀಸ್ ಭವನ, ಜಿ.ಜಿ.ಹೆಚ್. ರೋಡ್, ಕಲಬುರಗಿ. ದೂ.08472-263605, Email: estnergba@ksp.gov.in
ಸಂ. STS/01/ NER/DRONE/2026-27 ದಿನಾಂಕ:29/05/2026.

ಟೆಂಡರ ಪ್ರಕಟಣೆ

ಪೊಲೀಸ್ ಇಲಾಖೆಗೆ ಅವಶ್ಯಕತೆವಿರುವ **SUPPLY AND MAINTENANCE OF UNMANNED AERIAL VEHICLE (DRONE) WITH ACCESSORIES** ಗಳನ್ನು ಅವಶ್ಯಕವಿರುವ ಡ್ರೋಣ್ ಮತ್ತು ಅದರ ಸಾಧನ ಸಾಮಾಗ್ರಿಗಳನ್ನು ಖರೀದಿಸಲು ಆಳವಡಿಸಲು ಅಧೀಕೃತ ಏಜೇನ್ಸಿ (ಸಂಸ್ಥೆ) ಯವರಿಂದ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ (KTPP Act) ಅಧಿನಿಯಮ 1999 ಮತ್ತು ನಿಯಮಗಳು 2000 ರ ಪ್ರಕಾರ ದ್ವಿ-ಲಕೋಟೆ ಪದ್ದತಿಯಲ್ಲಿ ಇ-ಪ್ರೋಕ್ಯೂರ್‌ಮೆಂಟ ಮೂಲಕ ಟೆಂಡರ ಕರೆಯಲಾಗಿದೆ. ಎಲ್ಲ ವಿವರಗಳು **https://kppp.karnataka.gov.in** ಜಾಲತಾಣದಲ್ಲಿ ನೋಡಬಹುದಾಗಿದೆ.

1) ಟೆಂಡರ ಪ್ರಕಟಣೆ ಸಂಖ್ಯೆ ಟೆಂಡರ **No:KSP/2025-26/IND0535/CALL-2**, 2) ಟೆಂಡರ ಪ್ರಕಟಣೆ ದಿನಾಂಕ : 26.05.2026, 3) ಟೆಂಡರಗೆ ಸಂಬಧಿಸಿದ ಯಾವುದೇ ಮಾಹಿತಿಯನ್ನು ಪಡೆಯುವ ಕೊನೆಯ ದಿನಾಂಕ : 01.06.2026 at 17.00 hrs, 4) ಪ್ರಿ-ಬಿಡ್ ಮಿಟಿಂಗ್ ದಿನಾಂಕ : 02.06.2026 at 11.30 hrs, ಸ್ಥಳ ಪೋಲಿಸ್ ಭವನ ಕಲಬುರಗಿ 5) ಆನ್‌ಲೈನ್ ಟೆಂಡರ ಫಾರಂಗಳನ್ನು ಡೌನಲೋಡ್ ಮಾಡಿಕೊಂಡು, ಟೆಂಡರ ಅನ್ನು ಇ-Procurment portal ಮುಖಾಂತರ ಸಲ್ಲಿಸಲು **ಕೊನೆಯ ದಿನಾಂಕ :** 09.06.2026 at 17-30 hrs, 6) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ : 11-06-2026 at 11-00 hrs 7) ಹಣಕಾಸಿನ ಲಕೋಟೆಯನ್ನು ತೆರೆಯುವ ದಿನಾಂಕ : 15.06.2026 at 11-00 hrs, 8) ಟೆಂಡರನ ಅಂದಾಜು ಮೊತ್ತ ರೂ. **Rs. 100 Lakhs,** 9 ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ.ಮೊತ್ತ ರೂ. **Rs. 1.50,000/-** 10) ವ್ಯವಹರಿಸ ಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ ರಜಾ ದಿನಗಳನ್ನು ಹೊರತುಪಡಿಸಿ ಪೋಲೀಸ್ ಉಪ ಮಹಾ ನಿರೀಕ್ಷಕರು, ಈಶಾನ್ಯ ವಲಯ, ಕಲಬುರಗಿ **Ph: 08472-263605**.

ಸಹಿ/- ಪೊಲೀಸ್ ಉಪ ಮಹಾನಿರೀಕ್ಷಕರು
ಈಶಾನ್ಯ ವಲಯ ಕಲಬುರಗಿ ರವರ ಪರವಾಗಿ
ವಾ.ಸಾ.ಸಂ.ಇ.ಕಲಬುರಗಿ/172/ದೇಶಪಾಂಡೆ ಪಬ್ಲಿಸಿಟಿ/2026-27

ಕೆರೆಯಲ್ಲಿ ಮುಳುಗಿ ಮೂವರು ಬಾಲಕರು ಸಾವು

ಧಾರವಾಡ: ಕೆರೆಗೆ ಈಜಲು ಹೋಗಿದ್ದ ಮೂವರು ಬಾಲಕರು ನೀರುಪಾಲಾಗಿರುವ ಘಟನೆ ಧಾರವಾಡ ತಾಲೂಕಿನ ಸಿಂಗನಹಳ್ಳಿ ಗ್ರಾಮದಲ್ಲಿ ನಡೆದಿದೆ. ಸುಭಾನಿ ಬಾಬೋಜಿಕೊಪ್ಪ (12), ಮೆಹಬೂಬ ಒಟ್ನಾಳ (16), ಅನ್ವರ್ ಒಟ್ನಾಳ (14) ಸಾವನ್ನಪ್ಪಿದ ಬಾಲಕರು. ಮಧ್ಯಾಹ್ನ ಗ್ರಾಮದ ಪಕ್ಕದಲ್ಲಿ ಇರುವ ಕೆರೆಗೆ ಮೂವರು ಬಾಲಕರು ಈಜಲು ಹೋಗಿದ್ದರು. ಈ ವೇಳೆ ಕೆರೆಯ ಮಧ್ಯಭಾಗದಲ್ಲಿ ಹೋಗಿದ್ದ ಬಾಲಕರು ಈಜಲು ಆಗದೇ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ. ಸದ್ಯ ಮೂವರು ಬಾಲಕರ ಮೃತದೇಹವನ್ನು ನೀರಿನಿಂದ ಹೊರತೆಗೆಯಲಾಗಿದೆ.

ದುರಂತ ಸ್ಥಳದಲ್ಲಿ ಕುಟುಂಬಸ್ಥರ ಆಕ್ರಂದನ ಮುಗಿಲುಮುಟ್ಟಿತು. ಸ್ಥಳಕ್ಕೆ ಗರಗ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಕರ್ನಾಟಕ ಸರ್ಕಾರ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ವಿಜಯನಗರ
ಅನೆಕ್ಸ್ ಕಟ್ಟಡ, 2ನೇ ಮಹಡಿ, ಎಸ್‌ಪಿ ಕಛೇರಿಯ ಹಿಂಭಾಗ, ಡ್ಯಾಂ ರಸ್ತೆ, ಹೊಸಪೇಟೆ
ಸಂ.ಕಾನಿ/ಪಂರಾಇಂವಿ/ವಿಜಯನಗರ/ತಾ.ಶಾಖೆ/ಟೆಂಡರ್/ವಿವಿಲೆಶಿ/2026-27/298
ದಿನಾಂಕ:27.05.2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(Through Government of Karnataka Public Procurement Portal)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ವಿಜಯನಗರ ಹೊಸಪೇಟೆ ಇವರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ – 2000ರಂತೆ ಮೀಸಲಾತಿಗೆ ಒಳಪಟ್ಟು ಹಡಗಲಿ, ಹ.ಬೋ.ಹಳ್ಳಿ & ಕೂಡ್ಲಿಗಿ ಹೊಸಪೇಟೆ ತಾಲೂಕಿಗೆ **CMIDP, 5054 (Flood)** ಹಾಗೂ ಇತರೆ ಲೆಕ್ಕಶೀರ್ಷಿಕೆಗಳಡಿ ಅನುಮೋದನೆಯಾದ ವಿವಿಧ ಕಾಮಗಾರಿಗಳಿಗಾಗಿ ಟರ್ನ ಕೀ ಆಧಾರದ ಮೇಲೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ **Standard Bid Document (KW1,2,3 &4)** ನಿಯಮವಳಿಗಳಂತೆ ವೆಬ್‌ಸೈಟ್‌ನ ಆಯಾ ಇಂಡೆಂಟ್‌ಗಳಲ್ಲಿ ಅಪ್‌ಲೋಡ್ ಮಾಡಲಾಗಿರುವ ನಿಬಂಧನೆಗಳಿಗೊಳಪಟ್ಟು Works ಟೆಂಡರ್‌ಗಳನ್ನು ಆಹ್ವಾನಿಸಿದ್ದು, ಟೆಂಡರ್‌ಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳಬಹುದಾದ ದಿನಾಂಕ: **Annexure I** ಕಾಮಗಾರಿಗಳಿಗೆ **ದಿನಾಂಕ:27.05.2026** ರಿಂದ ಟೆಂಡರ್‌ಗಳನ್ನು ಸಲ್ಲಿಸಲು ಅಂತಿಮ **ದಿನಾಂಕ :06.06.2026 ಸಂಜೆ:5.00**ವರೆಗೆ ಹಾಗೂ **Annexure II** ಕಾಮಗಾರಿಗಳಿಗೆ **ದಿನಾಂಕ:29.05.2026** ರಿಂದ ಟೆಂಡರ್‌ಗಳನ್ನು ಸಲ್ಲಿಸಲು ಅಂತಿಮ **ದಿನಾಂಕ :12.06.2026 ಸಂಜೆ:5.00** ವರೆಗೆ **(Auto Extension Specialty up to 4 Days)**

Annexure I Indent Nos (Including Category works) H B Halli Taluk : 26544, 26543, 26542, 26541, 26540, 26258 & 25782 Hosapete Taluk : 26363, 22930/call-2, Hadagali taluk : 26283, Kudligi : 26872 & other indents Annexure II Indent Nos : Hadagali taluk: 26565 & 26566

ಟೆಂಡರ್ ಪ್ರಕ್ರಿಯೆ ದಿನಾಂಕಗಳು/ತಿದ್ದುಪಡಿ/ಮುಂದೂಡಿಕೆಗಳ ಬಗ್ಗೆ ಕಾರಣಾಂತರಗಳಿಂದ ಬದಲಾವಣೆಯಾದಲ್ಲಿ ಕೆಪಿಪಿ ಪೋರ್ಟಲ್ **(https://kppp.karnataka.gov.in)** ವೆಬ್‌ಸೈಟ್‌ನಲ್ಲಿಯೆ ನೋಡಿಕೊಳ್ಳುವುದು. ಬಾಕಿ ಉಳಿದಂತೆ ಟೆಂಡರ್ ಪ್ರಕಟಣೆಯ (ಅನುಭಂದ) ಹೆಚ್ಚಿನ ಮಾಹಿತಿಗಾಗಿ ಕೆ.ಪಿ.ಪಿ.ಪಿ ವೆಬ್‌ಸೈಟ್ ಮತ್ತು ಕಛೇರಿ ವೇಳೆಯಲ್ಲಿ ಖುದ್ದಾಗಿ **(eepredvijayanagara@gmail.com)** ಸಂಪರ್ಕಿಸಬಹುದು.

ಸಹಿ/- ಕಾಪಅ ಪಂರಾಇಂ ವಿಭಾಗ, ವಿಜಯನಗರ
ವಾ.ಸಾ.ಸಂ.ಇ/ವಿಜಯನಗರ/2026-27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/103

ಹಾಸನ ಮಹಾನಗರ ಪಾಲಿಕೆ, ಹಾಸನ. ಬಿ.ಎಂ.ರಸ್ತೆ, ಸಂತೇಪೇಟೆ ವೃತ್ತ, ಹಾಸನ-573201.
Email:commn_hassan@yahoo.com ದೂರವಾಣಿ: 08172-268276, 263033 **web: http://www.hassancity.mrc.gov.in** ಸಹಾಯವಾಣಿ: 233702 ಫ್ಯಾಕ್ಸ್: 234792
ನಂ:ಮನಪಾಹಾ/ಮಿ.ಶಾ/ಸಿಆರ್/02/2026-27 ದಿನಾಂಕ:-30-05-2026

:: ಹರಾಜು ಪ್ರಕಟಣೆ ::

ಈ ಮೂಲಕ ಹಾಸನ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ದಿನಾಂಕ: 01-06-2026 ರಿಂದ ದಿನಾಂಕ:15-06-2026 ರ ವರೆಗಿನ ಅವಧಿಯಲ್ಲಿ ಈ ಕೆಳಕಂಡ ವಿವಿದ ಬಾಬುಗಳ ಸುಂಕ ವಸೂಲಿ ಹಕ್ಕುಗಳನ್ನು ಕೆ.ಪಿ.ಪಿ.ಪೋರ್ಟಲ್ ಮೂಲಕ ವಿಲೇವಾರಿ ಮಾಡಲು ಹರಾಜು ಇಸ್ತಿಯಾರ್ ಹೊರಡಿಸಲಾಗಿದೆ. (http:/kppp.karnataka4.gov.in) ಸದರಿ ಬಾಬುಗಳ ಸುಂಕ ವಸೂಲಿ ಹಕ್ಕನ್ನು ಪಡೆಯುವ ಆಸಕ್ತರು/ಏಜೆನ್ಸಿಯವರು ದಿನಾಂಕ:15-06-2026 ರಂದು ಸಂಜೆ 5 ಗಂಟೆಯೊಳಗಾಗಿ ಠೇವಣಿ ಮೊತ್ತವನ್ನು ಪಾವತಿಸಿ ಆನ್‌ಲೈನ್ ಮೂಲಕ ಸಲ್ಲಿಸಲು ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಕಂದಾಯಾಧಿಕಾರಿಯನ್ನು ಸಂಪರ್ಕಿಸುವುದು. ಕ್ರ.ಸಂ. ಬಾಬುಗಳ ವಿವರ 1)ಪ್ರತಿ ಮಂಗಳವಾರ ಗೊರೂರು ರಸ್ತೆಯ ಬದಿ ಸಂತೆ ಸಾಲಗಾಮೆ ರಸ್ತೆ ಕ್ರೀಡಾಂಗಣದ ಹತ್ತಿರ ಎನ್.ಸಿ.ಸಿ. ಕಛೇರಿ ಮುಂಭಾಗ ನಡೆಯುವ ಸಂತೆ, ಕೇಂದ್ರ ಅರಣ್ಯ ಇಲಾಖೆ ಹತ್ತಿರ ನಡೆಯುವ ಸಂತೆ ಸುಂಕ ವಸೂಲಿ ಮಾಡುವ ಹಕ್ಕು. ಹಾಗೂ ಮಹಾನಗರ ಪಾಲಿಕೆ ವ್ಯಾಪ್ತಿಯ ಕಟ್ಟಿನ ಕೆರೆ ಮಾರುಕಟ್ಟೆ ಹಾಗೂ ರಸ್ತೆ ಬದಿ ಮಾರಾಟ ಮಾಡುವ ತರಕಾರಿಗಳಿಗೆ ಸುಂಕ ವಸೂಲಿ ಮಾಡುವ ಹಕ್ಕು. ಹರಾಜಿನ ಭಾಗವಹಿಸಲು ಆನ್ ಲೈನ್ ಮೂಲಕ ಕಟ್ಟಬೇಕಾಗಿರುವ ಠೇವಣಿ ಮೊತ್ತ ರೂ.2,00,000.00 ಅಖೈರು ಬಿಡ್ ಹೊಂದಲು ಕನಿಷ್ಟ ಬಿಡ್ ಮೊತ್ತ ರೂ.65,00,000.00 ಮೇಲ್ಪಟ್ಟು ಹರಾಜು ವಿಧಾನ ಕೆ.ಪಿ.ಪಿ.ಪೋರ್ಟಲ್ ಮೂಲಕ Live Bidding time 15-06-2026ನೇ ಶುಕ್ರವಾರ ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 2.00 ರ ಗಂಟೆ ವರೆಗೆ 2)ಗೊರೂರು ರಸ್ತೆ ಎಡಭಾಗದಲ್ಲಿ ನಿರ್ಮಿಸಿರುವ (ಕಸಾಯಿ ಖಾನೆಯಲ್ಲಿ) ಕುರಿ ಮಾಂಸ ಮಾರಾಟ ಮಾಡುವ ಹಕ್ಕು, ಖಸಾಯಿ ಖಾನೆಯಲ್ಲಿ ಬೀಳುವ ಗೊಬ್ಬರವನ್ನು ತೆಗೆದುಕೊಂಡು ಹೋಗುವ ಹಕ್ಕು. ಹರಾಜಿನ ಭಾಗವಹಿಸಲು ಆನ್ ಲೈನ್ ಮೂಲಕ ಕಟ್ಟಬೇಕಾಗಿರುವ ಠೇವಣಿ ಮೊತ್ತ ರೂ. 1,00,000.00 ಅಖೈರು ಬಿಡ್ ಹೊಂದಲು ಕನಿಷ್ಟ ಬಿಡ್ ಮೊತ್ತ ರೂ. 2,00,000.00 ಮೇಲ್ಪಟ್ಟು ಹರಾಜು ವಿಧಾನ ಕೆ.ಪಿ.ಪಿ.ಪೋರ್ಟಲ್ ಮೂಲಕ 3)ಮಹಾನಗರ ಪಾಲಿಕೆ ಜಾಗದ ಮಳಿಗೆಗಳಲ್ಲಿ ಮೀನು ಮಾರಾಟ ಮಾಡುವ ಹಕ್ಕು. ಹರಾಜಿನ ಭಾಗವಹಿಸಲು ಆನ್ ಲೈನ್ ಮೂಲಕ ಕಟ್ಟಬೇಕಾಗಿರುವ ಠೇವಣಿ ಮೊತ್ತ ರೂ. 50,000.00 ಅಖೈರು ಬಿಡ್ ಹೊಂದಲು ಕನಿಷ್ಟ ಬಿಡ್ ಮೊತ್ತ ರೂ. 1,00,000.00 ಮೇಲ್ಪಟ್ಟು ಹರಾಜು ವಿಧಾನ ಕೆ.ಪಿ.ಪಿ.ಪೋರ್ಟಲ್ ಮೂಲಕ 4)ಹಾಸನ ಮಹಾನಗರ ಪಾಲಿಕೆಯ ಮುಖ್ಯ ರಸ್ತೆಗಳಾದ ಸಹ್ಯಾದ್ರಿ ರಸ್ತೆಯ ಫುಡ್ ಕೋರ್ಟ್, ಎಂ.ಜಿ.ರಸ್ತೆಯ ಫುಡ್ ಕೋರ್ಟ್ ಹಾಗೂ ಪೃಥ್ವಿ ಥಿಯೇಟರ್ ಹತ್ತಿರ ಇರುವ ಫುಡ್ ಕೋರ್ಟ್ ಹರಾಜಿನ ಭಾಗವಹಿಸಲು ಆನ್ ಲೈನ್ ಮೂಲಕ ಕಟ್ಟಬೇಕಾಗಿರುವ ಠೇವಣಿ ಮೊತ್ತ ರೂ.1,00,000.00 ಅಖೈರು ಬಿಡ್ ಹೊಂದಲು ಕನಿಷ್ಟ ಬಿಡ್ ಮೊತ್ತ ರೂ.13,00,000.00 ಹರಾಜು ವಿಧಾನ ಕೆ.ಪಿ.ಪಿ.ಪೋರ್ಟಲ್ ಮೂಲಕ ಷರತ್ತುಗಳು: 1.ಹರಾಜಿನಲ್ಲಿ ಭಾಗವಹಿಸುವವರು ಕಾಲಂ ನಂ 3 ರಲ್ಲಿ ಸೂಚಿಸಿರುವಂತೆ ಐಟಂವಾರು ಠೇವಣಿ ಮೊತ್ತವನ್ನು ಆನ್‌ಲೈನ್ ಮೂಲಕ ಕಡ್ಡಾಯವಾಗಿ ಪಾವತಿಸಬೇಕು. 2.ಹರಾಜು ಅಖೈರಾದ ಕೂಡಲೇ ಅಖೈರು ಸವಾಲುದಾರರು ಹರಾಜಿನ ಬಾಕಿ ಮೊತ್ತವನ್ನು ಹರಾಜು ಆದ ಸ್ಥಳದಲ್ಲಿಯೇ ಪೂರ್ಣ ಮೊತ್ತವನ್ನು ಜಿ.ಎಸ್.ಟಿ. ಮೊತ್ತದೊಂದಿಗೆ ಪಾವತಿ ಮಾಡಿ ರಸೀದಿ ಪಡೆಯತಕ್ಕದ್ದು. 3.ಹರಾಜು ಷರತ್ತುಗಳನ್ನು ಉಲ್ಲಂಘಿಸಿದ್ದಲ್ಲಿ ಹರಾಜನ್ನು ರದ್ದುಪಡಿಸುವ ಅಧಿಕಾರ ಮಹಾನಗರ ಪಾಲಿಕೆ ಆಯುಕ್ತರಿಗೆ ಇರುತ್ತದೆ. 4.ಹರಾಜು ಖಾಯಂ ಆಯಿತೆಂದು ವಿಷಯವನ್ನು ಅಖೈರು ಸವಾಲುದಾರರಿಗೆ ಬರವಣಿಗೆ ಮೂಲಕ ತಿಳಿಯಪಡಿಸಿದ ಕೂಡಲೇ ಸವಾಲುದಾರರನ್ನು ಗುತ್ತಿಗೆದಾರನೆಂದು (ಕಂಟ್ರಾಕ್ಟರ್) ಕರೆಯಲ್ಪಡುತ್ತಾನೆ. ಈ ರೀತಿ ಬರವಣಿಗೆ ಮೂಲಕ ಅವರ ಸವಾಲನ್ನು ಅಂಗೀಕರಿಸುವುದಾಗಿ ತಿಳಿಸಿದ ನಂತರ ಹರಾಜು ಇಸ್ತಿಯಾರ್‌ನಲ್ಲಿ ವಿಧಿಸಿರುವ ಷರತ್ತಿನಂತೆ ತಾನು ಮತ್ತು ತನ್ನ ವಾರಸುದಾರರು ಬದ್ದರಾಗಿರುತ್ತೇನೆಂತಲು ಮತ್ತು ಕೆಳಗೆ ನಮೂದಿಸಿರುವ ಆಗಿಂದ್ದಾಗ್ಗೆ ಮಹಾನಗರ ಪಾಲಿಕೆ ಕಛೇರಿಯಿಂದ ಕೊಡಬಹುದಾದ ಆದೇಶಗಳಿಗೆ ಬದ್ದರಾಗಿರುತ್ತಾರೆಂದು ಛಾಪಾ ಕಾಗದಲ್ಲಿ ಸ್ಟ್ಯಾಂಪ್ ಕಾಯ್ದೆ(ಸ್ಟ್ಯಾಂಪ್ ರೂಲ್ಸ್) ಅನುಸರಿಸಿ ಬರೆದ ಸ್ವಂತ ಖರ್ಚಿನಿಂದ ರಿಜಿಸ್ಟರ್ ಮಾಡಿಸತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ದುಸರಾ ಹರಾಜು ಮಾಡಲು ಆಗುವ ನಷ್ಟವನ್ನು ಮೊದಲನೇ ಹರಾಜುದಾರರು ಕಟ್ಟಿಕೊಡಬೇಕಾಗುತ್ತದೆ. 5.ಗುತ್ತಿಗೆದಾರು (ಕಂಟ್ರಾಕ್ಟರ್) ಯಾವುದೇ ಕಾರಣದಿಂದಲೂ ಒಳಗುತ್ತಿಗೆ ಮಾಡಕೂಡದು, ಈ ರೀತಿ ಮಾಡಿದ್ದು ಕಂಡುಬಂದಲ್ಲಿ ಸದರಿ ಗುತ್ತಿಗೆಯನ್ನು ತಪ್ಪಿಸಿ ಠೇವಣಿಯ ಹಣವನ್ನು ಮುಟ್ಟುಗೋಲು ಹಾಕಿಕೊಂಡು ಕೂಡಲೇ ಅವರ ಹಕ್ಕನ್ನು ರದ್ದುಪಡಿಸಿ ಮಹಾನಗರ ಪಾಲಿಕೆ ಸ್ವಾದೀನಪಡಿಸಿಕೊಳ್ಳಲಾಗುವುದು. ಮತ್ತು ಗುತ್ತಿಗೆವಾಯಿದೆಯವರಿಗೆ ಆಗಬಹುದಾದ ನಷ್ಟಕ್ಕೆ ಅವರನ್ನೇ ಗುರಿಪಡಿಸಿ ಅವರಿಂದ ವಸೂಲಿ ಮಾಡಲಾಗುವುದು 6.ಫುಡ್‌ಕೋರ್ಟ್‌ನಿಂದ ಬರುವಂತಹ ತ್ಯಾಜ್ಯವನ್ನು ಹಸಿಕಸ - ಒಣಕಸಗಳನ್ನಾಗಿ ಬೇರ್ಪಡಿಸಿ ಪ್ರತ್ಯೇಕ ಆಟೋ ಟಿಪ್ಪರ್‌ನಲ್ಲಿ ವಿಲೇವಾರಿ ಮಾಡುವುದು ಹಾಗೂ ಸ್ವಚ್ಚತೆ ಕಾಪಾಡುವುದು ಟೆಂಡರ್‌ದಾರರ ಜವಾಬ್ದಾರಿಯಾಗಿರುತ್ತದೆ. 7.ಗುತ್ತಿಗೆದಾರರಿಂದ ಬರಬೇಕಾದ ಮೊಬಲಗು ಮಹಾನಗರ ಪಾಲಿಕೆ ಇಸ್ತಿಹಾರ್ ಚಾಪ್ಟರ್ 12 ರಲ್ಲಿ ದತ್ತವಾಗಿರುವ ಮೇರೆಗೆ ವಸೂಲಿ ಮಾಡುವುದಕ್ಕು ಮಹಾನಗರ ಪಾಲಿಕೆಗೆ ಅಧಿಕಾರವಿರುತ್ತದೆ. 8.ಗುತ್ತಿಗೆದಾರರಿಂದ ಬರಬೇಕಾದ ಮೊಬಲಗು ಪುರಸಭಾ ಕಾಯ್ದೆ 1964ರ ಅನುಸೂಚಿ 10 ಮತ್ತು 11 ರ ಪ್ರಕರಣ 142 ಮತ್ತು 143ರಂತೆ ದತ್ತವಾಗಿರುವ ಮೇರೆಗೆ ವಸೂಲಿ ಮಾಡುವುದಕ್ಕು ಮಹಾನಗರ ಪಾಲಿಕೆಗೆ ಅಧಿಕಾರವಿರುತ್ತದೆ. 9.ಗುತ್ತಿಗೆದಾರನಾಗಲಿ, ಆತನ ನೌಕರನಾಗಲಿ ಹರಾಜು ಇಸ್ತಿಹಾರ್ ಷರತ್ತು ಅಥವಾ ಹುಕುಂ ಉಲ್ಲಂಘಡಿಸಿದಲ್ಲಿ ಆತನ ಗುತ್ತಿಗೆ ತಪ್ಪಿಸಿ ಸೂಕ್ತ ರೀತಿ ವಿಲೇವಾರಿ ಮಾಡಲು ಆಯುಕ್ತರಿಗೆ ಅಧಿಕಾರವಿರುತ್ತದೆ. 10.ಚಾಲ್ತಿ ಸಾಲಿನಲ್ಲಿ ಹಿಂದಿನ ಸಾಲಿನಲ್ಲಿ ಸುಸ್ತಿದಾರರಾಗಿರುವ ಗುತ್ತಿಗೆದಾರರು (ಕಂಟ್ರಾಕ್ಟರ್) ತಮ್ಮ ಖಾತೆಯನ್ನು ಬೇಬಾಕಿ ಮಾಡದ ಹೊರತ್ತು ಹರಾಜಿನಲ್ಲಿ ಸವಾಲು ಮಾಡಲು ಅಧಿಕಾರವಿರುವುದಿಲ್ಲ. 11.ಗುತ್ತಿಗೆದಾರರು ಆಂಗಿದ್ದಾಂಗೆ ಮಹಾನಗರ ಪಾಲಿಕೆ ಕಛೇರಿಯಿಂದ ಕೊಡತಕ್ಕ ಹುಕುಂಗಳಿಗೆ ಬದ್ದರಾಗಿರತಕ್ಕದ್ದು. 12.ಬಿಡ್‌ದಾರರು ಯಾವ ಕಾರಣದಿಂದಲೂ ಖಿಸ್ತು ಮೊಬಲಗನ್ನು ರೆಮೀಷನ್ ಮಾಡುವುದಾಗಲೀ ಪರಿಹಾರ ದ್ರವ್ಯವನ್ನು ಕೇಳಲು ಅವಕಾಶವಿರುವುದಿಲ್ಲ. 13.ಬಿಡ್‌ದಾರರು ಸರ್ಕಾರದಿಂದ ಮುಂದೆ ಬರುವ ಕಾನೂನು ಪ್ರಕಾರ ನಡೆದುಕೊಳ್ಳುವುದಕ್ಕು ಸಂದರ್ಭಾನುಸಾರ ಮಹಾನಗರ ಪಾಲಿಕೆಯವರು ಮಾಡಬಹುದಾದ ಬದಲಾವಣೆಗೆ ಒಳಪಟ್ಟಿರತಕ್ಕದ್ದು. 14.ಬಿಡ್‌ದಾರರು ತಾನು ವಸೂಲು ಮಾಡುವ ಬಗ್ಗೆ ಲೆಕ್ಕವನ್ನು ಇಡುವುದಲ್ಲದೇ, ತನಿಖೆಗೆ ಬಂದಾಗ ಅಧಿಕಾರಿಗಳು ಅಪೇಕ್ಷಿಸಿದಲ್ಲಿ ಹಾಜರುಪಡಿಸಬೇಕು. 15.ಕಂಟ್ರಾಕ್ಟರ್‌ದಾರರು ಪ್ರತಿ ಬಾಬಿಗೂ ಮಹಾನಗರ ಪಾಲಿಕೆಯಿಂದ ನಿಗದಿಪಡಿಸಿರುವ ಧರದಂತೆ ಅಚ್ಚಾದ ರಶೀದಿಯನ್ನು ಪಾರ್ಟಿಗೆ ಕೊಡಬೇಕು ಹಾಗೂ ನಿಗದಿಪಡಿಸಿದ್ದಕ್ಕಿಂತ ಹೆಚ್ಚನ ಹಣವನ್ನು ವಸೂಲಿ ಮಾಡತಕ್ಕದ್ದಲ್ಲ. 16.ಷೆಡ್ಯೂಲ್ ದರದ ವಿಚಾರದಲ್ಲಿ ಏನಾದರೂ ತಕರಾರು ಬಂದರೆ ಮಹಾನಗರ ಪಾಲಿಕೆಯಿಂದ ಅಧಿಕಾರ ಹೊಂದಿರುವವರ ತೀರ್ಮಾನವೇ ಅಂತಿಮ ತೀರ್ಮಾನವಾಗಿರುತ್ತದೆ. 17.ಒಂದು ಅಂಗಡಿಯಲ್ಲಿರತಕ್ಕ ವಿವಿಧ ಸಾಮಾನುಗಳನ್ನು ಬೇರೆ ಬೇರೆಯೆಂದು ಪರಿಗಣಿಸದೆ ಒಂದು ಅಂಗಡಿಯನ್ನು ಮಾಡಬೇಕು. ಷರಾ:- ಇಸ್ತಿಹಾರ್ ಒಳಗೊಂಡ ಷರತ್ತುಗಳಿಗೆ ಬದಲಾವಣೆ ಮಾಡಲು ಹರಾಜು ವೇಳೆಯಲ್ಲಿ ಅವಶ್ಯಕತೆ ಕಂಡು ಬಂದಲ್ಲಿ ನಿಭಂದನೆಗಳನ್ನು ಸೇರಿಸಲು ಆಡಳಿತಾಧಿಕಾರಿಗಳು/ಆಯುಕ್ತರಿಗೆ ಅಧಿಕಾರ ಇರುತ್ತದೆ.

ವಾಸಾಸಂಇ/ಹಿಸನಿ/ಹಾಸನ/177/ಕೆಎಸ್‌ಎಂಸಿಎ/2026-27
ಸಹಿ/-ಆಯುಕ್ತರು, ಹಾಸನ ಮಹಾನಗರ ಪಾಲಿಕೆ, ಹಾಸನ.

ಸಂಪುಟ ರಚನೆಯ ಕಸರತ್ತು

← ಮೊದಲಪುಟದಿಂದ

ಅದರಲ್ಲಿಯೂ ಸಿದ್ದರಾಮಯ್ಯನವರ ಸಂಪುಟದಲ್ಲಿದ್ದ 30 ಸಚಿವರಲ್ಲಿ ನಾಲ್ಕೈದು ಮಂದಿ ಯನ್ನು ಬಿಟ್ಟು ಇನ್ನುಳಿದವರೆಲ್ಲ ಪುನರಾಯ್ಕೆ ಬಯಸುತ್ತಿದ್ದರೆ, ಇನ್ನೊಂದೆಡೆ ಎರಡಕ್ಕಿಂತ ಹೆಚ್ಚು ಬಾರಿ ಗೆಲುವು ಸಾಧಿಸಿರುವ 60ಕ್ಕೂ ಹೆಚ್ಚು ಶಾಸಕರು ಸಚಿವ ಸ್ಥಾನದ ಮೇಲೆ ಕಣ್ಣಿಟ್ಟಿದ್ದಾರೆ. ಸಿದ್ದರಾಮಯ್ಯ ರಾಜೀನಾಮೆಯ ಬೆನ್ನಲ್ಲೇ ಹತ್ತಾರು ಸಂಭ್ಯಾವ ಪಟ್ಟಿಗಳು ಓಡಾಡುತ್ತಿವೆ. ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಪ್ರಮಾಣವಚನ ಸ್ವೀಕರಿಸುವಾಗಲೇ ಎಂಟತ್ತು ಮಂದಿ ಸಂಪುಟಕ್ಕೆ ಸೇರ್ಪಡೆಯಾಗಲಿದ್ದಾರೆ ಎನ್ನುವ ಸುದ್ದಿಗಳು ಹರಿದಾಡುತ್ತಿವೆ. ಆದರೆ ಕಾಂಗ್ರೆಸ್‌ನ ವಿಶ್ವಾಸಾರ್ಹ ಮೂಲಗಳ ಪ್ರಕಾರ, ದೆಹಲಿ ಮಟ್ಟದಲ್ಲಿ ಯಾವ ಪಟ್ಟಿಯೂ ಅಂತಿಮವಾಗಿಲ್ಲ. ಸುರ್ಜೇವಾಲ ಹಾಗೂ ವೇಣುಗೋಪಾಲ್ ದೆಹಲಿಗೆ ಶನಿವಾರ ರಾತ್ರಿ ತೆರಳಿದ್ದು, ಭಾನುವಾರ ಬೆಳಗ್ಗೆ ಒಂದು ಹಂತದ ಸಭೆ ನಡೆಸಿ ಬಳಿಕ ಡಿ.ಕೆ.ಶಿವಕುಮಾರ್ ಅವರನ್ನು ಕರೆಸಿಕೊಂಡು ಚರ್ಚಿಸಿ ಅಂತಿಮಗೊಳಿಸುವ ಸಾಧ್ಯತೆಯಿದೆ ಎನ್ನಲಾಗಿದೆ.

ಮತ್ತೊಂದು ಮೂಲದ ಪ್ರಕಾರ, ಬುಧವಾರ ಡಿ.ಕೆ.ಶಿವಕುಮಾರ್ ಅವರೊಬ್ಬರೇ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಲಿದ್ದಾರೆ. ತೀರಾ ಅನಿವಾರ್ಯವೆಂದರೆ ಆರೇಳು ಸಚಿವರು ಡಿಕೆ ಜತೆ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ರಾಜ್ಯಸಭಾ ನಾಮಪತ್ರ ಪ್ರಕ್ರಿಯೆ ಮುಗಿದ ಬಳಿಕ ಎರಡನೇ ಹಂತದಲ್ಲಿ ಸಂಪುಟ ವಿಸ್ತರಣೆ ಮಾಡಿಕೊಳ್ಳುವ ಸಾಧ್ಯತೆಯಿದೆ. ದೆಹಲಿಯಲ್ಲಿ ಡಿಕೆ ನಾಯಕರೊಂದಿಗೆ ಚರ್ಚಿಸಿದ ಬಳಿಕ ಈ ಎಲ್ಲ ಗೊಂದಲಗಳಿಗೆ ಸ್ಪಷ್ಟನೆ ಸಿಗಲಿದೆ ಎಂದು ತಿಳಿದುಬಂದಿದೆ.

ರಾಜ್ಯಸಭೆ, ವಿಧಾನಪರಿಷತ್ ಬಗ್ಗೆಯೂ ಚರ್ಚೆ: ರಾಜ್ಯಸಭೆಗೆ ನಾಮಪತ್ರ ಸಲ್ಲಿಸಲು ಜೂನ್ 12 ಕೊನೆಯ ದಿನವಾಗಿರುವುದರಿಂದ ಡಿ.ಕೆ.ಶಿವಕುಮಾರ್ ಅವರು ದೆಹಲಿಗೆ ತೆರಳಿದ ವೇಳೆಯೇ ರಾಜ್ಯಸಭೆ ಹಾಗೂ ವಿಧಾನ ಪರಿಷತ್ ಚುನಾವಣೆಗೆ ಅಭ್ಯರ್ಥಿಗಳನ್ನು ಅಂತಿಮಗೊಳಿಸುವ ಸಾಧ್ಯತೆಯಿದೆ. ರಾಜ್ಯಸಭೆಗೆ ಕರ್ನಾಟಕದಿಂದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮರುಆಯ್ಕೆ ಖಚಿತವಾಗಿದೆ. ಇನ್ನುಳಿದ ಎರಡು ಸ್ಥಾನಗಳಿಗೆ ಆಂಧ್ರಪ್ರದೇಶ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷೆ ಶರ್ಮಿಳಾ ರೆಡ್ಡಿ, ಎಐಸಿಸಿ ಮಾಧ್ಯಮ ಮತ್ತು ಪ್ರಚಾರ ಸಮಿತಿ ಅಧ್ಯಕ್ಷ ಪವನ್ ಖೇರಾ ಅವರನ್ನು ಸೇರಿಸಲು ಹೈಕಮಾಂಡ್ ಚಿಂತನೆ ನಡೆಸಿದೆ.

ಮಳೆಗೆ ಗೋಡೆ ಕುಸಿತ: 7 ಮಂದಿ ಪಾರು

ಕೋಲಾರ: ಭಾರೀ ಮಳೆಗೆ ಗೋಡೆ ಕುಸಿದಿದ್ದು, ಮನೆಯಲ್ಲಿದ್ದ 7 ಮಂದಿ ಪ್ರಾಣಾಪಾಯದಿಂದ ಪಾರಾಗಿರುವ ಘಟನೆ ಕೋಲಾರ ಜಿಲ್ಲೆಯ ಕೆಜಿಎಫ್ ನಗರದಲ್ಲಿ ನಡೆದಿದೆ. ಕೆಜಿಎಫ್‌ನ ಮಾರಿಕುಪ್ಪಂನ ಕೃಷ್ಣಮೂರ್ತಿ ಎಂಬವರ ಮನೆಯ ಒಂದು ಭಾಗದ ಗೋಡೆ ಸಂಪೂರ್ಣ ಕುಸಿದಿದೆ.

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ
ನಂ.ಲೋ.ಇ./ಚಿ.ವಿ./ಸ.ಇಂ.-2/ಟೆಂಡರ/2026-27/1281 ದಿನಾಂಕ:30/05/202612

ಇ-ಟೆಂಡರ್/ಅಲ್ಪಾವಧಿ ಇ-ಮರುಟೆಂಡರ್ ಪ್ರಕಟಣೆ (Call-1 & Call-2)

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2025-26 ನೇ ಸಾಲಿನ ಲೆಕ್ಕ ಶೀರ್ಷಿಕೆ 4059-ನ್ಯಾಯಾಂಗ ಇಲಾಖಾ ಕಟ್ಟಡಗಳ ನಿರ್ಮಾಣ ಅಡಿ 2 ಕಾಮಗಾರಿಗಳು ಮತ್ತು 5054-ಜಿಲ್ಲಾ ಮುಖ್ಯ ರಸ್ತೆ ಸುಧಾರಣೆ ಅಡಿ 1 ಕಾಮಗಾರಿ, ಹೀಗೆ ಒಟ್ಟು 3 ಕಾಮಗಾರಿಗಳು ಇದ್ದು, ಗುತ್ತಿಗೆಗೆ ಇಟ್ಟ ಕನಿಷ್ಠ ಮೊತ್ತ ರೂ. 160.00 ಲಕ್ಷ ಹಾಗೂ ಗರಿಷ್ಠ ಮೊತ್ತ ರೂ. 624.00 ಲಕ್ಷ ಇರುವ ಕಾಮಗಾರಿಗೆ ಇ-ಟೆಂಡರ್/ಅಲ್ಪಾವಧಿ ಇ-ಮರುಟೆಂಡರ್ ಆವ್ಹಾನಿಸಲಾಗಿದೆ.

ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು

1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:15-06-2026 ರಂದು (11.00 ಗಂಟೆಗೆ), 2)ಆಕ್ಷೇಪಣೆ - ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:16-06-2026 (ಸಾಯಂಕಾಲ 5.30 ಗಂಟೆಯ ವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ :18-06-2026 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 20-06-2026 (ಸಾಯಂಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆ ಯಾದ ನಂತರ", 6)ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ-ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.

ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬಸೈಟ್ kppp.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.
DIPR/BGM/RO-NO-347/KSMCA/2026-27

ಕರ್ನಾಟಕ ಸರ್ಕಾರ
ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಕಾರ್ಯಪಾಲಕ ಅಭಿಯಂತರರವರ ಕಛೇರಿ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರಜಿಲ್ಲೆ, ಬೆಂಗಳೂರು ಜಿಲ್ಲಾ ಪಂಚಾಯತಿ ಕಟ್ಟಡ, ಮೊದಲನೇ ಮಹಡಿ, ಎಸ್.ಕರಿಯಪ್ಪ ರಸ್ತೆ, ಬನಶಂಕರಿ (ಬನಶಂಕರಿ ದೇವಸ್ಥಾನದ ಹತ್ತಿರ), ಬೆಂಗಳೂರು - 560070.
ಫೋನ್ ನಂ. 080-26716046 ವೆಬ್‌ಸೈಟ್: http://kppp.karnataka.gov.in
ಸಂಖ್ಯೆ:ಕಾಅ/ಪಂರಾಇಂವಿ/ಬೆಂನ/ಎಇ-1/ಟೆಂಡರ್/13/2026-27 ದಿನಾಂಕ: 29.05.2026

ಕೆ.ಪಿ.ಪಿ.ಪಿ. ಪೋರ್ಟಲ್ ಅಲ್ಪಾವಧಿ ಟೆಂಡರ್ ಪ್ರಕಟಣೆ ನೋಟೀಸ್ (ದ್ವಿ-ಲಕೋಟೆ)

ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಕಛೇರಿಯಿಂದ MLA Grant ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ದ್ವಿ-ಲಕೋಟೆಯಲ್ಲಿ ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: **06.06.2026 ರ ಸಂಜೆ 4.00 ಗಂಟೆಯವರೆಗೆ** ಪಡೆದು ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿವಾರು ವಿವರಗಳನ್ನು ವೆಬ್ ಸೈಟ್ ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್ ಸೈಟ್ http://www.KPPP.karnataka.gov.in ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/-
ಕಾರ್ಯಪಾಲಕ ಅಭಿಯಂತರರು
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ
ಬೆಂಗಳೂರು ನಗರ, ಬೆಂಗಳೂರು.
ವಾಸಾಸಂಇ/ವಾಪ್ರ/907/ಎಸ್‌ಎಸ್‌ಪಿ/2026-27

ಸಮಾಚಾರ ಸಣ್ಣದಲ್ಲ

ಚಾಮುಂಡೇಶ್ವರಿಯಿಂದ ಎಚ್‌ಡಿಕೆ ಸ್ಪರ್ಧಿಸಲಿ



ಮೈಸೂರು: ಎಚ್.ಡಿ.ಕುಮಾರಸ್ವಾಮಿ ಅವರು 2028ರ ವಿಧಾನಸಭಾ ಚುನಾವಣೆಯಲ್ಲಿ ಮೈಸೂರಿನ ಚಾಮುಂಡೇಶ್ವರಿ ಕ್ಷೇತ್ರದಿಂದ ಕಣಕ್ಕಿಳಿಯಬೇಕು ಎಂಬುದು ನನ್ನ ಹಾಗೂ ಮುಖಂಡರ ಅಪೇಕ್ಷೆಯಾಗಿದೆ ಎಂದು ಜೆಡಿಎಸ್ ರಾಜ್ಯ ಘಟಕದ ಕಾರ್ಯಾಧ್ಯಕ್ಷ ಸಾ.ರಾ. ಮಹೇಶ್ ಹೇಳಿದರು. ಇಲ್ಲಿನ ದೇವೇಗೌಡ ವೃತ್ತ ಸಮೀಪದ ಎಂ ಪ್ರೋ ಪ್ಯಾಲೇಸ್ ಹೋಟೆಲ್ ಸಭಾಂಗಣದಲ್ಲಿ ಶನಿವಾರ ಜಿಲ್ಲಾ ಪಂಚಾಯಿತಿ ಮತ್ತು ನಗರಪಾಲಿಕೆ ಮಾಜಿ ಸದಸ್ಯ ಮಾದೇಗೌಡ ಅವರನ್ನು ಜೆಡಿಎಸ್‌ಗೆ ಮರಳಿ ಬರಮಾಡಿಕೊಂಡು ಮಾತನಾಡಿದ ಅವರು, ಮುಂಬರುವ ಚುನಾವಣೆಯಲ್ಲಿ ಜೆಡಿಎಸ್-ಬಿಜೆಪಿ ಸಮ್ಮಿಶ್ರ ಸರಕಾರ ಬರಬೇಕಾದರೆ ಈ ತೀರ್ಮಾನವನ್ನು ಅವರು ಮಾಡಬೇಕಾಗಿದೆ. ಇದರಿಂದ ಪಕ್ಷಕ್ಕೆ ಶಕ್ತಿ ಬರುತ್ತದೆ ಹಾಗೂ ಇಡೀ ಜಿಲ್ಲೆಗೆ ಅನುಕೂಲವೂ ಆಗುತ್ತದೆ ಎಂಬುದು ನಮ್ಮ ಒತ್ತಾಯವಾಗಿದೆ. ಈ ವಿಷಯದಲ್ಲಿ ತೀರ್ಮಾನ ಕೈಗೊಳ್ಳುವುದು ಅವರಿಗೆ ಬಿಟ್ಟಿದ್ದು ಎಂದರು.

ಜೂನ್ 1ರಂದು ಬಿಜೆಪಿ ಪ್ರತಿಭಟನೆ

ಕಲಬುರಗಿ: ಆಳಂದ ಪಟ್ಟಣದ ರಾಘವ ಚೈತನ್ಯ ಶಿವಲಿಂಗ ಪೂಜೆಗೆ ಅಡ್ಡಿಪಡಿಸಿ, ಗಲಭೆ ಸೃಷ್ಟಿಸಿದ್ದ ಆರೋಪಿಗಳ ಮೇಲಿನ ಮೊಕದ್ದಮೆಗಳನ್ನು ರಾಜ್ಯ ಸರಕಾರ ವಾಪಸ್ ಪಡೆದಿರುವುದನ್ನು ಖಂಡಿಸಿ ಜೂನ್ 1 ರಂದು ನಗರದಲ್ಲಿ ಬಿಜೆಪಿ ಬೃಹತ್ ಪ್ರತಿಭಟನೆ ಹಮ್ಮಿಕೊಂಡಿದೆ ಎಂದು ಮಾಜಿ ಶಾಸಕ ರಾಜಕುಮಾರ ಪಾಟೀಲ್ ತೇಲ್ಕೂರ ತಿಳಿಸಿದ್ದಾರೆ. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ನೇತೃತ್ವದಲ್ಲಿ ಅಂದು ಬೆಳಗ್ಗೆ 9 ಗಂಟೆಗೆ ಸರ್ದಾರ್ ವಲ್ಲಭಭಾಯಿ ಪಟೇಲ್ ವೃತ್ತದಿಂದ ಡಿಸಿ ಕಚೇರಿವರೆಗೆ ಈ ಬೃಹತ್ ಪ್ರತಿಭಟನಾ ಸಮಾವೇಶ ನಡೆಯಲಿದೆ. ಈ ಹಿಂದೆ ಜಿಲ್ಲಾಧಿಕಾರಿಗಳ ಕಾರಿನ ಮೇಲೆ ಕಲ್ಲು ತೂರಾಟ ನಡೆಸಿದ ಗೂಂಡಾಗಳ ಮೇಲಿನ ಕೇಸ್‌ಗಳನ್ನು ಸ್ಪೀಕರ್ ಯು.ಟಿ. ಖಾದರ್ ಶಿಫಾರಸಿನ ಮೇರೆಗೆ ವಾಪಸ್ ಪಡೆದಿರುವುದು ದೇಶದಲ್ಲೇ ಪ್ರಥಮ ಹಾಗೂ ಅಕ್ಷಮ್ಯ ಅಪರಾಧ ಎಂದು ತೇಲ್ಕೂರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಇಂಧನ ಉಳಿಸಲು ಸರಳ ಕಾರ್ಯಕ್ರಮ

ಬೆಂಗಳೂರು: ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮಕ್ಕೆ ಲೋಕ ಭವನ ಸಾಕ್ಷಿಯಾಗಲಿದೆ. ವಿಧಾನಸೌಧ ಮೆಟ್ಟಿಲುಗಳ ಮೇಲೆ ಡಿಕೆಶಿ ಪದಗ್ರಹಣ ಮಾಡಲಿದ್ದಾರೆ ಎಂದು ಹೇಳಲಾಗುತ್ತಿತ್ತು. ಇದೀಗ ಜೂನ್ 3ರಂದು ಲೋಕಭವನದ ಗಾಜಿನಮನೆಯಲ್ಲಿ ನಡೆಯಲಿದೆ ಎಂದು ಕಾಂಗ್ರೆಸ್ ಅಧಿಕೃತವಾಗಿ ತಿಳಿಸಿದೆ. ಈ ಬಗ್ಗೆ ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ. ಚಂದ್ರಶೇಖರ್ ಮಾತನಾಡಿದ್ದು, ನೂತನ ಸಿಎಂ ಪ್ರಮಾಣವಚನ ಬಗ್ಗೆ ಇಲ್ಲಸಲ್ಲದ ಸುದ್ದಿಗಳು ಹರಿದಾಡುತ್ತಿವೆ. ವಿಧಾನಸೌಧ ದಲ್ಲಿ ಪದಗ್ರಹಣ ನಡೆಯುತ್ತಿಲ್ಲ, ಬದಲಾಗಿ ಜೂನ್ 3ರಂದು ಲೋಕಭವನದಲ್ಲಿ ನಡೆಸಲು ಪಕ್ಷ ತೀರ್ಮಾನಿಸಿದೆ. ತೈಲ ಬೆಲೆ ಏರಿಕೆ ಹಿನ್ನೆಲೆ ದೊಡ್ಡ ಮಟ್ಟದಲ್ಲಿ ಕಾರ್ಯಕ್ರಮ ಆಯೋಜನೆ ಮಾಡುತ್ತಿಲ್ಲ. ಅಲ್ಲದೆ ಸಾರ್ವಜನಿಕರಿಗೆ ತೊಂದರೆ ಆಗಬಾರದೆಂಬ ದೃಷ್ಟಿಯಿಂದ ಆಡಂಬರದ ಕಾರ್ಯಕ್ರಮ ಬೇಡ ಎಂದು ತೀರ್ಮಾನಿಸಲಾಗಿದೆ. ಇದಕ್ಕೆ ಅಭಿಮಾನಿಗಳು ಹಾಗೂ ಪಕ್ಷದ ಬೆಂಬಲಿಗರು ಸಹಕರಿಸಬೇಕು ಎಂದು ಮನವಿ ಮಾಡಿದರು.

ಕಾರ್ಟೂನ್

ದಿನ ವಿಶೇಷ

31 ಮೇ 2026 ಭಾನುವಾರ

» ಸೂರ್ಯೋದಯ	: 5-43
» ಸೂರ್ಯಾಸ್ತ	: 7-04
» ತಿಥಿ	: ಹುಣ್ಣಿಮೆ
» ನಕ್ಷತ್ರ	: ಅನುರಾಧ
» ಸಂವತ್ಸರ	: ಪರಾಭವ
» ಅಯನ	: ಉತ್ತರಾಯನ
» ಋತು	: ಗ್ರೀಷ್ಮ
» ಮಾಸ	: ಅಧಿಕ ಜ್ಯೇಷ್ಠ
» ಪಕ್ಷ	: ಶುಕ್ಲಪಕ್ಷ

ಸಿದ್ದರಾಮಯ್ಯ ಬೆಂಬಲದೊಂದಿಗೆ ಡಿಕೆ ಶಿವಕುಮಾರ್ ನಾಯಕತ್ವದಲ್ಲಿ 2028ಕ್ಕೆ ಮತ್ತೆ ಅಧಿಕಾರಕ್ಕೇರುವ ವಿಶ್ವಾಸ

ಸಿಎಲ್‌ಪಿ ನಾಯಕರಾಗಿ ಡಿಕೆಶಿ ಆಯ್ಕೆ: ಕೆಸಿವಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕಾಂಗ್ರೆಸ್ ಶಾಸಕಾಂಗ ಪಕ್ಷದ ನೂತನ ನಾಯಕರಾಗಿ ಡಿ.ಕೆ.ಶಿವಕುಮಾರ್ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಹೆಮ್ಮೆಯಿಂದ ಹೇಳುತ್ತೇನೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರು ಪ್ರಕಟಿಸಿದರು.

ವಿಧಾನಸೌಧದಲ್ಲಿ ಶನಿವಾರ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ಬಳಿಕ ಮಾತನಾಡಿದ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ಕಾಂಗ್ರೆಸ್ ಪಕ್ಷದ ಹೈಕಮಾಂಡ್ ಡಿಸಿಎಂ ಡಿ.ಕೆ. ಶಿವಕುಮಾರ್ ಅವರ ಹೆಸರನ್ನು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸ್ಥಾನಕ್ಕೆ ಸೂಚಿಸಿತು. ಸಭೆಯಲ್ಲಿ ಹಂಗಾಮಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ಶಿವಕುಮಾರ್ ಅವರ ಹೆಸರನ್ನು ಪ್ರಸ್ತಾಪಿಸಿದ್ದು, ಕಾಂಗ್ರೆಸ್ ಶಾಸಕಾಂಗ ಸಭೆಯು ಸರ್ವಾನುಮತದಿಂದ ಒಪ್ಪಿಕೊಂಡಿತು. ಡಾ.ಜಿ.ಪರಮೇಶ್ವರ ಅವರು ಈ ಪ್ರಸ್ತಾವನೆಯನ್ನು ಅನುಮೋದಿಸಿದರು ಎಂದು ಮಾಹಿತಿ ನೀಡಿದರು.

ಜೂನ್ 3ರಂದು ಪ್ರಮಾಣವಚನ ಸ್ವೀಕಾರ

ಶಿವಕುಮಾರ್ ಅವರು ರಾಜ್ಯಪಾಲರನ್ನು ಭೇಟಿ ಮಾಡಿ, ಮುಖ್ಯಮಂತ್ರಿಯಾಗಿ ಸರಕಾರ ರಚನೆಯ ಹಕ್ಕು ಮಂಡಿಸಲಿದ್ದಾರೆ. ಜೂನ್ 3ರಂದು ಶಿವಕುಮಾರ್ ಅವರು ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಈ ಅಧಿಕಾರ ಹಸ್ತಾಂತರದಿಂದ ಕಾಂಗ್ರೆಸ್ ಪಕ್ಷಕ್ಕೆ ಸಂಕಷ್ಟ ಎದುರಾಗಲಿದೆ ಎಂದು ಅನೇಕರು ನಿರೀಕ್ಷಿಸಿದ್ದರು. ಆದರೆ ನಮ್ಮದು ಕುಟುಂಬವಿದ್ದಂತೆ. ಎಲ್ಲರೂ ಸಿದ್ದರಾಮಯ್ಯ ಅವರ ನಡೆ ಹೇಗಿರಲಿದೆ ಎಂದು ಕೇಳುತ್ತಿದ್ದರು. ಆದರೆ ಸಿದ್ದರಾಮಯ್ಯ ಅವರು ನನ್ನ ಹೃದಯದಲ್ಲಿ ಕೇವಲ ಕಾಂಗ್ರೆಸ್ ಪಕ್ಷವಿದೆ. ಕಾಂಗ್ರೆಸ್ ಹೈಕಮಾಂಡ್ ನಿರ್ಧಾರವನ್ನು ಪಾಲಿಸುತ್ತೇನೆ ಎಂದು ಉತ್ತರ ನೀಡಿದ್ದರು. ಸಿದ್ದರಾಮಯ್ಯ ಅವರು ತಮ್ಮ ನಡೆ ಮೂಲಕ ಸಾಬೀತಪಡಿಸಿದರು. ಇದು ಕಾಂಗ್ರೆಸ್ ಒಂದು ಕುಟುಂಬ ಎಂಬುದಕ್ಕೆ ಸಾಕ್ಷಿ ಎಂದು ಬಣ್ಣಿಸಿದರು.

ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಮಾತನಾಡಿ, ಸಿದ್ದರಾಮಯ್ಯ ಅವರಿಗೆ ಕರ್ನಾಟಕ ಹಾಗೂ ಕಾಂಗ್ರೆಸ್ ಪಕ್ಷಕ್ಕಾಗಿ ಸಲ್ಲಿಸಿದ ಅಮೂಲ್ಯ ಸೇವೆಗೆ ಹೃತ್ಪೂರ್ವಕ ಧನ್ಯವಾದಗಳು. ಕರ್ನಾಟಕದ ಕಾಂಗ್ರೆಸ್ ಮುಖ್ಯಮಂತ್ರಿಯಾಗಿ ಅವರು ನಿರ್ವಹಿಸಿದ ಎಂಟು ವರ್ಷಗಳ ಅವಧಿ, ದೂರದೃಷ್ಟಿಯ ನಾಯಕತ್ವ, ಸಾಮಾಜಿಕ ನ್ಯಾಯದತ್ತ ಅಚಲ ಬದ್ಧತೆ ಹಾಗೂ ಜನಕಲ್ಯಾಣ ಮತ್ತು ಅಭಿವೃದ್ಧಿಯನ್ನು ಸಮಾನವಾಗಿ ಮುನ್ನಡೆಸಿದ ಸುವರ್ಣಯುಗವಾಗಿ ಸದಾ ನೆನಪಿನಲ್ಲಿ ಉಳಿಯಲಿದೆ. ವೈಯಕ್ತಿಕವಾಗಿ ಅವರೊಂದಿಗೆ ಕೆಲಸ ಮಾಡುವ, ಅವರ ಅನುಭವ ಮತ್ತು ನಾಯಕತ್ವದಿಂದ ಕಲಿಯುವ ಹಾಗೂ ಕಾಂಗ್ರೆಸ್‌ನ ಅಭಿವೃದ್ಧಿಯೊಂದಿಗೆ 'ಕಲ್ಯಾಣ' ಎಂಬ ತತ್ವವನ್ನು ಸರಕಾರದ ನೀತಿಗಳಾಗಿ ರೂಪಿಸುವ ಅವಕಾಶ ನನಗೆ ದೊರೆತಿದ್ದು ಮಹತ್ತರ ಗೌರವವಾಗಿದೆ. ವಿಶೇಷವಾಗಿ, ಕಾಂಗ್ರೆಸ್‌ನ ಐದು ಗ್ಯಾರಂಟಿಗಳನ್ನು ಜನರ ಬದುಕು ಬದಲಿಸಿದ ಪರಿಣಾಮಕಾರಿ ಕಾರ್ಯಕ್ರಮಗಳಾಗಿ ಜಾರಿಗೊಳಿಸಿದ ಪಯಣ ಎಂದೆಂದಿಗೂ ಸ್ಮರಣೀಯವಾಗಿರುತ್ತದೆ ಎಂದು ಅಭಿಪ್ರಾಯಪಟ್ಟರು.

ಕಾಂಗ್ರೆಸ್ ಸಿಎಲ್‌ಪಿಗೆ ನಾಯಕರಾಗಿ ಆಯ್ಕೆಯಾದ ಡಿ.ಕೆ.ಶಿವಕುಮಾರ್ ಅವರಿಗೆ ಹಂಗಾಮಿ ಸಿಎಂ ಸಿದ್ದರಾಮಯ್ಯ, ಎಐಸಿಸಿ ಕಾರ್ಯದರ್ಶಿ ವೇಣುಗೋಪಾಲ್ ಅಭಿನಂದನೆ ಸಲ್ಲಿಸಿದರು.

ಡಿಕೆ ಹೋರಾಟವೇ ಜೀವನ: ಸುರ್ಜೇವಾಲ

ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಮಾತನಾಡಿ, ಕರ್ನಾಟಕ ಕಾಂಗ್ರೆಸ್ ಶಾಸಕಾಂಗ ಪಕ್ಷದ ಏಕಮತದಿಂದ ಆಯ್ಕೆಯಾದ ನಾಯಕರಿಗೂ ಹಾಗೂ ಕರ್ನಾಟಕದ ನೂತನ ಮುಖ್ಯಮಂತ್ರಿಯಾಗಿ ನಿಯುಕ್ತರಾದ ಡಿ.ಕೆ.ಶಿವಕುಮಾರ್ ಅವರಿಗೆ ಹೃತ್ಪೂರ್ವಕ ಅಭಿನಂದನೆ ಗಳು. ಹೋರಾಟವೇ ಜೀವನವಾಗಿಸಿಕೊಂಡಿರುವ ಅವರು, ಕಾಂಗ್ರೆಸ್ ಸಿದ್ಧಾಂತಗಳನ್ನು ರಕ್ತದಲ್ಲಿ ಬೆರೆಸಿಕೊಂಡ ನಿಷ್ಠಾವಂತ ಕಾಂಗ್ರೆಸ್ ಕಾರ್ಯಕರ್ತರು. ಅಪರೂಪದ ಸಂಘಟನಾ ಸಾಮರ್ಥ್ಯ ಹೊಂದಿದ ನಾಯಕರು. ಅದಕ್ಕಿಂತಲೂ ಮುಖ್ಯವಾಗಿ, ಏಳು ಕೋಟಿ ಕನ್ನಡಿಗರ ಮೇಲಿನ ಅಪಾರ ಪ್ರೀತಿ, ಕಾಳಜಿ ಮತ್ತು ಕರುಣೆಯನ್ನು ಹೃದಯದಲ್ಲಿ ಹೊತ್ತಿರುವ ಅವರು, ಕರ್ನಾಟಕವನ್ನು ಸಮಗ್ರ ಅಭಿವೃದ್ಧಿ ಮತ್ತು ವೈಭವದ ಹೊಸ ಎತ್ತರಗಳಿಗೆ ಕೊಂಡೊಯ್ಯುವ ಮಹತ್ವಾಕಾಂಕ್ಷಿ ಕನಸನ್ನು ಹೊಂದಿದ್ದಾರೆ. ಅವರ ಎಲ್ಲಾ ಪ್ರಯತ್ನಗಳು ಯಶಸ್ವಿಯಾಗಲಿ ಎಂದು ಹಾರೈಸುತ್ತೇನೆ ಎಂದರು.

2028ರಲ್ಲಿ ಮತ್ತೆ ಅಧಿಕಾರಕ್ಕೆ

ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಮುಖ್ಯಮಂತ್ರಿಗಳಾಗಿ ಸಿದ್ದರಾಮಯ್ಯ ಅವರ 8 ವರ್ಷಗಳ ಅತ್ಯುತ್ತಮ ಸೇವೆಯನ್ನು ಶ್ಲಾಘಿಸಲಾಗಿದೆ. ಈ ನಿರ್ಣಯವನ್ನು ಸ್ವತಃ ಡಿ.ಕೆ. ಶಿವಕುಮಾರ್ ಅವರು ಮಂಡಿಸಿದರು. ಇದು ಕಾಂಗ್ರೆಸ್ ಪಕ್ಷಕ್ಕೆ ಹೆಮ್ಮೆಯ ಕ್ಷಣ. ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರು ಹಾಗೂ ರಾಹುಲ್ ಗಾಂಧಿ ಹಾಗೂ ಸೋನಿಯಾ ಗಾಂಧಿ ಅವರ ಮಾರ್ಗದರ್ಶನದಂತೆ ಈ ಅಧಿ ಕಾರ ಹಸ್ತಾಂತರ ಮಾಡಲಾಗಿದೆ. ಸಿದ್ದರಾಮಯ್ಯ ಅವರ ಬೆಂಬಲದೊಂದಿಗೆ ಡಿ.ಕೆ.ಶಿವಕುಮಾರ್ ಅವರ ನಾಯಕತ್ವದಲ್ಲಿ ಕಾಂಗ್ರೆಸ್ ಪಕ್ಷ ಮತ್ತೆ 2028ರಲ್ಲಿ ಅಧಿಕಾರಕ್ಕೆ ಬರಲಿದೆ ಎಂದು ಭವಿಷ್ಯ ನುಡಿದರು.



ವಿಧಾನಸೌಧದಲ್ಲಿ ಶನಿವಾರ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ನೂತನ ಸಿಎಲ್‌ಪಿ ನಾಯಕ ಡಿ.ಕೆ.ಶಿವಕುಮಾರ್ ಆಯ್ಕೆಗೆ ಕಾಂಗ್ರೆಸ್ ಶಾಸಕರು ಕೈಎತ್ತಿ ಬೆಂಬಲ ಸೂಚಿಸಿದರು.

ಹಿರಿತನದ ಆಧಾರದಲ್ಲಿ ಸಚಿವ ಸ್ಥಾನ ನೀಡಿ

ಬೆಂಗಳೂರು: ನನ್ನ ಹಿರಿತನಕ್ಕೆ ತಕ್ಕಂತೆ ಸಚಿವ ಸ್ಥಾನ ನೀಡಲಿ. ನಿರ್ದಿಷ್ಟವಾಗಿ ಇಂತಹದ್ದೇ ಖಾತೆ ನೀಡಿ ಎಂದು ಹೇಳುವುದಿಲ್ಲ. ಹಿರಿತನದ ಮೇಲೆ ಖಾತೆ ನೀಡಲಿ ಎಂದು ಮಾಜಿ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ಎಂಟು ಬಾರಿ ಸಚಿವನಾಗಿದ್ದೇನೆ. ಐದು ಬಾರಿ ಶಾಸಕನಾಗಿದ್ದೇನೆ. ಸಾರಿಗೆ, ಗೃಹ ಹಾಗೂ ಬೆಂಗಳೂರು ನಗರಾಭಿವೃದ್ಧಿ ಸೇರಿದಂತೆ ವಿವಿಧ ಇಲಾಖೆಗಳ ಸಚಿವನಾಗಿ ಕಾರ್ಯನಿರ್ವಹಿಸಿದ್ದೇನೆ. ಇದೀಗ ನೂತನ ಸಿಎಂ ಆಗಿ ಡಿ.ಕೆ. ಶಿವಕುಮಾರ್ ಅವರು ಅಧಿಕಾರ ಸ್ವೀಕರಿಸಲಿದ್ದಾರೆ. ಹಿರಿತನ ಆಧಾರದ ಮೇಲೆ ಸಚಿವ ಸ್ಥಾನ ನೀಡುವಂತೆ ಕೇಳಿದ್ದೇನೆ. ನಿರ್ದಿಷ್ಟವಾಗಿ ಇಂತಹದ್ದೇ ಖಾತೆ ನೀಡಿ ಎಂದು ಕೇಳಿಲ್ಲ. ಯಾವುದೇ ಖಾತೆ ಕೊಟ್ಟರೂ ಕೆಲಸ ಮಾಡುವೆ ಎಂದರು.

ಡಿಸಿಎಂ ಹುದ್ದೆಗಳ ಸೃಷ್ಟಿ ಬಗ್ಗೆ ಪ್ರತಿಕ್ರಿಯಿಸಿದ ರಾಮಲಿಂಗಾರೆಡ್ಡಿ, ನನ್ನ ಪ್ರಕಾರ ಡಿಸಿಎಂ ಹುದ್ದೆಗಳನ್ನು ಸೃಷ್ಟಿಸಬಾರದು. ಕರ್ನಾಟಕ ಮಾತ್ರವಲ್ಲದೇ ಯಾವುದೇ ರಾಜ್ಯದಲ್ಲಿ ಡಿಸಿಎಂ ಹುದ್ದೆ ಸೃಷ್ಟಿಸುವುದು ತರವಲ್ಲ. ಇದು ನನ್ನ ವೈಯಕ್ತಿಕ ಅಭಿಪ್ರಾಯ. ಆದಾಗ್ಯೂ ಹೈಕಮಾಂಡ್ ನಿರ್ಧಾರಕ್ಕೆ ತಲೆಬಾಗುವೆ ಎಂದರು.

ಸಿಎಲ್‌ಪಿ ಸಭೆ ನಡೆಯುತ್ತಿರುವುದು ಇದೇ ಮೊದಲಲ್ಲ. ಸಿಎಲ್‌ಪಿ ಮೊದಲು ನಾಯಕನನ್ನು ಆಯ್ಕೆ ಮಾಡುತ್ತದೆ. ನಂತರ ಅದನ್ನು ರಾಜ್ಯಪಾಲರಿಗೆ ಕಳುಹಿಸಲಾಗುತ್ತದೆ. ಮುಖ್ಯಮಂತ್ರಿ ರಾಜೀನಾಮೆ ನೀಡಿದ್ದಾರೆ. ಸಂಪುಟವೂ ಅಸ್ತಿತ್ವದಲ್ಲಿಲ್ಲ. ಮುಂದಿನ ಆಡಳಿತದ ಭಾಗವಾಗಿ ಯಾರು ಇರುತ್ತಾರೆ ಎಂಬುದನ್ನು ನಿರ್ಧರಿಸುವುದು ಹೈಕಮಾಂಡ್‌ಗೆ ಬಿಟ್ಟದ್ದು. ಆದರೆ ಆಡಳಿತದಲ್ಲಿ ಯಾರೇ ಇರಲಿ, ಸಿದ್ದರಾಮಯ್ಯ ನೇತೃತ್ವದ ಆರ್ಥಿಕ ಮತ್ತು ಸಾಮಾಜಿಕ ಕಾರ್ಯ ಅಡಿಪಾಯವನ್ನು ನಾವು ಮುಂದುವರಿಸುತ್ತೇವೆ.

-ಪ್ರಿಯಾಂಕ್ ಖರ್ಗೆ, ಮಾಜಿ ಸಚಿವ

ಡಿಕೆಶಿ ಅವಧಿಯಲ್ಲಿ ಅಭಿವೃದ್ಧಿ ಕಾಣಲಿ

ಧಾರವಾಡ: ಸಿದ್ದರಾಮಯ್ಯನವರ 3 ವರ್ಷದ ಅವಧಿಯಲ್ಲಿ ರಾಜ್ಯದ ಆರ್ಥಿಕತೆ ತೀವ್ರ ಹದಗೆಟ್ಟು ಹೋಗಿದೆ. ಡಿ.ಕೆ.ಶಿವಕುಮಾರ್ ಅವ ರಿಗೆ ಒಳ್ಳೆಯ ಅವಕಾಶ ಸಿಕ್ಕಿದೆ. ಅವರ ಅವಧಿಯಲ್ಲಾದರೂ ರಾಜ್ಯ ಅಭಿವೃದ್ಧಿ ಕಾಣಲಿ ಎಂದು ವಿಧಾನ ಸಭೆ ವಿರೋಧ ಪಕ್ಷದ ಉಪನಾಯಕ ಅರವಿಂದ್ ಬೆಲ್ಲದ್ ಹೇಳಿದರು.

ಧಾರವಾಡದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, 136 ಸೀಟು ಗೆಲ್ಲಿಸಿ ಅಧಿಕಾರಕ್ಕೆ ತಂದ ಜನರಿಗೆ ರಾಜ್ಯದಲ್ಲಿ ಕಳೆದ ಮೂರು ವರ್ಷದಲ್ಲಿ ನ್ಯಾಯ ಸಿಕ್ಕಿಲ್ಲ. ಈ ರಾಜ್ಯ ಅಭಿವೃದ್ಧಿ ಆಗಲಿದೆ. ಸುಭಿಕ್ಷೆ ಹೊಂದಲಿದೆ ಎಂದು ಜನ ಕಾಯುತ್ತಿದ್ದರು. ಆದರೆ ಯಾವುದೇ ಅಭಿವೃದ್ಧಿ ಆಗಿಲ್ಲ. ಅಲ್ಪಸಂಖ್ಯಾತ ರನ್ನು ಓಲೈಸುವುದು ಬಿಟ್ಟು ಬೇರೆ ಕೆಲಸ ಆಗಿಲ್ಲ. ಎಲ್ಲರನ್ನು ಸರಿಯಾಗಿ ನೋಡಿಕೊಂಡು ಹೋಗುವ ಕೆಲಸ ಆಗಿಲ್ಲ. ರಾಜ್ಯದಲ್ಲಿ ಭ್ರಷ್ಟಾಚಾರ ಮುಗಿಲು ಮುಟ್ಟಿದೆ. ಹಿಂದೆಂದೂ ಕಾಣದಷ್ಟು ಭ್ರಷ್ಟಾ ಚಾರ ಈ ರಾಜ್ಯದಲ್ಲಿ ಆಗಿದೆ ಎಂದರು.

ಡಿಕೆಶಿಗೆ ಒಂದು ಅವಕಾಶ ಸಿಕ್ಕಿದೆ. ಸರಿಯಾಗಿ ಅದನ್ನು ಉಪಯೋಗ ಮಾಡಿ, ಎಲ್ಲರನ್ನು ಸಮನಾಗಿ ಕಾಣುವ ಕೆಲಸ ಮಾಡಬೇಕು. ಕಾಂಗ್ರೆಸ್‌ಗೆ 136 ಸೀಟು ಬಂದಿವೆ ಎಂದರೆ ಅಲ್ಪಸಂಖ್ಯಾತರು ಅಷ್ಟೇ ಅವರಿಗೆ ಮತ ಹಾಕಿಲ್ಲ, ಎಲ್ಲರೂ ಹಾಕಿದ್ದಾರೆ. ಎಲ್ಲರ ಕಾಳಜಿ ಆಗಲಿ. ಹದಗೆಟ್ಟ ಆರ್ಥಿಕ ಸ್ಥಿತಿ ಸುಧಾರಿಸಿಕೊಂಡು ಹೋಗಲು ಡಿಕೆಶಿ ಅವರು ಚಾಕಚಕ್ಯತೆ ಉಪಯೋಗ ಮಾಡಬೇಕಾಗುತ್ತದೆ ಎಂದು ಹೇಳಿದರು.

ಮೂರು ವರ್ಷದಿಂದ ಮುಡಿ ತೆಗೆಸದ ಡಿಕೆಶಿ ಕಟ್ಟಾ ಅಭಿಮಾನಿ

ರಾಮನಗರ: ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಲೆಂದು ಹರಕೆ ಹೊತ್ತಿರುವ ಅವರ ಕಟ್ಟಾ ಅಭಿಮಾನಿಯೊಬ್ಬರು ಕಳೆದ 3 ವರ್ಷಗಳಿಂದ ತಮ್ಮ ಗಡ್ಡ ಮತ್ತು ಕೂದಲು ತೆಗೆಸದೆ ಹಾಗೆಯೇ ಬಿಟ್ಟಿದ್ದಾರೆ. ಹಾರೋಹಳ್ಳಿ ತಾಲೂಕಿನ ಚಿಕ್ಕಸಾದೇನಹಳ್ಳಿಯ ಈಶ್ವರಪ್ಪ ತಮ್ಮ ನಾಯಕನಿಗಾಗಿ ಹರಕೆ ಹೊತ್ತವರು.

ಕೆಪಿಸಿಸಿ ಅಧ್ಯಕ್ಷರೂ ಆಗಿದ್ದ ಡಿಕೆಶಿ ಅವರು 2023ರ ವಿಧಾನಸಭಾ ಚುನಾವಣೆ ಫಲಿತಾಂಶದ ಬಳಿಕ ಮುಖ್ಯಮಂತ್ರಿ ಆಗಲಿದ್ದಾರೆಂಬ ಭಾರೀ ನಿರೀಕ್ಷೆ ಇತ್ತು. ಈಶ್ವರಪ್ಪ ಸಹ ತಮ್ಮ ನಾಯಕನನ್ನು ಸಿಎಂ ಆಗಿ ನೋಡುವ ಕನಸು ಕಂಡಿದ್ದರು. ಅಂತಿಮವಾಗಿ ಪಕ್ಷದ ಹೈಕಮಾಂಡ್ ಸಿದ್ದರಾಮಯ್ಯ ಅವ ರನ್ನು ಮುಖ್ಯಮಂತ್ರಿ ಹುದ್ದೆಗೇರಿಸಿತ್ತು. ಇದ ರಿಂದ ಬೇಸತ್ತ ಈಶ್ವರಪ್ಪ ಅವರು, ಶಿವಕುಮಾರ್ ಅವರು ಸಿಎಂ ಆಗು ವವರೆಗೆ

ನಾನು ತಲೆ ಕೂದಲು ಮತ್ತು ಗಡ್ಡ ತೆಗೆಸುವುದಿಲ್ಲ ಎಂದು ಪ್ರತಿಜ್ಞೆ ಮಾಡಿದ್ದರು. ನಮ್ಮ ಸಾಹೇಬರನ್ನು (ಡಿಕೆಶಿ) ಮುಖ್ಯಮಂತ್ರಿಯಾಗಿ ನೋಡುವವರೆಗೆ ಕೂದಲುಗಡ್ಡ ಕತ್ತರಿಸುವುದಿಲ್ಲ ಎಂದು ಪ್ರತಿಜ್ಞೆ ಮಾಡಿದೆ. ಬಳಿಕ, ಮಂತ್ರಾಲಯದ ರಾಘವೇಂದ್ರ ಸ್ವಾಮಿ ದೇವಾಲಯಕ್ಕೆ ತೆರಳಿದೆ. ಅಲ್ಲಿನ ತುಂಗಭದ್ರಾ ನದಿಯಲ್ಲಿ ಸಾಹೇಬರ ಭಾವಚಿತ್ರ ಹಿಡಿದುಕೊಂಡು ರಾಯರ ಬಳಿ ಹರಕೆ ಹೊತ್ತೆ ಎಂದು ಈಶ್ವರಪ್ಪ ತಿಳಿಸಿದರು.

ವೆಂಕಟರಮಣಪ್ಪ ದರ್ಶನ ಪಡೆದ ಸಿದ್ದರಾಮಯ್ಯ

ಪಾವಗಡ: ಅಹಿಂದ ವರ್ಗದ ಧ್ವನಿಯಾಗಿದ್ದ ವೆಂಕಟರಮಣಪ್ಪ ತಳಸಮುದಾಯದವರ ಬಗ್ಗೆ ಅಪಾರ ಕಾಳಜಿ ಹೊಂದಿದ್ದ ನಾಯಕರಾಗಿದ್ದರು ಎಂದು ಹಂಗಾಮಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಶನಿವಾರ ಪಾವಗಡ ವಿಧಾನಸಭಾ ಕ್ಷೇತ್ರದ ಮಾಜಿ ಸಚಿವ ವೆಂಕಟರಮಣಪ್ಪ ಅವರ ಅಂತಿಮ ದರ್ಶನ ಪಡೆದು ನಂತರ ಮಾತನಾಡಿದರು. ವೆಂಕಟರಮಣಪ್ಪ ಇತ್ತೀಚೆಗಷ್ಟೇ ನನ್ನನ್ನು ಭೇಟಿಯಾಗಿದ್ದರು. ನಾಲ್ಕು ಬಾರಿ ಶಾಸಕರಾಗಿ, ಎರಡು ಬಾರಿ ಸಚಿವರಾಗಿ ಸೇವೆ ಸಲ್ಲಿಸಿದ್ದರು. ಸ್ವತ: ರೈತರಾಗಿದ್ದ ವೆಂಕಟರಮಣಪ್ಪ, ರೈತರ ಏಳಿಗೆಗೆ ಬಹುವಾಗಿ ಶ್ರಮಿಸಿದ್ದರು ಎಂದರು. ಅವರೊಂದಿಗೆ ಉತ್ತಮ ಒಡನಾಟವಿದ್ದು, ಅಪಾರ ಸ್ನೇಹಾಭಿಮಾನ ಹೊಂದಿದ್ದರು. ಅವರ ಪುತ್ರ ವೆಂಕಟೇಶ್ ಶಾಸಕರಾಗಿ ಸೇವೆ ಸಲ್ಲಿಸುತ್ತಿದ್ದು, ತಮ್ಮ ತಂದೆಯವರ ಆದರ್ಶಗಳ ಹಾದಿಯಲ್ಲಿ ನಡೆಯುವರೆಂಬ ವಿಶ್ವಾಸವಿದೆ. ಅವರ ಅಕಾಲಿಕ ನಿಧನದಿಂದ ರಾಜ್ಯಕ್ಕೆ ಅಪಾರ ನಷ್ಟವಾಗಿದೆ. ಆತ್ಮಕ್ಕೆ ಶಾಂತಿಯನ್ನು ಕೋರುವ ಜತೆಗೆ, ಅವರ ಕುಟುಂಬದವರು ಮತ್ತು ಅಭಿಮಾನಿ ಬಳಗಕ್ಕೆ ಅವರ ಅಗಲಿಕೆಯ ದು:ಖವನ್ನು ಭರಿಸುವ ಶಕ್ತಿಯನ್ನು ಭಗವಂತನು ನೀಡಲೆಂದು ಪ್ರಾರ್ಥಿಸುವುದಾಗಿ ತಿಳಿಸಿದರು.

ಈ ವೇಳೆ ಭೋವಿ ಗುರುಪೀಠದ ಜಗದ್ಗುರು ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಮಾಜಿ ಸಚಿವರಾದ ಕೆ.ಜೆ.ಜಾರ್ಜ್, ಜಮೀರ್ ಅಹಮದ್, ಕೆ.ಎನ್.ರಾಜಣ್ಣ, ಸಂಸದ ಗೋವಿಂದ ಕಾರಜೋಳ, ವಿಪ ಸದಸ್ಯ ಡಾ.ಯತೀಂದ್ರ, ಶಾಸಕ ವೆಂಕಟೇಶ್ ಇದ್ದರು.

ಮಾಜಿ ಸಚಿವ ವೆಂಕಟರಮಣಪ್ಪ ಅವರ ಪಾರ್ಥಿವ ಶರೀರದ ಅಂತಿಮ ದರ್ಶನವನ್ನು ಹಂಗಾಮಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪಡೆದರು.

ಕಲ್ಯಾಣ ಕರ್ನಾಟಕಕ್ಕೆ ಚುನಾವಣೆಯಲ್ಲಿ ಆದ್ಯತೆ, ಸಚಿವ ಸಂಪುಟದಲ್ಲಿ ನಿರ್ಲಕ್ಷ್ಯವೇ?

ಮಹತ್ವದ ಖಾತೆ, ಹೆಚ್ಚುವರಿ ಮಂತ್ರಿಗಿರಿಗೆ ಹೆಚ್ಚಿದ ಒತ್ತಡ

ವೀರೇಶ ಎಸ್ ಕೆಂಭಾವಿ ಯಾದಗಿರಿ

ಚುನಾವಣೆ ಬಂದಾಗಲೆಲ್ಲಾ ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿ, ವಿಶೇಷ ಅನುದಾನ ಹಾಗೂ ಪ್ರಾದೇಶಿಕ ಅಸಮಾನತೆ ನಿವಾರಣೆಯ ಭರವಸೆಗಳನ್ನು ಮುಂದಿಟ್ಟು ಮತ ಯಾಚಿಸುವ ರಾಜಕೀಯ ಪಕ್ಷಗಳು, ಅಧಿಕಾರಕ್ಕೆ ಬಂದ ನಂತರ ಈ ಭಾಗಕ್ಕೆ ಸಮರ್ಪಕ ರಾಜಕೀಯ ಪ್ರಾತಿನಿಧ್ಯ ನೀಡುವ ವಿಚಾರದಲ್ಲಿ ಹಿಂದೇಟು ಹಾಕುತ್ತಿವೆಯೇ ಎಂಬ ಪ್ರಶ್ನೆ ಮತ್ತೆ ಚರ್ಚೆಗೆ ಗ್ರಾಸವಾಗಿದೆ.

ವಿಶೇಷವಾಗಿ ಆಡಳಿತಾರೂಢ ಕಾಂಗ್ರೆಸ್ ಪಕ್ಷದ ಕುರಿತು ಈ ಭಾಗದ ಕೆಲ ರಾಜಕೀಯ ಮುಖಂಡರು ಹಾಗೂ ಸಾರ್ವಜನಿಕ ವಲಯದಲ್ಲಿ ಅಸಮಾಧಾನ ವ್ಯಕ್ತವಾಗುತ್ತಿದೆ. ರಾಜ್ಯ ರಾಜಕೀಯದಲ್ಲಿ ನಿರ್ಣಾಯಕ ಪಾತ್ರ ವಹಿಸುವ ಕಲ್ಯಾಣ ಕರ್ನಾಟಕದ ಜಿಲ್ಲೆಗಳು ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಉತ್ತಮ ಬೆಂಬಲ ನೀಡಿದ್ದರೂ, ಸಚಿವ ಸಂಪುಟ ವಿಸ್ತರಣೆ ಅಥವಾ ಪ್ರಮುಖ ಖಾತೆಗಳ ಹಂಚಿಕೆಯ ಸಂದರ್ಭದಲ್ಲಿ ಈ ಭಾಗಕ್ಕೆ ನಿರೀಕ್ಷಿತ ಸ್ಥಾನಮಾನ ಸಿಗುತ್ತಿಲ್ಲ ಎಂಬ ಅಭಿಪ್ರಾಯ ಕೇಳಿಬರುತ್ತಿದೆ.

ಕಲಬುರಗಿ, ಯಾದಗಿರಿ, ಬೀದರ್, ರಾಯಚೂರು, ಕೊಪ್ಪಳ, ವಿಜಯನಗರ ಹಾಗೂ ಬಳ್ಳಾರಿ ಜಿಲ್ಲೆಗಳನ್ನು ಒಳಗೊಂಡಿರುವ ಕಲ್ಯಾಣ ಕರ್ನಾಟಕ ಪ್ರದೇಶವು ರಾಜಕೀಯವಾಗಿ ಮಹತ್ವದ್ದಾಗಿದೆ. ಆದರೂ ಅಧಿಕಾರ ಹಂಚಿಕೆಯಲ್ಲಿ ಈ ಭಾಗದ ನಾಯಕರಿಗೆ ನ್ಯಾಯಯುತ ಅವಕಾಶ ದೊರೆಯುತ್ತಿಲ್ಲ ಎನ್ನುವುದು ಸ್ಥಳೀಯರ ವಾದವಾಗಿದೆ.

ಪ್ರಾದೇಶಿಕ ಸಮತೋಲನ ಕಾಪಾಡುವ ದೃಷ್ಟಿಯಿಂದ ಸಚಿವ ಸಂಪುಟದಲ್ಲಿ ಕಲ್ಯಾಣ ಕರ್ನಾಟಕಕ್ಕೆ ಹೆಚ್ಚಿನ ಪ್ರಾತಿನಿಧ್ಯ ನೀಡಬೇಕು ಎಂಬ ಬೇಡಿಕೆ ಹಲವು ಸಂಘಟನೆಗಳು ಮತ್ತು ರಾಜಕೀಯ ವಲಯಗಳಿಂದ ಕೇಳಿಬರುತ್ತಿದೆ. ಅಭಿವೃದ್ಧಿ ಯೋಜನೆಗಳು ಮಾತ್ರವಲ್ಲದೆ, ನೀತಿ ನಿರ್ಧಾರಗಳ ಮಟ್ಟದಲ್ಲಿಯೂ ಈ ಭಾಗದ ಧ್ವನಿ ಕೇಳಿಸಬೇಕಾದರೆ ಸಚಿವ ಸಂಪುಟದಲ್ಲಿ ಸಮರ್ಪಕ ಸ್ಥಾನಮಾನ ಅಗತ್ಯ ಎಂದು ಅಭಿಪ್ರಾಯ ವ್ಯಕ್ತವಾಗುತ್ತಿದೆ.

ರಾಜಕೀಯ ವಿಶ್ಲೇಷಕರ ಪ್ರಕಾರ, ಕಲ್ಯಾಣ ಕರ್ನಾಟಕವು ಕಾಂಗ್ರೆಸ್‌ನ ಸಾಂಪ್ರದಾಯಿಕ ಭದ್ರಕೋಟೆಗಳಲ್ಲಿ ಒಂದಾಗಿದ್ದು, ಮುಂದಿನ ದಿನಗಳಲ್ಲಿ ಈ ಭಾಗದ ಅಸಮಾಧಾನವನ್ನು ಪಕ್ಷ ಹೇಗೆ ನಿರ್ವಹಿಸುತ್ತದೆ ಎಂಬುದು ರಾಜಕೀಯವಾಗಿ ಮಹತ್ವ ಪಡೆಯಲಿದೆ.

ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿ ಮತ್ತು ರಾಜಕೀಯ ಪ್ರಾತಿನಿಧ್ಯದ ಕುರಿತು ನಡೆಯುತ್ತಿರುವ ಚರ್ಚೆಗಳು ಮುಂದಿನ ದಿನಗಳಲ್ಲಿ ಇನ್ನಷ್ಟು ತೀವ್ರಗೊಳ್ಳುವ ಸಾಧ್ಯತೆ ಇದ್ದು, ಸರಕಾರ ಹಾಗೂ ಕಾಂಗ್ರೆಸ್ ನಾಯಕತ್ವದ ನಿರ್ಧಾರಗಳತ್ತ ಎಲ್ಲರ ಗಮನ ನೆಟ್ಟಿದೆ.

ಕಲ್ಯಾಣ ಕರ್ನಾಟಕ ಜನರ ಪ್ರಶ್ನೆಗಳು

- ಚುನಾವಣೆಯಲ್ಲಿ ಮಾತ್ರ ಕಲ್ಯಾಣ ಕರ್ನಾಟಕದ ನೆನಪು ಏಕೆ?
- ಸಚಿವ ಸಂಪುಟದಲ್ಲಿ ಈ ಭಾಗಕ್ಕೆ ಸಮರ್ಪಕ ಪ್ರಾತಿನಿಧ್ಯ ಸಿಗುತ್ತಿದೆಯೇ?
- ಅಭಿವೃದ್ಧಿಯ ಜತೆಗೆ ರಾಜಕೀಯ ಅಧಿಕಾರ ಹಂಚಿಕೆಯೂ ಅಗತ್ಯವಲ್ಲವೇ?
- ಪ್ರಾದೇಶಿಕ ಅಸಮತೋಲನದ ಬಗ್ಗೆ ಸರಕಾರದ ನಿಲುವು ಏನು?

ಮಂತ್ರಿಗಿರಿ ಮೇಲೆ ಕಲ್ಯಾಣ ಶಾಸಕರ ಕಣ್ಣು

ಕಲ್ಯಾಣ ಕರ್ನಾಟಕ ಭಾಗದ ಕಾಂಗ್ರೆಸ್ ಶಾಸಕರು ಮತ್ತು ಹಿರಿಯ ನಾಯಕರು ಸಚಿವ ಸ್ಥಾನಕ್ಕಾಗಿ ತೀವ್ರ ಲಾಬಿ ನಡೆಸುತ್ತಿದ್ದಾರೆ. ಈ ಭಾಗಕ್ಕೆ ಹೆಚ್ಚಿನ ಪ್ರಾತಿನಿಧ್ಯ ನೀಡಬೇಕು ಎಂಬ ಬೇಡಿಕೆ ಕೂಡ ಕಾಂಗ್ರೆಸ್ ವಲಯದಲ್ಲಿ ಕೇಳಿಬರುತ್ತಿದೆ. ವಿಸರ್ಜಿತ ಸಿದ್ದರಾಮಯ್ಯ ಸಂಪುಟದಲ್ಲಿ ಕಲ್ಯಾಣ ಕರ್ನಾಟಕ ಭಾಗದಿಂದ ಕೆಲ ನಾಯಕರು ಸಚಿವರಾಗಿ ಕಾರ್ಯನಿರ್ವಹಿಸಿದ್ದಾರೆ. ಅವರಲ್ಲಿ ಪ್ರಿಯಾಂಕ್ ಖರ್ಗೆ, ಶರಣಪ್ರಕಾಶ ಪಾಟೀಲ್, ಈಶ್ವರ ಖಂಡ್ರೆ, ರಹೀಂಖಾನ್, ಎನ್.ಎಸ್.ಬೋಸರಾಜ್, ಶಿವರಾಜ ತಂಗಡಗಿ, ನಾಗೇಂದ್ರ, ಶರಣಬಸಪ್ಪ ದರ್ಶನಾಪುರ ಮಂತ್ರಿಗಳಾಗಿದ್ದರು. ಆದರೆ, ಇವರಲ್ಲಿ ಕೆಲವರಿಗೆ ಕಾಟಾಚಾರದ ಖಾತೆಗಳು ನೀಡಲಾಗಿತ್ತು ಎನ್ನುವ ಅಸಮಾಧಾನ ಇಂದಿಗೂ ಇದೆ. ರಚನೆ ಆಗುವ ಡಿಕೆಶಿ ಸಂಪುಟದಲ್ಲಿ ಬಿ.ಆರ್.ಪಾಟೀಲ, ಅಜಯ್‌ಸಿಂಗ್, ಬಸವರಾಜ ರಾಯರೆಡ್ಡಿ, ರಾಘವೇಂದ್ರ ಹಿಟ್ನಾಳ್, ಬಸನಗೌಡ ದದ್ದಲ್, ಹಂಪನಗೌಡ ಬಾದರ್ಲಿ ಸೇರಿ ಕೆಲ ಎಂಎಲ್ಸಿಗಳು ಕೂಡಾ ಮಂತ್ರಿಗಿರಿಗಳ ಮೇಲೆ ಕಣ್ಣಿಟ್ಟಿದ್ದಾರೆ.

ನಮ್ಮ ಎಲ್ಲರ ಪ್ರೀತಿಯ ನಾಯಕ ಸಿದ್ದರಾಮಯ್ಯ

ಬೆಳಗಾವಿ: ಸ್ಥಾನಗಳು ಬದಲಾಗಬಹುದು, ಆದರೆ ಜನಮನದಲ್ಲಿ ಶಾಶ್ವತವಾಗಿ ಉಳಿಯುವ ನಾಯಕನಿಗೆ ವಿದಾಯ ಇರುವುದಿಲ್ಲ ಎಂದು ಮಾಜಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹಂಗಾಮಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಡಳಿತ ಮತ್ತು ವ್ಯಕ್ತಿತ್ವ ನೆನೆದು ಜಾಲತಾಣಗಳಲ್ಲಿ ಭಾವನಾತ್ಮಕ ಪೋಸ್ಟ್ ಮಾಡಿದ್ದಾರೆ.

ಮೈಸೂರಿನ ನೆಲದ ಒಂದು ಸಾಮಾನ್ಯ ರೈತ ಕುಟುಂಬದಿಂದ ಹೊರಟು, ಕರ್ನಾಟಕದ ಅತ್ಯುನ್ನತ ಹುದ್ದೆಯಾದ ಮುಖ್ಯಮಂತ್ರಿಯ ಸ್ಥಾನವನ್ನು ಅಲಂಕರಿಸಿದರೂ, ತಮ್ಮ ಅಧಿಕಾರದ ಕೊನೆಯ ಕ್ಷಣದವರೆಗೂ ಬಡವರ, ಹಿಂದುಳಿದವರ, ಶೋಷಿತರ ಮತ್ತು ದುರ್ಬಲರ ಧ್ವನಿಯಾಗಿಯೇ ಉಳಿದವರು ನಮ್ಮೆಲ್ಲರ ಪ್ರೀತಿಯ ನಾಯಕ ಸಿದ್ದರಾಮಯ್ಯ ಅವರು ಎಂದಿದ್ದಾರೆ.

ಇಂದು ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿರಬಹುದು. ಆದರೆ ಒಂದು ಹುದ್ದೆಯಿಂದ ಇಳಿಯುವುದು ಮತ್ತು ಜನರ ಹೃದಯದಿಂದ ಇಳಿಯುವುದು ಎರಡು ಬೇರೆ ಸಂಗತಿಗಳು. ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಸಾಮಾಜಿಕ ನ್ಯಾಯ, ಸಮಾನ ಅವಕಾಶ ಮತ್ತು ಜನಪರ ಆಡಳಿತದ ಹೆಸರಿನಲ್ಲಿ ಅವರು ಬರೆದ ಅಧ್ಯಾಯ ಎಂದೆಂದಿಗೂ ಅಳಿಸಲಾಗದಂತಹದ್ದು. ಅವರು ಕೇವಲ ಮುಖ್ಯಮಂತ್ರಿ ಆಗಿರಲಿಲ್ಲ. ಅನೇಕ ಬಡ ಕುಟುಂಬಗಳ ಭರವಸೆ, ಅಸಂಖ್ಯಾತ ಯುವಕರ ಕನಸು, ಕೋಟ್ಯಂತರ ಕನ್ನಡಿಗರ ಆತ್ಮವಿಶ್ವಾಸವಾಗಿದ್ದರು ಎಂದು ಲಕ್ಷ್ಮೀ ಹೆಬ್ಬಾಳ್ಕರ್ ಸ್ಮರಿಸಿದ್ದಾರೆ.

ನನ್ನ ವೈಯಕ್ತಿಕ ಜೀವನದಲ್ಲೂ ಸಿದ್ದರಾಮಯ್ಯನವರು ಕೇವಲ ರಾಜಕೀಯ ನಾಯಕನಲ್ಲ. ನಾನು ಸಂಕಷ್ಟಗಳನ್ನು ಎದುರಿಸಿದ ಸಂದರ್ಭಗಳಲ್ಲಿ ತಂದೆಯಂತೆ ಬೆನ್ನು ತಟ್ಟಿ ಧೈರ್ಯ ತುಂಬಿದವರು. ನನ್ನ ಮೇಲೆ ನಂಬಿಕೆ ಇಟ್ಟು ಅವಕಾಶ ನೀಡಿದವರು. ಅವರ ಸಂಪುಟದಲ್ಲಿ ಸಚಿವೆಯಾಗಿ ಕೆಲಸ ಮಾಡುವ ಅವಕಾಶ ನನ್ನ ರಾಜಕೀಯ ಬದುಕಿನ ಅತ್ಯಂತ ಅಮೂಲ್ಯ ಅಧ್ಯಾಯವಾಗಿದೆ. ಅವರ ರಾಜಕೀಯ ದೂರದೃಷ್ಟಿ, ನಿರ್ಧಾರ ಸಾಮರ್ಥ್ಯ ಮತ್ತು ಜನರ ನೋವಿಗೆ ಸ್ಪಂದಿಸುವ ಮನಸ್ಸನ್ನು ಹತ್ತಿರದಿಂದ ಕಂಡು ಕಲಿಯುವ ಅವಕಾಶ ನನಗೆ ದೊರೆತದ್ದು ನನ್ನ ಸೌಭಾಗ್ಯ ಎಂದಿದ್ದಾರೆ.

ಅಮೆರಿಕ ಮತ್ತು ಇರಾನ್ ಯುದ್ಧಕ್ಕೂ, ಬಿಯರ್ ಬಾಟಲಿಗೂ ಏನು ಸಂಬಂಧ?

ಬಿಯರ್ ಉದ್ಯಮ ಮತ್ತು ಪರಿಸರ ಸ್ನೇಹಿ ಪ್ಯಾಕೇಜಿಂಗ್ ವಿಷಯದಲ್ಲಿ ಅಲ್ಯೂಮಿನಿಯಂ ಕ್ಯಾನ್‌ಗಳು ಮತ್ತು ಗಾಜಿನ ಬಾಟಲಿಗಳ ನಡುವಿನ ಹೋಲಿಕೆ ಅತ್ಯಂತ ತಾರ್ಕಿಕವಾಗಿದೆ. ಭಾರತದ ಸಂದರ್ಭದಲ್ಲಿ ಇದು ಕೇವಲ ಪ್ಯಾಕೇಜಿಂಗ್ ಬದಲಾವಣೆಯಲ್ಲ, ಬದಲಿಗೆ ಆರ್ಥಿಕ ಮತ್ತು ಪರಿಸರ ಹಿತದೃಷ್ಟಿಯಿಂದ ಇಡಬೇಕಾದ ದೊಡ್ಡ ಹೆಜ್ಜೆಯಾಗಿದೆ. ಪ್ಯಾಕೇಜಿಂಗ್ ಲಾಜಿಸ್ಟಿಕ್ಸ್ ದೃಷ್ಟಿಯಿಂದ ತೂಕವು ಪ್ರಮುಖ ಪಾತ್ರ ವಹಿಸುತ್ತದೆ. 330 ಮಿ.ಲೀ ಸಾಮರ್ಥ್ಯದ ಗಾಜಿನ ಬಾಟಲಿಯು 200 ಗ್ರಾಂ ತೂಗಿದರೆ, ಕ್ಯಾನ್ ಕೇವಲ 11 ಗ್ರಾಂ ತೂಗುತ್ತದೆ.

ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್
vbhat@me.com

ಅಮೆರಿಕ ಮತ್ತು ಇರಾನ್ ಯುದ್ಧಕ್ಕೂ, ಬಿಯರ್ ಬಾಟಲಿಗೂ ಏನು ಸಂಬಂಧವಿದೆಯಾ ಎಂದು ಕೇಳಿದರೆ, ಉತ್ತರ ಖಂಡಿತವಾಗಿಯೂ ಸಂಬಂಧವಿದೆ. ಅಚ್ಚರಿ ಎನಿಸಬಹುದು, ಅಮೆರಿಕ-ಇರಾನ್ ಯುದ್ಧದ ನಂತರ, ಸುಮಾರು ಹದಿನೆಂಟು ಬಿಯರ್ ಕಂಪನಿಗಳು ಗಾಜಿನ ಬಾಟಲಿ ಬದಲು, ಕ್ಯಾನ್‌ಗೆ ಶಿಫ್ಟ್ ಆಗಲು ನಿರ್ಧರಿಸಿವೆಯಂತೆ.

ಇದಕ್ಕೆ ಕಾರಣವೇನು? ಅಮೆರಿಕ ಮತ್ತು ಇರಾನ್ ಯುದ್ಧದಿಂದಾಗಿ ಹಾರ್ಮುಜ್ ಜಲಸಂಧಿಯ ಮೇಲೆ ಒತ್ತಡ ಉಂಟಾಯಿತಷ್ಟೆ. ಅದರ ನೇರ ಪರಿಣಾಮ ನಿಮ್ಮ ಕೈಯಲ್ಲಿರುವ ಬಿಯರ್ ಬಾಟಲಿಯ ಮೇಲೆ ಆಗಿದೆ. ಬಿಯರ್ ಅರಬ್ ರಾಷ್ಟ್ರಗಳಿಂದ ಬರುವುದಿಲ್ಲ ನಿಜ, ಆದರೆ ಗಾಜಿನ ಬಾಟಲಿಗಳನ್ನು ತಯಾರಿಸಲು ಬೇಕಾದ ಕುಲುಮೆಗಳನ್ನು (Furnaces) ಉರಿಸಲು ಬೇಕಾದ ನೈಸರ್ಗಿಕ ಅನಿಲ (Natural Gas) ವಿದೇಶಗಳಿಂದ ಆಮದಾಗುತ್ತದೆ. ಗಾಜಿನ ತಯಾರಿಕೆಗೆ ಹೆಚ್ಚಿನ ಪ್ರಮಾಣದ ಶಾಖದ ಅವಶ್ಯಕತೆಯಿದೆ. ಅನಿಲದ ಪೂರೈಕೆಯಲ್ಲಿ ವ್ಯತ್ಯಯವಾದರೆ ಗಾಜಿನ ಬೆಲೆ ಏರುತ್ತದೆ. ಅಚ್ಚರಿಯ ವಿಷಯವೆಂದರೆ, ಶೇ.80ರಷ್ಟು ಗ್ರಾಹಕರು ಕ್ಯಾನ್‌ಗಳಿಗಿಂತ ಗಾಜಿನ ಬಾಟಲಿಗಳನ್ನೇ ಇಷ್ಟಪಡುತ್ತಾರೆ. ಆದರೆ ಈ 'ಗಾಜಿನ ಬಿಕ್ಕಟ್ಟು' ನಮಗೆ ಪರ್ಯಾಯ ಮಾರ್ಗಗಳ ಬಗ್ಗೆ ಯೋಚಿಸುವಂತೆ ಮಾಡಿದೆ.

ಇತಿಹಾಸದ ಪುಟಗಳನ್ನು ತಿರುವಿ ನೋಡಿದಾಗ, ಮನುಕುಲ ಎದುರಿಸಿದ ಬೃಹತ್ ಬಿಕ್ಕಟ್ಟುಗಳೇ ಹೊಸ ಯುಗದ ತಂತ್ರಜ್ಞಾನಕ್ಕೆ ನಾಂದಿ ಹಾಡಿರುವುದು ಸ್ಪಷ್ಟವಾಗುತ್ತದೆ. 1942ರಲ್ಲಿ ಜಪಾನ್ ಆಗ್ನೇಯ ಏಷ್ಯಾವನ್ನು ವಶಪಡಿಸಿಕೊಂಡಾಗ ಎದುರಾದ ರಬ್ಬರ್ ಕೊರತೆ ಕೇವಲ ಒಂದು ಉದ್ಯಮದ ಸಮಸ್ಯೆಯಾಗಿರಲಿಲ್ಲ, ಅದು ಜಾಗತಿಕ ಸಾರಿಗೆ ಮತ್ತು ರಕ್ಷಣಾ ವ್ಯವಸ್ಥೆಯನ್ನೇ ಸ್ತಬ್ಧಗೊಳಿಸುವ ಭೀತಿ ಹುಟ್ಟಿಸಿತ್ತು. ಆದರೆ, ಈ 'ಅನಿವಾರ್ಯತೆ'ಯೇ ವಿಜ್ಞಾನಿಗಳನ್ನು ಪ್ರಯೋಗಶಾಲೆಗೆ ನೂಕಿತು.

ನೈಸರ್ಗಿಕ ರಬ್ಬರ್‌ಗೆ ಪರ್ಯಾಯವಾಗಿ ಸಂಶ್ಲೇಷಿತ ರಬ್ಬರ್ (Synthetic Rubber) ಜನಿಸಿದ್ದು ಇದೇ ಕಾರಣಕ್ಕೆ. ಇಂದು ನಾವು ಬಳಸುವ ರಬ್ಬರ್‌ನಲ್ಲಿ ಹೆಚ್ಚಿನಂಶ ಇದೇ ಆಗಿದೆ. ಅಷ್ಟೇ ಅಲ್ಲದೆ, ಅಂದು ಸಂಶೋಧಿಸಿದ ರಷ್ಯನ್ ಡ್ಯಾಂಡೆಲಿಯನ್ ಮತ್ತು ಗ್ವಾಯುಲ್ ಸಸ್ಯಗಳ ಬಳಕೆ ಇಂದು 'ಪರಿಸರ ಸ್ನೇಹಿ' ತಂತ್ರಜ್ಞಾನವಾಗಿ ಮರುಜನ್ಮ ಪಡೆದಿದೆ. ಗಂಟೆಗೆ 305 ಕಿಮೀ ವೇಗದಲ್ಲಿ ಓಡುವ 'ಇಂಡಿಕಾರ್' ರೇಸಿಂಗ್ ಟೈರ್‌ಗಳಲ್ಲಿ ಗ್ವಾಯುಲ್ ಬಳಕೆಯಾಗುತ್ತಿರುವುದು, ಹಳೆಯ ಬಿಕ್ಕಟ್ಟಿನ ಪರಿಹಾರವು ಇಂದಿನ ಅತ್ಯಾಧುನಿಕ ತಂತ್ರಜ್ಞಾನಕ್ಕಿಂತಲೂ ಶ್ರೇಷ್ಠವಾಗಿರಬಲ್ಲದು ಎಂಬುದಕ್ಕೆ ಸಾಕ್ಷಿ.

ಯಾವುದೇ ವ್ಯವಸ್ಥೆಯು ಸುಗಮವಾಗಿ ಸಾಗುತ್ತಿರುವಾಗ ನಾವು ಹೊಸ ಹಾದಿ ಹುಡುಕುವುದಿಲ್ಲ. ಆದರೆ ಬಿಕ್ಕಟ್ಟು ಎದುರಾದಾಗ, ಅಸ್ತಿತ್ವ ಉಳಿಸಿಕೊಳ್ಳಲು ಹಳೆಯ ಪದ್ಧತಿಗಳನ್ನು ಮೀರಿ ಯೋಚಿಸುತ್ತೇವೆ. ಹೀಗೆ ಹುಟ್ಟುವ ತಂತ್ರಜ್ಞಾನವು ಕೇವಲ ತಾತ್ಕಾಲಿಕ ಪರಿಹಾರವಾಗದೆ, ಭವಿಷ್ಯದ ಹೊಸ ಮಾನದಂಡವಾಗಿ (Standard) ಬದಲಾಗುತ್ತದೆ. ಸವಾಲುಗಳು ಸೃಷ್ಟಿಸುವ ಒತ್ತಡವೇ ಮನುಷ್ಯನ ಸೃಜನಶೀಲತೆಯನ್ನು ಅತ್ಯುನ್ನತ ಮಟ್ಟಕ್ಕೆ ಕೊಂಡೊಯ್ಯುತ್ತದೆ.

ಬಿಯರ್ ಉದ್ಯಮ ಮತ್ತು ಪರಿಸರ ಸ್ನೇಹಿ ಪ್ಯಾಕೇಜಿಂಗ್ ವಿಷಯದಲ್ಲಿ ಅಲ್ಯೂಮಿನಿಯಂ ಕ್ಯಾನ್‌ಗಳು ಮತ್ತು ಗಾಜಿನ ಬಾಟಲಿಗಳ ನಡುವಿನ ಹೋಲಿಕೆ ಅತ್ಯಂತ ತಾರ್ಕಿಕವಾಗಿದೆ. ಭಾರತದ ಸಂದರ್ಭದಲ್ಲಿ ಇದು ಕೇವಲ ಪ್ಯಾಕೇಜಿಂಗ್ ಬದಲಾವಣೆಯಲ್ಲ, ಬದಲಿಗೆ ಆರ್ಥಿಕ ಮತ್ತು ಪರಿಸರ ಹಿತದೃಷ್ಟಿಯಿಂದ ಇಡಬೇಕಾದ ದೊಡ್ಡ ಹೆಜ್ಜೆಯಾಗಿದೆ. ಪ್ಯಾಕೇಜಿಂಗ್ ಲಾಜಿಸ್ಟಿಕ್ಸ್ (Logistics) ದೃಷ್ಟಿಯಿಂದ ತೂಕವು ಪ್ರಮುಖ ಪಾತ್ರ ವಹಿಸುತ್ತದೆ. 330 ಮಿ. ಲೀ ಸಾಮರ್ಥ್ಯದ ಗಾಜಿನ ಬಾಟಲಿಯು 200 ಗ್ರಾಂ ತೂಗಿದರೆ, ಅಲ್ಯೂಮಿನಿಯಂ ಕ್ಯಾನ್ ಕೇವಲ 11 ಗ್ರಾಂ ತೂಗುತ್ತದೆ. ಅಂದರೆ, ಅಷ್ಟೇ ಪ್ರಮಾಣದ ಬಿಯರ್ ಸಾಗಿಸಲು ಗಾಜಿನ ಬಾಟಲಿಗಳು 18 ಪಟ್ಟು ಹೆಚ್ಚು ತೂಕವನ್ನು ಸೃಷ್ಟಿಸುತ್ತವೆ.

ಸಾರಿಗೆಯ ಸಮಯದಲ್ಲಿ ಈ ಹೆಚ್ಚುವರಿ ತೂಕವನ್ನು ಹೊತ್ತೊಯ್ಯಲು ವಾಹನಗಳಿಗೆ ಹೆಚ್ಚಿನ ಇಂಧನ ಬೇಕು. ಇದರ ಪರಿಣಾಮ, ಕಾರ್ಬನ್ ಹೊರಸೂಸುವಿಕೆ (Carbon Emission) ಹೆಚ್ಚಾಗುತ್ತದೆ. ಅಲ್ಯೂಮಿನಿಯಂ ಕ್ಯಾನ್‌ಗಳನ್ನು ಬಳಸುವುದರಿಂದ ಸಾರಿಗೆ ವೆಚ್ಚ (Freight Cost) ಗಣನೀಯವಾಗಿ ಕಡಿಮೆಯಾಗುವುದಲ್ಲದೇ, ಒಂದೇ ಟ್ರಕ್‌ನಲ್ಲಿ ಹೆಚ್ಚಿನ ಪ್ರಮಾಣದ ಉತ್ಪನ್ನಗಳನ್ನು ಸಾಗಿಸಲು ಸಾಧ್ಯವಾಗುತ್ತದೆ.

ಗ್ರಾಹಕರ ದೃಷ್ಟಿಕೋನದಿಂದಲೂ ಕ್ಯಾನ್‌ಗಳು ಹೆಚ್ಚು ಅನುಕೂಲಕರ. ಅಲ್ಯೂಮಿನಿಯಂ ಲೋಹವು ಉತ್ತಮ ಶಾಖ ವಾಹಕವಾಗಿರುವುದರಿಂದ, ಕ್ಯಾನ್‌ಗಳಲ್ಲಿರುವ ಬಿಯರ್ ಗಾಜಿನ ಬಾಟಲಿಗಳಿಗಿಂತ ವೇಗವಾಗಿ ತಣ್ಣಗಾಗುತ್ತದೆ. ಸೂರ್ಯನ ಯುವಿ (UV) ಕಿರಣಗಳು ಬಿಯರ್‌ನ ರುಚಿಯನ್ನು ಹಾಳುಮಾಡುತ್ತವೆ. ಗಾಜಿನ ಬಾಟಲಿಗಳಿಗಿಂತ ಕ್ಯಾನ್‌ಗಳು ಬೆಳಕನ್ನು ಸಂಪೂರ್ಣವಾಗಿ ತಡೆಯುವುದರಿಂದ ಬಿಯರ್‌ನ ತಾಜಾತನ ದೀರ್ಘಕಾಲ ಉಳಿಯುತ್ತದೆ. ಗಾಜಿನಂತೆ ಇವು ಒಡೆಯುವ ಭಯವಿಲ್ಲದ ಕಾರಣ, ಪಾರ್ಟಿ ಅಥವಾ ಪ್ರವಾಸಗಳ ಸಮಯದಲ್ಲಿ ಸಾಗಿಸುವುದು ಸುಲಭ.

ಅಲ್ಯೂಮಿನಿಯಂ ಅನ್ನು ನೂರಕ್ಕೆ ನೂರು ಪ್ರತಿಶತ ಮರುಬಳಕೆ (Recycle) ಮಾಡಬಹುದು. ವಿಶೇಷವೆಂದರೆ, ಬಾಟಲಿಗಳನ್ನು ಮರುಬಳಕೆ ಮಾಡಲು ತೊಳೆಯುವಾಗ ಅಪಾರ ಪ್ರಮಾಣದ ರಾಸಾಯನಿಕ ಮತ್ತು ನೀರು ಪೋಲಾಗುತ್ತದೆ. ಆದರೆ ಕ್ಯಾನ್‌ಗಳನ್ನು ಕರಗಿಸಿ ಹೊಸ ಕ್ಯಾನ್‌ಗಳನ್ನಾಗಿ ಮಾಡುವುದು ಅತ್ಯಂತ ಸರಳ.

ಭಾರತವು ಜಗತ್ತಿನಲ್ಲೇ ಅಲ್ಯೂಮಿನಿಯಂ ಉತ್ಪಾದನೆಯಲ್ಲಿ ಎರಡನೇ ದೊಡ್ಡ ರಾಷ್ಟ್ರವಾಗಿದೆ. ನಮ್ಮಲ್ಲೇ ಹೇರಳವಾಗಿ ಸಿಗುವ ಈ ಸಂಪನ್ಮೂಲವನ್ನು ಬಳಸುವುದರಿಂದ ದೇಶೀಯ ಉತ್ಪಾದನಾ ವಲಯಕ್ಕೆ (Manufacturing Sector) ದೊಡ್ಡ ಉತ್ತೇಜನ ಸಿಗುತ್ತದೆ. ಗಾಜಿನ ಕಚ್ಚಾವಸ್ತುಗಳ ಮೇಲಿನ ಅವಲಂಬನೆ ತಗ್ಗಿ, ಭಾರತವು ಪ್ಯಾಕೇಜಿಂಗ್ ಸ್ವಾವಲಂಬನೆಯತ್ತ ಹೆಜ್ಜೆ ಇಡಬಹುದು.

ಆರಂಭದಲ್ಲಿ ಅಲ್ಯೂಮಿನಿಯಂ ತಯಾರಿಕೆಗೆ ಹೆಚ್ಚಿನ ವಿದ್ಯುತ್ ಬೇಕಾದರೂ, ಅದರ ಸುದೀರ್ಘ ಮರುಬಳಕೆಯ ಚಕ್ರ (Recycling Lifecycle) ಮತ್ತು ಕಡಿಮೆ ಸಾರಿಗೆ ವೆಚ್ಚವು ದೀರ್ಘಾವಧಿಯಲ್ಲಿ ಪರಿಸರ ಹಾಗೂ ಆರ್ಥಿಕತೆ ಎರಡಕ್ಕೂ ಲಾಭದಾಯಕವಾಗಿದೆ. ಆದ್ದರಿಂದ, ಭಾರತೀಯ ಮಾರುಕಟ್ಟೆಯು ಕ್ಯಾನ್ಗಳ ಕಡೆಗೆ ಮುಖ ಮಾಡುವುದು ಜಾಣತನದ ಕ್ರಮವೇ.

ಇದನ್ನು ಒಂದು ರೀತಿಯಲ್ಲಿ 'ಸಂಕಷ್ಟದ ಬಾಟಲಿಯೊಳಗಿನ ಪರಿಹಾರದ ಸಂದೇಶ' ಇಂದು ಅಂದುಕೊಳ್ಳಬಹುದು. ಮಾನವ ಇತಿಹಾಸವನ್ನು ಗಮನಿಸಿದರೆ, ಅತ್ಯುತ್ತಮ ಆವಿಷ್ಕಾರಗಳು ತೀವ್ರ ಸಂಕಷ್ಟದ ಕಾಲದಲ್ಲೇ ಜನ್ಮತಾಳಿವೆ. ಹಳೆಯ ಹಾದಿಗಳು ಮುಚ್ಚಿಹೋದಾಗ, ಲಭ್ಯವಿರುವ ಸೀಮಿತ ಸಂಪನ್ಮೂಲಗಳನ್ನು ಬಳಸಿಕೊಂಡು ಹೊಸ ದಾರಿ ಕಂಡುಕೊಳ್ಳುವ ಅನಿವಾರ್ಯತೆ ನಮಗೆ ಎದುರಾಗುತ್ತದೆ. ಈ ಅನಿವಾರ್ಯತೆಯೇ ಮನುಷ್ಯನ ಸೃಜನಶೀಲತೆಯನ್ನು ಜಾಗೃತಗೊಳಿಸುತ್ತದೆ. ಜಾಗತಿಕ ಯುದ್ಧಗಳು, ಸಾಂಕ್ರಾಮಿಕ ರೋಗಗಳು ಅಥವಾ ಕಚ್ಚಾವಸ್ತುಗಳ ತೀವ್ರ ಕೊರತೆಯ ಸಂದರ್ಭಗಳಲ್ಲೇ ಜಗತ್ತು ತಾಂತ್ರಿಕವಾಗಿ ಮತ್ತು ವೈಜ್ಞಾನಿಕವಾಗಿ ದೊಡ್ಡ ಜಿಗಿತವನ್ನು ಕಂಡಿದೆ.

ಯಾವುದೇ ಬಿಕ್ಕಟ್ಟು ಎದುರಾದಾಗ ಸಾಮಾನ್ಯವಾಗಿ ಎರಡು ರೀತಿಯ ಪ್ರತಿಕ್ರಿಯೆಗಳು ವ್ಯಕ್ತವಾಗುತ್ತವೆ - ಮೊದಲನೆಯದು, ಹಳಹಳಿಕೆ. ಅಂದರೆ ಹಳೆಯ ಸೌಕರ್ಯಗಳು ಕೈತಪ್ಪಿ ಹೋದವಲ್ಲ ಎಂದು ಕೊರಗುವುದು ಮತ್ತು ಪರಿಸ್ಥಿತಿಯನ್ನು ದೂಷಿಸುವುದು ಹಾಗೂ ಎರಡನೆಯದು, ಅನ್ವೇಷಣೆ. ಅಂದರೆ ಲಭ್ಯವಿರುವ ಸಂಪನ್ಮೂಲಗಳಲ್ಲೇ ಪರ್ಯಾಯ ಮಾರ್ಗವನ್ನು ಹುಡುಕಲು ಯೋಚಿಸುವುದು. ನಿಜವಾದ ಪ್ರಗತಿ ಸಾಧಿಸಲು ಎರಡನೇ ದೃಷ್ಟಿಕೋನ ಅತ್ಯಗತ್ಯ. ಸಮಸ್ಯೆ ಎದುರಾದಾಗ ಹಳೆಯ ವ್ಯವಸ್ಥೆಯನ್ನೇ ಮರಳಿ ತರಲು ಹೆಣಗಾಡುವ ಬದಲು, 'ಇದಕ್ಕಿಂತ ಉತ್ತಮವಾದದ್ದನ್ನು ಸೃಷ್ಟಿಸಲು ಈ ಪರಿಸ್ಥಿತಿ ನಮಗೆ ನೀಡುತ್ತಿರುವ ಅವಕಾಶವೇನು?' ಎಂದು ಯೋಚಿಸಬೇಕು. ಇದು ಉದ್ಯಮ, ವಿಜ್ಞಾನ ಮಾತ್ರವಲ್ಲದೇ ವೈಯಕ್ತಿಕ ಜೀವನಕ್ಕೂ ಅನ್ವಯಿಸುತ್ತದೆ.

ಗಾಜಿನ ಬಾಟಲಿಗಳ ಸಾಗಣೆ ವೆಚ್ಚ ಮತ್ತು ನಿರ್ವಹಣೆ ದುಬಾರಿಯಾದರೂ, ಕಂಪನಿಗಳು ಇಂದಿಗೂ ಅವುಗಳನ್ನು ಸಂಪೂರ್ಣವಾಗಿ ಕೈಬಿಡದಿರಲು ಮುಖ್ಯ ಕಾರಣ 'ಗ್ರಾಹಕ ಮನೋವಿಜ್ಞಾನ' (Consumer Psychology) ಮತ್ತು 'ದೃಶ್ಯ ಪ್ರಚೋದನೆ' (Visual Stimulus). ಮನುಷ್ಯನಿಗೆ ದೃಷ್ಟಿ ಎಂಬುದು ಅತ್ಯಂತ ಪ್ರಭಾವಶಾಲಿ ಜ್ಞಾನೇಂದ್ರಿಯ. ಅಲ್ಯೂಮಿನಿಯಂ ಕ್ಯಾನ್‌ಗಳು ಒಳಗೆ ಏನಿದೆ ಎಂಬುದನ್ನು ಸಂಪೂರ್ಣವಾಗಿ ಮುಚ್ಚಿಡುತ್ತವೆ. ಆದರೆ ಪಾರದರ್ಶಕ ಅಥವಾ ಅರೆಪಾರದರ್ಶಕ (ಕಂದು/ಹಸಿರು) ಗಾಜಿನ ಬಾಟಲಿಯಲ್ಲಿ ದ್ರವದ ಬಣ್ಣ, ಅದರ ಸಾಂದ್ರತೆ ಮತ್ತು ಒಳಗಿನ ಸಣ್ಣ ಗುಳ್ಳೆಗಳು ಹೊರಗಿನಿಂದಲೇ ಕಣ್ಣಿಗೆ ಕಾಣಿಸುತ್ತವೆ. ಈ ದೃಶ್ಯವು ಗ್ರಾಹಕರಲ್ಲಿ ತಕ್ಷಣದ ಹಂಬಲವನ್ನು (Urge) ಅಥವಾ ಆಕರ್ಷಣೆಯನ್ನು ಸೃಷ್ಟಿಸುತ್ತದೆ. ವಿಶೇಷವಾಗಿ ಕಣ್ಣಿಗೆ ಕಾಣುವ ದ್ರವವು ಖರೀದಿಸುವ ನಿರ್ಧಾರವನ್ನು ಪ್ರಚೋದಿಸುತ್ತದೆ.

ಅಷ್ಟೇ ಅಲ್ಲ, ಜಾಗತಿಕವಾಗಿ ಗ್ರಾಹಕರಲ್ಲಿ 'ಗಾಜಿನ ಬಾಟಲಿಯಲ್ಲಿರುವುದು ಪ್ರೀಮಿಯಂ ಮತ್ತು ಹೆಚ್ಚು ಅಧಿಕೃತ' ಎಂಬ ಸಾಂಪ್ರದಾಯಿಕ ನಂಬಿಕೆಯಿದೆ. ಕ್ಯಾನ್‌ಗಳು ಕೇವಲ ಅನುಕೂಲತೆಯನ್ನು ಪ್ರತಿನಿಧಿಸಿದರೆ, ಬಾಟಲಿಗಳು ಒಂದು ರೀತಿಯ ಗಾಂಭೀರ್ಯ ಮತ್ತು ಬ್ರ್ಯಾಂಡ್ ಮೌಲ್ಯವನ್ನು (Brand Value) ಬಿಂಬಿಸುತ್ತವೆ. ಹೀಗಾಗಿ, ಕೇವಲ ದಕ್ಷತೆಯನ್ನಷ್ಟೇ ನಂಬದೇ, ಗ್ರಾಹಕರ ಭಾವನೆ ಮತ್ತು ಕಣ್ಣಿನ ಆಕರ್ಷಣೆಯನ್ನು ಉಳಿಸಿಕೊಳ್ಳಲು ಕಂಪನಿಗಳು ಬಾಟಲಿಗಳ ಬಳಕೆಯನ್ನು ಮುಂದುವರಿಸಿದ್ದವು.

ಇಂದು ಜಗತ್ತು ಎದುರಿಸುತ್ತಿರುವ ಹವಾಮಾನ ವೈಪರೀತ್ಯ, ಇಂಧನ ಕೊರತೆಯಂಥ ಬಿಕ್ಕಟ್ಟುಗಳೇ ನಮ್ಮನ್ನು ನವೀಕರಿಸಬಹುದಾದ ಇಂಧನ (Renewable Energy) ಮತ್ತು ಸುಸ್ಥಿರ ಜೀವನಶೈಲಿಯತ್ತ ಮುನ್ನಡೆಸುತ್ತಿವೆ. ಬಿಕ್ಕಟ್ಟುಗಳು ನಮಗೆ ಎದುರಾಗುವ ಗೋಡೆಗಳಲ್ಲ, ಅವು ನಮ್ಮನ್ನು ಹೊಸ ದಿಕ್ಕಿನತ್ತ ತಿರುಗಿಸುವ ಸೂಚನಾ ಫಲಕಗಳು. ಸಮಸ್ಯೆಯ ತೀವ್ರತೆಗೆ ಧೃತಿಗೆಡದೇ, ಲಭ್ಯವಿರುವ ಸಂಪನ್ಮೂಲಗಳನ್ನು ಸೃಜನಾತ್ಮಕವಾಗಿ ಬಳಸುವ ದೃಷ್ಟಿಕೋನ ನಮ್ಮದಾದಾಗ, ಪ್ರತಿಯೊಂದು ಸಂಕಷ್ಟವೂ ಒಂದು ಹೊಸ ಆವಿಷ್ಕಾರಕ್ಕೆ ಹೆಬ್ಬಾಗಿಲಾಗುವುದರಲ್ಲಿ ಸಂದೇಹವಿಲ್ಲ ಎಂಬುದನ್ನು ಬಿಯರ್ ಬಾಟಲಿ ತೋರಿಸಿಕೊಟ್ಟಿದೆ.

ಭಗವಾನ್ ದಾದಾ - ಶೋಲಾ ಜೋ ಭಡ್ಕೆ

ಇತ್ತೀಚೆಗೆ ಖ್ಯಾತ ನಟ ದಿವಂಗತ ದೇವಾನಂದ ಅವರ ಆತ್ಮಕಥೆಯನ್ನು ಓದುತ್ತಿದ್ದೆ. ಅದರಲ್ಲಿ ಅವರು ಭಗವಾನ್ ದಾದಾ ಅವರ 'ಅಲ್ಬೇಲಾ' (1951) ಚಿತ್ರದ 'ಶೋಲಾ ಜೋ ಭಡ್ಕೆ' ಹಾಡು ಭಾರತೀಯ ಚಿತ್ರರಂಗದ ಇತಿಹಾಸದಲ್ಲಿ ಹೇಗೆ ಒಂದು ಮೈಲಿಗಲ್ಲು ಎಂಬಂತೆ ಪರಿಗಣಿಸಲಾಗುತ್ತದೆ ಎಂಬುದನ್ನು ಪ್ರಸ್ತಾಪಿಸಿದ್ದಾರೆ.

'ಶೋಲಾ ಜೋ ಭಡ್ಕೆ' ಹಾಡನ್ನು ಚಿತ್ರೀಕರಿಸುವ ಸಮಯದಲ್ಲಿ ಭಗವಾನ್ ದಾದಾ ಅವರಿಗೆ ಯಾವುದೇ ವೃತ್ತಿಪರ ನೃತ್ಯಗಾರರು ಸಿಗಲಿಲ್ಲ. ಸೋಲೊಪ್ಪದ ಅವರು, ತಮ್ಮ ಚಿತ್ರಗಳಲ್ಲಿ ಸಾಹಸ ದೃಶ್ಯಗಳಲ್ಲಿ ನಟಿಸುತ್ತಿದ್ದ ಕುಸ್ತಿಪಟುಗಳು ಮತ್ತು ಸ್ಟಂಟ್‌ಮನ್‌ಗಳನ್ನು ಕರೆತಂದು ಅವರಿಗೆ ನೃತ್ಯ ತರಬೇತಿ ನೀಡಿ ಈ ಹಾಡಿನಲ್ಲಿ ಬಳಸಿಕೊಂಡರು. ಆ ಪೈಲ್ವಾನರ ವಿಶಿಷ್ಟ ಲಯಬದ್ಧ ಚಲನೆಯೇ ಈ ಹಾಡಿಗೆ ಒಂದು ವಿಭಿನ್ನ ಮೆರುಗನ್ನು ನೀಡಿತು.

ಕೈಗಳನ್ನು ವೃತ್ತಾಕಾರವಾಗಿ ತಿರುಗಿಸುತ್ತಾ ಭಗವಾನ್ ದಾದಾ ಹಾಕುತ್ತಿದ್ದ ಆ ವಿಶಿಷ್ಟ ನೃತ್ಯದ ಹೆಜ್ಜೆಗಳು ಇಂದಿಗೂ ಪ್ರಸಿದ್ಧ. ಸ್ವತಃ ಬಾಲಿವುಡ್ ಶಹೆನ್ಶಾ ಅಮಿತಾಭ್ ಬಚ್ಚನ್ ಅವರು ಹಲವು ಬಾರಿ 'ನನ್ನ ನೃತ್ಯ ಶೈಲಿಗೆ ಭಗವಾನ್ ದಾದಾ ಅವರೇ ಸ್ಫೂರ್ತಿ' ಎಂದು ಬಹಿರಂಗವಾಗಿ ಒಪ್ಪಿಕೊಂಡಿದ್ದಾರೆ. ಇಂದಿಗೂ ಅನೇಕ ನಟರು ಆ ಶೈಲಿಯನ್ನು ಅನುಕರಿಸುತ್ತಾರೆ.

ಈ ಹಾಡು ಬಿಡುಗಡೆಯಾದಾಗ ಪ್ರೇಕ್ಷಕರು ಎಷ್ಟು ರೋಮಾಂಚನಗೊಂಡಿದ್ದರೆಂದರೆ, ತೆರೆಯ ಮೇಲೆ ಹಾಡು ಬರುತ್ತಿದ್ದಂತೆ ಥಿಯೇಟರ್‌ನಲ್ಲಿ ನಾಣ್ಯಗಳನ್ನು ಎಸೆದು ಸಂಭ್ರಮಿಸುತ್ತಿದ್ದರು. ಪ್ರತಿದಿನ ಆಟ ಮುಗಿದ ನಂತರ ಚಿತ್ರಮಂದಿರ ಶುಚಿಗೊಳಿಸುವ ಸಿಬ್ಬಂದಿ ಆ ನಾಣ್ಯಗಳನ್ನೆಲ್ಲ ಆಯ್ದು ಸಂಗ್ರಹಿಸುತ್ತಿದ್ದರು. ಆ ಹಣ ಎಷ್ಟು ದೊಡ್ಡ ಮಟ್ಟದಲ್ಲಿರುತ್ತಿತ್ತೆಂದರೆ, ಸಿಬ್ಬಂದಿಗಳು ಭಗವಾನ್ ದಾದಾ ಅವರಿಗೆ ಕೃತಜ್ಞತೆ ಸಲ್ಲಿಸುತ್ತಿದ್ದರಂತೆ.

'ಅಲ್ಬೇಲಾ' ಚಿತ್ರನಿರ್ಮಾಣ ಸಮಯದಲ್ಲಿ ಭಗವಾನ್ ದಾದಾ ಅವರು ಸ್ಟಂಟ್ ಚಿತ್ರಗಳ ನಟ ಎಂಬ ಕಾರಣಕ್ಕೆ ಆಗಿನ ಕಾಲದ ಯಾವುದೇ ಪ್ರಮುಖ ನಟಿಯರು ಅವರೊಂದಿಗೆ ನಟಿಸಲು ಒಪ್ಪುತ್ತಿರಲಿಲ್ಲ. ಅಂಥ ಸಂಕಷ್ಟದ ಸಮಯದಲ್ಲಿ ಖ್ಯಾತ ನಟಿ ಗೀತಾ ಬಾಲಿ ಅವರು ಈ ಚಿತ್ರಕ್ಕೆ ಸಹಿ ಹಾಕಿ ಬೆಂಬಲವಾಗಿ ನಿಂತರು. ಅವರ ನಟನೆ ಮತ್ತು ನೃತ್ಯ ಚಿತ್ರದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿತು.



ಭಗವಾನ್ ದಾದಾ ಮೊದಲು ಕೇವಲ 'ಬಿ-ಗ್ರೇಡ್' ಆಕ್ಷನ್ ಮತ್ತು ಸ್ಟಂಟ್ ಚಿತ್ರಗಳನ್ನು ಮಾಡುತ್ತಿದ್ದರು. ಆದರೆ ಅವರ ಆತ್ಮೀಯ ಗೆಳೆಯ ರಾಜ್ ಕಪೂರ್ ಅವರು ಭಗವಾನ್ ಅವರಿಗೆ 'ಒಂದು ಸಾಮಾಜಿಕ ಕಳಕಳಿಯ ಸಂಗೀತಮಯ ಚಿತ್ರ ಮಾಡು' ಎಂದು ಸಲಹೆ ನೀಡಿದರು. ಆ ಸಲಹೆಯ ಫಲವಾಗಿ ಮೂಡಿ ಬಂದಿದ್ದೇ 'ಅಲ್ಬೇಲಾ'. ಇದು 1951ರ ಸಾಲಿನ ಮೂರನೇ ಅತಿ ದೊಡ್ಡ ಹಿಟ್ ಚಿತ್ರವಾಗಿ ದಾಖಲೆ ಬರೆಯಿತು.

ಈ ಚಿತ್ರದ ಯಶಸ್ಸಿನಲ್ಲಿ ಸಂಗೀತ ನಿರ್ದೇಶಕ ಸಿ. ರಾಮಚಂದ್ರ ಪಾತ್ರ ಬಹಳ ದೊಡ್ಡದು. 'ಶೋಲಾ ಜೋ ಭಡ್ಕೆ' ಹಾಡಿನಲ್ಲಿ ಅವರು ಅಂದಿನ ಕಾಲಕ್ಕೆ ಅತ್ಯಂತ ಹೊಸದಾದ 'ವೆಸ್ಟರ್ನ್ ಬೀಟ್ಸ್' ಮತ್ತು ಲಯವನ್ನು ಬಳಸಿದ್ದರು. ವಿಶೇಷವೆಂದರೆ, ಈ ಹಾಡನ್ನು ಅವರು ಕೇವಲ ಒಂದು ರಾತ್ರಿಯಲ್ಲಿ ಸಂಯೋಜಿಸಿದ್ದರು. ಚಿತ್ರದ ಮತ್ತೊಂದು ಜನಪ್ರಿಯ ಹಾಡು 'ಧೀರೆ ಸೆ ಆಜಾ ರಿ ಅಖಿಯೋನ್ ಮೇ' ಇಂದಿಗೂ ಅತ್ಯುತ್ತಮ ಲಾಲಿ ಹಾಡುಗಳಲ್ಲಿ ಒಂದಾಗಿದೆ.

ಭಗವಾನ್ ದಾದಾ ಅವರ ನಿಜವಾದ ಹೆಸರು ಭಗವಾನ್ ಆಭಾಜಿ ಪಾಲ್ಕರ್. ಚಿತ್ರರಂಗಕ್ಕೆ ಬರುವ ಮೊದಲು ಅವರು ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದರು ಮತ್ತು ಅಲ್ಲಿ ಸಿಗುತ್ತಿದ್ದ ಬಿಡುವಿನ ವೇಳೆಯಲ್ಲಿ ಕುಸ್ತಿ ಕಲಿಯುತ್ತಿದ್ದರು. ಆ ದೈಹಿಕ ಶಕ್ತಿ ಮತ್ತು ಶ್ರಮವೇ ಅವರು ಸ್ಟಂಟ್ ಚಿತ್ರಗಳಲ್ಲಿ ಮಿಂಚಲು ನೆರವಾಯಿತು. 'ಅಲ್ಬೇಲಾ' ಮೂಲಕ ಅವರು ಒಬ್ಬ ಸಾಧಾರಣ ಸ್ಟಂಟ್ ಮ್ಯಾನ್ ಕೂಡ ದೊಡ್ಡ ಮಟ್ಟದ ಸೋಷಿಯಲ್ ಡ್ರಾಮಾ ನಿರ್ದೇಶಿಸಬಹುದು ಎಂದು ಸಾಬೀತುಪಡಿಸಿದರು.

'ಅಲ್ಬೇಲಾ' ಚಿತ್ರದ ಭರ್ಜರಿ ಯಶಸ್ಸಿನ ನಂತರ ಭಗವಾನ್ ದಾದಾ ಜೀವನವೇ ಬದಲಾಯಿತು. ಆ ಕಾಲದಲ್ಲೇ ಅವರು ಮುಂಬೈನ ಜುಹು ಸಮುದ್ರ ತೀರದಲ್ಲಿ 25 ಕೋಣೆಗಳ ಭವ್ಯ ಬಂಗಲೆ ಹೊಂದಿದ್ದರು ಮತ್ತು ಪ್ರತಿದಿನಕ್ಕೆ ಒಂದರಂತೆ ಬಳಸಲು ಏಳು ಅತ್ಯಾಧುನಿಕ ಕಾರುಗಳನ್ನು ಇಟ್ಟುಕೊಂಡಿದ್ದರು. ಆ ಕಾಲದ ಅತಿ ಶ್ರೀಮಂತ ತಾರೆಗಳಲ್ಲಿ ಅವರೂ ಒಬ್ಬರಾಗಿದ್ದರು. ಗೀತಾ ಬಾಲಿ ಅಂದಿನ ದೊಡ್ಡ ತಾರೆಯಾಗಿದ್ದರೂ, ಭಗವಾನ್ ದಾದಾ ಅವರಂಥ ಸಣ್ಣ ಮಟ್ಟದ ನಟನಿಗೆ ಗೌರವ ನೀಡಿ, ಚಿತ್ರದ ಸೆಟ್‌ನಲ್ಲಿ ಸಾಮಾನ್ಯರಂತೆ ಬೆರೆಯುತ್ತಿದ್ದರು. 'ಶೋಲಾ ಜೋ ಭಡ್ಕೆ' ಚಿತ್ರೀಕರಣದ ಸಮಯದಲ್ಲಿ ಆ ಪೈಲ್ವಾನರ ಜತೆ ಹೆಜ್ಜೆ ಹಾಕಲು ಅವರು ತೋರಿದ ಉತ್ಸಾಹವೇ ಆ ಹಾಡು ಅಷ್ಟು ನೈಜವಾಗಿ ಮೂಡಿಬರಲು ಕಾರಣವಾಯಿತು.

ದುರದೃಷ್ಟವಶಾತ್, ನಂತರದ ದಿನಗಳಲ್ಲಿ ಅವರ ಚಿತ್ರಗಳು ಸೋಲನ್ನು ಅನುಭವಿಸಿದವು. ತಮ್ಮ ಸಂಪತ್ತನ್ನೆಲ್ಲ ಕಳೆದುಕೊಂಡು ಅವರು ಅಂತಿಮವಾಗಿ ಮುಂಬೈನ ಒಂದು ಸಣ್ಣ ಚಾಳದಲ್ಲಿ ವಾಸಿಸುತ್ತಿದ್ದರು. ಕಾರುಗಳೆಲ್ಲ ಮಾರಾಟವಾಗಿ ಹೋದವು. ಆದರೂ, ಇಂದಿಗೂ ಬಾಲಿವುಡ್‌ನ ಯಾವುದೇ ನಟ 'ಕಾಮಿಡಿ ಡಾನ್ಸ್' ಮಾಡಬೇಕೆಂದರೆ ಮೊದಲು ನೆನಪಿಸಿಕೊಳ್ಳುವುದು ಭಗವಾನ್ ದಾದಾ ಅವರನ್ನೇ.

ಫಿಲಿಪ್ಪೈನ್ಸ್‌ನಲ್ಲಿ ಕಂಡಿದ್ದು

ನಾನು ಇತ್ತೀಚೆಗೆ ಫಿಲಿಪ್ಪೈನ್ಸ್ ಹೋದಾಗ ಅಲ್ಲಿನ ಏಂಜಲೀಸ್ ನಗರಕ್ಕೆ ಹೋಗಿದ್ದೆ. ಅಲ್ಲಿನ ಬಡಾವಣೆಯೊಂದರ ಹೋಟೆಲಿನಲ್ಲಿ ಉಳಿದುಕೊಂಡಾಗ, ಸಾಯಂಕಾಲ ವಾಕ್ ಮಾಡುವಾಗ ಒಂದು ಮನೆ ಮುಂದಿನ ಗೇಟ್‌ಗೆ, ನಮ್ಮಲ್ಲಿ ನೇತು ಹಾಕುವಂತೆ, ಒಂದು ಫಲಕವನ್ನು ನೇತು ಹಾಕಿದ್ದನ್ನು ಕಂಡೆ. ಆದರೆ ನಮ್ಮಲ್ಲಿನ ಫಲಕಕ್ಕಿಂತ ಅದು ತುಸು ಭಿನ್ನವಾಗಿತ್ತು. ಅದರ ಮೇಲೆ ಹೀಗೆ ಬರೆದಿತ್ತು - 'ನಾಯಿ ತುಂಬಾ ಸೌಮ್ಯವಾಗಿದೆ, ಆದರೆ ಅದರ ಮಾಲೀಕನ ಬಗ್ಗೆ ಜಾಗ್ರತೆ ವಹಿಸಿ!' (The dog is friendly, but beware of the owner!)

ಫಿಲಿಪ್ಪೈನ್ಸ್‌ನ ಜನರು ಮೂಲತಃ ತಮಾಷೆ ಪ್ರಿಯರು. ಅಪರಿಚಿತರು ಅಥವಾ ಮಾರಾಟಗಾರರು ಅನಗತ್ಯವಾಗಿ ಮನೆಗೆ ಬರುವುದನ್ನು ತಡೆಯಲು ಮಾಲೀಕರು ಕಂಡುಕೊಂಡ ವಿನೂತನ ಮಾರ್ಗ ಇದು. 'ನಾನು ನಾಯಿಗಿಂತ ಭಯಂಕರ' ಎಂದು ಪರೋಕ್ಷವಾಗಿ ಹೇಳುವ ಮೂಲಕ ಜನರನ್ನು ನಗಿಸುತ್ತಲೇ ದೂರವಿಡುತ್ತಾರೆ. ಅಲ್ಲಿನ ಜನರು ತಮ್ಮ ಸಾಕುಪ್ರಾಣಿಗಳನ್ನು ಅತಿಯಾಗಿ ಪ್ರೀತಿಸುತ್ತಾರೆ. ತನ್ನ ನಾಯಿ ಯಾರಿಗೂ ಕಚ್ಚುವುದಿಲ್ಲ ಎಂದು ಸಮರ್ಥಿಸಿಕೊಳ್ಳುತ್ತಲೇ, ತನ್ನ ಖಾಸಗಿತನವನ್ನು ರಕ್ಷಿಸಿಕೊಳ್ಳುವ ಕಲೆ ಇದು. ಈ ಫಲಕವನ್ನು ನೋಡಿದ ಪ್ರವಾಸಿಗರು ಹೆದರುವ ಬದಲು ಅಲ್ಲಿ ನಿಂತು ಸೆಲ್ಫಿ ತೆಗೆದುಕೊಳ್ಳುವುದು ಹೆಚ್ಚು! ಇದು ಆ ಮನೆಯ ಮಾಲೀಕ ಮತ್ತು ಹಾದಿಹೋಕರ ನಡುವೆ ಒಂದು ಮೌನ ಸಂವಾದವನ್ನು ಏರ್ಪಡಿಸುತ್ತದೆ.

ಕೇವಲ ಮನೆಗಳ ಮುಂದೆ ಮಾತ್ರವಲ್ಲ, ಮನಿಲಾದ ಜನಪ್ರಿಯ ವಾಹನವಾದ 'ಜೀಪ್ನಿ' (Jeepney) ಗಳ ಮೇಲೂ, ನಮ್ಮಲ್ಲಿ ಆಟೋಗಳ ಮೇಲೆ ಬರೆದಂತೆ, ಇಂಥ ತಮಾಷೆಯ ಸಾಲುಗಳನ್ನು ಕಾಣಬಹುದು. ಉದಾಹರಣೆಗೆ, ದೇವರು ನಗುವವರನ್ನು ಪ್ರೀತಿಸುತ್ತಾನೆ, ಆದರೆ ಸಾಲ ಮರುಪಾವತಿಸುವವರನ್ನು ಹೆಚ್ಚು ಪ್ರೀತಿಸುತ್ತಾನೆ!, ಇದು ಜೀಪ್ನಿ ಅಷ್ಟೇ, ರಾಕೆಟ್ ಅಲ್ಲ! ದಯವಿಟ್ಟು ಅವಸರ ಮಾಡಬೇಡಿ, ಸುಂದರಿಯರಿಗೆ ಮಾತ್ರ ಮುಂಭಾಗದ ಸೀಟು ಮೀಸಲು, ಉಳಿದವರು ಹಿಂದೆ ಕುಳಿತುಕೊಳ್ಳಿ, ಚಾಲಕನಿಗೆ ಮದುವೆಯಾಗಿದೆ, ಆದರೆ ಪ್ರೀತಿ ಮಾಡಲು ಇನ್ನೂ ತಯಾರಿದ್ದಾನೆ, ನಿಮ್ಮ ಪ್ರೀತಿ ಕಳೆದುಹೋದರೆ ತಲೆಕೆಡಿಸಿಕೊಳ್ಳಿ, ಜೀಪ್ನಿ ಮಿಸ್ ಆದರೆ ಮುಂದಿನ ಹತ್ತು ನಿಮಿಷದಲ್ಲಿ ಇನ್ನೊಂದು ಬರುತ್ತದೆ, ಪ್ರಯಾಣಿಕರು ಇಲ್ಲಿ ದೇವರಿಗಿಂತ ಹೆಚ್ಚಾಗಿ ಚಾಲಕನನ್ನು ನಂಬಬೇಕು...

ಮಂದಾಕ್ರಾಂತಂ ವನಿತೆಯರಿಗೇ ಮೀಸಲಾದಂಥ ತಂತ್ರಂ...

ತಿಳಿರು ತೋರಣ
ಶ್ರೀವತ್ಸ ಜೋಶಿ
srivathsajoshi@yahoo.com

ಅ.ರಾ. ಮಿತ್ರ ಅವರು ಹೇಳಿದ್ದಿದು, ನಾನಲ್ಲ! ಅಲ್ಲದೆ ಕಾಲುಭಾಗವನ್ನಷ್ಟೇ ಹೆಣೆದಿದ್ದಾರೆ. ಸಾಮಾನ್ಯವಾಗಿ ನಾಲ್ಕು ಸಾಲುಗಳ ಪರಿಪೂರ್ಣ ಪದ್ಯವಾಗಿ ಇಂಥವನ್ನು ಅವರು ಬರೆಯುತ್ತಾರೆ. ಅವರ 'ಛಂದೋಮಿತ್ರ' ಕೃತಿಯಲ್ಲಿ ದಂಡಿಯಾಗಿ ಸಿಗುತ್ತವೆ. ಭಲೇ ತಮಾಷೆಯಾಗಿರುತ್ತವೆ ಆ ಪದ್ಯಗಳು. ನಾನು ಆಗಾಗ ಓದಿ ಆನಂದಿಸುವುದಿದೆ. ಆದರೆ, ಇಲ್ಲಿ 'ಮಂದಾಕ್ರಾಂತಂ ವನಿತೆಯರಿಗೇ ಮೀಸಲಾದಂಥ ತಂತ್ರಂ' ಅಂತ ಒಂದೇ ಸಾಲಿಗೆ ನಿಲ್ಲಿಸಿದ್ದಾರೆ. ಬಹುಶಃ ವನಿತೆಯರು ಹುಸಿ ಮುನಿಸು ತೋರುತ್ತ ಮುಖ ಗಂಟಿಕ್ಕಿಕೊಳ್ಳುವುದು ಬೇಡವೆಂದು ಇರಬಹುದು. ಇನ್ನೂ ಮೂರು ಸಾಲುಗಳನ್ನು ಸೇರಿಸಿರುತ್ತಿದ್ದರೆ ಬಹಳವೇ ಸ್ವಾರಸ್ಯಕರವಾಗಿರುತ್ತಿತ್ತು, ಮಜಾ ಬರುತ್ತಿತ್ತು.

ಏನು ವಿಷಯ? ಏನಿದು ಮಂದಾಕ್ರಾಂತ? ಮೇಲಿನ ಒಂದು ಸಾಲಿನ ಮಟ್ಟಿಗಷ್ಟೇ ಹೇಳುವುದಾದರೆ 'ಮಂದವಾದ ಆಕ್ರಾಂತವೇ ಮಂದಾಕ್ರಾಂತ.' ಮಂದವಾದ ಅಂದರೆ ನಿಧಾನ ಗತಿಯ. ಆಕ್ರಾಂತ ಅಂದರೆ ವ್ಯಾಪಿಸಲ್ಪಟ್ಟ ಅಥವಾ ಅತಿಕ್ರಮಿಸಲ್ಪಟ್ಟ ಅಂತ ಅರ್ಥ. ನೋಯಿಸಲ್ಪಟ್ಟ ಎಂಬ ಇನ್ನೊಂದು ಅರ್ಥವೂ ಇದೆ. ವನಿತೆಯರು ಯಾವುದರಲ್ಲೇ ಆದರೂ, ಯಾವುದನ್ನೇ ಆದರೂ, ನಿಧಾನ ಗತಿಯಲ್ಲಿ (ಆದರೆ ಅತ್ಯಂತ ಪರಿಣಾಮಕಾರಿಯಾಗಿ) ವ್ಯಾಪಿಸುತ್ತಾರೆ, ಅತಿಕ್ರಮಿಸುತ್ತಾರೆ, ಬಯಸಿದ್ದನ್ನು ಕೊನೆಗೂ ಈಡೇರಿಸಿಕೊಳ್ಳುತ್ತಾರೆ. ಅವರ ನಡಿಗೆಯೂ ಹಾಗೆಯೇ. ಒಂದುವೇಳೆ ನೊಂದುಕೊಳ್ಳುವುದು ಅಥವಾ ನೋವುಂಟುಮಾಡುವುದಿದ್ದರೂ ಅಷ್ಟೇ-ನಿಧಾನವೇ ಪ್ರಧಾನ. ಆದ್ದರಿಂದಲೇ ಅ.ರಾ. ಮಿತ್ರರು ಹೇಳಿರಬೇಕು ಮಂದಾಕ್ರಾಂತವು ವನಿತೆಯರ ಟ್ರೇಡ್‌ಮಾರ್ಕ್ ತಂತ್ರ ಎಂದು. ಬಹುಮಟ್ಟಿಗೆ ಸತ್ಯಾಂಶವೇ ಇರುವ, ನಾವೆಲ್ಲರೂ ಒಪ್ಪಬಹುದಾದ ವ್ಯಂಗ್ಯೋಕ್ತಿಯಿದು ಎನ್ನೋಣ.

ಆದರೆ, ನಿಜವಾಗಿ ಹೇಳಹೊರಟಿದ್ದು ವನಿತೆಯರ ಸ್ವಭಾವದ ಬಗ್ಗೆಯಲ್ಲ. ಮಂದಾಕ್ರಾಂತ ಎಂಬ ಛಂದಸ್ಸಿನ ಬಗ್ಗೆ. ಛಂದಸ್ಸಿನಲ್ಲೊಂದು ಅಕ್ಷರವೃತ್ತವನ್ನು ಕುರಿತು ಎಂದು ಹೇಳಿದರೆ ಇನ್ನಷ್ಟು ಸರಿ. ನಾಲ್ಕು ಪಾದ (ಸಾಲು)ಗಳುಳ್ಳ ಪದ್ಯದಲ್ಲಿ ಪ್ರತಿ ಪಾದದಲ್ಲೂ ತಲಾ 17 ಅಕ್ಷರಗಳು. ಯಮಾತಾರಾಜಭಾನಸಲಗಂ ಸೂತ್ರದಂತೆ ಗುರು-ಲಘುಗಳನ್ನು ಗುರುತಿಸಿ ಗಣಗಳಾಗಿಸಿದರೆ ಪ್ರತಿ ಪಾದದಲ್ಲಿ ಮಗಣ, ಭಗಣ, ನಗಣ, ತಗಣ, ತಗಣ, ಆಗಿ ಕೊನೆಗೆರಡು ಗುರುಗಳು ಉಳಿಯುತ್ತವೆ. ಗುನುಗುನಿಸಿದರೆ ಒಂದೊಂದು ಸಾಲೂ 'ನಾನಾನಾನಾ ನನನನನನಾ ನಾನನಾನಾನನಾನಾ' ಎಂಬ ರೀತಿಯಲ್ಲಿರುತ್ತದೆ. ಮೊದಲಿಗೆ ನಾಲ್ಕು ಅಕ್ಷರಗಳು, ಒಂದು ಮೈಕ್ರೊಸೆಕೆಂಡ್‌ನ ಅಲ್ಪವಿರಾಮ, ಮತ್ತೆ ಆರು ಅಕ್ಷರಗಳು, ಇನ್ನೊಂದು ಮೈಕ್ರೊಸೆಕೆಂಡ್‌ನ ಅಲ್ಪವಿರಾಮ, ಆಮೇಲೆ ಕೊನೆಯ ಏಳು ಅಕ್ಷರಗಳು. ಇದೇ ಮಧುರ ಮಂಜುಳ ಮನಮೋಹಕ ಮಂದಾಕ್ರಾಂತ.

ಅತ್ಯಂತ ಸೂಕ್ತ ಮತ್ತು ಜನಜನಿತ ಉದಾಹರಣೆಯೆಂದರೆ ವಿಷ್ಣುಸಹಸ್ರನಾಮದಲ್ಲಿ ಬರುವ ''ಶಾಂತಾಕಾರಂ, ಭುಜಗಶಯನಂ, ಪದ್ಮನಾಭಂ ಸುರೇಶಂ। ವಿಶ್ವಾಧಾರಂ, ಗಗನಸದೃಶಂ, ಮೇಘವರ್ಣಂ ಶುಭಾಂಗಂ। ಲಕ್ಷ್ಮೀಕಾಂತಂ, ಕಮಲನಯನಂ, ಯೋಗಿಭಿರ್ಧ್ಯಾನಗಮ್ಯಂ। ವಂದೇ ವಿಷ್ಣುಂ, ಭವಭಯಹರಂ, ಸರ್ವಲೋಕೈಕನಾಥಂ॥'' ಎಂಬ ಧ್ಯಾನಶ್ಲೋಕ. ಅಲ್ಪವಿರಾಮ ಚಿಹ್ನೆ ಸೇರಿಸಿ ಬರೆದದ್ದು ಎಲ್ಲೆಲ್ಲಿ ಮೈಕ್ರೊಸೆಕೆಂಡ್‌ನಷ್ಟು ವಿರಾಮವಿರುತ್ತದೆ ಎಂದು ತಿಳಿಸಲಿಕ್ಕೆ. ವಿಷ್ಣುಸಹಸ್ರನಾಮ ಇಡೀ ಗೊತ್ತಿಲ್ಲದಿದ್ದವರಿಗೂ ಈ ಶ್ಲೋಕ ಪರಿಚಿತವಿರುತ್ತದೆ.

ಭಗವದ್ಗೀತೆಯ ಸಂಪೂರ್ಣ ಪಾರಾಯಣದಲ್ಲೂ ಇದೇ ಶ್ಲೋಕ ಬರುತ್ತದೆ. ಇದೊಂದನ್ನು ಪಠಿಸುವುದು ನಿಮಗೆ ಗೊತ್ತಿದ್ದರೆ ಇಂದಿನ ಅಂಕಣದಲ್ಲಿ ಇನ್ನುಮುಂದೆ ಬರುವ ತರಹೇವಾರಿ ವೆರೈಟಿ ಮಿಕ್ಸ್ ಮಂದಾಕ್ರಾಂತ ಶ್ಲೋಕ/ಪದ್ಯಗಳನ್ನೆಲ್ಲ ನೀವು ಇದೇ ಧಾಟಿಯಲ್ಲಿ ಆರಾಮಾಗಿ ಓದಿಕೊಳ್ಳುವುದಕ್ಕಾಗುತ್ತದೆ. ಆಸಕ್ತಿಯಿದ್ದರೆ ರಾಗಬದ್ಧವಾಗಿ ಹಾಡುವುದಕ್ಕೂ ಆಗುತ್ತದೆ! ಛಂದೋಬದ್ಧ ಪದ್ಯಗಳ ಹಿರಿಮೆಯೇ ಅದು. ಅವುಗಳಿಗೆ ಅಭಿಜಾತ ಗೇಯತೆ ಇರುತ್ತದೆ.

ಸಂಸ್ಕೃತದ ಅತಿಪ್ರಖ್ಯಾತ ಅತಿಜನಪ್ರಿಯ ಕಾವ್ಯಗಳಲ್ಲೊಂದಾದ, ಕವಿಕುಲಗುರು ಕಾಳಿದಾಸನು ಬರೆದ 'ಮೇಘದೂತ'ದಲ್ಲಿ ಸುಮಾರು 110ರಷ್ಟು ಶ್ಲೋಕಗಳಿವೆ. ಎಲ್ಲವೂ ಮಂದಾಕ್ರಾಂತ ವೃತ್ತದವೇ. ಆ ರೀತಿಯ ವಿರಹವೇದನೆ ಮತ್ತು ಶೃಂಗಾರರಸ ಉಕ್ಕಿಹರಿವ ಕಾವ್ಯಗಳಿಗೆ ಹೇಳಿಮಾಡಿಸಿದ ವೃತ್ತವದು ಎಂದು ವಿದ್ವಾಂಸರ ಅಂಬೋಣ. ಅದನ್ನು ಜನಪ್ರಿಯವಾಗಿಸಿದ ಕೀರ್ತಿ ಕಾಳಿದಾಸನಿಗೆ ಸಲ್ಲುತ್ತದೆಂಬುದೂ ಸರ್ವಮಾನ್ಯ. ಏಕೆಂದರೆ ಮೇಘದೂತವು ದೂತಕಾವ್ಯ ಎಂಬ ಹೊಸದೊಂದು ಕಾವ್ಯಪ್ರಕಾರವನ್ನೇ ಹುಟ್ಟುಹಾಕಿತು. ಆಮೇಲೆ ಅದನ್ನನುಸರಿಸಿ ಮತ್ತಷ್ಟು ದೂತಕಾವ್ಯಗಳು ಮಂದಾಕ್ರಾಂತ ಛಂದಸ್ಸಿನಲ್ಲೇ ರಚನೆಯಾದವು. ಸಂಸ್ಕೃತವಾಙ್ಮಯ ಎಂಬ ಮಹಾಸಾಗರದಲ್ಲಿ ಮಗದಷ್ಟು ಮುತ್ತುರತ್ನಗಳು ಸೇರಿಕೊಂಡು ಅದು ಶ್ರೀಮಂತವಾಯಿತು.

ಮೇಘದೂತ ಆರಂಭವಾಗುವುದು ಈ ಶ್ಲೋಕದಿಂದ, ''ಕಶ್ಚಿತ್ಕಾಂತಾ ವಿರಹಗುರುಣಾ ಸ್ವಾಧಿಕಾರಾತ್ಪ್ರಮತ್ತಃ। ಶಾಪೇನಾಸ್ತಂ ಗಮಿತಮಹಿಮಾ ವರ್ಷಭೋಗ್ಯೇಣ ಭರ್ತುಃ। ಯಕ್ಷಶ್ಚಕ್ರೇ ಜನಕತನಯಾ ಸ್ನಾನಪುಣ್ಯೋದಕೇಷು। ಸ್ನಿಗ್ಧಚ್ಛಾಯಾ ತರುಷು ವಸತಿಂ ರಾಮಗಿರ್ಯಾಶ್ರಮೇಷು॥'' ಇದರ ಭಾವಾರ್ಥ ಹೀಗಿದೆ, ''ಒಬ್ಬಾನೊಬ್ಬ ಯಕ್ಷನು ತನ್ನ ಕರ್ತವ್ಯದಲ್ಲಿ ತಪ್ಪಿದಾಗ ಒಡೆಯನಿಂದ ಶಪಿಸಲ್ಪಟ್ಟನು. ಅದರಿಂದಾಗಿ ಅವನ ಶಕ್ತಿ-ಮಹಿಮೆಗಳೆಲ್ಲವೂ ಕುಂದಿದವು. ಶಾಪದ ಅವಧಿಯಾದ ಒಂದು ವರ್ಷವನ್ನು ತನ್ನ ಕಾಂತೆಯಿಂದ ದೂರವಿದ್ದು ಕಳೆಯಲೆಂದು, ಹಿಂದೆ ವನವಾಸದಲ್ಲಿ ಸೀತೆಯು ಮಿಂದು ಪವಿತ್ರವಾದ ನೀರಿರುವ, ತಂಪಾದ ನೆರಳಿನ ಮರಗಳಿರುವ ರಾಮಗಿರಿಯ ಆಶ್ರಮದಲ್ಲಿ, ವಿರಹದುಃಖವನ್ನು ಅನುಭವಿಸುತ್ತ ವಾಸಿಸತೊಡಗಿದನು.''

ಕುಬೇರನ ಸೇವಕರಾಗಿ ಒಂದಷ್ಟು ಯಕ್ಷರು ಕೆಲಸ ಮಾಡುತ್ತಿದ್ದದ್ದು, ಅವರ ಪೈಕಿ ಒಬ್ಬ ಯಕ್ಷನು ಕೆಲಸಕ್ಕೆ ಗಮನ ಕೊಡದೆ ತನ್ನ ಪತ್ನಿಯೊಂದಿಗೇ ಹೆಚ್ಚು ಕಾಲಕಳೆಯುತ್ತಿದ್ದದ್ದು, ಕುಪಿತನಾದ ಕುಬೇರನು ಅವನನ್ನು ಒಂದು ವರ್ಷ ಕಾಲ ಪತ್ನಿಯಿಂದ ದೂರ ಇರುವಂತೆ ಶಪಿಸಿದ್ದು, ಮಧ್ಯಭಾರತದ ದಟ್ಟಡವಿಯ ಪ್ರದೇಶದಲ್ಲಿ ರಾಮಗಿರಿ ಎಂಬ ಆಶ್ರಮದಲ್ಲಿ ಆತ ಆ ಅವಧಿಯನ್ನು ಕಳೆದದ್ದು, ಹಿಮಾಲಯದಲ್ಲಿ ಅಲಕಾಪುರಿ ಎಂಬಲ್ಲಿ ಇರುವ ಪತ್ನಿಯನ್ನು ನೆನೆನೆನೆದು ಪ್ರತಿಕ್ಷಣವೂ ಪರಿತಪಿಸಿದ್ದು, ಮಳೆಗಾಲದ ಆರಂಭದಲ್ಲಿ ಮೋಡ ಕಂಡುಬಂದಾಗ ಮೋಡದ ಮೂಲಕ ತನ್ನ ಪತ್ನಿಗೆ ಪ್ರೇಮಸಂದೇಶ ಕಳಿಸಿದ್ದು... ಇದು ಮೇಘದೂತ ಕಾವ್ಯದ ಸ್ಥೂಲ ಕಥಾಹಂದರ. ರಾಮಗಿರಿಯಿಂದ ಅಲಕಾಪುರಿವರೆಗಿನ ದಾರಿಯ ವರ್ಣನೆಯನ್ನು ಮೇಘ(ಮೋಡ)ಕ್ಕೆ ಆ ಯಕ್ಷ ಹೇಳಿದ್ದೇ ಮೇಘದೂತ ಕಾವ್ಯದ ರಸೋತ್ಕಟ ಅಂಶ. ದಾರಿಯಲ್ಲಿ ಸಿಗುವ ಉಜ್ಜಯಿನಿ ನಗರದ ದೃಶ್ಯಾವಳಿಯಂತೂ ವೈಭವೋಪೇತ ಅನಿಸುವಂಥದ್ದು (ಆ ಭಾಗದ ನಾಲ್ಕೈದು ಶ್ಲೋಕಗಳು ನಮಗೆ ಪ್ರೌಢಶಾಲೆಯಲ್ಲಿ ಸಂಸ್ಕೃತ ಪ್ರಥಮಭಾಷೆ ಪಠ್ಯಪುಸ್ತಕದಲ್ಲಿ ಇದ್ದವು).

ಕಾಳಿದಾಸನ ಕಾವ್ಯಶಕ್ತಿಯಿಂದ ಹೊಮ್ಮಿದ ಸೂಕ್ಷ್ಮಾತಿಸೂಕ್ಷ್ಮ ಕುಸುರಿ ಕೆತ್ತನೆ ಮೇಘದೂತ ಕಾವ್ಯದ ರಸಗ್ರಂಥಿಗಳು. ಯಕ್ಷನ ಮಾತುಗಳ ಮೂಲಕ ಮೋಡವನ್ನು ನಿರ್ದೇಶಿಸಿದ ಕಾಳಿದಾಸ ಅಪ್ರತಿಮ ಕಾವ್ಯಶಕ್ತಿಯನ್ನಷ್ಟೇ ಅಲ್ಲ, ತನ್ನ ಭೌಗೋಳಿಕ ಜ್ಞಾನವನ್ನೂ ಮೆರೆದಿದ್ದಾನೆ. ಆಕಾಶಮಾರ್ಗದಲ್ಲಿ ಸಾಗಿದವರಿಗೆ ಮಾತ್ರ, ಅಥವಾ ಈಗಲಾದರೆ ಡ್ರೋನ್ ವಿಡಿಯೊಗ್ರಫಿಗೆ ಮಾತ್ರ, ಗೋಚರಿಸಬಹುದಾದ ಭೂರಚನೆಗಳು, ಅಲ್ಲಿನ ಹವಾಮಾನ ಬದಲಾಗುವ ರೀತಿ ಮುಂತಾದ ವರ್ಣನೆಗಳೆಲ್ಲ ಮೇಘದೂತದಲ್ಲಿ ಬರುತ್ತವೆ. ಇವು ಮಂದಾಕ್ರಾಂತ ವೃತ್ತಛಂದಸ್ಸಿನಿಂದಾಗಿ ಮತ್ತೂ ಮನೋಹರವೆನಿಸುತ್ತವೆ.

ಮೇಘದೂತ ಕಾವ್ಯದ ಅನನ್ಯತೆ ವಿಶಿಷ್ಟತೆ ಎಷ್ಟೆಂದರೆ ಭಾರತದ ಬೇರೆಲ್ಲ ಭಾಷೆಗಳ ಸಾಹಿತ್ಯದ ಮೇಲೂ ಅದು ಗಾಢ ಪ್ರಭಾವವನ್ನು ಬೀರಿದೆ. ಅದರಲ್ಲಿ ಮಂದಾಕ್ರಾಂತ ವೃತ್ತದ್ದೂ ಮಹತ್ತರ ಪಾಲಿದೆ. ಪ್ರತಿ ಭಾಷೆಯಲ್ಲಿಯೂ ಮೇಘದೂತದ ಹಲವು ಅನುವಾದಗಳು

ಪ್ರಕಾಶಗೊಂಡಿವೆ. ಕನ್ನಡದಲ್ಲಿ ಎಸ್.ವಿ. ಪರಮೇಶ್ವರ ಭಟ್ಟ, ದ.ರಾ. ಬೇಂದ್ರೆ, ಅ.ರಾ. ಮಿತ್ರ, ಗಣಪತಿ ಮೊಳೆಯಾರ ಮುಂತಾದ ಕವಿಶ್ರೇಷ್ಠರು ಮೇಘದೂತವನ್ನು ಅನುವಾದಿಸಿ ಉತ್ಕೃಷ್ಟ ಕೃತಿಗಳನ್ನು ರಚಿಸಿದ್ದಾರೆ. ಅಷ್ಟೇಅಲ್ಲ, ಕನ್ನಡದಲ್ಲಿ ಈ ಎಲ್ಲ ಅನುವಾದಗಳ ತುಲನಾತ್ಮಕ ಅಧ್ಯಯನ ಮಾಡಿ ವಿದುಷಿ ಶೈಲಜಾ ಹೆಗಡೆಯವರು 'ಕಾಳಿದಾಸನ ಮೇಘದೂತ ಮತ್ತು ಕನ್ನಡ ರೂಪಾಂತರಗಳು' ಎಂಬ ಸಂಪ್ರಬಂಧ ಬರೆದು ಎಂಫಿಲ್ ಪದವಿ ಪಡೆದಿದ್ದಾರೆ.

ಎಸ್.ವಿ. ಪರಮೇಶ್ವರ ಭಟ್ಟ ಮತ್ತು ದ.ರಾ. ಬೇಂದ್ರೆಯವರ ಅನುವಾದ ಕೃತಿಗಳು ಅಂತರಜಾಲದಲ್ಲಿಯೂ ಲಭ್ಯವಿವೆ, ಅವುಗಳನ್ನು ನಾನೂ ಓದಿದ್ದೇನೆ. ಆದರೆ, ಅವುಗಳಲ್ಲಿ ಪದ್ಯಗಳು ಆಕರ್ಷಕ ಲಯದಲ್ಲಿವೆಯಾದರೂ ಮಂದಾಕ್ರಾಂತ ವೃತ್ತ ಛಂದಸ್ಸಿನಲ್ಲಿ ಬರೆದಿದ್ದಲ್ಲ. ಅ.ರಾ. ಮಿತ್ರ ಮತ್ತು ಗಣಪತಿ ಮೊಳೆಯಾರ ಅದನ್ನೂ ಸಾಧಿಸಿದ್ದಾರೆ! ಮೂಲ ಸಂಸ್ಕೃತದಂತೆಯೇ ಕನ್ನಡದಲ್ಲೂ ಮಂದಾಕ್ರಾಂತ ಛಂದಸ್ಸಿನಲ್ಲೇ ಬರೆದಿದ್ದಾರೆ. ಉದಾಹರಣೆಗೆ ಮೇಲೆ ವಿವರಿಸಿದ ಮೇಘದೂತದ ಆರಂಭಿಕ ಶ್ಲೋಕವು ಅನುಕ್ರಮವಾಗಿ ಅ.ರಾ. ಮಿತ್ರರ ಅನುವಾದದಲ್ಲಿ- ''ಯಾರೋ ಯಕ್ಷಂ ಮದದಿ ಮರೆದೇ ಶಾಪಕೀಡಾಗಿ ನೊಂದಂ। ವರ್ಷಂ ಒಂದೇಸವನೆ ನವೆವಂತಸ್ತದೈವಾಂಶದಿಂದಂ। ಧಾತ್ರೀ ಪುತ್ರೀ ಜಳಕ ಜಲದಾ ಪುಣ್ಯತಾಣಂಗಳಲ್ಲಿ। ಭಾರ್ಯಾದೂರಂ ತಿರುತಿರುಗಿದಂ ರಾಮಗಿರ್ಯಾಶ್ರಮಾಂತಂ'' ಮತ್ತು ಗಣಪತಿ ಮೊಳೆಯಾರರ ಅನುವಾದದಲ್ಲಿ ''ಓರ್ವಂ ಯಕ್ಷಂ ಕೆಲಸಕಲಸ ಲ್ಕೋಪಳಂ ಮೈಮೆಯಂ ಮೇಣ್। ಬಿಟ್ಟೋರ್ಕಾಲಂ ವಿರಹವುಣುವಂತಾಳ್ದನಿಂ ಶಾಪವಾಂತುಂ। ಛಾಯಾರಾಮಂ ಮರಗಳೆಸೆವಾ ರಾಮಗಿರ್ಯಾಶ್ರಮಂ ಸೇ। ರ್ದಿರ್ದಂ ರಾಮಪ್ರಿಯಳೆ ಜಳಕಂಗೈದ ತೀರ್ಥಂಗಳತ್ತಂ'' ಎಂದು ಮೇಳೈಸಿದೆ, ಮನಮೋಹಕವೆನಿಸುವ ಮಂದಾಕ್ರಾಂತದಲ್ಲಿ, ಶಾಂತಾಕಾರಂ ಭುಜಗಶಯನಂ... ಧಾಟಿಯಲ್ಲೇ ಈ ಪದ್ಯಗಳನ್ನು ಓದಿದರೆ ಅಥವಾ ಹಾಡಿಕೊಂಡರೆ ಓದಿನ ಸವಿ ಮತ್ತಷ್ಟು ಹೆಚ್ಚುತ್ತದೆ.

ಸರಿ, ಈಗಿನ್ನು ಮೇಘದೂತ ಮತ್ತು ಅದರ ಅನುವಾದಗಳನ್ನೆಲ್ಲ ಅಲ್ಲಿಗೇ ಬಿಟ್ಟು ಬೇರೊಂದಿಷ್ಟು ಲಘು ಧಾಟಿಯ, ಮನೋರಂಜನೆಯ, ಬಹುಭಾಷಾ ಮಂದಾಕ್ರಾಂತಗಳನ್ನು ಮೆಲ್ಲೋಣ. ಗುನುಗುನಿಸಲಿಕ್ಕೆ ಧಾಟಿ ಅದೇ- ಶಾಂತಾಕಾರಂ ಭುಜಗಶಯನಂ... ಮೊದಲಿಗೆ ಅ.ರಾ. ಮಿತ್ರರದೇ ಒಂದು ರಚನೆ, ಅವರ ಛಂದೋಮಿತ್ರ ಕೃತಿಯಲ್ಲಿ ಮಂದಾಕ್ರಾಂತ ಅಕ್ಷರವೃತ್ತಕ್ಕೆ ಕನ್ನಡ ಉದಾಹರಣೆಯ ರೀತಿಯಲ್ಲಿ ಕೊಟ್ಟಿರುವುದು. ಜೀವವಿಮಾ ನಿಗಮದ ಮಂತ್ರವೆಂಬಂತೆ ಇದನ್ನು ಓದಬೇಕು. ''ಯೋಗಕ್ಷೇಮಂ ವಹಿಸಿಕೊಳುವೆಂ ಪಾಲಿಸೀದಾರರಿಂದಂ। ತ್ಯಾಗಂ ಕೊಂಚಂ ಬಳೆವುದು ಧನಂ ಕಷ್ಟಕಾಲಕ್ಕೆ ಮಿತ್ರಂ। ಭಂಗಂ ಸಂಸಾರಿಗಳ ಬದುಕೇ ನಿಶ್ಚಿತಂ ಎಂದರಾರೋ। ಸಾಂಗಂ ನಿಮ್ಮೀ ಬದುಕದು ವಿಮಾಸೂತ್ರ ಸಂಬಂಧದಿಂದಂ'' ಎಷ್ಟು ಚೆನ್ನಾಗಿದೆ ಅಲ್ವಾ!? ಇನ್ನೂ ಒಂದು ಬರೆದಿದ್ದಾರೆ ಒಂದೇ ಸಾಲಿನದು: ''ಕ್ಯಾಂಟೀನ್ ಕಾಫೀ ಕುಡಿದ ಒಡನೇ ವಾಂತಿ ಬಂತಲ್ಲೊ ದೇವಾ!''

ಛಂದೋಬದ್ಧ ಪದ್ಯರಚನೆಯನ್ನೇ ಹವ್ಯಾಸವಾಗಿಸಿಕೊಂಡಿರುವ ಪ್ರತಿಭಾವಂತ ಸದ್ಗೃಹಿಣಿ ಮೋಹಿನಿ ದಾಮ್ಲೆಯವರ ಒಂದೆರಡು ರಚನೆಗಳು ಇಲ್ಲಿವೆ: ''ಮಂದಾಕ್ರಾಂತಾ ಬಹಳ ಮೆಲು ನೀ ಹೀಗೆ ಬಂದಾರೆ ಹೇಗೇ। ನನ್ನೀ ಬುದ್ಧಿ ಹೆಣಗುತಿಹುದೂ ಭಾರಿಯೇ ಜೋರು ನೋಡೇ। ಡೈಲೀ ಏನೋ ಹೊಸದು ಬರಿಲೇಬೇಕು ಅಂತೆಂಬ ಆಸೇ। ಬಾರೇ ತೋರುತ್ತೆನಗೆ ಸರಿ ದಾರೀಯನೂ ಒಮ್ಮೆ ತಾಯೇ'' ಮತ್ತು ''ಮಂದಾಕ್ರಾಂತಾಬರೆದು ಬರೆದೂ ನಂಗೆ ಈಗಾಯ್ತು ಬೋರೂ। ಸಂದಾಕಿನ್ನೊಂದ್ ಹೊಸದು ವರಸೇ ಹೇಳ್ಕೊಡೀ ಅಂದ್ರೆ ಸಾರೂ। ಒಂದೊಂದಾಗೇ ಕಲಿತು ನಮಗೇ ಒಪ್ಪಿಸೀ ಅಂದ್ರು ಮತ್ತೇ। ಹಿಂದಿಂದೆಲ್ಲಾ ಮರೆತರೆನಗೇ ವೃತ್ತವೇ ಮಾರ್ಕು ಗೊತ್ತೇ!'' ಮೋಹಿನಿ ಅವರಿಗೆ ಇಂತಹ ಪದ್ಯರಚನೆ ಎಷ್ಟು ಸುಲಭವೆಂದರೆ ದೈನಂದಿನ ಸಂಭಾಷಣೆಯನ್ನೇ ಪದ್ಯವಾಗಿಸಬಲ್ಲರು! ''ಸಂದೀಯಲ್ಲೇ ಇಣುಕಿ ನಗುವೇ ನಿತ್ಯ ಪುಷ್ಪಾ ಇದೇಕೇ? ಬಂದಾಯ್ತಲ್ಲೇ ಎರಡು ಘಳಿಗೇ ಇನ್ನು ಮಾತಾಡೆಯೇಕೇ!?'' ಛಂದೋಬದ್ಧ ಕವಿತೆರಚನೆಯ ಇನ್ನೊಬ್ಬ ಹವ್ಯಾಸಿ, ಸಚಿನ್ ಮುಂಗಿಲ ಅವರು ಹವ್ಯಕಕನ್ನಡದಲ್ಲಿ ಬರೆದ ಮಂದಾಕ್ರಾಂತ ಪದ್ಯವೊಂದಿದೆ, ಭಲೇ ತಮಾಷೆಯದು: ''ಬೈರಾಸನ್ನೇ ಮರೆತು ಹೆರಟೆನ್ ಮೀವಲೇಳಿಪ್ಪ ಕೋಣೆಂ। ಪೂರಾಮೈಗೇ ನೊರೆಯನೊರೆಸಲ್ ಚೆಂಬು ಕಾಣದ್ದೆಯಾತ್ತೈ। ಬೇರೆಂತಾರೂ ಪರಡಿಹುಡುಕಲ್ ಕೈಯಮೇಲೊಮ್ಮೆ ಮಾಡಲ್। ಹಾರಿತ್ತೊಂದಾ ಮಡಲಿನೆಡೆಲೇ ಕೂದಿಹಾ ಸಣ್ಣ ಸರ್ಪಂ'' ಸ್ನಾನ ಮಾಡಲಿಕ್ಕೆಂದು ಬಚ್ಚಲಕೋಣೆಗೆ ಹೋದಾಗ ಅಂಗವಸ್ತ್ರ ಮರೆತರಂತೆ. ಮುಖ-ಮೈಗೆಲ್ಲ ಸಾಬೂನು ಹಚ್ಚಿದಾಗ ನೊರೆಯಿಂದ ಉರಿಯಬಾರದೆಂದು ಕಣ್ಣುಗಳನ್ನೂ ಮುಚ್ಚಿಕೊಂಡಿದ್ದಾರೆ. ಚೊಂಬಿಗಾಗಿ ತಡಕಾಡುತ್ತ ಕೈಮೇಲೆ ಮಾಡಿದಾಗ ಸೋಗೆಗಳ ಮಾಡಿನಲ್ಲಿ ಅಡಗಿದ್ದ ಚಿಕ್ಕ ಹಾವೊಂದು ಹರಿದಾಡಿತಂತೆ!

ಸಂಸ್ಕೃತ ಮತ್ತು ಕನ್ನಡಗಳಂತೆಯೇ ಬೇರೆ ಭಾಷೆಗಳಲ್ಲೂ ಮಂದಾಕ್ರಾಂತ ರಚನೆ ಸಾಧ್ಯವಿದೆ. ಇಲ್ಲಿ ನಾನಿರುವ ವಾಷಿಂಗ್ಟನ್ ಡಿಸಿ ಪ್ರದೇಶದಲ್ಲೇ ಕ್ಯಾನ್ಸರ್ ಸಂಶೋಧನ ಸಂಸ್ಥೆಯಲ್ಲಿ ಹಿರಿಯ ವಿಜ್ಞಾನಿಯಾಗಿದ್ದು ಪ್ರವೃತ್ತಿಯಾಗಿ ಛಂದಃಶಾಸ್ತ್ರವನ್ನು ಅರೆದುಕುಡಿದಿರುವ ಜೆಜ್ಜಾಲ ಕೃಷ್ಣ ಮೋಹನ ರಾವು ಎಂಬೊಬ್ಬ ಪ್ರಕಾಂಡಪಂಡಿತರಿದ್ದಾರೆ. ಛಂದಸ್ಸಿನ ಒಂದೊಂದು ಪ್ರಕಾರದ ಬಗ್ಗೆಯೂ ಸಂಶೋಧನಾತ್ಮಕ ಪ್ರಬಂಧಗಳನ್ನು, ಆಯಾ ಪ್ರಕಾರಗಳಲ್ಲಿ ಸ್ವಂತ ರಚನೆಗಳನ್ನೂ ಸೇರಿಸಿ ಬರೆದಿದ್ದಾರೆ. ಅವರದೊಂದು ತೆಲುಗು ಪದ್ಯ, ಮಂದಾಕ್ರಾಂತ ವೃತ್ತದಲ್ಲಿ: ''ಕಾಕೀ ಕಾಕೀ ಕಡಲಿ ಕೊನಲೋ ಕಾಟುಕೇಮೈನ ಉಂದಾ। ಕೇಕೀ ಕೇಕೀ ಕೆರಲಿತಿವಿ ನೀಕೆವ್ವರಿಚ್ಚಾರೆ ನಾಟ್ಯಂ। ಆಕಾಶಂಲೋ ಅಲಲು ಅಲಲೈ ಆಡು ಓ ಮೇಘಮಾಲಾ। ನಾಕೋಸಂ ಆ ನಗವು ವಿರಿತೋ ನಾತಿ ಏಮಂದಿ ನೀತೋ'' (ಕಾಗೆಯೇ ಕಾಗೆಯೇ, ಕತ್ತಲೆಯ ಸಮುದ್ರದಲ್ಲಿ ಕಣ್ಣುಗಳನ್ನದ್ದಿ ಕಾಡಿಗೆ ಬಳಿದುಕೊಂಡೆಯಾ? ನವಿಲೇ ನವಿಲೇ, ಇಷ್ಟು ಚಂದ ಕುಣಿಯುತ್ತಿದ್ದೀಯಲ್ಲ ನಿನಗೆ ನಾಟ್ಯ ಕಲಿಸಿದವರಾರು? ಆಗಸದಲ್ಲಿ ಅಲೆ ಅಲೆಯಾಗಿ ಸಾಗಿರುವ ಮೋಡಗಳೇ, ಹೂನಗೆಯೊಂದಿಗಿನ ಬೆಡಗಿ ನನ್ನ ನಲ್ಲೆ ನನಗಾಗಿ ಏನನ್ನಾದರೂ ಹೇಳಿಕಳಿಸಿರುವಳೇ?)

ಮರಾಠಿ ಭಾಷೆಯಲ್ಲೊಂದು, ಮೇಘದೂತ ಬರೆದ ಕಾಳಿದಾಸನನ್ನು ಕೊಂಡಾಡುತ್ತ: ''ಮೇಘಾಂನೀ ಹೇ ಗಗನ ಭರತಾ ಗಾಢ ಆಷಾಢ ಮಾಸೀ। ಹೋಯೀ ಪರ್ಯುತ್ಸುಕ ವಿಕಲ ತೋ ಕಾಂತ ಏಕಾಂತವಾಸೀ। ತಃನಿಃಶ್ವಾಸ ಶ್ರವುನಿ ರಿಝುವೀ ಕೋಣ್ಹ ತ್ಯಾಚ್ಯಾ ಜಿವಾಸೀ। ಮಂದಾಕ್ರಾಂತಾ ಸರಲ ಕವಿತಾ ಕಾಲಿದಾಸೀ ವಿಲಾಸೀ।'' ಹಾಗೆಯೇ ಹಿಂದೀ ಭಾಷೆಯದೊಂದು, ನಮಾಮಿ ಗಂಗೇ ಪ್ರಾಜೆಕ್ಟ್‌ಗೆ ಮೊದಲು ಗಂಗೆ ಅಪವಿತ್ರಳಾಗಿದ್ದ ಕಾಲದ್ದು: ''ಪಾನೀ ಪೀನಾ ಹಿತಕರ ಸದಾ ಪ್ಯಾಸ ಜೋ ಹೈ ಬುಝಾತಾ। ಅಚ್ಛಾ ಪಾನೀ ನಿತ ಮಿಲ ಸಕೇ ಪ್ರಾಣ ಕೋ ಜೋ ಬಚಾತಾ। ಗಂಧೀ ಗಂಗಾ ಅಬ ನ ಕರತೀ ದೇಹ ಕೀ ಜೋ ಸಫಾಈ। ತೋ ಪಾಪೀ ಕೀ ವಹ ಕರ ಸಕೇ ಆಜ ಕೈಸೇ ಭಲಾಈ?'' (ಬಾಯಾರಿಕೆಯಾದಾಗ ಹಿತಕರವಾದ ನೀರು ಕುಡಿಯೋಣವೆನಿಸುವುದು ಸಹಜವೇ. ಆದರೆ, ಪ್ರಾಣವುಳಿಸುವ ಒಳ್ಳೆಯ ನೀರು ಸಿಗುವುದಾದರೂ ಹೇಗೆ? ಕೊಳೆತುಹೋಗಿರುವ ಗಂಗೆ ನಮ್ಮ ದೇಹವನ್ನೇ ಸ್ವಚ್ಛಗೊಳಿಸಲಾರಳಂತೆ ಇನ್ನು ಪಾಪಿಗಳ ಮನಸ್ಸನ್ನು ಹೇಗೆ ತಾನೆ ಸ್ವಚ್ಛಗೊಳಿಸಿಯಾಳು?)

ಕೊನೆಯಲ್ಲಿ ಈ ಅಂಕಣಬರಹಕ್ಕೆಂದೇ ವಿಶೇಷವಾಗಿ ಬರೆಸಿದ, ತಾಜಾತಾಜಾ ಸುಪರ್‌ಫ್ರೆಷ್ ಮಂದಾಕ್ರಾಂತ ಪದ್ಯವೊಂದನ್ನು ಪ್ರಸ್ತುತಪಡಿಸಿ ಸಮಾರೋಪ ಮಾಡೋಣ. ಇದನ್ನು ಬರೆದವರು ಬೆಂಗಳೂರಿನಲ್ಲಿರುವ ಸ್ನೇಹಿತ ಮೃತ್ಯುಂಜಯ ತೇಜಸ್ವಿ. ಕಂಪ್ಯೂಟರ್ ತಂತ್ರಜ್ಞಾನದ ವೃತ್ತಿಯಲ್ಲಿದ್ದರೂ ಪ್ರವೃತ್ತಿಯಾಗಿ ಛಂದೋಬದ್ಧ ಪದ್ಯರಚನೆಯಲ್ಲಿ ತೊಡಗಿಸಿಕೊಂಡಿರುವ ಪ್ರತಿಭಾನ್ವಿತ. ದೇವುಡು ಅವರ ಮಹಾಬ್ರಾಹ್ಮಣ ಕೃತಿಯನ್ನು ಸಂಪೂರ್ಣವಾಗಿ ಭಾಮಿನಿಷಟ್ಪದಿಗಳ ರೂಪದಲ್ಲಿ ಬರೆದು ಇತ್ತೀಚೆಗೆ ಪುಸ್ತಕ ಪ್ರಕಟಿಸಿದ ಮೇಧಾವಿ. ಭಾಮಿನಿಯಷ್ಟೇ ಅಲ್ಲದೆ ಛಂದಸ್ಸಿನ ವಿವಿಧ ಪ್ರಕಾರಗಳಲ್ಲಿ ಕೈಯಾಡಿಸಿರುವ, ತಿಳಿರುತೋರಣ ಅಂಕಣದಲ್ಲೂ ಈ ಹಿಂದೆ ಉಲ್ಲೇಖಗೊಂಡಿರುವ ಮೃತ್ಯುಂಜಯ ತೇಜಸ್ವಿ, ಇದುವರೆಗೆ ಮಂದಾಕ್ರಾಂತ ವೃತ್ತದಲ್ಲಿ ಕನ್ನಡ ಪದ್ಯ ರಚಿಸಿರಲಿಲ್ಲವಂತೆ. ಈ ಅಂಕಣಕ್ಕಾಗಿ ಒಂದು ಪದ್ಯ, ಪ್ರಚಲಿತ ವಿದ್ಯಮಾನವನ್ನು ವಸ್ತುವಾಗಿಟ್ಟುಕೊಂಡು ಬರೆದುಕೊಡುತ್ತೀರಾ ಎಂದು ನಾನು ವಾಟ್ಸ್ಯಾಪ್ ಸಂದೇಶದಲ್ಲಿ ಕೇಳಿದಾಗ ಅರ್ಧಗಂಟೆಯೊಳಗೆ ಬರೆದು ಕಳುಹಿಸಿರುವ ಪದ್ಯ: ''ಸಾಕ್ರೀ ನಿಮ್ಮಾಡಳಿತವೆನುತಾ ಸಿದ್ದರಾಮಯ್ಯರನ್ನೇ। ನೌಕ್ರೀಯಿಂದ್ಲೇ ಕೆಳಗಿಳಿಸಿದರ್ ಕೈಕಮಾಂಡ್ ನಿನ್ನೆತಾನೇ। ಸೀಕ್ರೇಟುಂಟೇನಿದರೊಳಥವಾ ಕಾಕತಾಲೀಯವೇನೋ। ಬಕ್ರೀದಂದೇ ಟಗರುಬಲಿಯಂ ಕೊಟ್ಟರೇಕೆಂದು ಗೊತ್ತೇ?''- ಇದಕ್ಕೆ ಹೆಚ್ಚಿನ ವ್ಯಾಖ್ಯಾನ ವಿವರಣೆಗಳೇನೂ ಬೇಕಿಲ್ಲವಷ್ಟೆ.

ಬಿರುಬೇಸಿಗೆಯನ್ನೂ ಸಹನೀಯವಾಗಿಸುವ ಅಮರಫಲ

ಸೀತೆಯನ್ನು ಹುಡುಕಿಕೊಂಡು ಬಂದ ಕಪಿಗಳಿಗೆ ಒಮ್ಮೆ ಔತಣಕೂಟವನ್ನು ಏರ್ಪಡಿಸಲಾಗಿತ್ತಂತೆ. ಊಟದಲ್ಲಿ ವಿಶೇಷ ತಳಿಯ ಮಾವಿನ ಹಣ್ಣುಗಳನ್ನು ಬಡಿಸಲಾಗಿತ್ತು. ಮಾವಿನ ಹಣ್ಣನ್ನು ತಿನ್ನುವಾಗ ಒಂದು ಕಪಿಯ ಕೈಯಿಂದ ಜಾರಿದ ಗೊರಟೆ ಎತ್ತರಕ್ಕೆ ಹಾರಿತಂತೆ. ನೀನೇ ಇಷ್ಟು ಎತ್ತರಕ್ಕೆ ಗೊರಟೆಯನ್ನು ಹಾರಿಸುವುದಾದರೆ ನಾವೇನು ನಿನಗೆ ಕಡಿಮೆಯೇ? ಎಂದು ಕಪಿಗಳೆಲ್ಲ ಒಬ್ಬರಿಗಿಂತ ಒಬ್ಬರು ಗೊರಟೆಯನ್ನು ಎತ್ತರಕ್ಕೆ ಹಾರಿಸಲು ಪ್ರಾರಂಭವಾಗಿ ಅಲ್ಲಿ ಅಲ್ಲೋಲ ಕಲ್ಲೋಲ ಸೃಷ್ಟಿಯಾಗಿ ಬಿಟ್ಟಿತ್ತಂತೆ. ಮೊದಲೇ ಹೇಳಿಕೇಳಿ ಮಂಗಗಳಲ್ಲವೇ?

ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vinayakbhat1669@gmail.com

ಸುಡು ಬೇಸಿಗೆಯಲ್ಲಿನ ಓಡಾಟಾ, ದೈಹಿಕ ಕೆಲಸಗಳು, ಅಷ್ಟೇ ಏಕೆ ರಾತ್ರಿಯ ನಿದ್ರೆಯೂ ಸೇರಿ ಎಲ್ಲವೂ ಸಾಕು ಎನಿಸಿಬಿಡುತ್ತದೆ. ಏನೂ ಮಾಡದಿದ್ದರೂ ಸುಸ್ತು, ಆಯಾಸ. ಯಾವಾಗಪ್ಪಾ ಈ ಬೇಸಿಗೆ ಕಾಲ ಮುಗಿಯೋದು ಮಳೆಗಾಲ ಶುರುವಾಗೋದು ಅನ್ನೋ ನಿರೀಕ್ಷೆ. ಅಂಥಾ ಬೇಸಿಗೆಯಲ್ಲೂ, ಇನ್ನೂ ಬೇಕೆನಿಸುವ ಯಾವುದಾದರೂ ಒಂದು ಸಂಗತಿಯಿದ್ದರೆ, ಬೇಸಿಗೆಯಲ್ಲೂ ಮನ ತಣಿಸುವ ವಸ್ತುವೊಂದಿದ್ದರೆ, ಸುಡು ಬೇಸಿಗೆಯನ್ನೂ ಸಂಭ್ರಮಿಸುವ ಹಾಗೆ ಮಾಡುವ ವಿಷಯವೊಂದಿದ್ದರೆ, ಬೇಸಿಗೆಯನ್ನೂ ಸಹನೀಯಗೊಳಿಸುವ, ಸ್ಮರಣೀಯವಾಗಿಸುವ ಏನಾದರೂ ಪ್ರಾಕೃತಿಕ ವಸ್ತು ಇದ್ದರೆ ಅದು ಹಣ್ಣುಗಳ ರಾಜ 'ಮಾವು' ಅಂತ ಸರ್ವಾನುಮತದಿಂದ ಹೇಳಬಹುದು. ಹಾಗಾಗಿಯೇ ಮಾವಿನ ಹಣ್ಣನ್ನು 'ಹಣ್ಣಿನ ರಾಜ', ಬೇಸಿಗೆಯ ಸಂಭ್ರಮ ಎನ್ನುವುದು. ಉಷ್ಣವಲಯದ ಹಣ್ಣುಗಳಲ್ಲಿ ಇಂದಿಗೂ ಮಾವಿನ ಹಣ್ಣಿಗೆ ಮೂರ್ಧನ್ಯ ಸ್ಥಾನವಿದೆ. ಮಾವಿನ ಹಣ್ಣಿಗಿರುವ ಈ ಸ್ಥಾನ ಹಾಗೂ ಮಾನ ಇನ್ನ್ಯಾವ ಹಣ್ಣಿಗೂ ಇಲ್ಲವೆನ್ನಬಹುದು.

ಅಂದಹಾಗೆ ಬೇಸಿಗೆಗೂ ಮಾವಿನ ಹಣ್ಣಿಗೂ ಸಂಬಂಧ ಕಲ್ಪಿಸುವ ಒಂದು ಪ್ರಮುಖ ಉಪಯೋಗಿ ಮಾಹಿತಿಯನ್ನೂ ಇಲ್ಲಿ ದಾಖಲಿಸಬೇಕು. ಸಾಮಾನ್ಯವಾಗಿ ಉತ್ತರ ಭಾರತದಲ್ಲಿನ ಬೇಸಿಗೆಯ ಬಿಸಿಲಿನ ಝಳ, ನಾವು ದಕ್ಷಿಣ ಭಾರತೀಯರು ಅದರಲ್ಲೂ ಕರ್ನಾಟಕದವರು ಅನುಭವಿಸುವ ಅತಿ ಕೆಟ್ಟ ಬೇಸಿಗೆಯ ಝಳದ ದುಪ್ಪಟ್ಟಿರುತ್ತದೆ. ಸೂರ್ಯನ ಆಘಾತಕ್ಕೆ ನೂರಾರು ಜನ ಪ್ರತಿ ವರ್ಷ ಬಲಿಯಾಗುತ್ತಾರೆ. ಹೀಗೆ 'ಸನ್ ಸ್ಟ್ರೋಕ್' ಆದವರಿಗೆ ಅತ್ಯಂತ ಹಾಗೂ ಏಕೈಕ ಪರಿಣಾಮಕಾರಿ ಚಿಕಿತ್ಸೆ / ಔಷಧಿ ಅಂದರೆ ಅದು ಗಳಿತ ಮಾವಿನ ಹಣ್ಣಿನ ಲೇಪನವಂತೆ. 'ಸನ್ ಸ್ಟ್ರೋಕ್' ಆದವರಿಗೆ ಎಷ್ಟು ಸಾಧ್ಯವೋ ಅಷ್ಟು ಗಳಿತ ಮಾವಿನಹಣ್ಣನ್ನು ಆದಷ್ಟು ಬೇಗನೇ ಮೈತುಂಬಾ ಲೇಪಿಸಬೇಕಂತೆ, ಹಾಗೆ ಲೇಪಿಸಿದರೆ ಅವರ ಜೀವವನ್ನು ಬಚಾವ್ ಮಾಡಬಹುದು ಎನ್ನುತ್ತಾರೆ ಅಲ್ಲಿಯ ಜನ. ಹಾಗಾಗಿ, ಮಾವಿನ ಹಣ್ಣು ಎಂದರೆ ಕೇವಲ ಬೇಸಿಗೆಯ ಸಂಭ್ರಮವೊಂದೇ ಅಲ್ಲ, ಬೇಸಿಗೆಯಲ್ಲಿ ಪ್ರಾಣ ರಕ್ಷಣೆಗೆ ಉಪಯೋಗಿಯೂ ಹೌದು ಎಂದಂತಾಯಿತು. ಮಾವಿನ ಹಣ್ಣಿಗೆ (ಆಮ್ರ ಫಲ) ಅಮರ ಫಲ ಅಥವಾ ಅಮೃತಫಲ ಎಂತಲೂ ಕರೆಯುವ ಪದ್ಧತಿಯಿದೆ.

ಮಾವಿನ ಹಣ್ಣು ಶ್ರೀಮಂತ ಇತಿಹಾಸ ಮತ್ತು ರೋಚಕ ದಂತಕಥೆಗಳನ್ನು ಹೊಂದಿದೆ. ಭಾರತದಲ್ಲಿನ ಮಾವಿನ ಹಣ್ಣಿನ ಇತಿಹಾಸ ಸುಮಾರು ಮೂರು ಸಾವಿರ ವರ್ಷಗಳಷ್ಟು ಹಳೆಯದಾಗಿದೆ. ರಾಮಾಯಣ ಕಾಲದಲ್ಲಿ ಆಂಜನೇಯ ಲಂಕೆಯಿಂದ ಬರುವಾಗ ಮಾವಿನ ಹಣ್ಣನ್ನು ಭಾರತಕ್ಕೆ ತಂದಿರುವುದರಿಂದ, ಮಾವಿನ ಪಿತಾಮಹ ಎನ್ನುವ ಆ ಕೀರ್ತಿ ಆಂಜನೇಯನಿಗೆ ಸಲ್ಲುತ್ತದೆ. ಅಶೋಕವನದಲ್ಲಿ ಸೀತೆಯನ್ನು ಭೇಟಿಯಾದ ನಂತರ, ಹನುಮನು ಸಿಕ್ಕಾಪಟ್ಟೆ ಮಾವಿನ ಹಣ್ಣುಗಳನ್ನು ಸವಿದು, ಅವುಗಳ ಕೆಲವು ಗೊರಟೆಗಳನ್ನು ಭಾರತಕ್ಕೆ ಹೊತ್ತು ತಂದನೆಂಬ ನಂಬಿಕೆಯಿದೆ. ಗೌತಮ ಬುದ್ಧನು ತನ್ನ ಭಕ್ತರಿಗೆ ನೆರಳು ಮತ್ತು ರುಚಿಕರವಾದ ಹಣ್ಣುಗಳನ್ನು ನೀಡಲು ಮಾವಿನ ಮರವನ್ನು ಸೃಷ್ಟಿಸಿದನೆಂಬ ಪೌರಾಣಿಕ ಕಥೆಯೂ ಇದೆ. ದೆಹಲಿ ಸುಲ್ತಾನನಾಗಿದ್ದ ಅಲ್ಲಾವುದ್ದೀನ್ ಖಿಲ್ಜಿ ಮಾವಿನ ಹಣ್ಣಿನ ಮಹಾನ್ ಪ್ರೇಮಿಯಾಗಿದ್ದು, ತನ್ನ ಕೋಟೆಯಲ್ಲಿ ಮಾವಿನ ಹಬ್ಬವನ್ನೇ ಆಚರಿಸುತ್ತಿದ್ದನಂತೆ. ಆತ, ಮಾವು ಕಾಮೋತ್ತೇಜಕ (Aphrodisiac) ಗುಣಗಳನ್ನು ಹೊಂದಿದೆ ಎಂದು ನಂಬಿದ್ದನಂತೆ.

ಈ ಬಾರಿ ಭಾರತದಲ್ಲಿ ಮಾವಿನ ಬೆಳೆ ಸಮೃದ್ಧವಾಗಿದೆ. ಯುದ್ಧ ಹಾಗೂ ಇತರ ಜಾಗತಿಕ ಒತ್ತಡಗಳ ಕಾರಣಗಳಿಂದಾಗಿ ಭಾರತದ ಮಾವಿನ ಹಣ್ಣಿನ ರಫ್ತಿನ ಮೇಲೆ ಪರಿಣಾಮವಾದಂತೆಯೂ ಕಾಣುತ್ತಿದೆ. ಹಾಗಾಗಿ ಈ ಬಾರಿ ಭಾರತದ ಮಾರುಕಟ್ಟೆಗೆ ಮಾವಿನ ಹಣ್ಣಿನ ಆವಕ ಹೇರಳವಾಗಿದೆ. ಹಾಗಾಗಿ ಬೆಲೆಯೂ ಕಡಿಮೆಯಿದೆ. ಅದಲ್ಲದಿದ್ದರೆ, ರತ್ನಾಗಿರಿ ಆಪೂಸು ಹಾಗೂ ಇನ್ನೂ ಕೆಲವು ಉತ್ತಮ ತಳಿಯ ಮಾವಿನ ಹಣ್ಣಿನ ಮೊದಲೆರಡು ದರ್ಜೆಯ ಮಾಲುಗಳು ಭಾರತೀಯರಿಗೆ ಸಿಕ್ಕುತ್ತಿರಲಿಲ್ಲ. ಎಲ್ಲ ವಿದೇಶಗಳ ಪಾಲಾಗುತ್ತಿತ್ತು. ಆದರೆ, ಈ ಬಾರಿ ಎಲ್ಲ ಸರಕುಗಳು ಈ ಬಾರಿ ಮಾರುಕಟ್ಟೆಗೆ ಲಗ್ಗೆಯಿಟ್ಟು ದರ್ಬಾರು ನಡೆಸುತ್ತಿದೆ. ನಮ್ಮ ಕಡೆ, ಮಾವಿನ ಬೆಳೆ ಜಾಸ್ತಿ ಆದರೆ ಲುಕ್ಸಾನು (Loss) ಅದೇ ಹಲಸಿನ ಬೆಳೆ ಜಾಸ್ತಿ ಬಂದರೆ ಲಾಭ ಎನ್ನುವ ಮಾತಿದೆ. ಕಾರಣ, ಮಾವಿಗೆ ನೆಂಟರು ಜಾಸ್ತಿ, ನೆಂಟರು ಬಂದರೆಂದರೆ ರಸಾಯನ ಪಕ್ಕಾ ಮಾಡಲಬೇಕಾದ ಕಜ್ಜಾಯ. ರಸಾಯನಕ್ಕೆ ಹಾಲು ಸಕ್ಕರೆ ಬೇಕೇ ಬೇಕು. ಹಾಗಾಗಿ ನೆಂಟರು ಜಾಸ್ತಿ ಎಂದರೆ ಖರ್ಚೂ ಜಾಸ್ತಿಯಾದಂತೆ ತಾನೆ? ಹಲಸಿಗೆ ಹಾಗಲ್ಲ. ಹೆಚ್ಚೆಂದರೆ ಕಡುಬು ಮಾಡಿದರಾಯಿತು, ಕಡುಬಿಗಾದರೆ ಅಗತ್ಯವಿರುವುದು ಸಕ್ಕರೆಗಿಂತ ಕಡಿಮೆ ಬೆಲೆಯ ಬೆಲ್ಲ. ಹಾಗಾಗಿ ಖರ್ಚು ಕಡಿಮೆ. ಇನ್ನು ಹಲಸಿನ ಬೀಜವೂ ಸಾಂಬಾರಿಗೆ ಉಪಯೋಗಕ್ಕೆ ಬರುತ್ತದೆ.

ವೈಜ್ಞಾನಿಕವಾಗಿ 'ಮ್ಯಾಂಗಿಫೆರಾ ಇಂಡಿಕಾ' ಎಂದು ಕರೆಯಲ್ಪಡುವ ಮಾವಿನ ಹಣ್ಣು, ಎಲ್ಲ ಹಣ್ಣಿನಂತೆ ಕೇವಲ ಒಂದು ಹಣ್ಣಲ್ಲ, ಇದು ಒಂದು ಸಾಂಸ್ಕೃತಿಕ ಸಂವೇದನೆಯ ಉತ್ತುಂಗ. ಜಾಗತಿಕವಾಗಿ ಹಣ್ಣುಗಳ ರಾಜ ಎಂದು ಗೌರವಿಸಲ್ಪಡುವ ಮಾವು ಉಷ್ಣವಲಯದ ಪ್ರದೇಶಗಳಲ್ಲಿ, ವಿಶೇಷವಾಗಿ ದಕ್ಷಿಣ ಏಷ್ಯಾದಲ್ಲಿ ಕೃಷಿ, ಪಾಕಶಾಲೆ ಮತ್ತು ಧಾರ್ಮಿಕವಾಗಿ ಸಾಟಿಯಿಲ್ಲದ ಸ್ಥಾನವನ್ನು ಹೊಂದಿದೆ. ಈ ರುಚಿಕರವಾದ ಹಣ್ಣು ಹಳ್ಳಿಯ ಮೂಲೆ ಮೂಲೆಯಿಂದ ಜಾಗತಿಕ ವೇದಿಕೆಯವರೆಗೆ ಪ್ರಯಾಣಿಸಿದೆ, ಅದರ ಮಾದಕ ಪರಿಮಳ, ರೋಮಾಂಚಕ ಬಣ್ಣ ಮತ್ತು ವಿಶಿಷ್ಟ ಪರಿಮಳಗಳೊಂದಿಗೆ ಅರಮನೆ, ಗುರುಮನೆಯಷ್ಟೇ ಅಲ್ಲದೇ ಸಾಮಾನ್ಯರ ಮನೆಗಳ ಅಡುಗೆಮನೆಗಳಲ್ಲೂ ಈ ಶ್ರಾಯದಲ್ಲಿ ಮಾವು ಸಮಾನವಾಗಿ ಅಧಿಕಾರನಡೆಸುತ್ತವೆ. ಮಾವು ಗೋಡಂಬಿ ಮತ್ತು ಪಿಸ್ತಾಗಳೊಂದಿಗೆ ತನ್ನ ವಂಶಾವಳಿಯನ್ನು ಹಂಚಿಕೊಳ್ಳುತ್ತದೆಯಂತೆ. ಭಾರತವು ಮಾವಿನ ಉತ್ಪಾದನೆಯ ಜಾಗತಿಕ ಉತ್ಪಾದನೆಯ ಸುಮಾರು ಅರ್ಧದಷ್ಟು ಭಾಗವನ್ನು ಹೊಂದಿದೆಯಂತೆ. ಜಾಗತಿಕವಾಗಿ, ಒಂದು ಸಾವಿರಕ್ಕೂ ಹೆಚ್ಚು ಮಾನ್ಯತೆ ಪಡೆದ ಮಾವಿನ ಪ್ರಭೇದಗಳಿವೆ ಎಂದು ಗುರುತಿಸಲಾಗಿದೆ. ಪ್ರತಿಯೊಂದೂ ಪ್ರಭೇದವೂ ರುಚಿ, ವಿನ್ಯಾಸ ಮತ್ತು ಸುವಾಸನೆಯಲ್ಲಿ ಭಿನ್ನತೆಯನ್ನೂ ವೈಶಿಷ್ಟ್ಯವನ್ನೂ ಹೊಂದಿದೆ. ಮಾವಿನ ಮರಗಳಿಗೆ ಆಯುಷ್ಯ ಜಾಸ್ತಿ, ಹಳೆಯ ತಳಿಗಳ ಮಾವಿನಮರಗಳು ಬಹಳ ದೀರ್ಘಕಾಲ ಬಾಳುವಂಥಾದ್ದಾಗಿದೆ. ಇನ್ನೂ ಒಂದು ವಿಶೇಷವೆಂದರೆ, ಒಂದೇ ಜಾತಿಯದ್ದಾದರೂ, ಅಥವಾ ಅದೇ ಮರದ ಬೀಜದಿಂದ ಹುಟ್ಟಿದ ಸಸ್ಯವಾದರೂ ರುಚಿ ಮಾತ್ರ ಬೇರೆಯದೇ ಇರುತ್ತದೆ.

ಐತಿಹಾಸಿಕವಾಗಿ, ಮಾವಿನ ಹಣ್ಣು ರಾಜಮನೆತನಕ್ಕೆ ಮೀಸಲಾದ ಐಷಾರಾಮಿ ಹಣ್ಣಾಗಿತ್ತು ಎನ್ನುವುದನ್ನು ತಿಳಿದರೆ ಅಚ್ಚರಿಯಾಗಬಹುದು. ರಾಜರು ತಮ್ಮ ಖಾಸಗಿ ಮಾವಿನ ತೋಟಗಳನ್ನು ಪ್ರಾಣಿ ಪಕ್ಷಿಗಳು ಅಥವಾ ಕಳ್ಳರುಗಳಿಂದ ಕಾಪಾಡಲು ದರೋಗಾಗಳನ್ನು ನೇಮಿಸುತ್ತಿದ್ದರಂತೆ. ಮೊಘಲ್ ಚಕ್ರವರ್ತಿಗಳು ಮಾವಿನ ಕೃಷಿಯನ್ನು ಒಂದು ಕಲಾ ಪ್ರಕಾರಕ್ಕೆ ಏರಿಸಿದ್ದರು. ಚಕ್ರವರ್ತಿ ಅಕ್ಬರ್ ಈ ಹಣ್ಣಿನಿಂದ ಎಷ್ಟು ಆಕರ್ಷಿತನಾಗಿದ್ದರೆಂದರೆ, ಆತ ಬಿಹಾರದ ದರ್ಭಂಗಾದಲ್ಲಿ ಒಂದು ಲಕ್ಷ ಮಾವಿನ ಮರಗಳನ್ನು ಹೊಂದಿರುವ ವಿಸ್ತಾರವಾದ ತೋಟವಾದ 'ಲಕ್ಷ್ ಬಾಗ್'ಅನ್ನು ಹೊಂದಿದ್ದನಂತೆ. ಅಬುಲ್-ಫಜಲ್ ಸೇರಿದಂತೆ ಅಕ್ಬರನ ಆಸ್ಥಾನ ಕವಿಗಳು ಮತ್ತು ಇತಿಹಾಸಕಾರರು, ಆ ಕಾಲದ ಕಸಿಯಂತಹ ಸಂಕೀರ್ಣ ತೋಟಗಾರಿಕೆ ತಂತ್ರಗಳನ್ನು ದಾಖಲಿಸುತ್ತಾರೆ, ಈ ಉಪಕ್ರಮ ಮಾವಿನ ಉತ್ತಮ ಹೈಬ್ರಿಡ್ ಪ್ರಭೇದಗಳ ಸೃಷ್ಟಿಗೆ ಮತ್ತು ಉಳಿವಿಗೆ ಅನುವು ಮಾಡಿಕೊಟ್ಟಿತು ಎಂದು ತೋಟಗಾರಿಕೆಯ ತಜ್ಞರು ಹೇಳುತ್ತಾರೆ. ಅಷ್ಟೇ ಅಲ್ಲದೇ, ಈ ಹಣ್ಣು ಬಹಳ ಹಿಂದಿನಿಂದಲೂ ರಾಜ್ಯಾಡಳಿತದ ಸಾಧನವಾಗಿ ಕಾರ್ಯನಿರ್ವಹಿಸುತ್ತಿದೆ. ಐತಿಹಾಸಿಕವಾಗಿ, ಆಡಳಿತಗಾರರು ಇತರ ರಾಜ್ಯಗಳ ಜತೆಗೆ ಮೈತ್ರಿಗಳನ್ನು ರೂಪಿಸಲು, ಒಪ್ಪಂದಗಳನ್ನು ಮಾಡಲು ಮತ್ತು ಸದ್ಭಾವನೆಯನ್ನು ವ್ಯಕ್ತಪಡಿಸಲು ಉತ್ತಮ ಮಾವಿನ ತಳಿಯ ಹಣ್ಣಿನಿಂದ ತುಂಬಿದ ಬುಟ್ಟಿಗಳನ್ನು ವಿನಿಮಯ ಮಾಡಿಕೊಳ್ಳುತ್ತಿದ್ದರಂತೆ. ಈ 'ಮಾವಿನ ರಾಜತಾಂತ್ರಿಕತೆ'ಯ ಸಂಪ್ರದಾಯವು ಮಹಾರಾಷ್ಟ್ರ ಹಾಗೂ ಪಶ್ಚಿಮ ಬಂಗಾಳ ಮುಂತಾದ ರಾಜ್ಯಗಳಲ್ಲಿ ಇಂದಿಗೂ ಸಕ್ರಿಯವಾಗಿದೆ. ಸಂಬಂಧ ಒಂದು ಮಟ್ಟಕ್ಕೆ ಸರಿಯಿದ್ದ ಕಾಲಕ್ಕೆ ಪಾಕಿಸ್ತಾನ ಸರಕಾರ ನಮ್ಮ ಪ್ರಧಾನ ಮಂತ್ರಿಗಳಿಗೆ ಅಲ್ಲಿನ ಸಿಂಧ್ರಿ, ಚೌನ್ಸಾ ಮುಂತಾದ ವಿಶೇಷ ಮಾವಿನ ಹಣ್ಣುಗಳನ್ನು ಉಡುಗೊರೆಯಾಗಿ ನೀಡಿರುವ ಉದಾಹರಣೆ ನಮ್ಮ ಮುಂದಿದೆ.

ಇನ್ನು ಮಾವಿನ ಹಣ್ಣನ್ನು ತಿನ್ನುವ ಬಗೆಯ ಬಗ್ಗೆ ಮಾತನಾಡುವುದಾದರೆ, ಇಂದು ಬಹುತೇಕವಾಗಿ ಮಾವಿನ ಹಣ್ಣುಗಳನ್ನು ಹೋಳುಗಳಾಗಿ ಕತ್ತರಿಸಿ ಫೋರ್ಕ್ ಎನ್ನುವ ಸಣ್ಣ ತ್ರಿಶೂಲದಿಂದ ಚುಚ್ಚಿ ತಿನ್ನುವ ರೂಢಿ ಬಂದುಬಿಟ್ಟಿದೆ. ಆದರೆ, ನಾವೆಲ್ಲ ಚಿಕ್ಕವರಿರುವಾಗ ಮಾವಿನ ಹಣ್ಣನ್ನು ತಿನ್ನಲು ಯಾವುದೇ ಉಪಕರಣಗಳನ್ನು ಬಳಸುವ ಪದ್ಧತಿಯೇ ಇರಲಿಲ್ಲ. ಇಡೀ ಮಾಗಿದ ಮಾವಿನ ಹಣ್ಣನ್ನು ಕೈಯಲ್ಲಿ ಹಿಡಿದು ನಿಧಾನವಾಗಿ ಚೀಪಿ ತಿನ್ನುವುದೇ ಇತ್ತು. ತಿನ್ನುವಾಗ ಹಣ್ಣಿನೊಳಗಿನ ಘಟ್ಟಿ ಗುಳವು ದ್ರವರೂಪ ಪಡೆದು ರಸ ಕೈಗಳಿಂದಿಳಿದು ಮೊಣಕೈವರೆಗೆ ಹನಿಯಾಗಿ ಹರಿದು ಬರುವುದು, ನಾವು ಮೊಣಕೈವರೆಗೂ ನೆಕ್ಕುವುದರಲ್ಲೇ ಮಜವಿತ್ತು, ಇನ್ನು ಅದರ (ಜೂಬು) ನಾರುಯುಕ್ತ ವರಟೆ (ಗೊರಟೆ)ಯನ್ನು ಬೆಳ್ಳಗಾಗುವವರೆಗೆ ಹೀರುವುದರಲ್ಲಿ ಅದ್ಭುತ ಅನುಭವಿರುತ್ತಿತ್ತು. ಮನೆಯಲ್ಲಿ ಮಾವಿನ ಹಣ್ಣಿನ ಪಾಯಸ (ಸೀಕರಣೆ ಅಥವಾ ರಸಾಯನ) ಮಾಡಿದಾಗ ಗೊರಟೆ ಯಾರಿಗೆ ಎಂಬ ಬಗ್ಗೆ ಭೀಕರ ಯುದ್ಧವೇ ಪ್ರಾರಂಭವಾಗುತ್ತಿತ್ತು. ಗೊರಟೆಯ ಹಕ್ಕುಗಳನ್ನು ಗೆಲ್ಲಲು ಚೌಕಾಶಿ ಮಾಡುವುದು, ವಾದಿಸುವುದು ಮತ್ತು ಇಂದು ನನಗೆ, ನಾಳೆ ನಿನಗೆ ಎನ್ನುವ ಸಣ್ಣ ವ್ಯಾಪಾರ ಮಾಡುವುದೂ ಇತ್ತು. ಮಾವು ತಿನ್ನುವ ಅನುಭವ ಬಾಲ್ಯದ ಅತ್ಯಂತ ಅಮೂಲ್ಯವಾದ ನೆನಪೆಂದು ಪರಿಗಣಿಸಬಹುದು.

ಮಲೆನಾಡಿನ ಮನೆ-ಮನೆಗಳಲ್ಲಿ ಈ ಕಾಲದಲ್ಲಿ ಮಾವಿನ ಹಣ್ಣಿನದ್ದೇ ಪಾರುಪತ್ಯ ನಡೆಯುತ್ತೆ. ಬೆಳಗ್ಗೆ ದೋಸೆಯ ಜತೆಗೆ ನಿತ್ಯ ಮಾವಿನ ಹಣ್ಣಿನ ಸೀಕರಣೆ ಬೇಕೇ ಬೇಕು. ಮಧ್ಯಾಹ್ನದ ಊಟಕ್ಕೂ ಬೇರೆ ಬೇರೆ ತಳಿಯ ಮಾವಿನ ಹಣ್ಣಿನ ಗೊಜ್ಜು ಇರಲೇಬೇಕು. ಸಾಮಾನ್ಯವಾಗಿ ಊಟವಾದ ಮೇಲೆ ಹಣ್ಣನ್ನು ತಿನ್ನುವ ಪದ್ಧತಿಯಿದ್ದರೆ, 'ಹಸಿದಾಗ ಹಲಸು, ಉಣ್ಣುವಾಗ ಮಾವು' ಎನ್ನುವ ಮಾತಿನಂತೆ ಮಲೆನಾಡಿನಲ್ಲಿ ಊಟದ ಜತೆಗೇ ಮಾವಿನ ಹಣ್ಣನ್ನು ತಿನ್ನುವ ರೂಢಿಯೂ ಬಹಳವಾಗಿದೆ. ಹಾಗೆ ಊಟ ಮಾಡುವಾಗ ತಾವು ಚೀಪಿ ಬೆಳ್ಳಗಾಗಿಸಿದ ವರಟೆಯನ್ನು ಪಕ್ಕದವನ ಎಲೆಯ ಮೇಲೆ ಹಾಕಿ, ನಿನ್ನ ಮಾವಿನ ಹಣ್ಣಿನಲ್ಲಿ ಎರಡು ವರಟೆಯಿತ್ತಾ? ಎನ್ನುವುದು, ಪಕ್ಕದವ ಗೊರಟೆಯನ್ನು ಎಗರಿಸಿ ಗೊರಟೆಯನ್ನೂ ಬಿಡದೆ ನುಂಗಿಬಿಟ್ಟೆಯಾ ಎಂದು ಕಾಲೆಳೆಯುವುದು ಇದ್ದೇ ಇರುತ್ತೆ. ಆ ಹಣ್ಣಿನ ಗೊರಟೆಯನ್ನು ಕೈಯಲ್ಲಿ ಗಟ್ಟಿಯಾಗಿ ಹಿಡಿದುಕೊಂಡು ರಸವನ್ನೂ ಹೀರುವಾಗ ಕೈಯಿಂದ ತುಪಕ್ಕನೆ ಜಾರಿ ಎಲ್ಲೋ ಹಾರಿ ಬೀಳುವ ಸಂದರ್ಭವೂ ಇತ್ತು.

ಸೀತೆಯನ್ನು ಹುಡುಕಿಕೊಂಡು ಬಂದ ಕಪಿಗಳಿಗೆ ಒಮ್ಮೆ ಔತಣಕೂಟವನ್ನು ಏರ್ಪಡಿಸಲಾಗಿತ್ತಂತೆ. ಊಟದಲ್ಲಿ ವಿಶೇಷ ತಳಿಯ ಮಾವಿನ ಹಣ್ಣುಗಳನ್ನು ಬಡಿಸಲಾಗಿತ್ತು. ಮಾವಿನ ಹಣ್ಣನ್ನು ತಿನ್ನುವಾಗ ಒಂದು ಕಪಿಯ ಕೈಯಿಂದ ಜಾರಿದ ಗೊರಟೆ ಎತ್ತರಕ್ಕೆ ಹಾರಿತಂತೆ. ನೀನೇ ಇಷ್ಟು ಎತ್ತರಕ್ಕೆ ಗೊರಟೆಯನ್ನು ಹಾರಿಸುವುದಾದರೆ ನಾವೇನು ನಿನಗೆ ಕಡಿಮೆಯೇ? ಎಂದು ಕಪಿಗಳೆಲ್ಲ ಒಬ್ಬರಿಗಿಂತ ಒಬ್ಬರು ಗೊರಟೆಯನ್ನು ಎತ್ತರಕ್ಕೆ ಹಾರಿಸಲು ಪ್ರಾರಂಭವಾಗಿ ಅಲ್ಲಿ ಅಲ್ಲೋಲ ಕಲ್ಲೋಲ ಸೃಷ್ಟಿಯಾಗಿ ಬಿಟ್ಟಿತ್ತಂತೆ. ಮೊದಲೇ ಹೇಳಿಕೇಳಿ ಮಂಗಗಳಲ್ಲವೇ?

ರವೀಂದ್ರನಾಥ ಟ್ಯಾಗೋರ್ ಅವರು ಪ್ರಕೃತಿಯನ್ನು ಅಪಾರವಾಗಿ ಪ್ರೀತಿಸುತ್ತಿದ್ದವರು. ಅದರಲ್ಲೂ ಮಾವಿನ ಮರ ಮತ್ತು ಮಾವಿನಹಣ್ಣಿನ ಬಗ್ಗೆ ಅವರಿಗಿದ್ದ ಪ್ರೀತಿ ವಿಶೇಷವಾದದ್ದು. ಅವರು ಮಾವಿನ ಮರಗಳ ಸೌಂದರ್ಯಕ್ಕೆ ಮತ್ತು ಹಣ್ಣುಗಳಿಗೆ ಮನಸೋತು ತಮ್ಮ ಸಾಹಿತ್ಯದಲ್ಲಿ ಹಾಡಿ ಹೊಗಳಿದ್ದಾರೆ. ಅವುಗಳಲ್ಲಿ ಅವರ 'ಆಮೆರ್ ಮೊಂಜೊರಿ' ಬಂಗಾಳಿ ಕವಿತೆ ಪ್ರಸಿದ್ಧವಾದದ್ದಾಗಿದೆ. ಮಾವಿನ ಹೂವು ಮತ್ತು ಹಣ್ಣಿನ ಸುವಾಸನೆ ಹಾಗೂ ಅದರ ಮೇಲಿನ ಅವರ ಒಲವನ್ನು ಈ ಕವನ ಅಭಿವ್ಯಕ್ತಿಸುತ್ತೆ. 'ಆಮೆರ್ ಮೊಂಜೊರಿ' ಎಂದರೆ ಮಾವಿನ ಹೂವು ಅಥವಾ ಚಿಗುರು ಎಂದರ್ಥ. ನೋಬೆಲ್ ಪ್ರಶಸ್ತಿ ವಿಜೇತ ಸಾಹಿತಿ ರವೀಂದ್ರನಾಥ ಟ್ಯಾಗೋರರು ಮಾವಿನ ಹಣ್ಣಿನ ಗೊರಟೆಗೆ ಸಾಷ್ಟಾಂಗ ನಮಸ್ಕಾರ ಮಾಡಿದ ಹಾಸ್ಯದ ಪ್ರಸಂಗವನ್ನು ವಿವರಿಸುತ್ತಾ ಈ ವಾರದ ಮಾವಿನ ಕಥೆಗೆ ಮಂಗಳ ಹೇಳೋಣ.

ಮೊದಲೇ ಹೇಳಿದಂತೆ, ರವೀಂದ್ರರು ಮಾವಿನ ಹಣ್ಣಿನ ಅಪ್ರತಿಮ ಅಭಿಮಾನಿಯಾಗಿದ್ದವರು. ಮಾವಿನ ಹಣ್ಣನ್ನು ಟ್ಯಾಗೋರರು ಬಹಳವಾಗಿ ಇಷ್ಟಪಡುತ್ತಾರೆ ಎನ್ನುವುದನ್ನು ತಿಳಿದಿದ್ದ ಅವರ ಆಪ್ತರೊಬ್ಬರು, ರವೀಂದ್ರರ ಮನೆಗೆ ಬರುವಾಗ ಒಮ್ಮೆ ಚೆನ್ನಾಗಿ ಗಳಿತ ಹಿಮಸಾಗರ, ಲಕ್ಷಣ್ ಭೋಗ್ ಮುಂತಾದ ಉತ್ತಮ ತಳಿಯ ಕೆಲವು ಮಾವಿನ ಹಣ್ಣುಗಳನ್ನು ತಂದಿದ್ದರಂತೆ. ಅದನ್ನು ನೋಡಿದ ಟ್ಯಾಗೋರರು ತಡಮಾಡದೇ ತಿನ್ನುವುದಕ್ಕೆ ಶುರುವಿಟ್ಟುಕೊಂಡರು, ಒಂದೆರಡು ಹಣ್ಣುಗಳನ್ನು ಅಚ್ಚುಕಟ್ಟಾಗಿ ತಿಂದು ಗೊರಟೆಯನ್ನು ತಮ್ಮ ಮುಂದಿರಿಸಿಕೊಂಡಿದ್ದರಂತೆ. ಕೈತೊಳೆದುಕೊಂಡು ಬಂದ ರವೀಂದ್ರರು, ತಿಂದಿಟ್ಟಿದ್ದ ಮಾವಿನ ಗೊರಟೆಗೆ ಸಾಷ್ಟಾಂಗ ಪ್ರಣಾಮ ಮಾಡಿದರಂತೆ. ಈ ವಿಚಿತ್ರವನ್ನು ನೋಡಿ ಮಾವಿನ ಹಣ್ಣನ್ನು ತಂದ ಅತಿಥಿಗೆ ಪರಮಾಶ್ಚರ್ಯವಾಯಿತು. ಹೀಗೇಕೆ ತಿಂದಿಟ್ಟ ಗೊರಟೆಗೆ ನಮಸ್ಕಾರ ಮಾಡುತ್ತಿದ್ದೀರಿ? ಎಂದು ಆತ ಟ್ಯಾಗೋರರನ್ನು ಕೇಳಿದ. ಇದರ ನಾರನ್ನು (ಜೂಬು) ನೋಡು! ಅದು ನನ್ನ ದಾಡಿಗಿಂತ (ಗಡ್ಡ) ಉದ್ದವಾಗಿದೆ, ಅಲ್ಲಿಗೆ ಅದು ನನಗೆ ಹಿರಿಯಣ್ಣನಾದಂತಾಯಿತು, ಅಣ್ಣನಿಗೆ ನಮಸ್ಕಾರ ಮಾಡುವುದು ತಪ್ಪೇ? ಎಂದು ಕೇಳಿದರಂತೆ.

ಬಂಡೆ ಥರ ಇದ್ದೀನಿ, ಆದ್ರೆ ಭಂಡತನ ಮಾಡಲ್ಲ

ಸಿನಿಗನ್ನಡ

ಕೆಲವು ಡೈಲಾಗ್ ರೈಟರ್‌ಗಳು ಇರ್ತಾರೆ. 'ಮಾತು ಬೆಳ್ಳಿ ಮೌನ ಬಂಗಾರ' ಎನ್ನುವ ಜಾತಿ ಅವರದ್ದಲ್ಲ. ಅವರಿಗೆ ಮಾತೇ ಬಂಗಾರ. ಇಂಥ ಒಬ್ಬ ಬರಹಗಾರ ನಂತರ ನಿರ್ದೇಶಕ ಆದವರೊಬ್ಬರು ಇತ್ತೀಚೆಗೆ ತಮ್ಮ ಸಿನಿಮಾ ಮೂಲಕ ಒಂದು ಮಾತಾಡಿದ್ದಾರೆ.

ತುಂಟರಗಾಳಿ
ಹರಿ ಪರಾಕ್
vveditoped@gmail.com

ಅವರ ಸಿನಿಮಾ ಹೇಗೇ ಇದ್ದರೂ ಚಿತ್ರದಲ್ಲೂ ಕೂಡಾ ಅವರ ಈ ಸಂಪ್ರದಾಯವನ್ನು ಅವರು ಯಾವಾಗಲೂ ಮುಂದುವರೆಸುತ್ತಾರೆ. ಒಮ್ಮೊಮ್ಮೆ ಇಂಥಾ ಒಳ್ಳೆಯ ಡೈಲಾಗ್ ಯಾವುದಾದ್ರೂ ಒಳ್ಳೆಯ ಸಿನಿಮಾದಲ್ಲಿ ಇರಬಾರದಿತ್ತೇ ಎನಿಸುವಷ್ಟು ಚೆನ್ನಾಗಿ. ಆದರೆ, ಅಂಥ ಡೈಲಾಗ್ ಬರೆಯುವ ಭರದಲ್ಲಿ, ಈ ಬರಹಗಾರರು ತಮ್ಮ ಚಿತ್ರದ ದೃಶ್ಯವೊಂದರಲ್ಲಿ ಪತ್ರಕರ್ತರನ್ನು ಉದ್ದೇಶಿಸಿ, 'ಈಗ ಏನೂ ಪ್ರಶ್ನೆ ಕೇಳ್ಬೇಡಿ, ಮತ್ತೊಂದ್ ದಿನ

ಕರೀತೀವಿ..ಅವತ್ತು ಬನ್ನಿ, ಅವತ್ತು ಕವರು, ಗಿಫ್ಟೂ ಎಲ್ಲ ಇತ್ತದೆ' ಎಂಬ ಸಂಭಾಷಣೆ ಹೇಳಿಸಿ, ಸಾರಾಸಗಟಾಗಿ ಎಲ್ಲ ಪತ್ರಕರ್ತರೂ ಹೀಗೇ ಎಂದು ಹೇಳಿಸಿದ್ದಾರೆ. ಈ ರೀತಿ ಹೇಳುವ ಹಕ್ಕನ್ನು ಅವರಿಗೆ ಯಾರು ಕೊಟ್ಟರು ಎಂಬ ಖಾರವಾದ ಪ್ರಶ್ನೆ ಕೇಳುವುದಕ್ಕೆ ಆಸ್ಪದ ಮಾಡಿಕೊಟ್ಟಿದ್ದಾರೆ. ಅವರು ಹೇಳಿದ್ದು ಸಂಪೂರ್ಣ ಸುಳ್ಳಲ್ಲದಿರಬಹುದು. ಆದರೆ, ಸಂಪೂರ್ಣ ಸತ್ಯವೂ ಅಲ್ಲ. ಪತ್ರಕರ್ತರಲ್ಲಿ ಯಾರೋ ಕೆಲವರು ಅಥವಾ ಹಲವರೇ ಹಾಗಿರಬಹುದು, ಆದರೆ ಎಲ್ಲರೂ ಅಲ್ಲವಲ್ಲ. ಎಲ್ಲ ಪತ್ರಕರ್ತರೂ 'ಕವರ್ ಸ್ಟಾರ್'ಗಳಲ್ಲ ಮತ್ತು 'ಗಿಫ್ಟೆಡ್' ಟ್ಯಾಲೆಂಟ್‌ಗಳಲ್ಲ ಎಂಬುದು ಅವರ ಗಮನಕ್ಕೆ ಬಂದಿದ್ದರೆ ಸ್ವಲ್ಪ ಒಳ್ಳೆಯದಿತ್ತು ಎನ್ನುತ್ತಿದೆ ಕ.ರಾ.ಅ.ಪ್ರಾ.ಪ. ಸಂಘ!

ಲೂಸ್ ಟಾಕ್ ▸▸ ಸಿದ್ದರಾಮಯ್ಯ

- **ಏನ್ ಸಾರ್ ಮಾಜಿ ಮುಖ್ಯಮಂತ್ರಿ ಆಗ್ಬಿಟ್ರಲ್ಲ?**
- ಏನ್ ಮಾಡೋಕಾಗುತ್ತೆ. ಜನ ಇದ್ದು ಹೋಗಿ ಇದ್ದು ಹೋಗಿ ಸಿದ್ದರಾಮಯ್ಯ ಅಂದ್ರೆ, ಹೈಕಮ್ಯಾಂಡ್‌ನವರು ಎದ್ದು ಹೋಗಿ ಎದ್ದು ಹೋಗಿ ಸಿದ್ದರಾಮಯ್ಯ ಅಂದ್ರಲ್ಲ.
- **ಅದ್ಸರಿ, ನಿಮಗೆ ವಯಸ್ಸಾಯ್ತು ಅಂತ ನಿಮ್ಮನ್ನ ಕೆಳಗೆ ಇಳಿಸಿದ್ರಾ?**
- ನಂಗಾ?, ನಂಗೇನ್ರೀ ವಯಸ್ಸಾಗಿದೆ?. ಇನ್ನೂ 'ಬಂಡೆ' ಥರ ಇದ್ದೀನಿ.
- **ಹಿಂಗೇ ಇರಿ ಸರ್, ಹೋಗ್ಲಿ ಅಷ್ಟು ಸುಲಭವಾಗಿ ಅಧಿಕಾರ ಬಿಟ್ಟುಕೊಟ್ರಲ್ಲ ಅದು ಹೆಂಗೆ?**
- ಮತ್ತೆ, ಬಂಡೆ ಥರ ಇದ್ದೀನಿ ಅಂತ ಕೊಟ್ಟ ಮಾತಿನ ವಿಷಯದಲ್ಲಿ ಭಂಡತನ ಮಾಡೋಕಾಗುತ್ತಾ?
- **ಕರೆಕ್ಟು, ನಿಮ್ಮನ್ನ ಸಿದ್ರಾಮುಲ್ಲಾ ಖಾನ್ ಅಂತ ಆಡಿಕೊಳ್ಳೋ ಬಿಜೆಪಿಯವರು ಏನಂತಿದ್ದಾರೆ?**
- ಅಯ್ಯೋ, ಅವ್ರ ಇಡೀ ಖಾನ್ ದಾನ್ ವಿಷಯ ಎಲ್ಲ ನಮಗೆ ಗೊತ್ತು ಬಿಡ್ರೀ. ನನ್ನನ್ನ ಆಡಿಕೊಳ್ಳದೇ ಇದ್ರೆ, ಅವರಿಗೆ ಖಾನಾ ಗಂಟಲಿಗೆ ಇಳಿಯಲ್ಲ.
- **ಬರೀ ಮುಖ್ಯಮಂತ್ರಿ ಆಗಿ ಅಲ್ಲ ಹಣಕಾಸು ಸಚಿವ, ಅದು ಇದೂ ಅಂತ ಆಲ್ ರೌಂಡರ್ ಆಗಿದ್ರಿ, ನೀವು ಅಲ್ವಾ?**
- ಮತ್ತೆ, ನಾನು ಕುರುಬ ಕಣ್ರೀ. ಆಡು ಮುಟ್ಟದ ಸೊಪ್ಪಿಲ್ಲ ಅಂತ ಮಾತು ಕೇಳಿಲ್ವಾ?

(ಕಾಲ್ಪನಿಕ ಸಂದರ್ಶನ)

ಇದು ಸಂಕ್ಷಿಪ್ತ ಹಾಲುಮತ ಪುರಾಣದ ಕತೆ!

ನಾಡಿನ ಶೈಕ್ಷಣಿಕ ವಲಯದ ದುರಂತವೆಂದರೆ, ಕನ್ನಡ ಭಾಷೆಯಲ್ಲಿಯೇ ಪ್ರಾಥಮಿಕ ಶಿಕ್ಷಣದಿಂದ ಸ್ನಾತಕೋತ್ತರ ಶಿಕ್ಷಣ ಪಡೆದು ಭಾಷಾಶಾಸ್ತ್ರದಲ್ಲಿಯೇ ಪರಿಣಿತಿ ಹೊಂದಿದ ತಜ್ಞರು ರೂಪಾಲಂಕಾರ, ಉಪಮಾಲಂಕಾರಗಳನ್ನು ಅರ್ಥ ಮಾಡಿಕೊಳ್ಳದೆ ಪುತ್ರ ಎಂದರೆ ಲೈಂಗಿಕ ಸಂಬಂಧದಿಂದಲೇ ಹುಟ್ಟಿದವರು ಎಂದರ್ಥೈಸಿಕೊಂಡು ರೇವಣರು ಅವನ ಮಗ ಇವನ ಮೊಮ್ಮಗ ಎಂದು ಹೇಳುವ ಭಾಷಾಜ್ಞಾನಕ್ಕೆ ಏನೆನ್ನಬೇಕು?

ವಚನಾಮೃತ
ರವಿ ಹಂಜ್
vveditoped@gmail.com

ಭಾಗ 2

ಈ ಪುರಾಣವನ್ನು ಕುರುಬರ ಚರಿತ್ರೆ, ಸಿದ್ಧರಾಮೇಶ್ವರ ಸಾಂಗತ್ಯ ಮತ್ತಿತರೆ ಗ್ರಾಂಥಿಕ ಮತ್ತು ಶಾಸನಗಳ ಮೂಲಕ ತಾಳೆ ಹಾಕಿ ಇತಿಹಾಸವನ್ನು ಕಂಡುಕೊಳ್ಳುವ ಪ್ರಯತ್ನವನ್ನು ಸಾಹಿತಿಗಳಾದ ಶ್ರೀ ಚನ್ನಮಲ್ಲಿಕಾರ್ಜುನರು ತಮ್ಮ 1958ರಲ್ಲಿ ಪ್ರಕಟಿತ 'ಶ್ರೀ ರೇವಣಸಿದ್ಧರು' ಗ್ರಂಥದಲ್ಲಿ ಮಾಡಿದ್ದಾರೆ. ಅವರ ತಾರ್ಕಿಕ ಚಿಂತನೆ ಹೀಗಿದೆ, 'ರೇವಣರು ಒಂಟಿಯಾಗಿ ದೇಶಸಂಚಾರ ಮಾಡುವುದಕ್ಕೆ ಮುಂಚೆ ಪ್ರಾಯಶಃ ಒಂದು ನೈಸರ್ಗಿಕ ಗವಿಯಲ್ಲಿ ಏಳೆಂಟು ಕುರಿಗಳನ್ನು ಕೂಡಿ ಹೋಗಿರಬೇಕು. ಅವು ಹಗಲೆಲ್ಲಾ ಮೇದು ರಾತ್ರಿ ಆ ಗವಿಯಲ್ಲಿ ಮಲಗುತ್ತಾ ಬೆಳೆದು ರೇವಣರು ಹತ್ತು ಹನ್ನೆರಡು ವರ್ಷಗಳ ನಂತರ ಬರುವುದರೊಳಗಾಗಿ ದೊಡ್ಡ ಹಿಂಡಾಗಿ ಪದ್ಮಗೊಂಡನಿಗೆ ಸಿಕ್ಕಿರಬೇಕು' ಎಂದು ಪುರಾಣದಲ್ಲಿ ಹೇಗೆ ಚಾರಿತ್ರಿಕಾಂಶವಾಗಿ ತಿಳಿಯಬೇಕಾಗಿದೆ ಎನ್ನುತ್ತಾರೆ.

ಅದೇ ರೀತಿ ಜನಪದ ಕತೆಯಲ್ಲಿ ಸುಗ್ಗಲೆಯ ಕರ್ಣದಲ್ಲಿ ಜನಿಸುವುದೆಂದರೆ ಯಥಾರ್ಥವಾಗಿ ಕಿವಿಯಿಂದ ಜನಿಸುವುದು ಎಂದಲ್ಲ. ಕಿವಿಯಲ್ಲಿ ಮಂತ್ರವನ್ನು ಉಚ್ಚರಿಸಿ ಆ ಮಂತ್ರ ರೂಪಿನಿಂದ ಹುಟ್ಟಿದನೆಂದು ತಿಳಿಯಬೇಕು ಎನ್ನುತ್ತಾರೆ. ಇದೇ ರೀತಿ ಕರಸಂಜಾತ ಪುತ್ರ ಎಂದರೆ ಗುರುವಿನ ಕೃಪಾಶೀರ್ವಾದದಿಂದ ಹುಟ್ಟಿದವರು ಎಂದರ್ಥ. ವಿಪರ್ಯಾಸವೆಂದರೆ ಇಲ್ಲಿ ಪುತ್ರ ಎನ್ನುವುದನ್ನು ಗರ್ಭಸಂಜಾತವೆಂದು ಬಗೆದು ಜಾತ್ಯಂಧರು ಮತ್ತು ಕಮ್ಯುನಿಸ್ಟ್ ಪ್ರಣೀತ ಸಂಶೋಧಿಗರು ಸಂಶೋಧನೆ ಮಂಡಿಸುತ್ತಾರೆ! ಹಾಗೆಯೇ ಹಾಲುಮತ ಎನ್ನುವ ಪದೋತ್ಪತ್ತಿಯ ಕುರಿತಾಗಿ, ಕುರುಬರ ಚರಿತ್ರೆಯಲ್ಲಿ ಕುರುಬರನ್ನು ಹಾಲುಮೊತ್ತದವರು ಎಂದು ಕರೆದಿದೆ. ಇವರು ಕಂಬಿಗಳಲ್ಲಿನ ಕೊಡಗಳಲ್ಲಿ ಗೋವಿನ ಹಾಲನ್ನು ತುಂಬಿ ಕಲ್ಯಾಣದಲ್ಲಿ ಮಾರುತ್ತಿದ್ದಾಗ ಇವರು ಹಾಲಿನ ಮೊತ್ತದವರು ಎಂಬುದನ್ನು ತೋರಿಸುವುದಕ್ಕಾಗಿ ತೋಹಿನ ಮೊತ್ತ, ಕಾಳಮೊತ್ತ ಮುಂತಾದ ಹೆಸರುಗಳಾದವು. ಅವು ಮುಂದೆ ಮುತ್ತ, ಮುತ್ತಯ್ಯ ಎಂಬ ಕೊನೆಯುಳ್ಳ ಹೆಸರಿನಲ್ಲಿ ಪಲ್ಲಟಿಸಿದವು ಎನ್ನುತ್ತಾರೆ. ಕಲ್ಯಾಣದಲ್ಲಿ ಹಾಲು ಮೊಸರನ್ನು ಮಾರುತ್ತಿರುವಾಗ ಪದ್ಮಗೊಂಡನಿಗೆ ಹಾಲುಮೊತ್ತದ ಒಡೆಯ ಎಂಬ ಪಟ್ಟವನ್ನು ಕಟ್ಟಿರಬೇಕು. ಕಡೆಗೆ ಕಲ್ಯಾಣದಲ್ಲಿ ಎಲ್ಲರಿಗೂ ಲಿಂಗಧಾರಣವಾಯಿತು. ಒಟ್ಟಿನಲ್ಲಿ ಬಸವೇಶ್ವರ ಮತ್ತು ಶ್ರೀ ರೇವಣರ ದೆಸೆಯಿಂದ ಕುರುಬರು ಲಿಂಗವಂತರಾಗಿ ಪ್ರಸಿದ್ಧಿಗೆ ಬಂದರೆಂದು ಹೇಳಲನುಮಾನವಾರಿಗೂ ಬರಲಾರದು ಎನ್ನುತ್ತಾರೆ.

ಹಾಗೆಯೇ ಚನ್ನಮಲ್ಲಿಕಾರ್ಜುನರು, ಕುರುಬರ ಚರಿತ್ರೆಯ ಪ್ರಕಾರ ಕಲ್ಯಾಣದಿಂದ ಕುರಿಗಳ ಹಿಂಡನ್ನು ಪದ್ಮಗೊಂಡನು ಕುರುಪತಿಪುರವೆಂಬ ನಗರದ ಹತ್ತಿರ ಒಂದಾನೊಂದು ಭೂಭಾಗದಲ್ಲಿ ಕುರಿ(ದೇವತೆ)ಗಳನ್ನು ಅಡಗಿಸಿಟ್ಟಿದ್ದನು. ಈ ಕುರುಪತಿ ಎಂಬುದು ರಾಣೆಬೆನ್ನೂರು ಸಮೀಪದ ಕುರುವತ್ತಿ ಊರಾಗಿರಬೇಕು ಎಂದು ಊಹೆಗೆ ಬರುತ್ತದೆ. ಆದರೆ, ಸಿದ್ಧರಾಮೇಶ್ವರ ಸಾಂಗತ್ಯದಲ್ಲಿ ಬರುವ ಇಂತಹುದೇ ಪ್ರಸಂಗವನ್ನು ಗಮನಿಸಿದಾಗ ಅಲ್ಲಿನ ಕುರುಬೆಟ್ಟ ಎಂಬ ಸ್ಥಳ ಕುರುಗೋಡು ಇರಬಹುದು. ಹಾಗಾಗಿ ಇದು ಕುರುವತ್ತಿಗಿಂತ ಕಲ್ಯಾಣಕ್ಕೆ ಸಮೀಪವೂ ಮತ್ತು ಏಳು ದಿನಗಳಲ್ಲಿ ತಲುಪಬಹುದಾದ ಜಾಗವಾದ್ದರಿಂದ ಪದ್ಮಗೊಂಡನು ಕುರುಗೋಡಿಗೆ ಬಂದಿರಬಹುದು ಎನ್ನುವ ಭೌಗೋಳಿಕ ತರ್ಕವನ್ನು ಇಡುತ್ತಾರೆ. ಅದೇ ರೀತಿ, ಕ್ರಿ. ಶ. 1187ರ ಸಿರಿವಾಳ ಶಾಸನವು ಆಚಾರ್ಯ ಶ್ರೀ ರೇವಣರಿಗೇ ಸಂಬಂಧಿಸಿದುದಾಗಿದೆ. ಶಾಂತಿಮಯ್ಯಗಳ ಪುತ್ರ ಎಂದು ಶಾಸನದಲ್ಲಿ ಇದೆ. ಶಾಂತಮಲ್ಲಿಕಾರ್ಜುನ ಲಿಂಗ ಎಂಬುದು ಶ್ರೀ ರೇವಣರ ಪ್ರಾಣಲಿಂಗವೆಂದು ಏಕಕಂಠದಿಂದ ಎಲ್ಲ ಗ್ರಂಥಗಳು ಹೇಳುತ್ತವೆ. ಗುರುವಿನ ಹೆಸರನ್ನೇ ಲಿಂಗಕ್ಕೆ ಇಡುವ ರೂಢಿ ಇರುವುದರಿಂದಲೂ, ಗುರುವನ್ನೇ ತಂದೆಯಾಗಿ ತಿಳಿಯುವ ರೂಢಿಯೂ ವೀರಶೈವರಲ್ಲಿ ಇರುವುದರಿಂದಲೂ ಶಾಂತಿಮಯ್ಯ ಗುರುಗಳ ಪುತ್ರರಿವರು, ಎಂದು ತಿಳಿಯಲಿಕ್ಕೆ ಬರುವುದರಿಂದಲೂ ಆ ಶಾಸನವು ಇವರಿಗಾಗಿಯೇ ಬರೆಯಲ್ಪಟ್ಟದ್ದು ಎಂದಾಗುತ್ತದೆ ಎಂದಿದ್ದಾರೆ.

ಹಾಗಾಗಿ ಈ ವಿಚಾರವು ನಾನು ಈ ಹಿಂದೆಯೇ ತಿಳಿಸಿದಂತೆ ಗುರುಪರಂಪರೆಗಳಲ್ಲಿ ವಂಶೀಯ ಎಂದರೆ ಅನುವಂಶೀಯವಾಗಿ ಹುಟ್ಟಿದವ ಎಂದಲ್ಲ. ಅದು ಉತ್ತರಾಧಿಕಾರಿ ಎಂದು! ಇದು ಕೇವಲ ವೀರಶೈವ ಗುರು ವಿರಕ್ತರಲ್ಲಲ್ಲದೆ ಇತರೆ ಪಂಥಗಳಲ್ಲಿಯೂ ಇದೇ ಅರ್ಥವನ್ನು ಹೊಂದಿದೆ. ವೀರಶೈವರಲ್ಲಿ, ನಿರಂಜನ ವಂಶ ರತ್ನಾಕರ ಎಂಬ ಉತ್ತರಾಧಿಕಾರಿಗಳ ಇತಿಹಾಸವಿದ್ದರೆ, ಶಂಕರಮಠವು ಗುರುವಂಶಕಾವ್ಯವನ್ನು ಹೊಂದಿದೆ. ಚನ್ನಮಲ್ಲಿಕಾರ್ಜುನರ ತರ್ಕಕ್ಕೆ ಸಾಕ್ಷಿಯಾಗಿ ಈಗಲೂ ಬಹುಪಾಲು ವೀರಶೈವ ಲಿಂಗಾಯತರು ತಮ್ಮ ತಮ್ಮ ಗುರುಗಳನ್ನು ಮತ್ತು ಮಠಾಧೀಶರನ್ನು ಅಪ್ಪಾರು, ಅಪ್ಪಗೋಳು, ಅಜ್ಜಾರು ಎಂದೇ ಸಂಬೋಧಿಸುತ್ತಾರೆ. ಅದೇ ರೀತಿ, ಅಂದಿನ (ಹಾಲು) ಮೊತ್ತ ಎನ್ನುವ ಪದದ ರೂಪಾಂತರವೇ ಆಧುನಿಕ (ಹಾಲಿನ) ವರ್ತನೆ ಎಂದಾಗಿದೆ. ಮೊತ್ತ ಯಾನೆ ವರ್ತನೆ ಅಥವಾ ರೂಢಿ, ಸಂಪ್ರದಾಯ, ನಡವಳಿಕೆ, ನಡತೆ, ನಿಯಮಿತ ಗೊತ್ತುವಳಿ, ನಿತ್ಯಗಟ್ಟಳೆ, ಗ್ರಾಮಾಧಿಕಾರಿಗಳಿಗೆ ಸಲ್ಲುವ ಹಣದ ರೂಪದ ಕಾಣಿಕೆ, ಉದ್ದವನ್ನು ಅಳೆಯುವ ಪ್ರಮಾಣ ಮುಂತಾದ ಅರ್ಥಗಳ ಪದ ಮತವಾದದ್ದು ನಿಜಕ್ಕೂ ಸಂಶೋಧನೀಯ ಜಿಜ್ಞಾಸೆ! ಇದೇ ಹಿನ್ನೆಲೆಯಲ್ಲಿ ಪ್ರೊ. ಚಿದಾನಂದ ಮೂರ್ತಿಯವರು, ಬಸವಣ್ಣ, ಜಗದ್ಗುರು ರೇವಣಸಿದ್ಧರು ಸಮಕಾಲೀನರು. ರೇವಣಸಿದ್ಧರು ಹಿರಿಯರಾಗಿರಬಹುದು. ಇಬ್ಬರೂ ವೀರಶೈವ ಧರ್ಮ ಪ್ರಚುರಪಡಿಸಿದರು. ಇಬ್ಬರೂ ಐತಿಹಾಸಿಕ ಪುರುಷರು, ವಾಸ್ತವ ವ್ಯಕ್ತಿಗಳು ಈ ಭೂಮಿಯಲ್ಲಿ ಬದುಕಿದ್ದವರು.

ಈ ರೇವಣಸಿದ್ಧರು ಕುರುಬರ ಕುಲಗುರು ಹೌದು ಎಂದಿದ್ದಾರೆ ಎನ್ನುವದು ಮೇಲ್ಕಾಣಿಸಿದ ಎಲ್ಲ ಮೂಲಗಳಿಂದ ಸತ್ಯವೆನಿಸುತ್ತದೆ. ಆದರೆ, ಅದೇ ರೇವಣಸಿದ್ಧರ ಪೌರಾಣಿಕ ರೂಪವಾದ ರೇಣುಕನೆಂಬ ಶಿವನ ಗಣಾಚಾರ್ಯ ಎಂಬ ಉಪನಾಮವನ್ನು ಯಾವುದೇ ಐತಿಹಾಸಿಕ ದಾಖಲೆಗಳು ಇಲ್ಲ ಎಂದು ನಿರಾಕರಿಸುವುದು ಎಷ್ಟು ಸರಿ? ಬಸವಣ್ಣನನ್ನು ಬಸವ, ಬಸವಿ ದೇವ, ಡಣ್ಣಾಯಕ, ಬಸವಯ್ಯ, ಬಸವಾರಾಧ್ಯ, ನಂದೀಶ್ವರ ಮುಂತಾಗಿ ಕರೆದಂತೆ ರೇವಣರನ್ನು ಅವರದೇ ಪುರಾಣದ ರೇಣುಕ ಗಣನೆಂದು ಕರೆಯಬಾರದು ಎನ್ನುವುದು ಆಯ್ದ ವೈಯಕ್ತಿಕ ಅಭಿಲಾಷೆ ಎನಿಸದೆ!? ಮೇಲಾಗಿ ಇವರೆಲ್ಲರೂ ಕೇವಲ ಹನ್ನೆರಡನೇ ಶತಮಾನದ ರೇವಣಸಿದ್ಧರ ಕುರಿತು

ಮಾತನಾಡಿದ್ದಾರೆಯೇ ಹೊರತು ಹಿಂದಿನ ರೇವಣರ ಕುರಿತಲ್ಲ ಎಂಬುದು ಸ್ಪಷ್ಟ.

ನಾಡಿನ ಶೈಕ್ಷಣಿಕ ವಲಯದ ದುರಂತವೆಂದರೆ, ಕನ್ನಡ ಭಾಷೆಯಲ್ಲಿಯೇ ಪ್ರಾಥಮಿಕ ಶಿಕ್ಷಣದಿಂದ ಸ್ನಾತಕೋತ್ತರ ಶಿಕ್ಷಣ ಪಡೆದು ಭಾಷಾಶಾಸ್ತ್ರದಲ್ಲಿಯೇ ಪರಿಣಿತಿ ಹೊಂದಿದ ತಜ್ಞರು ರೂಪಾಲಂಕಾರ, ಉಪಮಾಲಂಕಾರಗಳನ್ನು ಅರ್ಥ ಮಾಡಿಕೊಳ್ಳದೆ ಪುತ್ರ ಎಂದರೆ ಲೈಂಗಿಕ ಸಂಬಂಧದಿಂದಲೇ ಹುಟ್ಟಿದವರು ಎಂದರ್ಥೈಸಿಕೊಂಡು ರೇವಣರು ಅವನ ಮಗ ಇವನ ಮೊಮ್ಮಗ ಎಂದು ಹೇಳುವ ಭಾಷಾಜ್ಞಾನಕ್ಕೆ ಏನೆನ್ನಬೇಕು? ಅದರಲ್ಲೂ ಶ್ರೀಮಾನ್ ನಾಗರಾಜಯ್ಯ ವಡ್ಡಗೆರೆ ತಮ್ಮ ಕೈಯಲ್ಲಿಯೇ ಕಲ್ಲಿನಿಂದ ಉದ್ಭವವಾದ ಕಂಬಳಿ ಹೊದ್ದ ರೇವಣಸಿದ್ಧರ ಫೋಟೊ ಹಿಡಿದುಕೊಂಡು ಅವರನ್ನು ಹಾಡಿ ಹೊಗಳುತ್ತಾ ತಮ್ಮ ಕೈಯಲ್ಲಿರುವ ಚಿತ್ರದ ತದ್ರೂಪು ಕಂಬಳಿ ಬದಲು ಹಸಿರು ಅಂಗವಸ್ತ್ರದ ರೇಣುಕಾಚಾರ್ಯರು ಕಲ್ಲಿನಿಂದ ಹುಟ್ಟುವುದು ವೈಜ್ಞಾನಿಕವೇ ಎನ್ನುವುದು ಅವರ ಬೌದ್ಧಿಕ ಅನಾಚಾರವನ್ನು ಸಾಕ್ಷಿ ಸಮೇತವಾಗಿ ನೈತಿಕ ಅಪರಾಧಿಯಾಗಿಸುತ್ತದೆ.

ಒಟ್ಟಾರೆ ಇದಿಷ್ಟು ನಿಜಾರ್ಥದ ಸಂಶೋಧನೆಯು ಸಮಗ್ರವಾಗಿ ಒಂದು ಜನಪದ ಕಥನದಲ್ಲಿ ಹುದುಗಿಸಿಕೊಂಡಿರುವ ಮಾನವಿಕ, ಭೌಗೋಳಿಕ, ಇತಿಹಾಸವನ್ನು ಅಂದಿನ ಕಾಲಘಟ್ಟದ ಸಾಮಾಜಿಕ, ರಾಜಕೀಯ ಸನ್ನಿವೇಶಗಳಿಗೆ ಜನಪದ, ಶಾಸನ ಮತ್ತು ಗ್ರಾಂಥಿಕ ಸಾಹಿತ್ಯವನ್ನು ತಾಳೆ ಹಾಕಿ ಸಂಶೋಧಿಸುವ ಪರಿ. ಇದನ್ನೇ ಎಪ್ಪತ್ತು ವರ್ಷಗಳ ಹಿಂದೆ ಚನ್ನಮಲ್ಲಿಕಾರ್ಜುನರು ಮಾಡಿದ್ದಾರೆ. ಅವರಂತೆಯೇ ಶಂ. ಬಾ. ಜೋಶಿ, ಕಪಟರಾಳರು, ಬಿ.ಎಲ್. ರೈಸ್ ಮುಂತಾದ ಎಲ್ಲ ಸ್ವಾತಂತ್ರ್ಯಪೂರ್ವ ಸಂಶೋಧಕರು ಮಾಡಿದ್ದಾರೆ.

ಸ್ವಾತಂತ್ರ್ಯಪೂರ್ವ ಭಾರತದಲ್ಲಿನ ಸಂಶೋಧಕರು ಸಮಗ್ರವಾಗಿ ಆಕರಗಳನ್ನು ಪರಿಗಣಿಸಿ ಸಂಶೋಧನ ವೈಧಾನಿಕತೆಗಳನ್ನು ಅಳವಡಿಸಿಕೊಂಡಿರುವುದು ಗೋವಿಂದ ಪೈಗಳಂತಹ ಪಂಡಿತರ ಸಂಶೋಧನೆಗಳಲ್ಲಿ ಸ್ಪಷ್ಟವಾಗಿ ಕಾಣಿ ಸುತ್ತದೆ. ಆದರೆ, ಸ್ವಾತಂತ್ರ್ಯೋತ್ತರ ಸಂಶೋಧಕರಲ್ಲಿ ಹೀಗಿದ್ದರೆ ಹೇಗೆ (What if) ಎಂಬ ವೈಧಾನಿಕತೆ ಕ್ಷೀಣಿಸುತ್ತ ಸಾಗಿ ಬಂದಿರುವುದನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಕನ್ನಡ ಸಂಶೋಧನ ನೆಲೆಯಲ್ಲಿ ಬಿ.ಎಲ್. ರೈಸ್ ನಂತರದ ಗೋವಿಂದ ಪೈ, ವೆಂಕಣ್ಣಯ್ಯ, ಶಂ.ಬಾ. ಜೋಷಿ, ಆರ್.ಜಿ. ದೀಕ್ಷಿತ್, ರಾಮಸ್ವಾಮಿ ಐಯಂಗಾರ್, ಎಸ್.ಸಿ. ನಂದಿಮಠ ಮುಂತದವರ ಪರಂಪರೆಯನ್ನು ಸಮರ್ಥವಾಗಿ ಮುನ್ನಡೆಸುವಲ್ಲಿ ಸ್ವತಂತ್ರ ಭಾರತದಲ್ಲಿ ಏಕೀಕರಣಗೊಂಡ ಕರ್ನಾಟಕದ ಸಂಶೋಧನ ಪರಂಪರೆ ನಿಸ್ಸಂಶಯವಾಗಿ ಸೋತಿದೆ. ಏಕೆಂದು ಪ್ರಶ್ನಿಸಿಕೊಂಡರೆ ಧುತ್ತನೆ ನಿಮಗೆ ವಡ್ಡಗೆರೆ, ಬಿಜ್ಜರಗಿಯಂತಹ ಪಂಡಿತರು ಮತ್ತು ವಿಶ್ವವಿದ್ಯಾಲಯಗಳ ಸಹಸ್ರಾರು ತೌಲನಿಕ ಅಧ್ಯಯನ ಎನ್ನುವ ತಥಾಕಥಿತ ಸಂಶೋಧನೆಗಳು ಕಣ್ಮುಂದೆ ಬರುವುದು ಸಹಜದಲ್ಲಿ ಸಹಜ.

ಒಟ್ಟಾರೆ ಸ್ವಾತಂತ್ರ್ಯೋತ್ತರ ಭಾರತದ ಇಪ್ಪತ್ತೊಂದನೇ ಶತಮಾನದಲ್ಲಿ ಚನ್ನಮಲ್ಲಿಕಾರ್ಜುನರಂತಹ ವಾಸ್ತವಿಕ ವಿಶ್ಲೇಷಣೆಯ ಸಾಮಾಜಿಕ ಸಹಬಾಳ್ವೆಯ ಅಂತಃಕರಣದ ಇತಿಹಾಸವನ್ನು ಯಾವುದೇ ತಾರ್ಕಿಕ ವಾಸ್ತವಿಕ ವಿಶ್ಲೇಷಣೆಯಿಲ್ಲದೆ ವೈದಿಕ -ಅವೈದಿಕ, ದ್ರಾವಿಡ-ಆರ್ಯ, ತಳ ಸಮುದಾಯದ ಉಸಿರು, ದರ್ಪದ ಬಸಿರು ಇತ್ಯಾದಿಯಾಗಿ ಕಂಬಳಿ ನೂಲನ್ನು ವಿಶ್ವವಿದ್ಯಾಲಯದ ಅನುದಾನದಲ್ಲಿ, ಘನ ಸರಕಾರದ ಪ್ರಶಸ್ತಿಗಳ ಆರ್ಭಟದಲ್ಲಿ ಅನಂತ ವಾಯುವಿನಿಂದ ಓಂ ಹ್ರೀಂ ಹ್ರಾಂ ಫಟ್ ಎಂದು ಸುತ್ತುವುದು ಭಾರತೀಯ ಸಾಂಸ್ಕೃತಿಕ ಅಧ್ಯಯನಗಳ ಒಂದು ಟೈಮ್ ಬಾಂಬ್!

ಅಂದಹಾಗೆ ಭಾರತದ ಸಾಂಸ್ಕೃತಿಕ ಅಧ್ಯಯನ ಎತ್ತ ಸಾಗುತ್ತಿದೆ!?

ಇದನ್ನು ಮನಗಂಡೇ ಅಂದು ತೋಂಟದ ಸಿದ್ಧಲಿಂಗೇಶ್ವರರು ಹೀಗೆ ಹೇಳಿದ್ದಾರೆ,

''ಆದಿಯಲ್ಲಿ ಶಿವತತ್ವದಲ್ಲಿ ರೇಣುಕನುದಯವಾಗದಿರ್ದಡೆ,
ಇಲ್ಲಿ ಶಿವಲಿಂಗದಲ್ಲಿ ಉದಯವಾದ ಪರಿಯೆಂತೋ?
ಆ ಶಿವನಲ್ಲಿಯೆ ಹುಟ್ಟಿ ಶಿವನಲ್ಲಿಯೇ ಲಯವಾದ
ರೇವಣಸಿದ್ಧೇಶ್ವರನು,
ಅನಾದಿಮುಕ್ತನಲ್ಲ, ಅವಾಂತರಮುಕ್ತರೆಂಬ ಅಜ್ಞಾನಿಗಳಿಗೆ
ನಾಯಕನರಕ ತಪ್ಪದು.''

ನೆಟ್ ಪಿಕ್ಸ್

ನಾಲ್ಕು ಜನ ಸ್ನೇಹಿತರು ಬೆಳಗಿನ ವಾಕಿಂಗ್‌ಗೆ ಅಂತ ಹೊರಟಿದ್ದರು. ವಾಕಿಂಗ್ ಮಾಡ್ತಾ ಮಾಡ್ತಾ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿರುವ ತಮ್ಮ ಮಕ್ಕಳ ಬಗ್ಗೆ ಹೇಳಿಕೊಳ್ಳಲು ಪ್ರಾರಂಭಿಸಿದರು. ಮೊದಲನೇ ತಂದೆ ಹೇಳಿಕೊಂಡ 'ನನ್ನ ಮಗ ಬೆಂಗಳೂರಲ್ಲಿ ದೊಡ್ಡ ಅಕೌಂಟೆಂಟ್ ಕೆಲಸದಲ್ಲಿದ್ದಾನೆ.

ಮನೆಗೆ ತುಂಬಾ ದುಡ್ ಕಳಿಸ್ತಾನೆ. ತುಂಬಾ ದುಡ್ ದುಡೀತಾನೆ ಅನ್ಸತ್ತೆ. ಇಲ್ಲಾಂದ್ರೆ, ಅವನ ಕೈಲಿ ಮೂರು ತಿಂಗಳ ಮುಂಚೆ ಅವನ ಗರ್ಲ್ ಫ್ರೆಂಡ್‌ಗೆ ಗಿಫ್ಟ್ ಅಂತ ಒಂದು ಡೈಮಂಡ್ ನೆಕ್ಲೇಸ್ ಕೊಡೋಕಾಗಿತ್ತೆ?' ಅದರ ನಂತರ ಎರಡನೇ ತಂದೆ ಹೇಳಿದ 'ನನ್ ಮಗನೂ ಬೆಂಗಳೂರಲ್ಲಿ ದೊಡ್ಡ ಸಾಫ್ಟ್‌ವೇರ್ ಎಂಜಿನಿಯರ್ ಆಗಿದಾನೆ, ತುಂಬಾ ದುಡೀತಾನೆ, ನಮಗೂ ಕಳಿಸ್ತಾನೆ, ತುಂಬಾ ದುಡೀತಾನೆ ಅನ್ಸತ್ತೆ, ಇಲ್ಲಾಂದ್ರೆ ಅವನ ಗರ್ಲ್‌ಫ್ರೆಂಡ್‌ಗೆ ಎರಡು ತಿಂಗಳು ಮುಂಚೆ ಗಿಫ್ಟ್ ಅಂತ ಒಂದು ಕಾರು ಕೊಡಿಸೋಕಾಗ್ತಿತ್ತೇ?' ಈಗ ಮೂರನೇಯವನ ಸರತಿ ಬಂತು 'ನನ್ನ ಮಗ ಬೆಂಗಳೂರಲ್ಲಿ ಬ್ಯುಸಿನೆಸ್ಮನ್. ನಮಗೂ ದುಡ್ಡು ಕಳಿಸ್ತಾನೆ. ತುಂಬಾ ದುಡೀತಾನೆ ಅನ್ಸತ್ತೆ, ಇಲ್ಲಾಂದ್ರೆ ಹೋದ್ ತಿಂಗಳು, ಅವನ ಗರ್ಲ್‌ಫ್ರೆಂಡ್‌ಗೆ ಗಿಫ್ಟ್ ಅಂತ ಒಂದು ಫ್ಲ್ಯಾಟ್ ಕೊಡಿಸೋಕಾಗ್ತಿತ್ತೇ' ಈಗ ಕಡೆ ತಂದೆಯ ಸರತಿ. ಅವನು ಮೆಲ್ಲಗೆ ಹೇಳಿದ, 'ನನ್ ಮಗಳೂ ಬೆಂಗಳೂರಲ್ಲಿದ್ದಾಳೆ, ನಮಗೆ ದುಡ್ಡನ್ನೂ ಕಳಿಸ್ತಾಳೆ, ಆದ್ರೆ, ಎಷ್ಟು ದುಡೀತಾಳೆ ಅಂತ ಗೊತ್ತಿಲ್ಲ, ಏನ್ ಕೆಲಸ ಮಾಡ್ತಾಳೆ ಅಂತನೂ ಸರಿಯಾಗಿ ಗೊತ್ತಿಲ್ಲ, ಆದ್ರೂ ತುಂಬಾ ಬುದ್ಧಿವಂತೆ ಆಗಿದಾಳೆ ಅನ್ಸತ್ತೆ. ಇಲ್ಲಾಂದ್ರೆ ಕಳೆದ ಮೂರು ತಿಂಗಳಲ್ಲಿ ಅವಳಿಗೆ ಗಿಫ್ಟ್ ಅಂತ ಒಂದು ಡೈಮಂಡ್ ನೆಕ್ಲೇಸ್, ಒಂದು ಕಾರು, ಒಂದು ಫ್ಲ್ಯಾಟ್ ಸಿಕ್ತಾ ಇತ್ತೆ!'

ಲೈನ್ ಮ್ಯಾನ್

- **ಸ್ಕೂಲ್‌ಗಳಲ್ಲಿನ ಜನರಲ್ ನಾಲೆಡ್ಜ್ ಸಿಲಬಸ್‌ನಲ್ಲಿ ಇನ್ಮೇಲೆ 'ಕರ್ನಾಟಕ ರಾಜ್ಯದ ಮುಖ್ಯಮಂತ್ರಿ ಯಾರು?' ಎಂಬ ಪ್ರಶ್ನೆ ಬದಲಾಗಲಿದೆ. ಹೊಸ ಪ್ರಶ್ನೆ ಹೀಗಿರಲಿದೆ**
- ಕರ್ನಾಟಕ ರಾಜ್ಯದ ಮುಂದಿನ ಮುಖ್ಯಮಂತ್ರಿ ಯಾರು?
- **ಪೆಟ್ರೋಲ್ ಬೆಲೆ ಜಾಸ್ತಿ ಆದಮೇಲೆ ಅವನತ್ರ ಕಾರಿದೆ ನನ್ನತ್ರ ಇಲ್ಲ ಎಂದು ಬೇಜಾರು ಮಾಡಿಕೊಳ್ಳುತ್ತಿದ್ದವರ ಹೊಸ ಡೈಲಾಗ್**
- ಪಾಪ, ಅವನತ್ರ ಕಾರಿದೆ!
- **ಕೊಳಕು ಪಬ್ಲಿಕ್ ಟಾಯ್ಲೆಟ್‌ಗಳಿಂದ ಏನು ಪ್ರಯೋಜನ?**
- ಅದನ್ನು ಬಳಸಲು ಮನಸ್ಸು ಬಾರದೆ, ಅದರಿಂದ ಮನುಷ್ಯನ 'ಸಹಿಷ್ಣುತೆಯ' ಶಕ್ತಿ ಹೆಚ್ಚುತ್ತದೆ!
- **ಕೆಲವು ಪೊಲಿಟಿಕಲ್ ಗಾದೆಗಳು**
- ರಾತ್ರಿ ಎಲ್ಲ ಸುವರ್ಣ ನ್ಯೂಸ್ ನೋಡಿ ಬೆಳಗ್ಗೆ ಎದ್ದು ಸಿದ್ರಾಮಯ್ಯ ರಾಜೀನಾಮೆಗೂ, ಡಿಕೆಶಿಗೂ ಏನ್ ಸಂಬಂಧ ಅಂತ ಕೇಳಿದ್ರಂತೆ..
- ಎಲೆಕ್ಷನ್‌ಗೆ ಮುಂಚೇನೇ ರಿಸಲ್ಟ್ ಏನಾಯ್ತು ಅಂತ ಕೇಳಿದ್ರಂತೆ...
- ರಿಸಲ್ಟ್ ಬಂದ್ಮೇಲೆ ನಾಮಪತ್ರ ಸಲ್ಲಿಸಿದಂಗಾಯ್ತು..
- ರಿಸಲ್ಟ್ ಏನಾಯ್ತು ಗುಂಡಾ ಅಂದ್ರೆ, ವೋಟ್ ಹಾಕಿದವರು ಎಷ್ಟು ಮಂದಿ ಅಂತ ಕೇಳಿದ್ದಂತೆ
- **ಐಪಿಎಲ್‌ನಲ್ಲಿ ಬ್ಯುಸಿಯಾಗಿದ್ದ ಬೋಲರ್ ಒಬ್ಬ ತನ್ನ ಹೆಂಡತಿ ಮಗುವಿಗೆ ಜನ್ಮ ನೀಡಿದ ಸುದ್ದಿ ಕೇಳಿದಾಗ ಹೇಳಿದ್ದು**
- 'ವಾವ್, ವಾಟ್ ಎ ಡೆಲಿವರಿ!'
- **ಒಂದು ಡೌಟು**
- 'ಏಳಿ ಎದ್ದೇಳಿ' ಎಂದು ಕರೆ ನೀಡಿದ, ವಿವೇಕಾನಂದರು ಲೈಫಲ್ಲಿ ಯಾರಿಗೂ ಗುಡ್ ನೈಟ್ ಹೇಳಿರಲೇ ಇಲ್ಲವಾ?
- **ಯಾವಾಗಲೂ ಫೇಸ್‌ಬುಕ್‌ನಲ್ಲಿ ಮುಳುಗಿಹೋಗಿರೋರನ್ನ ಏನೆನ್ನಬಹುದು?**
- ಫೇಸ್ 'ಬುಕ್‌ವರ್ಮ್'

ಅಚ್ಚುಕಟ್ಟು ಪ್ರದೇಶ
RNI : KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue: 135

ಸಮಾಚಾರ ಸಣ್ಣದಲ್ಲ

ವ್ಯಾಪಾರ ಒಪ್ಪಂದ: ನಾಳೆ ಅಮೆರಿಕ ತಂಡ ಭಾರತಕ್ಕೆ

ದೆಹಲಿ: ಭಾರತ-ಅಮೆರಿಕ ನಡುವಿನ ಮುಕ್ತ ವ್ಯಾಪಾರ ಒಪ್ಪಂದದ ಮಾತುಕತೆಗಳು ಶೇ.99ರಷ್ಟು ಪೂರ್ಣಗೊಂಡಿದ್ದು, ಶೇ.1ರಷ್ಟು ಬಾಕಿ ಮಾತುಕತೆ ಪೂರ್ಣಗೊಂಡರೆ ಶೀಘ್ರದಲ್ಲೇ ಅಂತಿಮ ಒಪ್ಪಂದವಾಗಲಿದೆ ಎಂದು ದೆಹಲಿಯಲ್ಲಿರುವ ಅಮೆರಿಕದ ರಾಯಭಾರಿ ಸೆರ್ಗಿಯೊ ಗೋರ್ 'ಐಐಟಿ-ದೆಹಲಿ' ಕಾರ್ಯಕ್ರಮದಲ್ಲಿ ಹೇಳಿದ್ದಾರೆ. ಒಪ್ಪಂದದ ಉಳಿದ ಕೆಲವೇ ಅಂಶಗಳನ್ನು ಅಂತಿಮಗೊಳಿಸಲು ಭಾರತದ ತಂಡ ಇತ್ತೀಚೆಗೆ ವಾಷಿಂಗ್ಟನ್‌ಗೆ ಭೇಟಿ ನೀಡಿತ್ತು. ಕಡೆಯ ಹಂತವಾಗಿ ಅಮೆರಿಕದ ಉನ್ನತ ಅಧಿಕಾರಿಗಳ ನಿಯೋಗ ಜೂ.1ರಂದು ಭಾರತಕ್ಕೆ ಆಗಮಿಸಿ 4 ದಿನಗಳವರೆಗೆ ಉಳಿದುಕೊಂಡು ಒಪ್ಪಂದವನ್ನು ಅಂತಿಮಗೊಳಿಸಲಿದೆ ಎಂದು ಗೋರ್ ತಿಳಿಸಿದ್ದಾರೆ. ಕಳೆದೆರಡು ದಶಕಗಳಲ್ಲಿ ಭಾರತ-ಅಮೆರಿಕ ನಡುವಿನ ಸರಕು-ಸೇವೆಗಳ ವಿಭಾಗದಲ್ಲಿನ ಆಮದು-ರಫ್ತು ವಹಿವಾಟು 2000 ಕೋಟಿ ಡಾಲರ್ ಮಟ್ಟದಿಂದ ಹೆಚ್ಚಳಗೊಂಡು 22,000 ಕೋಟಿ ಡಾಲರ್‌ಗಳ ಮಟ್ಟಕ್ಕೆ ಮುಟ್ಟಿದೆ. ಈ 11 ಪಟ್ಟು ಹೆಚ್ಚಳದ ವಹಿವಾಟು ಎರಡೂ ದೇಶಗಳ ಆರ್ಥಿಕತೆ ಬಲಪಡಿಸಿದೆ. ಎರಡೂ ರಾಷ್ಟ್ರಗಳ ನಡುವಿನ ಪಾಲುದಾರಿಕೆಯ ಪ್ರಾಮುಖ್ಯತೆಯನ್ನು ಎತ್ತಿ ತೋರಿಸುತ್ತದೆ ಎಂದು ಹೇಳಿದ್ದಾರೆ.

ಮೇಜರ್ ಅಭಿಲಾಷಾಗೆ ವಿಶ್ವಸಂಸ್ಥೆ ಪ್ರಶಸ್ತಿ ಪ್ರಕಟ

ವಿಶ್ವಸಂಸ್ಥೆ: ಭಾರತದ ಪರವಾಗಿ ವಿಶ್ವಸಂಸ್ಥೆಯ ಶಾಂತಿಪಾಲನಾ ಪಡೆಯಲ್ಲಿ ಸೇವೆ ಸಲ್ಲಿಸುತ್ತಿರುವ ಮೇಜರ್ ಅಭಿಲಾಷಾ ಬರಾಕ್ ಅವರಿಗೆ '2025ನೇ ಸಾಲಿನ ಮಿಲಿಟರಿ ಜೆಂಡರ್ ಅಡ್ವೊಕೇಟ್' ಪ್ರಶಸ್ತಿಯನ್ನು ವಿಶ್ವಸಂಸ್ಥೆ ಘೋಷಿಸಿದೆ. ಮೇಜರ್ ಅಭಿಲಾಷಾ ಅವರು ಲೆಬನಾನ್‌ನಲ್ಲಿ ಕಾರ್ಯ ನಿರ್ವಹಿಸಿದ ವಿಶ್ವಸಂಸ್ಥೆಯ ಶಾಂತಿಪಾಲನಾ ಪಡೆಯಲ್ಲಿ ಮಹಿಳೆಯರ ಸಶಕ್ತೀಕರಣ ಮತ್ತು ಲಿಂಗ ಸಮಾನತೆ ನೀತಿಗೆ ಒತ್ತು ನೀಡಿದ್ದಕ್ಕಾಗಿ 2025ನೇ ಸಾಲಿನ ಪ್ರಶಸ್ತಿಯನ್ನು ಪಡೆಯಲು ಅರ್ಹರಾದರು ಎಂದು ವಿಶ್ವಸಂಸ್ಥೆಯ ಮಹಾ ಕಾರ್ಯದರ್ಶಿ ಆಂಟೋನಿಯೊ ಗುಟೆರಸ್ ತಿಳಿಸಿದ್ದಾರೆ. ಅಲ್ಲದೇ, ಕಾಂಗೊ ಸಂಘರ್ಷದಲ್ಲಿ ಹುತಾತ್ಮರಾದ ಭಾರತದ ಸೇನೆಯ ಲ್ಯಾನ್ಸ್ ಹವಿಲ್ದಾರ್ ಹರಭಜನ್ ಸಿಂಗ್ ಹಾಗೂ ದಕ್ಷಿಣ ಸುಡಾನ್‌ನಲ್ಲಿ ಕರ್ತವ್ಯದಲ್ಲಿದ್ದಾಗ ಹುತಾತ್ಮರಾದ ನಾಯಬ್ ಸುಬೇದಾರ್ ಸುಜಿತ್ ಕುಮಾರ್ ಪ್ರಧಾನ್ ಅವರಿಗೆ ಮರಣೋತ್ತರವಾಗಿ ಪ್ರತಿಷ್ಠಿತ 'ಡ್ಯಾಗ್ ಹ್ಯಾಮರ್‌ಸ್ಕೋಲ್ಡ್ ಮೆಡಲ್' ಪ್ರದಾನ ಮಾಡುವುದಾಗಿ ಗುಟೆರಸ್ ಪ್ರಕಟಿಸಿದ್ದಾರೆ.

ಸಾಗರ ಸಹಕಾರ: ರಷ್ಯಾ-ಭಾರತ ಚರ್ಚೆ

ಮಾಸ್ಕೊ: ರಷ್ಯಾ ಪ್ರವಾಸದಲ್ಲಿರುವ ಭಾರತದ ರಾಷ್ಟ್ರೀಯ ಭದ್ರತಾ ಸಲಹೆಗಾರ(ಎನ್‌ಎಸ್‌ಎ) ಅಜಿತ್ ದೋವಲ್ ಅವರ ನೇತೃತ್ವದ ಭಾರತದ ಉನ್ನತ ಮಟ್ಟದ ನಿಯೋಗ ರಷ್ಯಾ ಮೆರಿಟೈಮ್ ಬೋರ್ಡ್ ಅಧ್ಯಕ್ಷ, ವ್ಲಾದಿಮಿರ್ ಪುಟಿನ್ ಅವರ ಆಪ್ತ ಸಹಾಯಕ ನಿಕೊಲೈ ಪತ್ರುಶೇವ್ ಅವರ ನೇತೃತ್ವದ ಉನ್ನತ ಮಟ್ಟದ ರಕ್ಷಣಾ ಅಧಿಕಾರಿಗಳ ಜತೆ ಶುಕ್ರವಾರ ಸಭೆ ನಡೆಸಿ ಚರ್ಚೆ ನಡೆಸಿದ್ದಾರೆ. ಮೆರಿಟೈಮ್ ಕನೆಕ್ಟಿವಿಟಿ, ಹಡಗುಗಳ ನಿರ್ಮಾಣ, ರಕ್ಷಣಾ ಕ್ಷೇತ್ರದಲ್ಲಿನ ಸಹಕಾರ, ಭೂಮಿಯ ಧ್ರುವ ಪ್ರದೇಶಗಳಲ್ಲಿ ಕಾರ್ಯ ನಿರ್ವಹಿಸಬೇಕಿರುವ ನಾವಿಕರಿಗೆ ರಷ್ಯಾದಿಂದ ತರಬೇತಿ ಮೊದಲಾದ ವಿಚಾರಗಳನ್ನು ಎರಡೂ ನಿಯೋಗಗಳು ದೀರ್ಘವಾಗಿ ಚರ್ಚಿಸಿದವು.

ಬಿಎಸ್ಸೆನ್ನೆಲ್ ಟೆಲಿಕಾಂ ಆಫೀಸರ್ ನೇಮಕ

ದೆಹಲಿ: ಭಾರತ ಸರಕಾರದ ಸ್ವಾಮ್ಯಕ್ಕೆ ಒಳಪಟ್ಟಿರುವ 'ಭಾರತ್ ಸಂಚಾರ್ ನಿಗಮ್ ಲಿ.'(ಬಿಎಸ್‌ಎನ್‌ಎಲ್) 100 ಜೂನಿಯರ್ ಟೆಲಿಕಾಂ ಅಧಿಕಾರಿ ಹುದ್ದೆಗಳಿಗೆ ನೇರ ನೇಮಕ ಅಧಿಸೂಚನೆ ಹೊರಡಿಸಿದೆ. ಎಂಜಿನಿಯರಿಂಗ್ ಪದವೀಧರರು ಅರ್ಜಿ ಸಲ್ಲಿಸಬಹುದು. ಜೂ.4ರಿಂದ ಜು.3ರವರೆಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಕೆಗೆ ಅವಕಾಶವಿದೆ. ಅಭ್ಯರ್ಥಿಗಳು ಮಾನ್ಯತೆ ಪಡೆದ ವಿವಿ ಅಥವಾ ಶಿಕ್ಷಣ ಸಂಸ್ಥೆಯಿಂದ ದೂರವಾಣಿಗೆ ಸಂಬಂಧಿಸಿದ ಇಂಜಿನಿಯರಿಂಗ್ ವಿಭಾಗದಲ್ಲಿ ಬಿಇ/ ಬಿ.ಟೆಕ್ ಪದವೀಧರರಾಗಿರಬೇಕು. ಎಂಎಸ್‌ಸಿ/ಎಂಟೆಕ್ ಉತ್ತೀರ್ಣರಾದವರಿಗೆ ಆದ್ಯತೆ. ಅಭ್ಯರ್ಥಿ ವಯಸ್ಸು ಜು.3ರ ವೇಳೆಗೆ ಕನಿಷ್ಠ 20, ಗರಿಷ್ಠ 30 ವರ್ಷ ವಯೋಮಿತಿಯಲ್ಲಿರಬೇಕು.

{ಅರವಿಂದ್ ಕೇಜ್ರಿವಾಲ್} ಎಎಪಿ ಸಂಚಾಲಕ

ಪಂಜಾಬ್ ಸ್ಥಳೀಯ ಸಂಸ್ಥೆಗಳ 1,977 ವಾರ್ಡ್‌ಗಳಿಗೆ ಮೇ 26ರಂದು ನಡೆದ ಚುನಾವಣೆಯಲ್ಲಿ ಆಮ್ ಆದ್ಮಿ ಪಕ್ಷ(ಎಎಪಿ) 862 ವಾರ್ಡ್‌ಗಳಲ್ಲಿ ಗೆದ್ದಿದೆ. ನಗರ ಪ್ರದೇಶಗಳಲ್ಲಿ ಪಕ್ಷಕ್ಕೆ ಅದ್ಭುತ ಗೆಲುವು ಸಿಕ್ಕಿದೆ. ಪರಿಣಾಮ 102 ಸ್ಥಳೀಯ ಸಂಸ್ಥೆಗಳಲ್ಲಿ ಎಎಪಿಯದ್ದೇ ಆಡಳಿತವಿರಲಿದೆ. ಪಂಜಾಬ್ ಮತದಾರ 'ಇ.ಡಿ' ಪಕ್ಷವನ್ನು(ಬಿಜೆಪಿ) ತಿರಸ್ಕರಿಸಿದ್ದಾನೆ.

ಜಮ್ಮುವಿನ ರಜೌರಿ ಜಿಲ್ಲೆಯ ದಟ್ಟ ಅರಣ್ಯದಲ್ಲಿ ಅಡಗಿರುವ ಪಾಕ್‌ನ 3-4 ಉಗ್ರರ ತಂಡ | ದೋರಿಮಲ್-ಗಂಭೀರ್ ಮುಘ್ಲಾನ್ ಮೇ 23ರಿಂದ ನಿರಂತರ ಶೋಧ ಕಾರ್ಯಾಚರಣೆ: ಶ್ವಾನಪಡೆ ,ಹೆಲಿಕಾಪ್ಟರ್ ನೆರವು | ಸೇನೆಯ ಲೆಫ್ಟಿನೆಂಟ್ ಜನರಲ್ ಸ್ಥಳಕ್ಕೆ ಆಗಮನ-ಉಸ್ತುವಾರಿ, ಸಿಆರ್‌ಪಿಎಫ್ ಐಜಿ ಭೇಟಿ

ರಜೌರಿ: ಆಪರೇಷನ್ ಶೇರಾವಾಲಿ 8ನೇ ದಿನ

ರಿ: ಜಮ್ಮು ಭಾಗದಲ್ಲಿನ ರಜೌರಿ ಜಿಲ್ಲೆಯಲ್ಲಿ ಮೇ 23ರಂದು ಆರಂಭಿಸಿದ 'ಆಪರೇಷನ್ ಶೇರಾವಾಲಿ' ಸುದೀರ್ಘ 8 ದಿನಗಳಾದರೂ ಮುಂದುವರಿದಿದೆ.

ರಜೌರಿ ಜಿಲ್ಲೆಯ ಮಂಜಾಕೋಟ್ ಸೆಕ್ಟರ್‌ನಲ್ಲಿರುವ ದೋರಿಮಲ್-ಗಂಭೀರ್ ಮುಘ್ಲಾನ್ ಭಾಗದಲ್ಲಿನ ದಟ್ಟವಾದ ಅರಣ್ಯದೊಳಗೆ ಪಾಕಿಸ್ತಾನ ಮೂಲದ 3-4 ಭಯೋತ್ಪಾದಕರ ಚಲನವಲನದ ಬಗ್ಗೆ ಗುಪ್ತಚರ ಇಲಾಖೆಯಿಂದ ಖಚಿತ ಮಾಹಿತಿ ಬಂದ ಬಳಿಕ ಮೇ 23ರಂದು ಭಾರತೀಯ ಸೇನೆ, ಕೇಂದ್ರದ ಮೀಸಲು ಪೊಲೀಸ್ ಪಡೆ(ಸಿಆರ್‌ಪಿಎಫ್) ಮತ್ತು ಜಮ್ಮು-ಕಾಶ್ಮೀರ ಪೊಲೀಸರ ವಿಶೇಷ ತಂಡ ಜಂಟಿಯಾಗಿ ಅರಣ್ಯ ಪ್ರದೇಶಕ್ಕೆ ಧಾವಿಸಿತು.

'ಶೇರಾವಾಲಿ' ಎಂದರೆ ಸಿಂಹವನ್ನೇರಿರುವ ದುರ್ಗಾ ಮಾತೆ ಎಂದರ್ಥ. 'ಆಪರೇಷನ್ ಶೇರಾವಾಲಿ' ಹೆಸರಿನಲ್ಲಿ ಆ ಕ್ಷಣವೇ ಉಗ್ರರಿಗಾಗಿ ಶೋಧ ಕಾರ್ಯ ಆರಂಭಿಸಿತು. ಅರಣ್ಯದೊಳಕ್ಕೆ ಪ್ರವೇಶಿಸಿ ಒಂದಿಡೀ ದಿನ ಅಲ್ಲಿದ್ದ ಗುಹೆಗಳು, ಮರದ ಪೊಟರೆಗಳನ್ನು ಹುಡುಕಾಡಿದಾಗ ಒಂದೆಡೆ ಅಡಗಿದ್ದ ಉಗ್ರರು ಭದ್ರತಾ ಪಡೆಗಳತ್ತ ಗುಂಡು ಹಾರಿಸಿದರು. ಪ್ರತಿಯಾಗಿ ಭದ್ರತಾ ಪಡೆಗಳ ಯೋಧರೂ ಗುಂಡು ಹಾರಿಸಿದರು. ಕೆಲ ನಿಮಿಷಗಳವರೆಗೆ ನಡೆದ ಗುಂಡಿನ ಚಕಮಕಿ ಬಳಿಕ ಸ್ಥಗಿತಗೊಂಡಿತು. ಪರಿಶೀಲಿಸಿದಾಗ ಉಗ್ರರು ಸ್ಥಳದಿಂದ ಪರಾರಿಯಾಗಿದ್ದರು.

ಹಾಗೆಂದು ಜಂಟಿ ಭದ್ರತಾ ಪಡೆಯ ಅಧಿಕಾರಿಗಳು 'ಆಪರೇಷನ್ ಶೇರಾವಾಲಿ'ಗೆ ಕೊನೆ ಹಾಡಲಿಲ್ಲ. ಬದಲಾಗಿ ಭಾರತೀಯ ಸೇನೆಯ ಶ್ವಾನದಳ ಮತ್ತು ಡ್ರೋನ್ ನಿರ್ವಹಣಾ ತಂಡಗಳನ್ನು ಸ್ಥಳಕ್ಕೆ ಕರೆಸಿಕೊಂಡು ಪಾಕ್ ಮೂಲದ ಉಗ್ರರಿಗಾಗಿ ಶೋಧ ಕಾರ್ಯ ಮುಂದುವರಿಸಿದ್ದಾರೆ.

ಶೋಧ ಕಾರ್ಯದ ವೇಳೆ ಉಗ್ರರ ಅಡಗುತಾಣಗಳಂತೆ ಕಾಣಬರುವ, ಶಂಕಾಸ್ಪದವಾಗಿರುವ ಎಲ್ಲಾ ನೆಲೆಗಳನ್ನೂ, ಪೊದೆಗಳನ್ನೂ ಜಂಟಿ ಭದ್ರತಾ ಪಡೆಗಳು ಸ್ಫೋಟಕ ಬಳಸಿ ನಾಶಪಡಿಸಿವೆ. ಭಾರತೀಯ ಸೇನೆ, ಸಿಆರ್‌ಪಿಎಫ್, ಜಮ್ಮು-ಕಾಶ್ಮೀರ ಪೊಲೀಸ್ ಪಡೆಗಳ ಬೃಹತ್ ತಂಡವೇ ಆಪರೇಷನ್ ಶೇರುವಲಿಯಲ್ಲಿ ನಿರಂತರ ತೊಡಗಿಸಿಕೊಂಡಿದೆ.

ಉಗ್ರರು ತಪ್ಪಿಸಿಕೊಳ್ಳಲು ಅವಕಾಶವಾಗದಂತೆ ರಸ್ತೆ ಮಾರ್ಗದಲ್ಲಿಯೂ ಜಂಟಿ ಭದ್ರತಾ ಪಡೆ ಕಾವಲು

ಉಗ್ರರತ್ತ ಷೆಲ್ಲಿಂಗ್: ಅಡಗುತಾಣ ನಾಶ

ಮೇ 28ರ ಗುರುವಾರ ದೋರಿಮಲ್ ಭಾಗದ ಅರಣ್ಯದೊಳಗೆ ಉಗ್ರರ ಕಡೆಯಿಂದ ಗುಂಡಿನ ದಾಳಿ ನಡೆಯಿತು. ಪ್ರತಿಯಾಗಿ ಜಂಟಿ ಭದ್ರತಾ ಪಡೆಗಳ ಯೋಧರು ಉಗ್ರರು ಅಡಗಿದ್ದ ತಾಣದತ್ತ ದೊಡ್ಡ ಮಟ್ಟದಲ್ಲಿ ಷೆಲ್ಲಿಂಗ್ ಕೂಡಾ ನಡೆಸಿದರು. ಭರಪೂರ ಗುಂಡಿನ ಚಕಮಕಿಯನ್ನೂ ನಡೆಸಲಾಯಿತು. ಇಲ್ಲಿಯೂ ಹಲವರು ನಿಮಿಷಗಳವರೆಗೆ ನಡೆದ ಗುಂಡಿನ ಚಕಮಕಿ ನಂತರ ನಿಂತುಹೋಯಿತು. ಪ್ರದೇಶದಲ್ಲಿ ಮೌನ ಆವರಿಸಿತು. ಆ ಬಳಿಕ ಜಂಟಿ ಭದ್ರತಾ ಪಡೆಗಳ ಯೋಧರು ಉಗ್ರರ ಕಡೆಯಿಂದ ಗುಂಡು ಹಾರಿಬರುತ್ತಿದ್ದ ಸ್ಥಳವನ್ನು ಸಮೀಪಿಸಿ ಪರಿಶೀಲಿಸಿದಾಗ, ಅದಾಗಲೇ ಉಗ್ರರು ಅಡಗುತಾಣದಿಂದ ಪರಾರಿಯಾಗಿದ್ದುದು ಕಂಡುಬಂದಿತು. ಬದಲಾಗಿ ಅಡಗು ತಾಣದಲ್ಲಿ ಆಹಾರ ಪದಾರ್ಥಗಳ ಸಂಗ್ರಹವಿತ್ತು. ಬಳಿಕ ಆ ಅಡಗು ತಾಣವನ್ನು ಜಂಟಿ ಭದ್ರತಾ ಪಡೆಗಳು ಸ್ಫೋಟಕ ಬಳಸಿ ನಾಶಪಡಿಸಿದವು. ಅಷ್ಟಕ್ಕೇ ಸುಮ್ಮನಾಗದ ಜಂಟಿ ಭದ್ರತಾ ಪಡೆ ಅಧಿಕಾರಿಗಳು, ಮತ್ತಷ್ಟು ಸೇನಾಪಡೆಗಳನ್ನು ಸ್ಥಳಕ್ಕೆ ಕರೆಸಿಕೊಂಡು ದಟ್ಟ ಅರಣ್ಯದೊಳಕ್ಕೆ ಮತ್ತೊಮ್ಮೆ ನುಗ್ಗಿ ಶೋಧ ಕಾರ್ಯ ಮುಂದುರಿಸಿದ್ದಾರೆ. ಅಲ್ಲದೇ, ಉಗ್ರರು ಅರಣ್ಯದಿಂದ ಹೊರಹೋಗಲು ಅವಕಾಶವಾಗದಂತೆ ಹಲವು ಪ್ರದೇಶಗಳಲ್ಲಿ ಕಾವಲು ನಿಂತಿದ್ದಾರೆ.

ಸ್ಥಳಕ್ಕೆ ಧಾವಿಸಿದ ಸೇನೆ ಲೆಫ್ಟಿನೆಂಟ್ ಜನರಲ್

ಭಾರತೀಯ ಸೇನೆಯ ಉತ್ತರ ವಿಭಾಗದ ಕಮಾಂಡರ್ ಲೆಫ್ಟಿನೆಂಟ್ ಜನರಲ್ ಪ್ರತೀಕ್ ಶರ್ಮಾ ಅವರೇ ಸ್ಥಳಕ್ಕೆ ಧಾವಿಸಿದ್ದು, 'ಆಪರೇಷನ್ ಶೇರಾವಾಲಿ'ಯ ಕಾರ್ಯಾಚರಣೆಯನ್ನು ಗಮನಿಸುತ್ತಿದ್ದಾರೆ. 'ಸಿಆರ್‌ಪಿಎಫ್'ನ ಜಮ್ಮು ವಲಯದ ಇನ್‌ಸ್ಪೆಕ್ಟರ್ ಜನರಲ್(ಐಜಿ) ಅಮೋಲ್ ವಿ.ಹೋಮ್ಕರ್ ರಜೌರಿಗೆ ಆಗಮಿಸಿ ಕಾರ್ಯಾಚರಣೆಯನ್ನು ವೀಕ್ಷಿಸಿ ತೆರಳಿದ್ದಾರೆ. ಕಾಡಿನೊಳಗೆ ಅಡಗಿರುವ 3-4 ಪಾಕ್ ಉಗ್ರರು ಒಂದೋ ಸೆರೆ ಸಿಕ್ಕಬೇಕು, ಇಲ್ಲವೇ ಜಂಟಿ ಭದ್ರತಾ ಪಡೆಯ ಗುಂಡಿನಿಂದ ಹತರಾಗಬೇಕು. ಅಲ್ಲಿಯವರೆಗೂ 'ಆಪರೇಷನ್ ಶೇರಾವಾಲಿ'ಯನ್ನು ನಿಲ್ಲಿಸುವುದಿಲ್ಲ ಎಂದು ಹಠ ತೊಟ್ಟಿರುವ ಸೇನಾಧಿಕಾರಿಗಳು, ಶನಿವಾರವೂ ದೋರಿಮಲ್-ಗಂಭೀರ್ ಮುಘಲನ್ ಬೆಲ್ಟ್‌ನ ದಟ್ಟವಾದ ಅರಣ್ಯ ಪ್ರದೇಶದಲ್ಲಿ ಶೋಧ ಕಾರ್ಯವನ್ನು ಮುಂದುವರಿಸಿದ್ದಾರೆ. ಹೆಚ್ಚುವರಿಯಾಗಿ ವಾಯುಪಡೆಯ ಹೆಲಿಕಾಪ್ಟರ್‌ಗಳ ನೆರವನ್ನೂ ಪಡೆದುಕೊಂಡಿದ್ದಾರೆ. ಉಗ್ರರಿಗಾಗಿ ಶೋಧ ಕಾರ್ಯ ಶನಿವಾರ ಸಂಜೆಯೂ ಮುಂದುವರಿದಿದೆ. ಜಂಟಿ ಭದ್ರತಾ ಪಡೆಗಳ ನೂರಾರು ಯೋಧರು, ಪೊಲೀಸರು ಶೋಧ ಕಾರ್ಯದಲ್ಲಿ ಹಗಲಿರುಳೂ ಮುಂದುವರಿಸಿದ್ದಾರೆ.

ಆಪರೇಷನ್ ಶೇರಾವಾಲಿಗೆ ಶ್ವಾನ ಪಡೆಗಳಿಂದಲೂ ನೆರವು.

ಜಮ್ಮುವಿನ ರಜೌರಿ ಜಿಲ್ಲೆಯ ದೋರಿಮಲ್-ಗಂಭೀರ್ ಮುಘ್ಲಾನ್ ಭಾಗದ ಅರಣ್ಯದೊಳಗೆ ಜಂಟಿ ಭದ್ರತಾ ಪಡೆಗಳ ಕಾರ್ಯಾಚರಣೆ

2 ಅತ್ಯಾಧುನಿಕ ಎಂಕ್ಯು-9 ರೀಪರ್ ಡ್ರೋನ್‌ಗಳಿಗೆ ಹಾನಿ, 5 ಯೋಧರಿಗೆ ಗಾಯ

ಅಮೆರಿಕ ವಾಯುನೆಲೆಗೆ ಇರಾನ್ ಕ್ಷಿಪಣಿ ದಾಳಿ

ಟೆಹರಾನ್/ವಾಷಿಂಗ್ಟನ್: ಇರಾನ್ ಯುದ್ಧ ನಿಲುಗಡೆ ವಿಚಾರವಾಗಿ ಅಮೆರಿಕದ ವಾಷಿಂಗ್ಟನ್‌ನಲ್ಲಿರುವ ಶ್ವೇತಭವನದಲ್ಲಿ 2 ಗಂಟೆಗಳ ಕಾಲ ಸಭೆ ನಡೆದಿದೆ. ಆದರೆ, ಮಾತುಕತೆ ವಿಫಲವಾಗಿದೆ. ನಂತರ ಕೆಲವು ಗಂಟೆಗಳಲ್ಲೇ ಕುವೈತ್‌ನಲ್ಲಿರುವ ಅಮೆರಿಕದ ವಾಯುನೆಲೆ ಮೇಲೆ ಇರಾನ್ ಫತೇಹ್-2 ಖಂಡಾಂತರ ಕ್ಷಿಪಣಿಗಳಿಂದ ಪ್ರಬಲ ದಾಳಿ ನಡೆಸಿದೆ. ಪರಿಣಾಮ ಅಮೆರಿಕದ 5 ಯೋಧರು ಗಾಯಗೊಂಡಿದ್ದಾರೆ.

ಅಲಿ ಅಲ್ ಸಲೇಂನಲ್ಲಿರುವ ಅಮೆರಿಕದ ವಾಯುನೆಲೆ ಕುವೈತ್‌ನಲ್ಲಿರುವ ಪ್ರಮುಖ ವಾಯುನೆಲೆ ಎಂದೇ ಪರಿಗಣಿಸಲಾಗಿದೆ. ಈ ವಾಯುನೆಲೆ ಮೇಲೆಯೇ ಇರಾನ್‌ನ ಶಕ್ತಿಶಾಲಿ ಖಂಡಾಂತರ ಕ್ಷಿಪಣಿಗಳಾದ 'ಫತೇಹ್-110' ಬಳಸಿ ದಾಳಿ ನಡೆಸಿದ್ದರಿಂದ ವಾಯು ನೆಲೆಗೆ ತೀವ್ರ ಸ್ವರೂಪದಲ್ಲಿ ಹಾನಿಯಾಗಿದೆ. ಅಮೆರಿಕದ ವಾಯುಪಡೆಗೆ ಸೇರಿದ 2 ಅತ್ಯಾಧುನಿಕ ಎಂಕ್ಯು-9 ರೀಪರ್ ಡ್ರೋನ್‌ಗಳು ಜಖಂಗೊಂಡಿವೆ. ಪರಿಣಾಮ ವಾಯುಪಡೆಗೆ 12 ಕೋಟಿ ಡಾಲರ್‌ಗಳಷ್ಟು ನಷ್ಟವಾಗಿದೆ.



ಎಂಕ್ಯು-9 ಡ್ರೋನ್

ಶತ್ರು ದೇಶಗಳ ವಿರುದ್ಧದ ಪ್ರಮುಖ ಕಾರ್ಯಾಚರಣೆಗಳಲ್ಲಿ ಅಮೆರಿಕ ವಾಯುಪಡೆ ತನ್ನಲ್ಲಿರುವ ಅತ್ಯಾಧುನಿಕ ಎಂಕ್ಯು-9 ರೀಪರ್ ಡ್ರೋನ್‌ಗಳನ್ನು ಬಳಸುತ್ತದೆ. ಇವಕ್ಕೆ 'ಪ್ರಿಡೇಟರ್ ಡ್ರೋನ್'(ಬೇಟೆಗಾರ) ಎಂಬ ಮತ್ತೊಂದು ಹೆಸರೂ ಇದೆ. ಎಂಕ್ಯು-9 ರೀಪರ್ ವಿಶ್ವದಲ್ಲೇ ಅತ್ಯಂತ ಶಕ್ತಿಶಾಲಿ ಡ್ರೋನ್. ಇದು ಅತ್ಯಾಧುನಿಕ ವಿಷುವಲ್ ಸೆನ್ಸಾರ್ ವ್ಯವಸ್ಥೆ ಹೊಂದಿದ್ದು, ನಿಗೂಢವಾಗಿ ಸಂಚರಿಸಿ ಶತ್ರು ನೆಲೆಗಳ ಮೇಲೆ ನಿಖರ ದಾಳಿ ನಡೆಸಬಲ್ಲದು. ಸುಧಾರಿತ ಕ್ಯಾಮೆರಾ ಮತ್ತು ಕ್ಷಿಪಣಿ ಹೊತ್ತೊಯ್ಯಬಲ್ಲದು. ಒಬ್ಬ ಪೈಲಟ್ ಮತ್ತೊಬ್ಬ ಸೆನ್ಸರ್ ಆಪರೇಟರ್ ಬಲು ದೂರದಿಂದ ಡ್ರೋನ್‌ನ ಹಾರಾಟದ ದಿಕ್ಕು-ವೇಗ, ಕಾರ್ಯಾಚರಣೆ ನಿರ್ವಹಿಸಬಹುದಾಗಿದೆ. 2,200 ಲೀ. ಸಾಮರ್ಥ್ಯದ ಇಂಧನ ಟ್ಯಾಂಕ್ ಇದ್ದು, ಸತತ 27 ಗಂಟೆ ಹಾರಾಟ ನಡೆಸಬಲ್ಲದು. ನೆಲದಿಂದ 50 ಸಾವಿರ ಅಡಿ ಎತ್ತರದಲ್ಲಿ ಹಾರುತ್ತ 1,850 ಕಿ.ಮೀ. ದೂರದವರೆಗೂ ಸಾಗಬಲ್ಲದು. 66 ಅಡಿ ಅಗಲ, 36 ಅಡಿ ಉದ್ದವಿರುವ ಈ ಡ್ರೋನ್, 12.5 ಅಡಿ ಎತ್ತರವಿದೆ. ಟೇಕ್ ಆಫ್ ವೇಳೆ ಗರಿಷ್ಠ 4,760 ಕೆಜಿ ತೂಕವಿರುತ್ತದೆ. 1,701 ಕೆಜಿ ತೂಕದ ಶಸ್ತ್ರಾಸ್ತ್ರ ಹೊತ್ತು ಗಂಟೆಗೆ 400 ಕಿಮೀ ವೇಗದಲ್ಲಿ ಹಾರಬಲ್ಲದು. ಜನರಲ್ ಆಟೋಮಿಕ್ಸ್ ಏರೋನಾಟಿಕಲ್ ಸಿಸ್ಟಮ್ಸ್ ಕಂಪನಿ ತಯಾರಿಸಿದ ಎಂಕ್ಯು-9 ರೀಪರ್ ಡ್ರೋನ್ ಬೆಲೆ 5.60 ಕೋಟಿ ಡಾಲರ್(531 ಕೋಟಿ ರು.).

ಪಾಕ್‌ನ ಐಎಸ್‌ಐ, ದಾವೂದ್ ನಂಟಿನ ಜಾಲದಲ್ಲಿ ವಿದೇಶಿ ಪ್ರಜೆ

ದೆಹಲಿ: ಸರಣಿ ಸ್ಫೋಟ ಸಂಚು, 9 ಉಗ್ರರ ಸೆರೆ

ದೆಹಲಿ: ದೆಹಲಿ, ಮುಂಬೈ ಸೇರಿದಂತೆ ದೇಶದ ವಿವಿಧ ಮಹಾನಗರಗಳಲ್ಲಿ ಸರಣಿ ಸ್ಫೋಟಕ್ಕೆ ಸಂಚು ನಡೆಸಿದ್ದ ಪಾಕಿಸ್ತಾನದ ಬೇಹುಗಾರಿಕಾ ಸಂಸ್ಥೆ 'ಐಎಸ್‌ಐ' ಮತ್ತು ಪಾತಕಿ ದಾವೂದ್ ಇಬ್ರಾಹಿಂ ನಂಟಿದ್ದ ಮುಂಬೈ ಭೂಗತಲೋಕದ ಪಾತಕಿಗಳು ಸೇರಿದಂತೆ 9 ಉಗ್ರರನ್ನು ದೆಹಲಿ ಪೊಲೀಸರ ವಿಶೇಷ ತಂಡ ರಾಷ್ಟ್ರ ರಾಜಧಾನಿಯಲ್ಲಿ ಬಂಧಿಸಿದೆ. ವಿದೇಶಿ ಪ್ರಜೆಯೂ ಸೇರಿದಂತೆ 9 ಉಗ್ರರ ತಂಟ ಭಾರತೀಯ ಸಶಸ್ತ್ರ ದಳಗಳ ಅಧಿಕಾರಿಗಳ ಮೇಲೆಯೂ ದಾಳಿಗೆ ಸಂಚು ರೂಪಿಸಿದ್ದರು. ಮಹತ್ವದ ಈ ಕಾರ್ಯಾಚರಣೆಯಲ್ಲಿ ಬಂಧಿತ ಉಗ್ರರ ಬಳಿಯಿಂದ ಆಧುನಿಕ ಬಂದೂಕುಗಳು ಸೇರಿದಂತೆ ಹಲವು ಶಸ್ತ್ರಾಸ್ತ್ರಗಳು ಮತ್ತು ಸ್ಫೋಟಕಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ದೆಹಲಿ ಪೊಲೀಸ್ ಹಿರಿಯ ಅಧಿಕಾರಿಯೊಬ್ಬರು ಶನಿವಾರ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಬಂಧಿತರು ದೆಹಲಿ, ಮುಂಬೈ ಮತ್ತು ಪಂಜಾಬ್ ನಿವಾಸಿಗಳು. ಕೆಲವರು ವಿದೇಶಿ ಪ್ರಜೆಗಳು ಇದ್ದಾರೆ ಎಂದು ದೆಹಲಿ ಪೊಲೀಸರ ವಿಶೇಷ ಘಟಕ ತಿಳಿಸಿದೆ.

ಈ ಉಗ್ರರ ತಂಡ, ವಿಮಾನ ನಿಲ್ದಾಣ, ರೈಲು ನಿಲ್ದಾಣ ಸೇರಿದಂತೆ ಜನದಟ್ಟಣೆಯ ಸಾರ್ವಜನಿಕ ಸ್ಥಳಗಳನ್ನು ಮತ್ತು ಭದ್ರತಾ ಸಂಸ್ಥೆಗಳನ್ನು ದಾಳಿಗೆ ಗುರಿಯಾಗಿಸಿಕೊಂಡಿತ್ತು ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ. ಬಂಧಿತರಿಂದ ಅಪಾರ ಪ್ರಮಾಣದ ಮದ್ದುಗುಂಡುಗಳು ಮತ್ತು ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ. ಪರಮಾಣು ಸ್ಥಾವರ, ವಿಮಾನ ನಿಲ್ದಾಣಗಳು, ರೈಲ್ವೆ ನಿಲ್ದಾಣಗಳು ಮತ್ತು ವಿದ್ಯುತ್ ಸ್ಥಾವರಗಳ ಮೇಲೆ ದಾಳಿ ನಡೆಸುವ ಸಂಚು ಬಂಧಿತರ ಪಟ್ಟಿಯಲ್ಲಿತ್ತು. ಈ ತಂಡದ ಬಗ್ಗೆ ಗುಪ್ತಚರ ಇಲಾಖೆ ಮಾಹಿತಿ ನೀಡಿದ ಬಳಿಕ ದೆಹಲಿಯಲ್ಲಿ ಹೈ ಅಲರ್ಟ್ ಘೋಷಿಸಲಾಗಿತ್ತು. ಗುಪ್ತಚರ ಸಂಸ್ಥೆಗಳು ಮತ್ತು ಕೇಂದ್ರ ಅರೆಸೈನಿಕ ಪಡೆಗಳೊಂದಿಗೆ ನಿಕಟ ಸಮನ್ವಯವನ್ನು ಕಾಯ್ದುಕೊಳ್ಳಲು ಸೂಚಿಸಲಾಗಿದೆ. ಬಂಧಿತರಿಗಿರುವ ಗಡಿಯಾಚೆಗಿನ ಸಂಪರ್ಕಗಳು, ಹಣದ ವರ್ಗಾವಣೆ ವಿಧಾನಗಳು, ಪಾಕ್ ಪಾತ್ರವನ್ನು ಪೊಲೀಸರು ಪರಿಶೀಲಿಸುತ್ತಿದ್ದಾರೆ.

ವಿಶ್ವಗುರು 1 ಪರೀಕ್ಷೆಯನ್ನೂ ಸರಿಯಾಗಿ ನಡೆಸಿಲ್ಲ: ರಾಹುಲ್

ದೆಹಲಿ: ಪ್ರಧಾನಿ ನರೇಂದ್ರ ಮೋದಿ ದೇಶದ ಶಿಕ್ಷಣ ವ್ಯವಸ್ಥೆಯನ್ನೇ ಪೂರ್ಣ ನಾಶಪಡಿಸಿದ್ದಾರೆ ಎಂದು ಲೋಕಸಭೆ ಪ್ರತಿಪಕ್ಷ ನಾಯಕ, ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಶನಿವಾರ ಟೀಕಾಸ್ತ್ರ ಪ್ರಯೋಗಿಸಿದ್ದಾರೆ. ವಿಶ್ವಗುರು ಎಂದು ಹೇಳಿ ಕೊಳ್ಳುವ ಈ ಸರಕಾರಕ್ಕೆ ಒಂದೇ ಒಂದು ಪರೀಕ್ಷೆ ಯನ್ನೂ ಸರಿಯಾಗಿ ನಡೆಸಲು ಆಗುತ್ತಿಲ್ಲ ಎಂದು ಖಂಡಿಸಿದ್ದಾರೆ. ನೀಟ್, ಸಿಬಿಎಸ್‌ಇ, ಎಸ್‌ಎಸ್‌ಸಿ ಹಾಗೂ ಇತ್ತೀಚಿನ ಸಿಯುಇಟಿ ಪರೀಕ್ಷೆಯನ್ನೂ ಸರಿಯಾಗಿ ನಡೆಸಲು ಸಾಧ್ಯವಾಗಿಲ್ಲ. 1 ಕೋಟಿ ವಿದ್ಯಾರ್ಥಿ ಕಷ್ಟಕ್ಕೀಡಾಗಿದ್ದಾರೆ. ನೀವು ಯಾವ ಪೀಳಿಗೆಯ ಭವಿಷ್ಯವನ್ನು ಹಾಳುಮಾಡುತ್ತೀರೋ ಅದೇ ಪೀಳಿಗೆಯು ನಿಮ್ಮನ್ನು ಹೊಣೆಗಾರರನ್ನಾಗಿ ಮಾಡುತ್ತದೆ ಎಂದು ಕಿಡಿಕಾರಿದ್ದಾರೆ.

ರಾಜ್ಯಗಳಿಗೆ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಸೂಚನೆ

ಮುಂಗಾರು ಕ್ಷೀಣ: ಕೃಷಿ ಚಟುವಟಿಕೆಗೆ ಸಿದ್ಧತೆ

ದೆಹಲಿ: 'ಎಲ್ ನಿನೊ' ಚಂಡಮಾರುತದ ಪ್ರಭಾವದಿಂದಾಗಿ ಈ ವರ್ಷದ ಮುಂಗಾರು ಅವಧಿಯಲ್ಲಿ ವಾಡಿಕೆಗಿಂತಲೂ ಕಡಿಮೆ ಮಳೆಯಾಗಲಿರುವ ಬಗ್ಗೆ ಭಾರತೀಯ ಹವಾಮಾನ ಇಲಾಖೆ(ಐಎಂಡಿ) ಮುನ್ಸೂಚನಾ ವರದಿ ಪ್ರಕಟಿಸಿದೆ. ಹಾಗಾಗಿ ಪ್ರತಿಕೂಲ ಹವಾಮಾನ ಪರಿಸ್ಥಿತಿಗೆ ಸಿದ್ಧರಾಗಿರುವಂತೆ ರಾಜ್ಯ ಸರಕಾರಗಳಿಗೆ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಸೂಚನೆ ನೀಡಿದ್ದಾರೆ.

ರಾಷ್ಟ್ರೀಯ ಕೃಷಿ ಸಮ್ಮೇಳನ-ಖಾರಿಫ್ ಅಭಿಯಾನ 2026ರ ಸಮಾರೋಪದಲ್ಲಿ ಶನಿವಾರ ಮಾತನಾಡಿದ ಸಚಿವ ಚೌಹಾಣ್, ಈ ಬಾರಿಯ ಮುಂಗಾರಿನಲ್ಲಿ ಕಡಿಮೆ ಮಳೆಯಾಗಲಿರುವ ಕಾರಣ ಕೃಷಿ ಕ್ಷೇತ್ರದ ಮೇಲಾಗುವ ಪರಿಣಾಮಗಳನ್ನು ಎದುರಿಸಲು, ಪರಿಹಾರ ಕಂಡುಕೊಳ್ಳಲು ಕೃಷಿ ಸಚಿವಾಲಯ ಹಲವು ಯೋಜನೆಗಳನ್ನು ರೂಪಿಸುತ್ತಿದೆ. ಜೂನ್‌ನಲ್ಲಿ ನೈಋತ್ಯ ಮುಂ ಗಾರು ಅವಧಿ ಆರಂಭವಾದಾಗ ಖಾರಿಫ್ ಋತುವಿನಲ್ಲಿ ಆಹಾರ ಧಾನ್ಯಗಳ ಬಿತ್ತನೆ ಬೀಜಗಳು ಮತ್ತು ರಸಗೊಬ್ಬರ ಬೇಡಿಕೆಗೆ ಅನುಗುಣವಾಗಿ ಪೂರೈಕೆ ಮಾಡುವುದಕ್ಕೆ ಬೇಕಾಗುವಷ್ಟು ಸರಕು ಸಂಗ್ರಹ ಮಾಡಲಾಗಿದೆ ಎಂದು ಹೇಳಿದ್ದಾರೆ. ಮುಂಗಾರು ಅವಧಿಗೆ ದೇಶಾದ್ಯಂತ ಕೃಷಿ ಚಟುವಟಿಕೆಗೆ ಒಟ್ಟು 173 ಲಕ್ಷ ಕ್ವಿಂಟಲ್ ಬಿತ್ತನೆ ಬೀಜ ಅಗತ್ಯವಿದೆ. ಪ್ರಸ್ತುತ ಗೋದಾಮುಗಳಲ್ಲಿ 192 ಲಕ್ಷ ಕ್ವಿಂಟಲ್ ಬಿತ್ತನೆ ಬೀಜ ಲಭ್ಯವಿದೆ. ಪ್ರಸ್ತುತ 200 ಲಕ್ಷ ಟನ್ ರಸಗೊಬ್ಬರಗಳ ದಾಸ್ತಾನು ಇದೆ. ರಾಜ್ಯ ಸರಕಾರಗಳು ರೈತರಿಗೆ ಬಿತ್ತನೆ ಬೀಜಗಳನ್ನು ಸಕಾಲದಲ್ಲಿ ವಿತರಿಸುವುದಕ್ಕೆ ಸಿದ್ಧತೆ ಮಾಡಿಕೊಳ್ಳಬೇಕಿದೆ. ಆ ಬಗ್ಗೆ ಸೂಚನೆ ನೀಡಲಾಗಿದೆ ಎಂದು ಸಚಿವರು ವಿವರಿಸಿದ್ದಾರೆ.

ಜೂ.1ರಂದು ಮುಂಗಾರು ಆರಂಭವಾಗುವುದು ವಾಡಿಕೆ. ಗಾಳಿ ಪ್ರಬಲವಾಗಿದ್ದರೆ ಈ ಹೊತ್ತಿಗೆ ಇಡೀ ಸಮಭಾಜಕ ಪ್ರದೇಶ ಮತ್ತು ನೈಋತ್ಯ ಕರಾವಳಿಯಲ್ಲಿ ಮಳೆಯಾಗಬೇಕಿತ್ತು. ಆದರೆ ಗಾಳಿ ದುರ್ಬಲವಾಗಿದೆ ಎಂದು ಐಎಂಡಿ ಮುನ್ಸೂಚನೆ ನೀಡಿದೆ. ಎಲ್-ನಿನೊದಿಂದ ಎದುರಾಗಲಿರುವ ಮಳೆ ಕೊರತೆ ಸಮಸ್ಯೆ ಬಗ್ಗೆ ಎಲ್ಲವೂ ಖಚಿತವಿಲ್ಲ. ಹಾಗಿದ್ದೂ ಅಂತಹ ಪರಿಸ್ಥಿತಿಯೇನಾದರೂ ಎದುರಾದರೆ ಆಗ ಆ ಸವಾಲನ್ನು ಎದುರಿಸಲು ಮುಂಜಾಗ್ರತೆ ಕ್ರಮವಾಗಿ ಸಿದ್ಧತೆ ಮಾಡಿಕೊಳ್ಳುತ್ತಿದ್ದೇವೆ ಎಂದರು.

ಪ.ಬಂ: 335 ಅಕ್ರಮ ಬಾಂಗ್ಲಾ ವಲಸಿಗರ ಸೆರೆ

ಕೋಲ್ಕತ್ತ: ಅಕ್ರಮ ವಲಸಿಗರನ್ನು ಗಡಿಪಾರು ಮಾಡುವ ಕಾರ್ಯವನ್ನು ಚುರುಕುಗೊಳಿಸಿರುವ ಪಶ್ಚಿಮ ಬಂಗಾಳ ಸರಕಾರ, 'ಡಿಟೆಕ್ಟ್, ಡಿಲಿಟ್, ಡಿಪೋರ್ಟ್'(ಅಕ್ರಮ ವಲಸಿಗರ ಪತ್ತೆ- ದಾಖಲೆಗಳಿಂದ ಹೆಸರು ರದ್ದು- ಬಳಿಕ ಗಡಿಪಾರು) ಘೋಷಣೆ ಹೊರಡಿಸಿದೆ.

ಮುಖ್ಯಮಂತ್ರಿ ಸುವೇಂದು ಅಧಿಕಾರಿ ನೇತೃತ್ವದ ಬಿಜೆಪಿ ಸರಕಾರ, ರಾಜ್ಯದಲ್ಲಿರುವ ಅಕ್ರಮ ಬಾಂಗ್ಲಾದೇಶಿ ವಲಸಿಗರನ್ನು ಪತ್ತೆ ಮಾಡಿ ಅವರನ್ನು ನೇರವಾಗಿ 'ಗಡಿ ಭದ್ರತಾ ಪಡೆ'(ಬಿಎಸ್‌ಎಫ್) ಅಧಿಕಾರಿಗಳ ವಶಕ್ಕೆ ಒಪ್ಪಿಸುತ್ತಿದೆ. ಬಿಎಸ್‌ಎಫ್ ಅಧಿಕಾರಿಗಳು ಬಾಂಗ್ಲಾದೇಶದ ಗಡಿಭದ್ರತಾ ಪಡೆಯ ಅಧಿಕಾರಿಗಳ ಜತೆ ಸಂವಹನ ನಡೆಸಿ ಅವರ ವಶಕ್ಕೆ ಅಕ್ರಮ ವಲಸಿಗರನ್ನು ಹಸ್ತಾಂತರಿಸುವ ಪ್ರಕ್ರಿಯೆ ನಡೆಸಿದ್ದಾರೆ. ಈ ಪ್ರಕ್ರಿಯವರೆಗೂ ಅಕ್ರಮ ವಲಸಿಗರನ್ನು ಭದ್ರವಾಗಿ ಇರಿಸಲು ಪಶ್ಚಿಮ ಬಂಗಾಳ ರಾಜ್ಯ ಸರಕಾರ 11 ಕಡೆ 'ನಿಗಾ ಕೇಂದ್ರ'ಗಳನ್ನು ಆರಂಭಿಸಿದೆ.

ಮೇ ಮೊದಲ ವಾರದಲ್ಲಿ ಅಧಿಕಾರಕ್ಕೇರಿದ ಬಿಜೆಪಿ ಸರಕಾರ, ಅಕ್ರಮ ಬಾಂಗ್ಲಾದೇಶಿ ವಲಸಿಗರನ್ನು ಗಡಿಪಾರು ಮಾಡುವುದಕ್ಕೇ ಆದ್ಯತೆ ನೀಡಿದೆ ಎಂದು ಹೇಳಿರುವ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅವರು, 'ಜಲ್ದಿ ಜಲ್ದೀ ಭಾಗೋ' ಎಂದು ಬಾಂಗ್ಲಾದೇಶಿಯರಿಗೆ ಬಹಿರಂಗವಾಗಿಯೇ ಹೇಳುತ್ತಿದ್ದಾರೆ. ಹಾಗಿದ್ದೂ ರಾಜ್ಯದಲ್ಲಿಯೇ ಅಡಗಿಕೊಂಡಿರುವ ಅಕ್ರಮ ವಲಸಿಗರನ್ನು ಪೊಲೀಸರು ಪತ್ತೆ ಮಾಡುತ್ತಿದ್ದು, ಕಳೆದ ಎರಡು ವಾರಗಳಲ್ಲಿ 335 ಜನರನ್ನು ಬಂಧಿಸಿದ್ದಾರೆ. ಅವರೆಲ್ಲರನ್ನೂ 11 ನಿಗಾ ಕೇಂದ್ರಗಳ ವಶಕ್ಕೆ ಒಪ್ಪಿಸಿದ್ದಾರೆ. ಅಲ್ಲದೇ, 2680 ಶಂಕಿತರ ದಾಖಲೆಪತ್ರಗಳನ್ನು ಸಂಗ್ರಹಿಸಿ ಬಾಂಗ್ಲಾದೇಶಕ್ಕೆ ಪರಿಶೀಲನೆಗೆ ಕಳುಹಿಸಿಕೊಡಲಾಗಿದೆ ಎಂದು ಪಶ್ಚಿಮ ಬಂಗಾಳ ಸರಕಾರದ ಅಧಿಕಾರಿಗಳು ಸುದ್ದಿಸಂಸ್ಥೆಗೆ ಮಾಹಿತಿ ನೀಡಿದ್ದಾರೆ.

ಅಕ್ರಮ ವಲಸಿಗರನ್ನು ರಾಜ್ಯ ಪೊಲೀಸರು ಬಂಧಿಸುತ್ತಿರುವ ಸುದ್ದಿ ಹೊರಬೀಳುತ್ತಲೇ ಬಾಂಗ್ಲಾದೇಶದಿಂದ ನುಸುಳಿಕೊಂಡು ಪಶ್ಚಿಮ ಬಂಗಾಳಕ್ಕೆ ಬಂದಿದ್ದವರಲ್ಲಿ ಹೆಚ್ಚಿನ ಜನರು ಉತ್ತರ 24 ಪರಗಣ ಮತ್ತು ಹಕೀಂಪುರ ಸಮೀಪದ ಗಡಿಪ್ರದೇಶಗಳತ್ತ ದೌಡಾಯಿಸಲಾರಂಬಿಸಿದ್ದಾರೆ.

ಮರಾಠಾ ಮೀಸಲಿಗಾಗಿ ಜಾರಂಗೆ ಮತ್ತೆ ನಿರಶನ

ಮುಂಬೈ: ಮರಾಠಾ ಮೀಸಲು ಹೋರಾಟಗಾರ ಮನೋಜ್ ಜಾರಂಗೆ ಮಹಾರಾಷ್ಟ್ರದ ಜಲ್ನಾ ಜಿಲ್ಲೆಯಲ್ಲಿ ಮೀಸಲು ಹೋರಾಟದ ಭಾಗವಾಗಿ 9ನೇ ಬಾರಿ ಅನಿರ್ದಿಷ್ಟಾವಧಿ ಉಪವಾಸವನ್ನು ಶನಿವಾರ ಆರಂಭಿಸಿದ್ದಾರೆ. ಜಲ್ನಾ ಜಿಲ್ಲೆಯ ಅಂತರವಾಲಿ ಸಾರತಿ ಗ್ರಾಮದಲ್ಲಿ ಜಾರಂಗೆ ಮತ್ತು ತಂಡ ಪ್ರತಿಭಟನಾ ಧರಣಿ ಆರಂಭವಾಗಿದೆ.

ಮರಾಠಾ ಸಮುದಾಯದ ತಾಳ್ಮೆಯ ಪರೀಕ್ಷೆ ಮಾಡಬೇಡಿ ಎಂದು ರಾಜ್ಯ ಸರಕಾರಕ್ಕೆ ಎಚ್ಚರಿಕೆ ನೀಡಿರುವ ಜಾರಂಗೆ, ಬೇಡಿಕೆ ಈಡೇರಿಸಲು ನಿರ್ದಿಷ್ಟ ಕ್ರಮವನ್ನು ಸರಕಾರ ಕೈಗೊಳ್ಳುವವರೆಗೂ ಹೋರಾಟ ಮುಂದುವರಿಸುವುದಾಗಿ ಪಟ್ಟು ಹಿಡಿದಿದ್ದಾರೆ. ಜಾರಂಗೆ ಅವರು ಛಾವಣಿಯಿಲ್ಲದ ತೆರೆದ ಆಕಾಶದ ಕೆಳಗೆ ಉರಿ ಬಿಸಿಲಿನಲ್ಲೇ ಕುಳಿತು ಉಪವಾಸ ನಡೆಸುತ್ತಿದ್ದಾರೆ. ಇದು ಮಹಾರಾಷ್ಟ್ರದಲ್ಲಿರುವ ಎನ್‌ಡಿಎ ಮೈತ್ರಿಕೂಟ ಸರಕಾರದ ಮೇಲೆ ತೀವ್ರ ಒತ್ತಡ ಉಂಟು ಮಾಡಿದೆ.ಮರಾಠಾ ಮೀಸಲಿಗೆ ಸಂಬಂಧಿಸಿದ ಸಂಪುಟ ಉಪ ಸಮಿತಿ ಅಧ್ಯಕ್ಷರೂ ಆಗಿರುವ ಸಚಿವ ರಾಧಾಕೃಷ್ಣ ವಿಖೆ ಪಾಟೀಲ್ ಅವರು ಜಾರಂಗೆ ಜತೆಗೆ ಮಾತುಕತೆಗೆ ಮುಂದಾಗಿದ್ದಾರೆ. ಮುಂಬೈನಿಂದ 400 ಕಿ.ಮೀ ದೂರದಲ್ಲಿರುವ ಅಂತರವಾಲಿ ಸಾರತಿ ಗ್ರಾಮದಲ್ಲಿನ ಪ್ರತಿಭಟನಾ ಸ್ಥಳಕ್ಕೆ ತೆರಳಿ, ನಿರಶನ ಕೈಬಿಡುವಂತೆ ಒತ್ತಾಯಿಸಿದ್ದಾರೆ.

ಒಬಿಸಿ ಕೋಟಾಕ್ಕಾಗಿ ಮರಾಠಾ ಸಮುದಾಯದವರಿಗೆ ಕುನ್ಬಿ ಜಾತಿ ಪ್ರಮಾಣಪತ್ರ ನೀಡಬೇಕು. ಹೈದರಾಬಾದ್ ಮತ್ತು ಸತಾರಾ ಗೆಜೆಟ್‌ಗಳಲ್ಲಿನ ಅಂಶಗಳ ಅನುಷ್ಠಾನವಾಗಬೇಕು. ಮೀಸಲು ಹೋರಾಟಕ್ಕಿಳಿದಿದ್ದವರ ವಿರುದ್ಧದ ಕ್ರಿಮಿನಲ್ ಪ್ರಕರಣಗಳನ್ನು ಹಿಂಪಡೆಯಬೇಕು ಎಂಬುದು ಜಾರಂಗೆ ಅವರ ಒತ್ತಾಯವಾಗಿದೆ.

ಎಲ್‌ಪಿಜಿ ಸಂಗ್ರಹ ಸಾಮರ್ಥ್ಯ ಹೆಚ್ಚಿಸಿಕೊಳ್ಳಿ: ಕೇಂದ್ರ ಸೂಚನೆ

ದೆಹಲಿ: ಪಶ್ಚಿಮ ಏಷ್ಯಾ ಭಾಗದಲ್ಲಿ ಅಮೆರಿಕ-ಇರಾನ್ ನಡುವಿನ ಸೇನಾ ಸಂಘರ್ಷದಿಂದ ಆಯಕಟ್ಟಿನ ಜಲಮಾರ್ಗ 'ಹೊರ್ಮುಜ್ ಜಲಸಂಧಿ'ಗೆ ಎರಡೂ ದೇಶಗಳಿಂದ ಸರತಿಯಂತೆ ದಿಗ್ಬಂಧನ ಬಿದ್ದಿರುವುದರ ಪರಿಣಾಮ ಭಾರತ ಸೇರಿದಂತೆ ಹಲವು ದೇಶಗಳಲ್ಲಿ ಅಡುಗೆ ಅನಿಲ, ಕಚ್ಚಾತೈಲ ಪೂರೈಕೆಯಲ್ಲಿ ಭಾರೀ ವ್ಯತ್ಯಯವಾಗಿದೆ.

ಈ ಮಧ್ಯೆ ಕೇಂದ್ರದ ಪೆಟ್ರೋಲಿಯಂ ಸಚಿವಾಲಯ, ಸರಕಾರಿ ಸ್ವಾಮ್ಯದ ತೈಲ-ಅನಿಲ ಪೂರೈಕೆ ನಿಗಮಗಳು ಮತ್ತು ಇಂಧನ ರಿಟೇಲ್ ವ್ಯಾಪಾರಿಗಳಿಗೆ ಕೆಲವು ಸೂಚನೆಗಳನ್ನು ಶನಿವಾರ ಹೊರಡಿಸಿದೆ. ಕನಿಷ್ಠ 30 ದಿನಗಳ ಬೇಡಿಕೆಗೆ ಸಾಕಾಗುವಷ್ಟು ದ್ರವೀಕೃತ ಪೆಟ್ರೋಲಿಯಂ ಅನಿಲ(ಎಲ್‌ಪಿಜಿ) ಸಂಗ್ರಹ ಪ್ರಮಾಣದಲ್ಲಿ ಸಾಮರ್ಥ್ಯ ಹೆಚ್ಚಿಸಿಕೊಳ್ಳುವಂತೆ ನಿಗಮಗಳಿಗೆ ಮತ್ತು ಸಿಲಿಂಡರ್ ಪೂರೈಕೆದಾರರಿಗೆ ಸೂಚನೆ ನೀಡಿದೆ. ಇಂಡಿಯನ್ ಆಯಿಲ್ ಕಾರ್ಪೊರೇಷನ್(ಐಒಸಿ), ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿ.(ಬಿಪಿಸಿಎಲ್) ಮತ್ತು ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿ.(ಎಚ್‌ಪಿಸಿಎಲ್)ಗಳು ತಮ್ಮಲ್ಲಿನ ದಾಸ್ತಾನು ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವುದು ತುರ್ತು ಅಗತ್ಯವಾಗಿದೆ ಎಂದು ಸಚಿವಾಲಯದಿಂದ ಸ್ಪಷ್ಟ ನಿರ್ದೇಶನ ನೀಡಿರುವುದಾಗಿ ಪೆಟ್ರೋಲಿಯಂ ಸಚಿವಾಲಯದ ಜಂಟಿ ಕಾರ್ಯದರ್ಶಿ ಸುಜಾತಾ ಶರ್ಮಾ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಹೊರ್ಮುಜ್ ದಾಟಿದ 'ನಿಸ್ಸೋಸ್ ಕೆರೋಸ್'

ದಿ ಮಾರ್ಷಲ್ ಐಲ್ಯಾಂಡ್‌ನ ಬಾವುಟವನ್ನು ಹೊಂದಿರುವ ಹಡಗು 'ನಿಸ್ಸೋಸ್ ಕೆರೋಸ್' ಮೇ 21ರಂದು ಯುನೈಟೆಡ್ ಅರಬ್ ಎಮಿರೇಟ್ಸ್‌ನ ಶಾರ್ಜಾದಿಂದ ಹೊರಟಿದೆ. 2.70 ಲಕ್ಷ ಟನ್(18 ಲಕ್ಷ ಬ್ಯಾರೆಲ್) ಕಚ್ಚಾತೈಲ ಹೊತ್ತು ಭಾರತದತ್ತ ಪ್ರಯಾಣ ಬೆಳೆಸಿದೆ. ಈ ನೌಕೆ ಮೇ 26ರಂದೇ ಹೊರ್ಮುಜ್ ಜಲಸಂಧಿಯನ್ನು ದಾಟಿ ಮುಂದೆ ಬಂದಿದೆ. ಜೂನ್ 3ರಂದು ಆಂಧ್ರಪ್ರದೇಶ ವಿಶಾಖಪಟ್ಟಣಂ ಬಂದರನ್ನು ಮುಟ್ಟುವ ನಿರೀಕ್ಷೆ ಇದೆ. ಈ ಹಡಗಿನಲ್ಲಿರುವ ಕಚ್ಚಾತೈಲ ಸರಕಾರಿ ಒಡೆತನದ 'ಹಿಂದೂಸ್ಥಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿ.'(ಎಚ್‌ಪಿಸಿಎಲ್)ಗೆ ಸೇರಲಿದೆ. ಈ ಹಡಗಿನಲ್ಲಿ 25 ಮಂದಿ ವಿದೇಶಿ ನಾವಿಕ ಸಿಬ್ಬಂದಿ ಇದ್ದಾರೆ ಎಂದು ಭಾರತದ ಬಂದರು, ಜಲಮಾರ್ಗ ಸಚಿವಾಲಯದ ನಿರ್ದೇಶಕ ಓಪೇಶ್ ಕುಮಾರ್ ಶರ್ಮಾ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.ಇದಲ್ಲದೇ, ಎಲ್‌ಪಿಜಿ ತುಂಬಿರುವ ಒಂದು ಹಡಗು ಮತ್ತು ಕಚ್ಚಾತೈಲವಿರುವ 5 ನೌಕೆಗಳ ಸೇರಿದಂತೆ ಭಾರತದ ಧ್ವಜ ಹೊಂದಿರುವ ಒಟ್ಟು 13 ಹಡಗುಗಳು ಈಗಲೂ ಹೊರ್ಮುಜ್ ಜಲಸಂಧಿಯಾಚೆ ಲಂಗರು ಹಾಕಿ ನಿಂತಿವೆ. ಉಳಿದ ಹಡಗುಗಳಲ್ಲಿ ರಾಸಾಯನಿಕಗಳು, ಕಂಟೇನರ್‌ಗಳಿವೆ ಎಂದು ಓಪೇಶ್ ವಿವರಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಟೆಂಪೊ ಹರಿದು ಇಬ್ಬರು ಯುವಕರು ಸಾವು

ತುಮಕೂರು: ಕೊರಟಗೆರೆ ತಾಲೂಕಿನ ಬೈರೇನಹಳ್ಳಿ ಕ್ರಾಸ್ ಬಳಿ ರಸ್ತೆ ಬದಿಯ ಅಂಗಡಿ ಮುಂದೆ ನಿಂತಿದ್ದ ನಾಲ್ವರ ಮೇಲೆ ಮಿನಿ ಟೆಂಪೊ ವಾಹನ ಹರಿದಿದ್ದು, ಇಬ್ಬರು ಮೃತಪಟ್ಟ ಘಟನೆ ಶನಿವಾರ ನಡೆದಿದೆ. ಮತ್ತಿಬ್ಬರ ಸ್ಥಿತಿ ಗಂಭೀರವಾಗಿದೆ. ಬೈರೇನಹಳ್ಳಿಯ ನವೀನ್ ಕುಮಾರ್ (21), ನಕುಲ್ (21) ಮೃತರು. ಭಾಗ್ಯಮ್ಮ (50), ರಾಮಕೃಷ್ಣಯ್ಯ (55) ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ನವೀನ್ ಸ್ಥಳದಲ್ಲೇ ಮೃತಪಟ್ಟಿದ್ದು, ನಕುಲ್ ಚಿಕಿತ್ಸೆಗೆ ಸ್ಪಂದಿಸದೆ ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದಾರೆ. ಗೌರಿಬಿದನೂರು ಕಡೆಯಿಂದ ಬರುತ್ತಿದ್ದ ಮಿನಿ ಟೆಂಪೊ ಚಾಲಕನ ನಿಯಂತ್ರಣ ತಪ್ಪಿ, ರಸ್ತೆ ಬದಿಯ ಅಂಗಡಿ ಬಳಿನಿಂತಿದ್ದವರ ಮೇಲೆ ಹರಿದಿದೆ. ಘಟನೆ ನಂತರ ಚಾಲಕ ಸ್ಥಳದಿಂದ ಪರಾರಿಯಾಗಿದ್ದಾನೆ. ಕೊರಟಗೆರೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನೃಪತುಂಗ ವಿವಿ ಘಟಿಕೋತ್ಸವ: 18 ವಿದ್ಯಾರ್ಥಿಗಳಿಗೆ ಚಿನ್ನ

ಬೆಂಗಳೂರು: ನಗರದ ನೃಪತುಂಗ ವಿಶ್ವವಿದ್ಯಾಲದಯ ದ್ವಿತೀಯ ಮತ್ತು ತೃತೀಯ ಘಟಿಕೋತ್ಸವ ಜೂನ್ 2ರಂದು ಬೆಳಗ್ಗೆ 11ಕ್ಕೆ ಜ್ಞಾನಜ್ಯೋತಿ ಸಭಾಂಗಣದಲ್ಲಿ ನಡೆಯಲಿದೆ. ಬೇರೆ ಬೇರೆ ಕ್ಷೇತ್ರದ ಒಟ್ಟು ಆರು ಸಾಧಕರಿಗೆ ಗೌರವ ಡಾಕ್ಟರೇಟ್, ವಿವಿಧ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದ 18 ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಪ್ರದಾನ ಮಾಡಲಾಗುವುದು ಎಂದು ವಿಶ್ವವಿದ್ಯಾಲಯದ ಕುಲಪತಿ ಬಿ.ಕೆ. ಮೋಹನ್‌ಕುಮಾರ್ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಎರಡು ಶೈಕ್ಷಣಿಕ ವರ್ಷಗಳಲ್ಲಿ ಬಿ.ಎಸ್ಸಿ, ಬಿ.ಸಿ.ಎ, ಎಂ.ಎಸ್ಸಿ ಪೂರ್ಣಗೊಳಿಸಿದ 1,081 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಗುವುದು. 2021-24ರಲ್ಲಿ 634 ಹಾಗೂ 2022-25ನೇ ಸಾಲಿನಲ್ಲಿ 428 ವಿದ್ಯಾರ್ಥಿಗಳು ಇದರಲ್ಲಿ ಸೇರಿದ್ದಾರೆ. 2021-24ನೇ ಸಾಲಿಗೆ ಸಂಬಂಧಿಸಿದ ಘಟಿಕೋತ್ಸವದಲ್ಲಿ ಸಾಹಿತಿ ಎಸ್.ಜಿ. ಸಿದ್ದರಾಮಯ್ಯ, ನಟಿ ಜಯಮಾಲ ರಾಮಚಂದ್ರ, ಪಿಡಬ್ಲ್ಯುಡಿ ನಿವೃತ್ತ ಮುಖ್ಯ ಎಂಜಿನಿಯರ್ ಕೆ.ಜಯಪ್ರಕಾಶ್, 2022-25ರ ಸಾಲಿನಲ್ಲಿ ರಂಗಕರ್ಮಿ ಶ್ರೀನಿವಾಸ ಜಿ. ಕಪ್ಪಣ್ಣ, ನಿವೃತ್ತ ಐಪಿಎಸ್ ಅಧಿಕಾರಿ ಎಸ್. ಮರಿಸ್ವಾಮಿ, ಐಸಿಡಿಎಸ್ ಜಂಟಿ ನಿರ್ದೇಶಕ ಬಿ.ಎಚ್.ನಿಶ್ಚಲ್ ಅವರಿಗೆ ಗೌರವ ಡಾಕ್ಟರೇಟ್ ನೀಡಲಾಗುವುದು ಎಂದರು.

ಎಸ್‌ಪಿಗಾಗಿ ಕಾದು ವಾಪಸ್ ಆದ ಯಶ್ ತಾಯಿ

ಹಾಸನ: ಇಲ್ಲಿನ ವಿದ್ಯಾನಗರದಲ್ಲಿರುವ ನಟ ಯಶ್ ತಾಯಿ ಮಾಲೀಕತ್ವದ ಶೆಡ್, ಕಾಂಪೌಂಡ್ ಧ್ವಂಸ ಪ್ರಕರಣಕ್ಕೆ ಸಂಬಂಧಿಸಿದಂತೆ ಹಾಸನ ಎಸ್‌ಪಿ ಶುಭನ್ವಿತಾ

ಅವರನ್ನು ಭೇಟಿಯಾಗಲು ಶನಿವಾರ ಕಚೇರಿಗೆ ರಾಕಿಂಗ್‌ಸ್ಟಾರ್ ಯಶ್ ತಾಯಿ ಪುಷ್ಪ ಆಗಮಿಸಿದ್ದರು. ಮೂರು ದಿನಗಳ ಹಿಂದೆ ಪೊಲೀಸ್ ಮಹಾ ನಿರ್ದೇಶಕರನ್ನು ಭೇಟಿಯಾಗಿದ್ದ ಪುಷ್ಪ, ಸುಮಾರು 24 ಲಕ್ಷ ರು.ಮೊತ್ತದ ವಸ್ತುಗಳು ಹಾನಿಯಾಗಿದೆ. ಘಟನೆ ಸಂಬಂಧ ದೇವರಾಜ್ ಹಾಗೂ ಧರ್ಮ ಸೇರಿ ಹಲವರ ವಿರುದ್ಧ ದೂರು ನೀಡಿದರೂ ಕೇಸ್ ದಾಖಲು ಮಾಡದೆ ಎನ್‌ಸಿಆರ್ ದಾಖಲು ಮಾಡಿದ್ದಾರೆ ಎಂದು ಹಾಸನ ಬಡಾವಣೆ ಠಾಣೆ ಪೊಲೀಸರ ವಿರುದ್ಧ ಆರೋಪಿಸಿದ್ದಾರೆ. ಇದುವರೆಗೂ ಎಫ್‌ಐಆರ್ ದಾಖಲು ಮಾಡದ ಹಿನ್ನೆಲೆ ಡಿಜಿಟಲ್ ಸಾಕ್ಷಿಗಳ ಜತೆ ಹಾಸನದ ಜೆಎಂಎಫ್‌ಸಿ ಕೋರ್ಟ್‌ಗೆ ಪುಷ್ಪಾ ಸಂಬಂಧಿ ದುರ್ಗಾಪ್ರಸಾದ್ ಖಾಸಗಿ ದೂರು ದಾಖಲಿಸಿದ್ದಾರೆ. ದೂರು ಆಧರಿಸಿ ಪ್ರಕರಣ ಸಂಬಂಧ ಎಸ್‌ಪಿ ಭೇಟಿಗೆ ಕೋರ್ಟ್ ನಿರ್ದೇಶನ ನೀಡಿದ್ದು ಕೋರ್ಟ್ ಸೂಚನೆಯಂತೆ ಶನಿವಾರ ಎಸ್ಪಿ ಭೇಟಿಗೆ ಅವರು ಆಗಮಿಸಿದ್ದರು.

ಧವಸಧಾನ್ಯ ಜಲಾವೃತ, ನೆಲಕ್ಕೆ ಬಿದ್ದ ಮರಗಳು

ಚಾಮರಾಜನಗರ/ಚಿಕ್ಕಮಗಳೂರು: ರಾಜ್ಯದ ಹಲವೆಡೆ ಭಾರೀ ಮಳೆಯಾಗುತ್ತಿದೆ. ಚಾಮರಾಜನಗರ, ಚಿಕ್ಕಮಗಳೂರು ಜಿಲ್ಲೆಯಲ್ಲಿ ವರುಣನ ಅಬ್ಬರಕ್ಕೆ ಹಲವು ಅವಾಂತರಗಳು ಸೃಷ್ಟಿಯಾಗುತ್ತಿದ್ದು, ಜನ ಪರದಾಡುವಂತಾಗಿದೆ. ಚಾಮರಾಜನಗರ ಜಿಲ್ಲೆಯ ಹನೂರು ತಾಲೂಕಿನ ಗುಳ್ಯದಬಯಲಿನಲ್ಲಿ ಭಾರೀ ಮಳೆಯಾಗಿದೆ. ಪರಿಣಾಮ ಭಾಷಾ ಎಂಬುವವರಿಗೆ ಮನೆಗೆ ನೀರು ನುಗಿದ್ದು, ನೀರು ಹೊರಹಾಕಲು ಕುಟುಂಬಸ್ಥರು ರಾತ್ರಿಯಿಡಿ ಪರದಾಡಿದ್ದಾರೆ. ಜೊತೆಗೆ ಮನೆಯಲ್ಲಿದ್ದ ಧವಸಧಾನ್ಯಗಳಿಗೂ ನೀರು ಸೇರಿ, ಅಪಾರ ಪ್ರಮಾಣ ಹಾನಿಯುಂಟಾಗಿದೆ. ಇನ್ನೂ ಚಿಕ್ಕಮಗಳೂರು ನಗರದಲ್ಲಿ ರಾತ್ರಿ ಧಾರಾಕಾರ ಮಳೆಯಾಗಿದ್ದು, ನಗರದಾದ್ಯಂತ ನಾನಾ ಅವಾಂತರ ಸೃಷ್ಟಿಯಾಗಿದೆ. ಗಾಳಿ-ಮಳೆಗೆ ಬೃಹತ್ ಮರಗಳು, ವಿದ್ಯುತ್ ಕಂಬಗಳು ಧರೆಗುರುಳಿವೆ. ಕೋಟೆ ಬಡಾವಣೆಯಲ್ಲಿ ಮನೆಯ ಮೇಲ್ಛಾವಣಿಯ ಹೆಂಚುಗಳು ಹಾರಿ ಹೋಗಿದ್ದು, ಕೋರ್ಟ್ ಮುಂಭಾಗ ಹತ್ತಾರು ವಿದ್ಯುತ್ ಕಂಬಗಳು ಧರಾಶಾಹಿಯಾಗಿವೆ.

{ ಶಾಲಿನಿ ರಜನೀಶ್ } ಸರಕಾರದ ಮುಖ್ಯ ಕಾರ್ಯದರ್ಶಿ

ಎಲ್ಲ ಅಧಿಕಾರಿಗಳು ಮತ್ತು ಸಾರ್ವಜನಿಕರು ಸಮನ್ವಯತೆಯಿಂದ ಕಾರ್ಯನಿರ್ವಹಿಸಿ, ಘನ ತ್ಯಾಜ್ಯ ನಿರ್ವಹಣೆಯಲ್ಲಿ ಕರ್ನಾಟಕವನ್ನು ದೇಶದಲ್ಲೇ ಮಾದರಿ ರಾಜ್ಯವನ್ನಾಗಿ ಮಾಡಲು ಶ್ರಮಿಸಬೇಕು. ಸುಪ್ರೀಂಕೋರ್ಟ್ ಆದೇಶದಂತೆ ದೇಶದ ಎಲ್ಲ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳಿಗೆ ಘನತ್ಯಾಜ್ಯ ನಿರ್ವಹಣೆ ನಿಯಮಗಳನ್ನು (2026) ಕಟ್ಟುನಿಟ್ಟಾಗಿ ಜಾರಿಗೆ ಸೂಚನೆ ನೀಡಲಾಗಿದೆ.

ಉಪಮುಖ್ಯಮಂತ್ರಿ ಹುದ್ದೆಗೆ ಭಾರಿ ಪೈಪೋಟಿ | ಕಚ್ಚಾಟ ಹೆಚ್ಚಾದರೆ ಕೈಬಿಡುವ ಚಿಂತನೆ

ಡಿಕೆ ಆಡಳಿತದಲ್ಲಿ ಡಿಸಿಎಂ ಹುದ್ದೆಗಳಿಗೆ ಕೊಕ್?

ಶಿವಕುಮಾರ್ ಬೆಳ್ಳಿತಟ್ಟೆ ಬೆಂಗಳೂರು

ಸಂಭವನೀಯ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ಸರಕಾರದಲ್ಲಿ ಉಪಮುಖ್ಯಮಂತ್ರಿ ಹುದ್ದೆಗಳನ್ನು ಕೈಬಿಡುವ ಗಂಭೀರ ಚಿಂತನೆ ಶುರುವಾಗಿದೆ.

ಕೇವಲ ಎರಡು ಡಿಸಿಎಂ ಹುದ್ದೆಗಳಿಗೆ ಮಾಡಲಾಗಿದ್ದ ಪ್ರಸ್ತಾಪ ದಿನ ಕಳೆದಂತೆ ಪೈಪೋಟಿ ಹೆಚ್ಚಾಗಿ ನಾಲ್ಕೈದು ಡಿಸಿಎಂ ಹುದ್ದೆಗಳವರೆಗೂ ಏರಿಕೆಯಾಗಿರುವ ಹಿನ್ನೆಲೆಯಲ್ಲಿ ಆ ಪ್ರಸ್ತಾಪವನ್ನು ಕೈಬಿಡಬೇಕು ಎಂದು ಪಕ್ಷದ ವರಿಷ್ಠರು ಆಲೋಚಿಸಿದ್ದಾರೆ ಎನ್ನಲಾಗಿದೆ.

ಈ ಮಧ್ಯೆ ಕಿರಿಯರಿಗೆ ಡಿಸಿಎಂ ಹುದ್ದೆಗಳನ್ನು ನೀಡಿದರೆ ಹಿರಿಯರಿಗೂ ನೀಡಬೇಕಾದ ಅನಿವಾರ್ಯ ಎದುರಾಗುತ್ತದೆ. ಜತೆಗೆ ಸಂಪುಟದಲ್ಲಿ ಅವಕಾಶ ಸಿಗದ ಹಿರಿಯರಿಗೆ ಅಪಮಾನ ಮಾಡಿದಂತಾಗುತ್ತದೆ ಎನ್ನುವ ಹಿನ್ನೆಲೆಯಲ್ಲಿ ಡಿಸಿಎಂ ಹುದ್ದೆಗಳೇ ಬೇಡ ಎನ್ನುವ ಚರ್ಚೆ ಶುರುವಾಗಿದೆ.

ಇನ್ನು ಡಿಸಿಎಂ ಹುದ್ದೆಗಳಿಗೆ ಕಚ್ಚಾಟ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಸಂಭವನೀಯ ಮುಖ್ಯಮಂತ್ರಿ ಡಿ. ಕೆ.ಶಿವಕುಮಾರ್ ಅವರು ಡಿಸಿಎಂ ಹುದ್ದೆಗಳ ಬಗ್ಗೆ ಆಸಕ್ತಿ ತೋರುತ್ತಿಲ್ಲ ಎಂದು ಮೂಲಗಳು ನಡೆಸಿವೆ. ಉಪಮುಖ್ಯಮಂತ್ರಿ ಹುದ್ದೆಗಳು ಹೆಚ್ಚಾದಷ್ಟು ಆಡಳಿತದಲ್ಲಿ ಕಿರಿಕಿರಿ ಉಂಟಾಗುವ ಸಾಧ್ಯತೆಯಿದ್ದು, ಇದರಿಂದ ಸಚಿವರಲ್ಲಿ ಭಿನ್ನಾಭಿಪ್ರಾಯಕ್ಕೆ



ಡಿಸಿಎಂ ಹುದ್ದೆಗಳನ್ನು ಹೆಚ್ಚು ಮಾಡಿದಷ್ಟು ಆಡಳಿತದಲ್ಲಿ ಗೊಂದಲವಾಗುತ್ತದೆ. ಆದ್ದರಿಂದ ಡಿಸಿಎಂ ಹುದ್ದೆಗಳನ್ನೇ ನೀಡಬಾರದು. ಇದು ಕರ್ನಾಟಕದಲ್ಲಿ ಮಾತ್ರವಲ್ಲ. ಬೇರೆ ಯಾವ ರಾಜ್ಯಗಳಲ್ಲೂ ಇರಬಾರದು.

– ರಾಮಲಿಂಗಾರೆಡ್ಡಿ, ಸಾರಿಗೆ ಸಚಿವ

ದಾರಿಯಾಗಲಿದೆ ಎನ್ನುವುದು ಡಿಕೆಶಿ ಆಪ್ತರ ವಾದ.

ಇದೆಲ್ಲಕ್ಕಿಂತ ಮುಖ್ಯವಾಗಿ ಹೊಸ ಮುಖ್ಯಮಂತ್ರಿ ಅಧಿಕಾರ ಸ್ವೀಕಾರವಾಗಬೇಕು. ನಂತರ ಸಚಿವ ಸಂಪುಟ ವಿಸ್ತರಣೆ ಆಗಬೇಕು. ಆದರೆ ಅದಕ್ಕೂ ಮುನ್ನವೇ ಉಪಮುಖ್ಯಮಂತ್ರಿ ಹುದ್ದೆಗೆ ಕಚ್ಚಾಟ ನಡೆಯುತ್ತಿರುವುದು ಪಕ್ಷದ ವರಿಷ್ಠರಿಗೆ ಹೊಸ ತಲೆನೋವು ತಂದಿದ್ದು, ಸದ್ಯಕ್ಕೆ ಇದರ ಸಹವಾಸವೇ ಬೇಡ ಎನ್ನುವ ಮಾತುಗಳು ಕೇಳಿ ಬರುತ್ತಿವೆ.

ಹೀಗಾಗಿ ಸದ್ಯ ನಿರ್ಧಾರವಾಗಿರುವಂತೆ ಜೂನ್ 3 ರಂದು ಸಂಜೆ 5 ಗಂಟೆಗೆ ನೂತನ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಪದಗ್ರಹಣ ಮಾಡಲಿದ್ದು, ಜತೆಗೆ

10 ರಿಂದ 15 ನೂತನ ಸಚಿವರು ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಇದಾದ ನಂತರ ಸಚಿವರಿಗೆ ಖಾತೆ ಹಂಚಿಕೆ ನಡೆಯಲಿದ್ದು, ಆಗ ತೀರಾ ಅನಿವಾರ್ಯವಾದರೆ ಮಾತ್ರ ಯತೀಂದ್ರ ಸಿದ್ದರಾಮಯ್ಯ ಹಾಗೂ ಪ್ರಿಯಾಂಕ್ ಖರ್ಗೆ ಅವರಿಬ್ಬರಿಗೆ ಡಿಸಿಎಂ ಹುದ್ದೆ ನೀಡುವ ಬಗ್ಗೆ ಚರ್ಚಿಸುವ ಸಾಧ್ಯತೆ ಇದೆ ಎಂದು ಪಕ್ಷದ ಉನ್ನತ ಮೂಲಗಳು ತಿಳಿಸಿವೆ.

ಏನಿದು ಡಿಸಿಎಂ ಹುದ್ದೆ ಗಲಾಟೆ ಏಕೆ?: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜೀನಾಮೆ ನಂತರ ನೂತನ ಶಾಸಕಾಂಗ ಪಕ್ಷದ ನಾಯಕನಾಗಿ ಡಿ.ಕೆ.ಶಿವಕುಮಾರ್ ಅವರನ್ನು ಆಯ್ಕೆ ಮಾಡಲಾಗಿದ್ದು, ಅವರ ನೇತೃತ್ವದ ಹೊಸ ಆಡಳಿತ ಇನ್ನೂ ಅಸ್ತಿತ್ವಕ್ಕೆ ಬಂದಿಲ್ಲ. ಆಗಲೇ ಮುಂಬರುವ ಹೊಸ ಸಂಪುಟದಲ್ಲಿ ಡಿಸಿಎಂ ಹುದ್ದೆಗೆ ಕಚ್ಚಾಟ ಶುರುವಾಗಿದೆ. ಆರಂಭಿಕ ಪ್ರಸ್ತಾಪದ ಪ್ರಕಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದ ಹಿನ್ನೆಲೆಯಲ್ಲಿ ಅವರ ಪುತ್ರ ಯತೀಂದ್ರ ಸಿದ್ದರಾಮಯ್ಯ ಅವರಿಗೆ ಡಿಸಿಎಂ ಹುದ್ದೆ ನೀಡುವ ಬಗ್ಗೆ ಚಿಂತನೆ ಮಾಡಲಾಗಿತ್ತು. ಆನಂತರ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಮುಖ್ಯಮಂತ್ರಿ ಆಗುವ ಅವಕಾಶ ಕೈತಪ್ಪಿದ್ದರಿಂದ ಅವರ ಪುತ್ರ ಪ್ರಿಯಾಂಕ್ ಖರ್ಗೆ ಅವರಿಗೂ ಡಿಸಿಎಂ ಹುದ್ದೆ ನೀಡುವ ಪ್ರಸ್ತಾಪ ಮಾಡಲಾಗಿತ್ತು. ನಂತರದಲ್ಲಿ ಪಕ್ಷದ ಹಿರಿತನವನ್ನು ಆಧರಿಸಿ ಮತ್ತು ಜಾತಿ, ಧರ್ಮ ಹಾಗೂ ಪ್ರಾದೇಶಿಕತೆಯನ್ನು ಗಮನದಲ್ಲಿ ಜಮೀರ್ ಅಹಮದ್, ಯು.ಟಿ.ಖಾದರ್, ಕೆ.ಎಚ್.ಮುನಿಯಪ್ಪ, ಎಂ.ಬಿ.ಪಾಟೀಲ್ ಅವರಿಗೂ ಡಿಸಿಎಂ ಹುದ್ದೆ ನೀಡುವ ಚರ್ಚೆಗಳು ಗಂಭೀರವಾಗಿಯೇ ನಡೆದಿತ್ತು. ಹೀಗೆ ಡಿಸಿಎಂ ಹುದ್ದೆ ಪ್ರಸ್ತಾಪಗಳು ಹೆಚ್ಚಾಗುತ್ತಾ ಹೋಗಿ ಕನಿಷ್ಠ 4 ರಿಂದ 7 ಡಿಸಿಎಂ ಹುದ್ದೆಗಳನ್ನು ಸೃಷ್ಟಿಸಬೇಕಾದ ಅನಿವಾರ್ಯ ಎದುರಾಗಿತ್ತು. ಇದರಿಂದ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಇಬ್ಬರಿಗೂ ಮುಜುಗರವಾಗುವ ಸನ್ನಿವೇಶ ಎದುರಾಗಿತ್ತು ಎನ್ನಲಾಗಿದೆ. ಈ ವಿಷಯ ಪಕ್ಷದ ಹೈಕಮಾಂಡ್ ಗಮನಕ್ಕೂ ಬಂದಿದ್ದರಿಂದ ಸದ್ಯಕ್ಕೆ ಇದರ ಪ್ರಸ್ತಾಪವನ್ನು ಕೈ ಬಿಡಿ, ಆ ನಂತರ ಪರಿಶೀಲಿಸೋಣ ಎಂದಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಡಿಕೆಶಿಗೆ ಆರಂಭಿಕ ಜಯ

ಒಂದೊಮ್ಮೆ ಡಿಪಿಎಂ ಹುದ್ದೆ ಪ್ರಸ್ತಾಪ ಕೈಬಿಡುವುದಾದರೆ ಇದನ್ನು ಡಿ.ಕೆ.ಶಿವಕುಮಾರ್ ಅವರ ಆರಂಭಿಕ ಜಯ ಎನ್ನುವ ಅಭಿಪ್ರಾಯ ಅವರ ಆಪ್ತ ವಲಯ ಹೇಳುತ್ತಿದೆ. ಹಿರಿಯ ಸಚಿವರಲ್ಲಿ ಪೈಪೋಟಿ ಹೆಚ್ಚಾಗಿ ಡಿಸಿಎಂ ಹುದ್ದೆ ಬೇಡ ಎನ್ನುವ ಸ್ಥಿತಿಗೆ ಹೋದರೆ ಅದರಿಂದ ಡಿಕೆಶಿ ಅವರಿಗೆ ಹೆಚ್ಚು ಲಾಭ ತರುವ ಸಾಧ್ಯತೆ ಇದೆ. ಅಂದರೆ ಇರುವ ಅವಧಿಯಲ್ಲಿ ಅವರು ಸ್ವತಂತ್ರವಾಗಿ ಮತ್ತು ಸುಗಮವಾಗಿ ಆಡಳಿತ ನಡೆಸಲು ಅವರಿಗೆ ನೆರವಾಗುತ್ತದೆ ಎನ್ನಲಾಗಿದೆ. ಇನ್ನು ಸರಕಾರದ ಆಡಳಿತಕ್ಕೆ ಸಂಬಂಧಿಸಿದಂತೆ ಸಮನ್ವಯ ಸಮಿತಿಗಳನ್ನು ಮಾಡುವುದಕ್ಕೆ ಆಸ್ಪದ ಇರದಂತಾಗುತ್ತದೆ ಎಂದು ಪಕ್ಷದ ಹಿರಿಯರು ವಿಶ್ಲೇಷಿಸಿದ್ದಾರೆ.

ಬೀದಿ ನಾಯಿಗಳ ನಿಯಂತ್ರಣಕ್ಕೆ ಕ್ರಮ

ಬೆಂಗಳೂರು: ನಗರದಲ್ಲಿ ಬೀದಿ ನಾಯಿಗಳ ಸಂಖ್ಯೆ ನಿಯಂತ್ರಿಸುವುದು, ಸಾರ್ವಜನಿಕ ಸುರಕ್ಷತೆ ಹೆಚ್ಚಿಸುವುದು ಹಾಗೂ ಪ್ರಾಣಿ ಕಲ್ಯಾಣಕ್ಕೆ ಆದ್ಯತೆ ನೀಡುವ ಉದ್ದೇಶದಿಂದ ಉತ್ತರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಪ್ರಾಣಿ ಜನನ ನಿಯಂತ್ರಣ ಕಾರ್ಯಕ್ರಮ ತೀವ್ರಗೊಳಿಸಲು ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬೀದಿ ನಾಯಿಗಳ ನಿರ್ವಹಣೆ, ಆಶ್ರಯ ಕೇಂದ್ರಗಳ ಅಭಿವೃದ್ಧಿ ಹಾಗೂ ಸಾರ್ವಜನಿಕ ಸುರಕ್ಷತೆಗೆ ಸಂಬಂಧಿಸಿದಂತೆ ನಡೆದ ಸಭೆಯಲ್ಲಿ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ಮಾತನಾಡಿ, ಎಬಿಸಿ ಶಸ್ತ್ರಚಿಕಿತ್ಸೆ ಗುರಿನಿರ್ಮಾಣ ಹಂತದಲ್ಲಿರುವ ನಾಯಿಗಳ ಆಶ್ರಯ ಕೇಂದ್ರಗಳ ಕಾಮಗಾರಿ ಶೀಘ್ರ ಪೂರ್ಣಗೊಳಿಸುವಂತೆ ನಿರ್ದೇಶಿಸಲಾಗಿದೆ. ಜತಗೆ ನಾಯಿ ಹಿಡಿಯುವ ಸಿಬ್ಬಂದಿಗಳ ಕೊರತೆ ನಿವಾರಿಸಿ ಅಗತ್ಯ ಮಾನವ ಸಂಪನ್ಮೂಲ ಹೆಚ್ಚಿಸುವ ಮೂಲಕ ಕಾರ್ಯಾಚರಣೆಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ನಡೆಸುವಂತೆ ಸೇವಾ ಪೂರೈಕೆದಾರರಿಗೆ ಸೂಚಿಸಿದರು.

ಸಭೆಯಲ್ಲಿ 2026ರ ಮೇ 19ರಂದು ಸರ್ವೋಚ್ಚ ನ್ಯಾಯಾಲಯ ನೀಡಿರುವ ಆದೇಶಗಳ ಕುರಿತು ಚರ್ಚೆ ನಡೆಸಲಾಗಿದ್ದು, ಸಾರ್ವಜನಿಕರಿಗೆ ತೊಂದರೆ ಉಂಟುಮಾಡುವ ಹಾಗೂ ಆಕ್ರಮಣಕಾರಿ ಸ್ವಭಾವದ ನಾಯಿಗಳ ನಿರ್ವಹಣೆ ಮತ್ತು ಅವುಗಳಿಗೆ ಸೂಕ್ತ ಆಶ್ರಯ

ಉತ್ತರ ನಗರ ಪಾಲಿಕೆ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ಅಧ್ಯಕ್ಷತೆಯಲ್ಲಿ ಬೀದಿ ನಾಯಿಗಳ ನಿರ್ವಹಣೆ ಕುರಿತು ಸಭೆ ಆಯೋಜಿಸಲಾಗಿತ್ತು. ಈ ವೇಳೆ ಅಪರ ಆಯುಕ್ತೆ ಪಲ್ಲವಿ, ಜಂಟಿ ಆಯುಕ್ತ ಮೊಹಮ್ಮದ್ ನಯೀಮ್ ಮೊಮಿನ್ ಇದ್ದರು.

ಕಲ್ಪಿಸುವ ಕ್ರಮಗಳನ್ನು ನಿಯಮಾನುಸಾರ ಕೈಗೊಳ್ಳುವುದು ಅಗತ್ಯ. ನಗರದ ಬೀದಿ ನಾಯಿ ನಿರ್ವಹಣೆ ಇನ್ನಷ್ಟು ಸುಧಾರಿಸುವ ನಿಟ್ಟಿನಲ್ಲಿ ದಾಸರಹಳ್ಳಿಯ ಎಬಿಸಿ ಕೇಂದ್ರದಲ್ಲಿ 500 ನಾಯಿಗಳಿಗೆ ಅವಕಾಶವಿರುವ ಹೊಸ ಆಶ್ರಯ ಕೇಂದ್ರ ಆರಂಭಿಸುವ ಪ್ರಸ್ತಾವನೆಯನ್ನೂ ಸಭೆಯಲ್ಲಿ ಚರ್ಚಿಸಲಾಗಿದೆ. ಪ್ರಸ್ತುತ ಪಾಲಿಕೆ ವ್ಯಾಪ್ತಿಯಲ್ಲಿ ಅಂದಾಜು 65,041 ಬೀದಿ ನಾಯಿಗಳಿದ್ದು, ಅವುಗಳಲ್ಲಿ ಶೇ.60ರಷ್ಟು ನಾಯಿಗಳಿಗೆ ಈಗಾಗಲೇ ಎಬಿಸಿ ಶಸ್ತ್ರಚಿಕಿತ್ಸೆ ನಡೆಸಲಾಗಿದೆ. 2025-26ನೇ ಸಾಲಿನಲ್ಲಿ ಸುಮಾರು 7,000 ನಾಯಿಗಳಿಗೆ ಜನನ ನಿಯಂತ್ರಣ ಶಸ್ತ್ರಚಿಕಿತ್ಸೆ ಮಾಡಲಾಗಿದೆ. ದಿನಕ್ಕೆ ಸರಾಸರಿ 25 ನಾಯಿಗಳಿಗೆ ಎಬಿಸಿ ಚಿಕಿತ್ಸೆ ನೀಡಲಾಗುತ್ತಿದ್ದು, ಇದನ್ನು 40ರಿಂದ 42 ನಾಯಿಗಳಿಗೆ ಹೆಚ್ಚಿಸಲು ಹಾಗೂ ವಿಶೇಷವಾಗಿ ಹೆಣ್ಣು ನಾಯಿಗಳಿಗೆ ಆದ್ಯತೆ ನೀಡಬೇಕು ಎಂದರು. ಸಭೆಯಲ್ಲಿ ಅಪರ ಆಯುಕ್ತೆ ಪಲ್ಲವಿ, ಜಂಟಿ ಆಯುಕ್ತ ಮೊಹಮ್ಮದ್ ನಯೀಮ್ ಮೊಮಿನ್, ಕರ್ನಾಟಕ ಪ್ರಾಣಿ ಕಲ್ಯಾಣ ಮಂಡಳಿ, ಜಿಬಿಎ ಪಶುಪಾಲನಾ ಇಲಾಖೆ ಹಾಗೂ ಉತ್ತರ ನಗರ ಪಾಲಿಕೆಯ ವಿವಿಧ ಅಧಿಕಾರಿಗಳು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

ನೂತನ ಸಚಿವ ಸಂಪುಟ ರಚನೆಯಲ್ಲಿ ಸಿದ್ದರಾಮಯ್ಯ ಮಹತ್ವದ ಪಾತ್ರ

ಗೊಂದಲದಲ್ಲಿ ಇನ್ನಿಂಗ್ಸ್ ಆರಂಭ

ಬೆಂಗಳೂರು: ಡಿ.ಕೆ.ಶಿವಕುಮಾರ್‌ಗೊಂದಲದ ವಾತಾವರಣದಲ್ಲಿ ತಮ್ಮ ಇನ್ನಿಂಗ್ಸನ್ನು ಆರಂಭಿಸುತ್ತಿದ್ದಾರೆ. ರಾಜ್ಯದ ಜನತೆ ಈಗಾಗಲೇ ಈ ಸರಕಾರದ ಮೇಲೆ ವಿಶ್ವಾಸ ಕಳೆದುಕೊಂಡಿದ್ದಾರೆ. ಅವರಿಗೆ ಅವಕಾಶ ಬಂದಾಗ ಈ ಸರಕಾರ ಕಿತ್ತೊಗೆಯಲಿದ್ದಾರೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಅಭಿಪ್ರಾಯ ಪಟ್ಟಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಕಾಂಗ್ರೆಸ್‌ನಲ್ಲಿನ ನಾಯಕತ್ವ ಬದಲಾವಣೆ ರಾಜ್ಯದ ಆಡಳಿತದಲ್ಲಿ ಯಾವುದೇ ಪರಿಣಾಮ ಬೀರುವುದಿಲ್ಲ ಇದು ಕಾಂಗ್ರೆಸ್ ದುರಾಡಳಿತದ ಮುಂದುವರೆದ ಭಾಗ. ರಾಜ್ಯದ ಆರ್ಥಿಕತೆಯ ವಿಚಾರದಲ್ಲಿ ಈಗಾಗಲೇ ಸಾಕಷ್ಟು ಹಾನಿ ಮಾಡಲಾಗಿದೆ.

ರಾಜ್ಯದಲ್ಲಿ ಅಭಿವೃದ್ಧಿ ಶೂನ್ಯ ಆಗಿದ್ದು, ವ್ಯವಸ್ಥೆ ಸುಧಾರಿಸಲು ಡಿ.ಕೆ.ಶಿವಕುಮಾರ್‌ಗೆ ಸಮಯ ಸಿಗುತ್ತದೆಯೊ ಇಲ್ಲವೊ ಗೊತ್ತಿಲ್ಲ. ಸಂಪುಟ ರಚನೆಯ ಕಸರತ್ತಿನಲ್ಲಿ ಆಂತರಿಕ ಭಿನ್ನಮತ ಹೊರಬರುತ್ತಿದೆ. ಸಿದ್ದ ರಾಮಯ್ಯ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿ, ಪರಮೇಶ್ವರ ಅವರನ್ನು ಮುಖ್ಯಮಂತ್ರಿ ಮಾಡದಿರುವುದರಿಂದ ಒಬಿಸಿ ಮತ್ತು ಎಸ್‌ಸಿ, ಎಸ್‌ಟಿ ಸಮುದಾಯದವರು ಅಸಮಾಧಾನಗೊಂಡಿದ್ದಾರೆ. ಈ ಹಿನ್ನೆಲೆ ಡಿ. ಕೆ.ಶಿವಕುಮಾರ್ ಗೊಂದಲದ ವಾತಾವರಣದಲ್ಲಿ ತಮ್ಮ ಇನ್ನಿಂಗ್ಸನ್ನು ಆರಂಭಿಸುತ್ತಿದ್ದಾರೆ ಎಂದರು.

ಸಿದ್ದರಾಮಯ್ಯ ತೂಗುಗತ್ತಿ

ಹೊಸ ಸಂಪುಟ ಸೇರಲು ಪ್ರಥಮ ಬಾರಿ ಆಯ್ಕೆಯಾದವರಿಂದ ಹಿಡಿದು ಐದಾರು ಬಾರಿ ಆಯ್ಕೆಯಾದವರೂ ಲಾಬಿ ಮಾಡುತ್ತಿದ್ದಾರೆ. ಸಿದ್ದರಾಮಯ್ಯ ಸಂಪುಟದಲ್ಲಿದ್ದ ಸಚಿವರು ಸ್ಥಾನ ಬಿಟ್ಟು ಕೊಡಲು ಸಿದ್ಧರಿಲ್ಲ. ಹೀಗಾಗಿ ದೊಡ್ಡ ಮಟ್ಟದ ಪೈಪೋಟಿ ನಡೆಯುತ್ತಿದೆ. ಅಲ್ಲದೇ ನೂತನ ಸಂಪುಟ ರಚನೆಯಲ್ಲಿ ಸಿದ್ದರಾಮಯ್ಯ ಮಹತ್ವದ ಪಾತ್ರ ನಿರ್ವಹಿಸಲಿದ್ದಾರೆ. ಅಲ್ಲದೇ ಅವರು ರಾಜ್ಯ ರಾಜಕಾರಣದಲ್ಲಿಯೇ ಸಕ್ರೀಯರಾಗಿರುತ್ತೇನೆ ಎಂದು ಹೇಳಿರುವುದು ಅಪಾಯಕಾರಿ ಸಂದೇಶವಾಗಿದ್ದು ಇದು ಡಿ.ಕೆ.ಶಿವಕುಮಾರ್ ಮತ್ತು ಅವರ ಸರಕಾರದ ಮೇಲೆ ತೂಗುಗತ್ತಿ ನೇತಾಡಿದಂತಾಗುತ್ತದೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಪೊಲೀಸ್ ಹೆಲ್ಮೆಟ್ ಧರಿಸಿ ಪಾರಾದ ಟಿಎಂಸಿ ನಾಯಕ

ಕಲ್ಲು, ಮೊಟ್ಟೆ, ಚಪ್ಪಲಿ ಎಸೆದು ಸಂಸದ ಅಭಿಷೇಕ್ ಮೇಲೆ ಹಲ್ಲೆ

ಕೋಲ್ಕತ್ತ: ತೃಣಮೂಲ ಕಾಂಗ್ರೆಸ್(ಟಿಎಂಸಿ) ಪಕ್ಷದ 2ನೇ ಪ್ರಮುಖ ನಾಯಕ, ಸಂಸದ ಅಭಿಷೇಕ್ ಬ್ಯಾನರ್ಜಿ ಪಶ್ಚಿಮ ಬಂಗಾಳದ ದಕ್ಷಿಣ 24 ಪರಗಣ ಜಿಲ್ಲೆಯಲ್ಲಿ ಚುನಾವಣೋತ್ತರ ಹಿಂಸಾ ಚಾರ ಸಂತ್ರಸ್ತರ ಮನೆಗೆ ಭೇಟಿ ನೀಡಿದ್ದಾಗ ಅಪರಿಚಿತರು ಕಲ್ಲು, ಮೊಟ್ಟೆ, ಚಪ್ಪಲಿ ಎಸೆದು ದಾಳಿ ಮಾಡಿದ್ದಾರೆ.

ದಕ್ಷಿಣ 24 ಪರಗಣ ಜಿಲ್ಲೆಯ ಸೋನಾಪುರ್ ಪ್ರದೇಶದಲ್ಲಿ ಶನಿವಾರ ದಾಳಿಯಾಗಿದೆ. ದಿಢೀರ್ ಎಂಬಂತೆ ನಡೆದ ದಾಳಿಯಿಂದ ಆಘಾತಕ್ಕೊಳಗಾದ ಅಭಿಷೇಕ್ ಬ್ಯಾನರ್ಜಿಯನ್ನು ಸ್ಥಳದಲ್ಲಿದ್ದ ಪೊಲೀಸರು ರಕ್ಷಿಸಿ ಹೊರಕ್ಕೆ ಕರೆತಂದಿದ್ದಾರೆ. ಅಭಿಷೇಕ್ ಪೊಲೀಸರ ಹೆಲ್ಮೆಟ್ ಪಡೆದುಕೊಂಡು ಧರಿಸಿದ್ದರಿಂದ ಕಲ್ಲೆಸೆತದ ಪೆಟ್ಟುಗಳಿಂದ ಪಾರಾಗಿದ್ದಾರೆ.

ಸ್ಥಳೀಯರಲ್ಲಿ ಕೆಲವರು ಅಭಿಷೇಕ್ ಬ್ಯಾನರ್ಜಿ ವಿರುದ್ಧ ದಿಢೀರ್ ಪ್ರತಿಭಟನೆಯನ್ನೂ ನಡೆಸಿದ್ದಾರೆ. ಪ್ರತಿಭಟನಾಕಾರರು

ಮಾಜಿ ಸಿಎಂ ಮಮತಾ ಬ್ಯಾನರ್ಜಿ ಮತ್ತು ಅವರ ಸೋದರಳಿಯ ಅಭಿಷೇಕ್ ಬ್ಯಾನರ್ಜಿಯನ್ನು 'ಕಳ್ಳರು' ಎಂದು ಕರೆದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಪರಿಸ್ಥಿತಿ ಕೆಲವೇ ಕ್ಷಣಗಳಲ್ಲಿ ಉದ್ವಿಗ್ನಗೊಂಡಿದ್ದು, ಕೆಲವರು ಅಭಿಷೇಕ್ ಬ್ಯಾನರ್ಜಿ ಅವರನ್ನು ತಳ್ಳಾಡಿ, ಹೊಡೆದು, ಒದೆಯಲು ಪ್ರಯತ್ನಿಸಿದರು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಅಭಿಷೇಕ್ ಬ್ಯಾನರ್ಜಿ ಪೊಲೀಸ್ ಹೆಲ್ಮೆಟ್ ಧರಿಸಿ ಸ್ಥಳದಿಂದ ಪರಾರಿಯಾಗುತ್ತಿರುವ ದೃಶ್ಯಗಳು ಜಾಲತಾಣಗಳು ಮತ್ತು ಸುದ್ದಿ ವಾಹಿನಿಗಳಲ್ಲಿ ಪ್ರಸಾರವಾಗಿವೆ. ಇದು ಪೂರ್ವನಿಯೋಜಿತ ದಾಳಿ. ನನ್ನನ್ನು ಕೊಲ್ಲಲು ಯತ್ನಿಸುತ್ತಿದ್ದಾರೆ ಎಂದು ಅಭಿಷೇಕ್ ಬ್ಯಾನರ್ಜಿ ಆರೋಪಿಸಿದ್ದಾರೆ.

ಸರಕಾರ ಬದುಕಿದೆಯೋ ಇಲ್ಲವೋ, ಈ ಸರಕಾರದಲ್ಲಿ ಜನರ ಜೀವಕ್ಕೆ ಬೆಲೆ ಇಲ್ಲ: ಡಾ.ಅಶ್ವತ್ಥನಾರಾಯಣ

ಮಳೆ ಅವಾಂತರ ತಪ್ಪಿಸುವಲ್ಲಿ ಸರಕಾರ ವಿಫಲ

ಬೆಂಗಳೂರು: ಸಿಕ್ಕಸಿಕ್ಕಿದ್ದಕ್ಕೆಲ್ಲ ತೆರಿಗೆ ಹಾಕಿ ಸಂಗ್ರಹಿಸುವ ಸರಕಾರ ಜನರ ಬದುಕಿಗೆ ಯಾವುದೇ ಗ್ಯಾರಂಟಿ ನೀಡಿಲ್ಲ. ಬೆಂಗಳೂರು ನಗರದಲ್ಲಿ ಮಳೆ ಬಂದರೆ ಬದುಕುತ್ತೇನೆ ಎಂಬ ಭರವಸೆ ಇಲ್ಲದೇ ಭಯದಲ್ಲೇ ದಿನ ಕಳೆಯುವಂತೆ ಮಾಡಿದೆ ಎಂದು ಶಾಸಕ ಡಾ. ಸಿ.ಎನ್. ಅಶ್ವತ್ಥನಾರಾಯಣ ಹೇಳಿದ್ದಾರೆ.

ರಾಜ್ಯ ಬಿಜೆಪಿ ಕಾರ್ಯಾಲಯದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮಳೆ ಬಂದರೆ ಪ್ರತೀ ವರ್ಷ ನೂರಾರು ಸಮಸ್ಯೆ ನಗರದಲ್ಲಿ ಕಾಡಲಾರಂಭಿಸುತ್ತವೆ. ಆದರೆ ಒಂದೇ ಒಂದು ರೂಪಾಯಿ ಪರಿಹಾರ ಇಲ್ಲ. ಸತತ ಮಳೆಗೆ ಬೌರಿಂಗ್ ಆಸ್ಪತ್ರೆ ಸಮೀಪ ಕಾಪೌಂಡ್ ಕುಸಿದು ಏಳು ಜನ ಮೃತಪಟ್ಟರು. ನಿನ್ನೆ ಒಬ್ಬರು ಮೃತಪಟ್ಟಿದ್ದಾರೆ. ಇವೆಲ್ಲ ಲೆಕ್ಕಕ್ಕೆ ಸಿಕ್ಕ ಸಾವು. ಇನ್ನು ಗುಂಡಿಯಲ್ಲಿ ಬಿದ್ದು, ಮರದ ಕೊಂಬೆ ಬಿದ್ದು ಸತ್ತವರ ಲೆಕ್ಕ ಇಲ್ಲ. ಈ ಸರಕಾರ ಜನರ ಸಾವಿಗೆ ತಲೆ ಕೆಡಿಸಿಕೊಂಡಿಲ್ಲ ಎಂದು ದೂರಿದರು.

ಮುಂಗಾರಿಗೆ ಮುಂಚೆ ನಗರದಲ್ಲಿ ಕೈಗೊಳ್ಳಬೇಕಾದ ಮುನ್ನೆಚ್ಚರಿಕೆಗಳ ಬಗ್ಗೆ ಗಮನವೇ ಇಲ್ಲ. ತಗ್ಗು ಪ್ರದೇಶಗಳಿಗೆ ನೀರು ನುಗ್ಗುತ್ತಲೇ

ರಾಜ್ಯ ಬಿಜೆಪಿ ಕಾರ್ಯಾಲಯದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಶಾಸಕ ಡಾ. ಸಿ.ಎನ್. ಅಶ್ವತ್ಥನಾರಾಯಣ ಮಾತನಾಡಿದರು.

ಇದೆ. ಮಾರತಹಳ್ಳಿ, ಸಿಲ್ಕ್ ಬೋರ್ಡ್, ಕೆ.ಆರ್. ಸರ್ಕಲ್ ಜಲಾವೃತವಾಗುತ್ತಿವೆ. ಇದರ ಬಗ್ಗೆ ಸರಕಾರ ಗಮನವೇ ನೀಡುತ್ತಿಲ್ಲ. ಮನೆ ತೆರಿಗೆ, ಘನತ್ಯಾಜ್ಯ ತೆರಿಗೆ, ವಿವಿಧ ಬಳಕೆ ಶುಲ್ಕ ಹೀಗೆ ಹಲವಾರು ತೆರಿಗೆಯನ್ನು ನಗರದ ಜನರ ಮೇಲೆ ಹಾಕಿ ಸಾವಿರಾರು ಕೋಟಿ ಸಂಗ್ರಹಿಸುವ ಕಾಂಗ್ರೆಸ್ ಸರಕಾರ ಜನರಿಗಾಗಿ ಸೇವೆ ನೀಡುವುದು ಏನೂ ಇಲ್ಲ. ನಗರ ಮತ್ತು ರಾಜ್ಯ ನಿರ್ವಹಣೆ ಸರಕಾರ ಸರಿಯಾಗಿ ಮಾಡುತ್ತಿಲ್ಲ. ನೂರಾರು ತೆರಿಗೆ ಹಾಕಿ ಸರಕಾರ ದರೋಡೆ ಮಾಡುತ್ತಿದೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ಇದನ್ನೆಲ್ಲ ನೋಡುವ ಭಾಗ್ಯ ನಮ್ಮದಾಗಿದೆ. ಎಲ್ಲದಕ್ಕೂ ಸೆಸ್ ಆಗಿ ಮೂಲಸೌಕರ್ಯಕ್ಕೆ ಕೊಡುತ್ತೇವೆ ಎಂದು ಸರಕಾರ ಹೇಳುತ್ತಿದೆ. ಆದರೆ ಏನೂ ಅಭಿವೃದ್ಧಿ ಇಲ್ಲ. ಜನರ ಜೀವದ ಬಗ್ಗೆ ಎಳ್ಳಷ್ಟು ಕನಿಕರ ಇಲ್ಲ ಎಂದು ಆರೋಪಿಸಿದರು. ಶಾಸಕ ಸಿ.ಕೆ. ರಾಮಮೂರ್ತಿ, ರಾಜ್ಯ ವಕ್ತಾರ ಪ್ರಕಾಶ್ ಶೇಷರಾಘವಾಚಾರ್, ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ಎಸ್ ಹರೀಶ್, ಬೆಂಗಳೂರು ಕೇಂದ್ರ ಜಿಲ್ಲಾಧ್ಯಕ್ಷ ಸಪ್ತಗಿರಿ ಗೌಡ ಉಪಸ್ಥಿತರಿದ್ದರು.

ಗ್ಯಾರಂಟಿ ಕಿರುಕುಳ

ಗ್ಯಾರಂಟಿ ಫಲಾನುಭವಿಯ ಹೆಸರು ಏಕಾಏಕಿ ತೆಗೆದುಹಾಕುವುದು ಮತ್ತು ಕಿರುಕುಳ ಕೊಡುವುದು ಎಷ್ಟು ಸರಿ ಎಂದು ಅಶ್ವತ್ಥನಾರಾಯಣ್ ಪ್ರಶ್ನಿಸಿದರು. ಗೃಹಲಕ್ಷ್ಮೀ ಎಲ್ಲರಿಗೂ ಕೊಡುವುದಾಗಿ ಹೇಳಿದ್ದರು. ಜನರು ಕೇಳಿದ್ದಾರಾ? ಗೃಹಜ್ಯೋತಿ ಕೊಡಿ ಎಂದು ಜನರು ಕಾಂಗ್ರೆಸಿನವರನ್ನು ಕೇಳಿದ್ದಾರಾ? ಕಾಂಗ್ರೆಸ್ ದುಡ್ಡಿನಿಂದ ಕೊಡುತ್ತಿದ್ದಾರಾ? ಸರಕಾರದ, ಜನರ ತೆರಿಗೆ ದುಡ್ಡಿನಿಂದ ಕೊಡುತ್ತಿದ್ದಾರೆ. ಇವರಿಗೆ ಮತ ಬೇಕಿತ್ತು. ಆಗ ಎಲ್ಲರಿಗೂ ಕೊಡುವುದಾಗಿ ಹೇಳಿ ಈಗ ಬರೆ ಎಳೆಯುವುದು ಸರಿಯೇ? ಪಡಿತರ ಶೇ.50 ಜನರಿಗೆ ಸಿಗುತ್ತಿಲ್ಲ. ಕೇವಲ ಸರತಿ ಸಾಲಿನಲ್ಲಿ ಕಾಯುವಂತಾಗಿದೆ. ಬಡವರಿಗೆ ಕಿರುಕುಳ ಕೊಡುವ ಸರಕಾರ ಇದೆಂದು ಟೀಕಿಸಿದರು. ರೇಷನ್ ಇಲ್ಲ. ಕಾಯುವುದೇ ಗ್ಯಾರಂಟಿ ಎಂದು ಆರೋಪಿಸಿದರು.

ಡಿಕೆ ಸಿಎಂ: ಇನ್ನು ಕಷ್ಟ ಎಂದುಕೊಂಡಿರುವ ಬಿಜೆಪಿಗರು, ಪಟ್ಟಾಭಿಷೇಕಕ್ಕೆ ಕೊರಗುತ್ತಿರುವ ಜೆಡಿಎಸ್

ಕನಲಿದ ಕಮಲ, ಜೆಡಿಎಸ್‌ನಲ್ಲಿ ನೀರವಮೌನ

ವಿಶ್ವವಾಣಿ ವಿಶೇಷ ಬೆಂಗಳೂರು

ಸವಾಲುಗಳನ್ನು ಮೆಟ್ಟಿ ನಿಂತು ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಗಾದಿಗೆ ಏರುತ್ತಿರುವಂತೆಯೇ ಬಿಜೆಪಿಯ ನಾಯಕರು ಕನಲಿದ್ದು, ಜೆಡಿಎಸ್‌ನಲ್ಲಿ ನೀರವ ಮೌನ ಕಾಣಿಸಿಕೊಂಡಿದೆ. ಇದರೊಂದಿಗೆ ಡಿ.ಕೆ.ಶಿವಕುಮಾರ್‌ಗೆ ಇನ್ನೂ ಹಲವು ವರ್ಷ ರಾಜಯೋಗವಿದೆ ಎನ್ನುವ ಜ್ಯೋತಿಷ್ಯವಾಣಿಗಳನ್ನು ನಂಬುವ ಎರಡೂ ವಿರೋಧ ಪಕ್ಷಗಳ ನಾಯಕರ ನಿದ್ದೆಗೆಡಿಸಿದೆ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ 135 ಸೀಟು ಗೆಲ್ಲಲಿದೆ ಎಂದು ನಿಖರವಾಗಿ ನುಡಿದಿದ್ದ ಡಿ.ಕೆ.ಶಿವಕುಮಾರ್ ಹೇಳಿಕೆಯನ್ನು ವಿರೋಧ ಪಕ್ಷಗಳು ಗಣನೆಗೆ ತೆಗೆದುಕೊಂಡಿರಲಿಲ್ಲ ಹಾಗೂ ಕೆಲ ಬಾರಿ ಲೇವಡಿ ಮಾಡಿದ್ದರು. ಇದೇ ರೀತಿ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲ್ಲಲಿದೆ ಹಾಗೂ ನಾನೇ ಅಧಿಕಾರದಲ್ಲಿರುವೆ ಎಂದು ಕಳೆದ ವಾರ ಹೇಳಿರುವುದು ಕೂಡ ಈಗ ಚರ್ಚೆಗಿಂತ ವಿರೋಧ ಪಕ್ಷದಲ್ಲಿ ನಡುಕ ಹುಟ್ಟಿಸಿದೆ.

ರಾಷ್ಟ್ರ ರಾಜಕಾರಣದಲ್ಲೂ ಟ್ರಬಲ್ ಶೂಟರ್ ಎಂದೇ ಖ್ಯಾತಿಗೆ ಒಳಗಾದ ಡಿಕೆಯವರ ಮೊದಲ ಏಟು ವಿರೋಧ ಪಕ್ಷಗಳ ಕಡೆಗಿದೆ. ಒಂದು ಕಡೆಯಿಂದ ಪಕ್ಷದೊಳಗಿನ ಅಸಮಾಧಾನ ಹಾಗೂ ಸರಿದೂಗಿಸುವಿಕೆ ನಿಭಾಯಿಸಬೇಕಿದೆ. ಇದೇ ವೇಳೆ ಗ್ಯಾರಂಟಿಗಳು ಮತ್ತು ಖಜಾನೆ ನಡುವಿನ ಸಮತೋಲನ ಕಾಯ್ದುಕೊಳ್ಳಬೇಕಿದೆ. ಕಾಂಗ್ರೆಸ್ ಸರಕಾರದ ಐದು ಪ್ರಮುಖ ಗ್ಯಾರಂಟಿ ಯೋಜನೆಗಳಾದ ಗೃಹಲಕ್ಷ್ಮೀ, ಶಕ್ತಿ, ಅನ್ನಭಾಗ್ಯ, ಯುವನಿಧಿ ಹಾಗೂ ಗೃಹಜ್ಯೋತಿಗೆ ವಾರ್ಷಿಕ ಸುಮಾರು 51,000 ಕೋಟಿ ರು. ವೆಚ್ಚವಾಗುತ್ತಿದೆ. ಈ ಯೋಜನೆ ಗಳು ಜನಪ್ರಿಯವಾಗಿದ್ದರೂ, ರಾಜ್ಯದ ಹಣಕಾಸಿನ ಮೇಲೆ ಹೆಚ್ಚುತ್ತಿರುವ ಒತ್ತಡ

ಮತ್ತು ಅಭಿವೃದ್ಧಿ ವೆಚ್ಚದ ಮೇಲೆ ಅದರ ಪರಿಣಾಮದ ಬಗ್ಗೆ ಆರ್ಥಿಕ ತಜ್ಞರು ಹಾಗೂ ಪ್ರತಿಪಕ್ಷಗಳು ಪ್ರಶ್ನೆ ಎತ್ತುತ್ತಿವೆ. ಹೀಗಾಗಿ ಆದಾಯ ಸಂಗ್ರಹಣೆ ಹೆಚ್ಚಿಸುವುದು, ಹೂಡಿಕೆಗಳನ್ನು ಆಕರ್ಷಿಸುವುದು ಹಾಗೂ ವೆಚ್ಚಗಳಿಗೆ ಆದ್ಯತೆ ನಿಗದಿಪಡಿಸುವುದು ಹೊಸ ಸರಕಾರದ ಪ್ರಮುಖ ಜವಾಬ್ದಾರಿಯಾಗಲಿದೆ.

ಡಿಕೆ ಟ್ರೆಂಡಿಂಗ್, ಬಿಜೆಪಿ ನಾಯಕರು ಟ್ರೋಲ್: ನಿಷ್ಠೆ, ಬದ್ಧತೆ, ನಿಪುಣತೆ, ದೃಢ ಸಂಕಲ್ಪ ಹಾಗೂ ತಾಳ್ಮೆಯಿಂದಲೇ ಅಧಿಕಾರ ಗದ್ದುಗೆ ಪಡೆದುಕೊಂಡ ಡಿ.ಕೆ.ಶಿವಕುಮಾರ್ ಅವರ ವಿಚಾರ ಸಾಮಾಜಿಕ ಜಾಲತಾಣಗಳಲ್ಲಿ ಟ್ರೆಂಡಿಂಗ್‌ನಲ್ಲಿದೆ. ಇತ್ತ ಬಿಜೆಪಿಯ ಕೆಲ ಕಾರ್ಯಕರ್ತರೇ ತಮ್ಮ ನಾಯಕರನ್ನು ಟ್ರೋಲ್ ಮಾಡುತ್ತಿದ್ದು, ನಮ್ಮ ಪಕ್ಷದ ನಾಯಕರು ಡಿಕೆ ಯನ್ನು ನೋಡಿ ಕಲಿತುಕೊಳ್ಳಿ. ತಮ್ಮ ಪಕ್ಷದ ಕಾರ್ಯಕರ್ತರ ಪರವಾಗಿ ಹೇಗೆ ನಿಲ್ಲಬೇಕೆಂದು ಡಿಕೆ ನೋಡಿ ಎಂದು ಹಲವು ಉದಾಹರಣೆ ಸಹಿತ ತಮ್ಮ ಪೋಸ್ಟ್‌ಗಳಲ್ಲಿ ತಿವಿಯುತ್ತಿದ್ದಾರೆ. ಅಲ್ಲದೆ, ಮುಂದಿನ ಚುನಾವಣೆಯಲ್ಲಿ ಬಿಜೆಪಿ ನಾಯಕರು ಸುಮ್ಮನಿದ್ದು ಬಿಡಿ, ನಿಮ್ಮ ಕೈಯಲ್ಲಿ ಏನೂ ಆಗುವುದಿಲ್ಲ. ಅಧಿಕಾರ ಬಂದಾಗ ನಮ್ಮನ್ನು ದೂರವಿಡುವುದಲ್ಲದೆ ಕಾರ್ಯಕರ್ತಗೆ ಸಿಗುವುದೂ ಇಲ್ಲ ಎಂದು ಲೇವಡಿ ಮಾಡುತ್ತಿದ್ದಾರೆ.

ಮೋದಿ ಪ್ರಧಾನಿಯಾಗಿರುವುದರಿಂದ ಅವರ ಹೆಸರಿನಲ್ಲೇ ನೀವು ಚುನಾವಣೆಗೆ ಹೋಗಬೇಕಿದೆ. ನೀವು ಕಡಿದು ಕಟ್ಟೆ ಹಾಕಿದ್ದು ಏನೂ ಇಲ್ಲ, ಬರೀ ವ್ಯವಹಾರಿಕವಾಗಿ ಪಾತ್ರ ನಿರ್ವಹಿಸುತ್ತಿದ್ದೀರಿ ಎಂದು ಪಕ್ಷದ ರಾಜ್ಯಾಧ್ಯಕ್ಷ ಹಾಗೂ ವಿರೋಧ ಪಕ್ಷದ ನಾಯಕರನ್ನು ಕಮಲ ಪಕ್ಷದ ಅಭಿಮಾನಿಗಳು ತರಾಟೆಗೆ ತೆಗೆದುಕೊಂಡಿದ್ದಾರೆ. ಇದಿಷ್ಟೇ ಅಲ್ಲದೆ, ಡಿ.ಕೆ. ಇದೇ ರೀತಿ ಅಬ್ಬರಿಸುತ್ತಿದ್ದರೆ ನಿಮಗೇನೂ ಕೆಲಸವಿಲ್ಲ. ಮುಂದಿನ ಚುನಾವಣೆಯಲ್ಲಿ ನಿಮ್ಮ ಹಣ ಉಳಿಕೊಳ್ಳಿ ಹೆಚ್ಚಿಗೆ ಖರ್ಚು ಮಾಡಿಕೊಳ್ಳಬೇಡಿ ಎಂಬ ಸಲಹೆಯನ್ನೂ ಕೂಡ ನೊಂದ ಕಾರ್ಯಕರ್ತರು ಹೇಳಿಕೊಳ್ಳುತ್ತಿದ್ದಾರೆ. ಈ ರೀತಿ ಬಿಜೆಪಿ ನಾಯಕರು ಅವರ ಕಾರ್ಯಕರ್ತರಿಂದಲೇ ಟ್ರೋಲ್‌ಗೆ ಒಳಗಾಗುತ್ತಿರುವುದು ಕೂಡ ಸಾಮಾಜಿಕ ಜಾಲತಾಣದಲ್ಲಿ ಕಂಡು ಬರುತ್ತಿದೆ.

ನಿಜವಾದ ಕೆಲ ಜ್ಯೋತಿಷ್ಯ? ಬಿಜೆಪಿಗೆ ಕಂಟಕ

ಡಿ.ಕೆ.ಶಿವಕುಮಾರ್ ಸಿಎಂ ಆಗುತ್ತಾರೆ ಎಂದು ಕೆಲ ಜ್ಯೋತಿಷ್ಯಗಳು ಈ ಹಿಂದೆ ಹೇಳಿದ್ದಲ್ಲದೆ, ಅಜ್ಜಯ್ಯರ ಮಠ ಆಶೀರ್ವಾದವನ್ನೂ ನೀಡಿತ್ತು. ಈಗ ಡಿಕೆಶಿಗೆ ಅಖಂಡ ರಾಜ ಯೋಗ ಆರಂಭವಾಗಿದೆ. 2028ರಲ್ಲಿಯೂ ಅವರೇ ಸಿಎಂ ಆಗಿರುತ್ತಾರೆ. 9 ವರ್ಷಗಳ ಕಾಲ ಡಿಕೆಶಿಗೆ ರಾಜಯೋಗ ಇದೆ ಎಂದು ಆಪ್ತ ಜ್ಯೋತಿಷಿಗಳಿಬ್ಬರು ಹೇಳಿರುವುದು ಕೂಡ ಬಿಜೆಪಿ ಹಾಗೂ ಜೆಡಿಎಸ್‌ನ ನಿದ್ದೆಗೆಡಿಸಿದೆ. ಜೆಡಿಎಸ್ ಪಕ್ಷದ ವರಿಷ್ಠರು ಸೇರಿದಂತೆ ಬಹುತೇಕ ನಾಯಕರು ಜ್ಯೋತಿಷ್ಯ ನಂಬುತ್ತಾರೆ, ಇದು ಬಿಜೆಪಿಗರಿಗೂ ಹೊರತಲ್ಲ. ಇದಕ್ಕಿಂತಲೂ ಮುಖ್ಯವಾದ ಅಂಶವೆಂದರೆ ಕರ್ನಾಟಕ ಬಿಜೆಪಿ ಅಧ್ಯಕ್ಷ ಸ್ಥಾನ ಇನ್ನು ಕೆಲವು ತಿಂಗಳಲ್ಲಿ ಬದಲಾಗಲಿದ್ದು, ಮಹಿಳೆ ಅಧ್ಯಕ್ಷೆಯಾಗಿ ನೇಮಕವಾಗಲಿದ್ದಾರೆ ಎಂದು ಮತ್ತೊಂದು ಜ್ಯೋತಿಷಿಯೊಬ್ಬರು ಭವಿಷ್ಯ ನುಡಿದಿದ್ದಾರೆ. ಇದೂ ಕೂಡ ರಾಜಕೀಯ ತೀವ್ರ ಕುತೂಹಲ ಕೆರಳಿಸಿದೆ. ರಾಜಕೀಯದಲ್ಲಿ ಬದಲಾವಣೆಗಳು ಯಾವಾಗ ಬೇಕಾದರೂ ಆಗಬಹುದು ಅಲ್ಲದೆ, ಡಿಕೆ ಮುಖ್ಯಮಂತ್ರಿಯಾಗುತ್ತಿದ್ದಂತೆ ಬಿಜೆಪಿಯ ರಾಜಕೀಯ ಸಮೀಕರಣಗಳೂ ಕೂಡ ಬದಲಾಗಬಹುದು ಎಂದು ಹೇಳಲಾಗುತ್ತಿದೆ.

ಡಿಕೆ ಪಟ್ಟಕ್ಕೇರುತ್ತಿದ್ದಂತೆ ಜೆಡಿಎಸ್‌ನಲ್ಲಿ ಕೊರಗು

ಡಿ.ಕೆ.ಶಿವಕುಮಾರ್ ಸಿಎಂ ಆಗುತ್ತಿರುವಂತೆಯೇ ಮೊದಲ ಹೊಡೆತ ಬೀಳುತ್ತಿರುವುದು ಜೆಡಿಎಸ್‌ಗೆ. ಇದು ಇಂದಿನ ಜಿದ್ದಾಜಿದ್ದಿಯಲ್ಲ. ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ವಿರುದ್ಧವೇ ಮೊದಲಿಗೆ ಕಿರಿಯ ವಯಸ್ಸಿನಲ್ಲೇ ಸ್ಪರ್ಧಿಸಿದ್ದ ಡಿಕೆ ಸೋಲನುಭವಿಸಿದ್ದರು. ಅಲ್ಲಿಂದ ಆರಂಭವಾದ ರಾಜಕೀಯ ಯುದ್ಧ, ರಾಮನಗರ ಜಿಲ್ಲೆಯಾದ ನಂತರವೂ ಮುಂದುವರಿದಿದ್ದು ಪ್ರಸ್ತುತ ಹಾಗೇಯೆ ಇದೆ. ಇದೇ ರೀತಿ ರಾಮನಗರ ಜಿಲ್ಲೆಯಿಂದ ಎರಡು ಬಾರಿ ಸ್ಪರ್ಧಿಸಿ ಎರಡೂ ಬಾರಿಯೂ ಮುಖ್ಯಮಂತ್ರಿಯಾದ ಎಚ್.ಡಿ.ಕುಮಾರಸ್ವಾಮಿ ಅವರೊಂದಿಗೂ ಮತ್ತು ನಿಖಿಲ್ ಕುಮಾರಸ್ವಾಮಿ ಕಳೆದ ಬಾರಿ ಸೋಲಿಸುವಲ್ಲಿಯೂ ರಾಜಕೀಯವಿದೆ. ಇದೇ ರೀತಿ ಹಳೆ ಮೈಸೂರು ಭಾಗದಲ್ಲಿ ಜಾತಿ ಹಾಗೂ ಪಕ್ಷದ ಸಮೀಕರಣದ ಲೆಕ್ಕಾಚಾರದಲ್ಲೂ ಜೆಡಿಎಸ್ ಕುಟುಂಬ ಹಾಗೂ ಏಕಾಂಗಿ ಡಿಕೆಯೊಂದಿಗೆ ರಾಜಕೀಯ ಜಿದ್ದಾಜಿದ್ದಿ ಮುಂದುವರಿದಿದೆ. ಈಗ ಶಿವಕುಮಾರ್ ಸಿಎಂ ಪಟ್ಟಕ್ಕೇರಿತ್ತಿರುವುದು ಜೆಡಿಎಸ್ ಹಾಗೂ ಅದರ ಕುಟುಂಬದಲ್ಲಿ ಅಸಹನೆ ವ್ಯಕ್ತವಾಗಿದ್ದು ನೀರವ ಮೌನ ಆವರಿಸಿರುವುದಂತೂ ಸುಳ್ಳಲ್ಲ ಎಂಬುದು ಕಾರ್ಯಕರ್ತರ ತರ್ಕವಾಗಿದೆ.

ಆರೆಂಜ್ ಕ್ಯಾಪ್
ಸೂರ್ಯವಂಶಿ
ರಾಜಸ್ಥಾನ

ಪರ್ಪಲ್ ಕ್ಯಾಪ್
ರಬಾಡ
ಗುಜರಾತ್

IPL T20 2026

ಐಪಿಎಲ್-2026 ಅಂಕಪಟ್ಟಿ

	ತಂಡ	ಪಂದ್ಯ	ಗೆಲುವು	ಸೋಲು	ಅಂಕ
F	ಬೆಂಗಳೂರು	14	9	5	18
F	ಗುಜರಾತ್	14	9	5	18
Q	ಹೈದರಾಬಾದ್	14	9	5	18
Q	ರಾಜಸ್ಥಾನ್	14	8	6	16
	ಪಂಜಾಬ್	14	7	6	15
	ಡೆಲ್ಲಿ	14	7	7	14
	ಕೋಲ್ಕತಾ	14	6	7	13
	ಚೆನ್ನೈ	14	6	8	12
	ಮುಂಬೈ	14	4	10	8
	ಲಖನೌ	14	4	10	8

ಇಂದು ಆರ್‌ಸಿಬಿ-ಗುಜರಾತ್ ಫೈನಲ್ ಮುಖಾಮುಖಿ, ಯಾರೇ ಗೆದ್ದರು 2ನೇ ಪ್ರಶಸ್ತಿ
ಎರಡೂ ತಂಡ ಸಮಾನ ಬಲಿಷ್ಠ | ಆರ್‌ಸಿಬಿಗೆ ಯಾವುದೇ ನೆಲದಲ್ಲೂ ಗೆಲ್ಲಬಲ್ಲ ವಿಶ್ವಾಸ
ಗುಜರಾತ್‌ಗೆ ತವರ ನೆಲದಲ್ಲಿ ಆಡುವ ಖುಷಿ | ಗಿಲ್, ಸಾಯಿ ಬ್ಯಾಟಿಂಗ್ ಆಧಾರಶಕ್ತಿ

ಇಂದು ಚಾಂಪಿಯನ್ನರ ನಿರ್ಧಾರ

ಅಹ್ಮದಾಬಾದ್: ಮಾ.28ಕ್ಕೆ ಶುರುವಾದ 19ನೇ ಐಪಿಎಲ್ ಮೇ 31ರ ಭಾನುವಾರ ಫೈನಲ್‌ಗೆ ಸಿದ್ಧ ವಾಗಿ ನಿಂತಿದೆ. ನೋಡ ನೋಡುತ್ತಿದ್ದಂತೆಯೇ ಚಾಂಪಿ ಯನ್ನರು ಯಾರಾಗುತ್ತಾರೆ ಎಂದು ನಿರ್ಣಯಿಸುವ ಘಟ್ಟಕ್ಕೆ ತಲುಪಿದೆ. ಕೂಟದಲ್ಲಿ ಅತ್ಯಂತ ಸ್ಥಿರ ಪ್ರದರ್ಶನ ನೀಡಿದ ಎರಡು ಸಮಾನ ಬಲಿಷ್ಠ ತಂಡ ಗಳಾದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಗುಜರಾತ್ ಟೈಟಾನ್ಸ್ ಪ್ರಶಸ್ತಿಗಾಗಿ ಮುಖಾ ಮುಖಿಯಾಗಲಿವೆ. ಯಾರೇ ಗೆದ್ದರೂ 2ನೇ ಬಾರಿ ಪ್ರಶಸ್ತಿ ಜೈಸಲಿವೆ. 2022ರಲ್ಲಿ ಐಪಿಎಲ್ ಪ್ರವೇಶಿಸಿದ ಗುಜರಾತ್ ಟೈಟಾನ್ಸ್ ಬರೀ 5 ಯತ್ನಗಳಲ್ಲಿ 3ನೇ ಬಾರಿಗೆ ಫೈನಲ್‌ಗೇರಿದೆ. ಬೆಂಗಳೂರು 19 ಬಾರಿ ಐಪಿಎಲ್ ಆಡಿ 4ನೇ ಬಾರಿ ಫೈನಲ್‌ನಲ್ಲಿದೆ. ಸತತ 2ನೇ ಪ್ರಶಸ್ತಿ ಮೇಲೆ ಕಣ್ಣಿಟ್ಟಿದೆ.

ಮುಖಾಮುಖಿ

ಒಟ್ಟು ಪಂದ್ಯ	9
ಆರ್‌ಸಿಬಿ ಜಯ	5
ಗುಜರಾತ್ ಜಯ	4

1ನೇ ಕ್ವಾಲಿಫೈಯರ್‌ನಲ್ಲಿ ಗುಜರಾತನ್ನು ಮಣ್ಣು ಮುಕ್ಕಿಸಿದ ಆರ್‌ಸಿಬಿ ಮೇಲ್ನೋಟಕ್ಕೆ ಮೆಚ್ಚಿನ ತಂಡವಾಗಿ ಕಾಣಿಸುತ್ತಿದೆ. ತಂಡ ಎಲ್ಲ ವಿಭಾಗದಲ್ಲೂ ಪರಿಣಾಮಕಾರಿ ಮತ್ತು ಅಷ್ಟೇ ಸ್ಥಿರ ಪ್ರದರ್ಶನ ನೀಡಿದೆ. ಪಕ್ಕಾ ಸಂತುಲಿತ ತಂಡವಾಗಿ ಕಾಣಿಸಿಕೊಂಡಿದೆ.

ಆದರೆ ಗುಜ ರಾತ್ ಟೈಟಾನ್ಸ್ ಶುಭಮನ್ ಗಿಲ್ ನಾಯಕತ್ವ ದಲ್ಲಿ ಬಹಳ ಪ್ರಭಾವಿ ಯಾಗಿದೆ. ಎಲ್ಲ ವಿಭಾಗ ಗಳಲ್ಲೂ ಅದು ಬಲಿಷ್ಠವಾಗಿದೆ. ಹುಡುಕಿದರೆ ಅಲ್ಲಲ್ಲಿ ಮಾತ್ರ ಹುಳುಕುಗಳು ಕಾಣಿಸ ಬಹುದು. ಆರ್‌ಸಿಬಿ ಸಣ್ಣ ನಿರ್ಲಕ್ಷ್ಯ ತೋರಿ ದರೂ ಅದು ಬೆಲೆ ತೆರಬೇಕಾಗಬಹುದು.

ಆರ್‌ಸಿಬಿ ತಂಡ ಬ್ಯಾಟಿಂಗ್‌ನಲ್ಲಿ ವಿರಾಟ್ ಕೊಹ್ಲಿ, ರಜತ್ ಪಾಟೀದಾರ್, ವೆಂಕಟೇಶ್ ಅಯ್ಯರ್, ಟಿಮ್ ಡೇವಿಡ್ ಮೇಲೆ ಅವಲಂಬಿ ತವಾಗಿದೆ. ಪಡಿಕ್ಕಲ್ ಕೂಡ ಮಿನುಗುತ್ತಿದ್ದಾರೆ. ಅನಂತರ ಜಿತೇಶ್ ಶರ್ಮಾ, ಕೃಣಾಲ್ ಪಾಂಡ್ಯ ಕೈಹಿಡಿಯಬಲ್ಲರು. 26 ವಿಕೆಟ್ ಪಡೆದಿರುವ ಭುವನೇಶ್ವರ್, 16 ವಿಕೆಟ್ ಪಡೆದಿರುವ ರಸಿಖ್ ದಾರ್ ಇದುವರೆಗೆ ನಂಬಿಕೆ ಉಳಿಸಿಕೊಂಡಿದ್ದಾರೆ. ತಂಡದ ಸ್ಪಿನ್ ವಿಭಾಗ ಮಾತ್ರ ನಿರೀಕ್ಷಿತ ಪ್ರದರ್ಶನ ತೋರಿಲ್ಲ.

ಗುಜರಾತ್‌ನಲ್ಲಿ ನಾಯಕ ಶುಭಮನ್ ಗಿಲ್, ಸಾಯಿ ಸುದರ್ಶನ್, ಜೋಸ್ ಬಟ್ಲರ್ ಅದ್ಭುತವಾಗಿ ಬ್ಯಾಟಿಂಗ್ ಮಾಡುತ್ತಿದ್ದಾರೆ. ಬೌಲಿಂಗ್ ಅಂತೂ ಪಕ್ಕಾ ಬಲಿಷ್ಠವಾಗಿದೆ. ಕಗಿಸೋ ರಬಾಡ ಕೂಟದಲ್ಲೇ ಗರಿಷ್ಠ ವಿಕೆಟ್ ಸಾಧಕ. ರಶೀದ್ ಖಾನ್ ಸ್ಪಿನ್ ದಾಳಿ, ಸಿರಾಜ್ ವೇಗವೂ ಪರಿಣಾಮ ಬೀರಿದೆ. ಜೇಸನ್ ಹೋಲ್ಡರ್ ಆಲ್‌ರೌಂಡರ್ ಆಗಿ ಯಶಸ್ವಿ ಯಾಗಿದ್ದಾರೆ. ಈ ತಂಡದ ಮಧ್ಯಮ ಕ್ರಮಾಂಕದ ಬ್ಯಾಟಿಂಗ್ ನಂಬಿಕೆಗೆ ಅರ್ಹ ವಾಗಿಲ್ಲ. ರಾಜಸ್ಥಾನ್ ವಿರುದ್ಧ ಗುಜರಾತ್ 2ನೇ ಕ್ವಾಲಿ ಫೈಯರ್‌ನಲ್ಲಿ ಗೆಲುವು ಸಾಧಿಸಲು ಮುಖ್ಯ ಕಾರಣ ಅದರ ಬೌಲಿಂಗ್ ವಿಭಾಗ. ವೈಭವ್ ಸೂರ್ಯವಂಶಿ ಸ್ಫೋಟಿಸಿದರೂ, ಇತರರನ್ನು ನಿಯಂತ್ರಿಸಿದ್ದರಿಂದ ರಾಜಸ್ಥಾನ್ ತಂಡದ ಮೊತ್ತ ದೊಡ್ಡ ಮಟ್ಟಕ್ಕೆ ಬೆಳೆಯ ಲಿಲ್ಲ. ಅದನ್ನು ಸುದರ್ಶನ್-ಗಿಲ್ ಬ್ಯಾಟಿಂಗ್ ಪಡೆ ಸುಲಭವಾಗಿ ಮೀರಿ ನಿಂತಿತು. ಆದರೆ ಈ ಬೌಲಿಂಗ್ ಆರ್‌ಸಿಬಿಯನ್ನು ಏನು ಮಾಡುತ್ತದೆ ಎನ್ನುವುದು ಕುತೂಹಲಕಾರಿ.

ಗುಜರಾತ್‌ಗೆ ತವರ ನೆಲ: ಆರ್‌ಸಿಬಿಗೆ ಯಾವುದೇ ನೆಲದಲ್ಲೂ ನಿಯಂತ್ರಣ ಸಾಧಿಸುವ ವಿಶ್ವಾಸವಿದೆ. ಇಡೀ ತಂಡಕ್ಕೆ ಕೊಹ್ಲಿ ಮಾನಸಿಕ ಶಕ್ತಿಯಾಗಿದ್ದಾರೆ. ಈ ಬಾರಿ ಫೈನಲ್ ಬೆಂಗಳೂರಿನಲ್ಲಿ ನಡೆಯಬೇಕಾಗಿತ್ತು. ಆದರೆ ಹಿಂದಿನ ವರ್ಷ ಆದ ಗಲಾಟೆ, ಬೆಂಗಳೂರಿನಲ್ಲಿ ಶಾಸಕರು ಟಿಕೆಟ್‌ಗಾಗಿ ಒತ್ತಡ ತಂದಿದ್ದನ್ನು ಬಿಸಿಸಿಐ ಗಂಭೀರವಾಗಿ ಪರಿಗಣಿಸಿದೆ. ಎಲ್ಲಕ್ಕಿಂತ ಮುಖ್ಯವಾಗಿ ಅಹ್ಮದಾಬಾದ್‌ನಲ್ಲಿ ಲಕ್ಷ ಜನರಿಗಿಂತ ಹೆಚ್ಚಿನ ಪ್ರೇಕ್ಷಕರಿಗೆ ಭಾಗವಹಿಸಲು ಸಾಧ್ಯ. ಬೆಂಗಳೂರಿನಲ್ಲಿ ಭಾರೀ ಬೇಡಿಕೆಯಿದ್ದರೂ ಟಿಕೆಟ್ ಸಿಗದೆ ಜನರು ಪರದಾಡುವುದು ಮಾಮೂಲಿ ಯಾಗಿದೆ. ಇದನ್ನು ಗಮನಿಸಿ ಫೈನಲ್ ಅನ್ನು ಅಹ್ಮದಾಬಾದ್‌ಗೆ ಸ್ಥಳಾಂತರಿ ಸಲಾಗಿದೆ. ಇದು ತವರು ತಂಡವಾದ ಗುಜರಾತ್‌ಗೆ ಆತ್ಮವಿಶ್ವಾಸ ಮೂಡಿಸಿದೆ. ಬಲಿಷ್ಠ ಆರ್‌ಸಿಬಿಯನ್ನು ಎದುರಿಸಲು ಪ್ರೇರಣೆ ನೀಡಿದೆ.

ಆರ್‌ಸಿಬಿಗೆ ಅಂಕಿಸಂಖ್ಯೆ ಬೆಂಬಲ: ಈ ಬಾರಿಯ ಐಪಿಎಲ್‌ನಲ್ಲಿ ಆರ್‌ಸಿಬಿ ಹಾಗೂ ಗುಜರಾತ್ ತಂಡ ಗಳು ಒಟ್ಟು ಮೂರು ಬಾರಿ ಮುಖಾಮುಖಿಯಾಗಿವೆ. ಈ ಪೈಕಿ ಆರ್‌ಸಿಬಿ 2-1ರ ಮುನ್ನಡೆ ಕಾಯ್ದು ಕೊಂಡಿದೆ.

ಆರ್‌ಸಿಬಿ ಸಾಮರ್ಥ್ಯ
- ಕೊಹ್ಲಿ, ರಜತ್, ಟಿಮ್, ಪಡಿಕ್ಕಲ್ ಇರುವ ಬ್ಯಾಟಿಂಗ್ ಪಡೆ ಶಕ್ತಿಯಾಗಿದೆ.
- ಪಾಟೀದಾರ್ ಶಾಂತ ನಾಯಕತ್ವ, ಭುವಿ, ಹೇಜಲ್‌ವುಡ್ ಬಿಗಿ ಬೌಲಿಂಗ್

ದೌರ್ಬಲ್ಯ
- ಕೆಳಕ್ರಮಾಂಕದ ಬ್ಯಾಟಿಂಗ್ ವಿಭಾಗ ಪ್ರಬಲವಿಲ್ಲ. ಒತ್ತಡಕ್ಕೆ ಕುಸಿಯುತ್ತದೆ
- ತಂಡದ ಸ್ಪಿನ್ ಬೌಲಿಂಗ್ ವಿಭಾಗ ನಿರೀಕ್ಷೆ ಮಾಡಿದಷ್ಟು ಪ್ರಭಾವಿಯಾಗಿಲ್ಲ

ಗುಜರಾತ್ ಸಾಮರ್ಥ್ಯ
- ಅಗ್ರ ಬ್ಯಾಟಿಂಗ್ ಗಿಲ್, ಸುದರ್ಶನ್, ಬಟ್ಲರ್‌ನ ನೇತೃತ್ವದ ಬಲಿಷ್ಠ ತಂಡ
- ವೇಗಿ ರಬಾಡ, ಸ್ಪಿನ್ನರ್ ರಶೀದ್ ಖಾನ್ ಒಗ್ಗೂಡಿ ಘಾತಕ ಬೌಲಿಂಗ್ ದಾಳಿ

ದೌರ್ಬಲ್ಯ
- ಅಗ್ರ ಬ್ಯಾಟರ್‌ಗಳ ಮೇಲೆ ಅವಲಂಬಿತ, ಮಧ್ಯಮ ಕ್ರಮಾಂಕ ಬಹಳ ದುರ್ಬಲ
- ಕ್ಷೇತ್ರರಕ್ಷಣೆ ಕಳಪೆ. ಮಹತ್ವದ ವೇಳೆ ಕ್ಯಾಚ್ ಬಿಡುವುದು ಅಪಾಯಕಾರಿ.

ಅಂಕಣ ಹೇಗಿದೆ?

ಮೊದಲಿನಿಂದಲೂ ಅಹ್ಮದಾಬಾದ್ ಮೈದಾನ ಬ್ಯಾಟಿಂಗ್‌ಸ್ನೇಹಿ. ಈ ಪಂದ್ಯದಲ್ಲೂ ಅದು ಬದಲಾಗುವ ಯಾವುದೇ ಸಾಧ್ಯತೆಯಿಲ್ಲ. ಅಂಕಣವನ್ನು ಕೆಂಪು ಮಣ್ಣಿನಿಂದ ನಿರ್ಮಿಸಲಾಗಿದೆ. ಈ ಮಣ್ಣಿನ ಅಂಕಣ ಯಾವಾಗಲೂ ಬ್ಯಾಟಿಂಗ್‌ಗೆ ಪೂರಕವಾಗಿ ವರ್ತಿಸುವುದು ಸಾಮಾನ್ಯ. ಚೆಂಡು ಬೌನ್ಸ್ ಆಗಿ ನೇರವಾಗಿ ಬ್ಯಾಟ್‌ಗೇ ಬರುವುದರಿಂದ ಉತ್ತಮ ಹೊಡೆತ ಬಾರಿಸಲು ಬ್ಯಾಟರ್‌ಗಳಿಗೆ ಸುಲಭ.

ಸಂಭಾವ್ಯ ತಂಡಗಳು

ಆರ್‌ಸಿಬಿ
ವೆಂಕಟೇಶ್, ಕೊಹ್ಲಿ, ಪಡಿಕ್ಕಲ್, ರಜತ್ (ನಾಯಕ), ಜಿತೇಶ್, ಟಿಮ್, ಕೃಣಾಲ್, ಭುವನೇಶ್ವರ್, ಡಫಿ, ಹೇಜಲ್‌ವುಡ್, ರಸಿಖ್.

ಗುಜರಾತ್
ಸುದರ್ಶನ್, ಗಿಲ್ (ನಾಯಕ), ಬಟ್ಲರ್, ನಿಶಾಂತ್, ಸುಂದರ್, ಹೋಲ್ಡರ್, ತೆವಾತಿಯಾ, ರಶೀದ್, ಅರ್ಷದ್, ರಬಾಡ, ಸಿರಾಜ್, ಪ್ರಸಿದ್ಧಕೃಷ್ಣ.

64 ಈ ಐಪಿಎಲ್ ನಡೆದ ಒಟ್ಟು ದಿನಗಳ ಸಂಖ್ಯೆ

74 ಈ ಐಪಿಎಲ್‌ನಲ್ಲಿ ನಡೆದ ಒಟ್ಟು ಪಂದ್ಯಗಳು

722 ಗುಜರಾತ್ ನಾಯಕ ಗಿಲ್ ಗಳಿಸಿದ ರನ್

600 ಆರ್‌ಸಿಬಿ ತಾರೆ ಕೊಹ್ಲಿ ಗಳಿಸಿದ ರನ್‌ಗಳು

28 ಗುಜರಾತ್‌ನ ರಬಾಡ ಅವರ ವಿಕೆಟ್‌ಗಳು

26 ಆರ್‌ಸಿಬಿಯ ಭುವನೇಶ್ವರ್ ವಿಕೆಟ್‌ಗಳು

ನೇರಪ್ರಸಾರ
ಸ್ಟಾರ್ ಸ್ಪೋರ್ಟ್ಸ್, ಜಿಯೋಹಾಟ್‌ಸ್ಟಾರ್
ಪಂದ್ಯಾರಂಭ: ರಾ.7.30
ಸ್ಥಳ: ಮೋದಿ ಮೈದಾನ, ಅಹ್ಮದಾಬಾದ್

ಸಮಾಚಾರ ಸಣ್ಣದಲ್ಲ

ವಿವಾದಗಳ ನಡುವೆ ಸೋಲು, ವಿನೇಶ್‌ಗಿಲ್ಲ ಏಷ್ಯಾಡ್ ಅರ್ಹತೆ

ದೆಹಲಿ: ಏಷ್ಯನ್ ಗೇಮ್ಸ್ ಕುಸ್ತಿ ಅರ್ಹತಾಸುತ್ತಿನಲ್ಲಿ ಭಾರೀ ವಿವಾದಗಳ ನಡುವೆಯೇ ವಿಶ್ವವಿಖ್ಯಾತ ಮಹಿಳಾ ಕುಸ್ತಿಪಟು ವಿನೇಶ್ ಫೋಗಾಟ್ ಸೆಮಿ ಫೈನಲ್‌ನಲ್ಲಿ ಸೋತುಹೋಗಿದ್ದಾರೆ. ಅಲ್ಲಿಗೆ ಏಷ್ಯಾಡ್ ಅರ್ಹತೆಯನ್ನು ಕಳೆದುಕೊಂಡಿದ್ದಾರೆ. 53 ಕೆಜಿ ವಿಭಾಗದಲ್ಲಿ ಸೆಣಸಿದ ಫೋಗಾಟ್ ಕ್ವಾರ್ಟರ್ ಫೈನಲ್ ನಲ್ಲಿ ಹರ್ಯಾಣದ ನಿಶುರನ್ನು ಎದುರಿಸಿದರು. ಆರಂಭದಲ್ಲಿ 0-5 ಅಂಕಗಳಿಂದ ಹಿಂದೆ ಬಿದ್ದಿದ್ದರು. ಈ ವೇಳೆ ಎದುರಾಳಿಯನ್ನು ನೆಲಕ್ಕೆ ಕೆಡವಿದ ವಿನೇಶ್ ಪಂದ್ಯವನ್ನು ಮುಗಿಸುವತ್ತ ಮುಂದುವರಿದಿದ್ದರು. ಆದರೆ ರೆಫ್ರಿ ಮಧ್ಯಪ್ರವೇಶ ಮಾಡಿ ವಿನೇಶ್‌ಗೆ 4 ಅಂಕ ನೀಡಿದರು. ಇದನ್ನು ವಿನೇಶ್ ಒಪ್ಪಲಿಲ್ಲ. ಈ ವೇಳೆ ಅವರ ಪತಿ ಸೋಮವೀರ್ ರಾಥೀ ಮಧ್ಯ ಪ್ರವೇಶಿಸಿ ಗಲಾಟೆಯೆಬ್ಬಿಸಿದರು. ಕಡೆಗೆ ಮರು ಮನವಿಯಲ್ಲಿ ತೀರ್ಪು ವಿನೇಶ್ ಪರ ಬಂತು. ವಿಷಯ ಅಷ್ಟಕ್ಕೇ ನಿಲ್ಲಲಿಲ್ಲ. ಇನ್ನೊಂದು ಹಂತದಲ್ಲಿ ವಿನೇಶ್‌ಗೆ ಬರೀ 2 ಅಂಕ ನೀಡಲಾಯಿತು. ಆಗವರಿಗೆ 4 ಅಂಕ ನೀಡಬೇಕಾಗಿತ್ತು. ಇದನ್ನು ವಿನೇಶ್ ದೊಡ್ಡ ಮಟ್ಟದಲ್ಲಿ ಪ್ರತಿಭಟಿಸಿದರು. ಇದರ ಮರು ಪರಿಶೀಲನೆ ಮನವಿಯಲ್ಲಿ ವಿಡಿಯೋವನ್ನು ವಿನೇಶ್‌ಗೆ ತೋರಿಸಲಿಲ್ಲ. ಈ ವೇಳೆ ಸ್ವತಃ ಕುಸ್ತಿ ಸಂಸ್ಥೆ ಅಧ್ಯಕ್ಷ ಸಂಜಯ್ ಸಿಂಗ್ ಜೊತೆಗೆ ವಾಗ್ವಾದ ವಾಯಿತು. ಅಂತೂ ಅಂತಿಮವಾಗಿ ವಿನೇಶ್ 7-6ರಿಂದ ಗೆದ್ದರು. ಆದರೆ ಸೆಮಿಫೈನಲ್‌ನಲ್ಲಿ 4-6ರಿಂದ ಮೀನಾಕ್ಷಿ ಗೋಯತ್ ವಿರುದ್ಧ ಸೋತರು. ಆದರೆ ಆಟ ಮುಗಿಸುವಾಗ ಡಬ್ಲ್ಯು ಎಫ್‌ಐ ಮುಖ್ಯಸ್ಥ ಸಂಜಯ್ ಸಿಂಗ್‌ರತ್ತ ಬೆರಳು ತೋರಿ ಮತ್ತೆ ಮರಳುತ್ತೇನೆ ಎಂದು ಹೇಳಿಯೇ ನಿರ್ಗಮಿಸಿದರು.

ಏಷ್ಯಾಡ್ ಸಂಭಾವ್ಯರ ತಂಡದಲ್ಲಿ ಸೂರ್ಯವಂಶಿ

ದೆಹಲಿ: ಮುಂದಿನ ಸೆಪ್ಟೆಂಬರ್ 19ರಿಂದ ನಡೆಯಲಿರುವ ಏಷ್ಯನ್ ಗೇಮ್ಸ್‌ಗಾಗಿ ಬಿಸಿಸಿಐ ಇದೀಗ 30 ಸಂಭಾವ್ಯ ಆಟಗಾರರ ಪಟ್ಟಿಯನ್ನು ಭಾರತೀಯ ಒಲಂಪಿಕ್ ಅಸೋಸಿಯೇಷನ್‌ಗೆ ಸಲ್ಲಿಸಿದೆ. ಇದರಲ್ಲಿ ಪ್ರಸ್ತುತ ಭಾರತ ಟಿ20 ನಾಯಕರಾಗಿರುವ ಸೂರ್ಯಕುಮಾರ್ ಯಾದವ್ ಸೇರಿದಂತೆ ಅನೇಕ ಪ್ರಮುಖ ಹೆಸರುಗಳು ಕಾಣೆಯಾಗಿದೆ. ಇತ್ತೀಚೆಗೆ ಭಾರೀ ಸಂಚಲನ ಮೂಡಿಸಿರುವ 15ರ ಹರೆಯದ ಬಾಲಕ ವೈಭವ್ ಸೂರ್ಯವಂಶಿ ಅವರು ಸ್ಥಾನ ಗಿಟ್ಟಿಸಿಕೊಂಡಿದ್ದಾರೆ.

ಫ್ರೆಂಚ್ ಓಪನ್ ಗ್ರ್ಯಾನ್‌ಸ್ಲಾಮ್ ಟೆನಿಸ್ | ಒಸಾಕಾ, ಸಬಲೆಂಕಾಗೆ ಗೆಲುವು

19 ವರ್ಷದ ಫೊನ್ಸೆಕಾಗೆ ಸೋತ ಜೊಕೊವಿಚ್

ಪ್ಯಾರಿಸ್: ಶುಕ್ರವಾರ ರಾತ್ರಿ ಫ್ರೆಂಚ್ ಓಪನ್ ಗ್ರ್ಯಾನ್‌ಸ್ಲಾಮ್ ಟೆನಿಸ್‌ನಲ್ಲಿ ಆಘಾತಕಾರಿ ಫಲಿತಾಂಶವೊಂದು ದಾಖಲಾಗಿದೆ. 25ನೇ ಸಿಂಗಲ್ಸ್ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಮೇಲೆ ಕಣ್ಣಿಟ್ಟಿದ್ದ ಸರ್ಬಿಯಾದ ಟೆನಿಸ್ ದಂತಕಥೆ ನೊವಾಕ್ ಜೊಕೊವಿಚ್ 3ನೇ ಸುತ್ತಿನಲ್ಲೇ ಸೋತು ಹೋಗಿದ್ದಾರೆ. ವಿಶ್ವ ನಂ.4 ಆಟಗಾರ, 24 ಬಾರಿ ಗ್ರ್ಯಾನ್‌ಸ್ಲಾಮ್ ಗೆದ್ದಿರುವ ಜೊಕೊವಿಚ್ 3ನೇ ಸುತ್ತಿನಲ್ಲಿ ವಿಶ್ವದ 159ನೇ ರ್‍ಯಾಂಕಿಂಗ್ ಆಟಗಾರ, ಬರೀ 19 ವರ್ಷದ ಜೊಆವೋ ಫೊನ್ಸೆಕಾ ವಿರುದ್ಧ 6-4, 6-4, 3-6, 5-7, 5-7ರಿಂದ ಸೋತುಹೋಗಿದ್ದಾರೆ. ಜೊಕೊ ಆರಂಭದ ಎರಡು ಸೆಟ್‌ಗಳನ್ನು ಸುಲಭವಾಗಿ ಗೆದ್ದಾಗ,



3ನೇ ಸೆಟ್‌ನಲ್ಲೂ ಅದೇ ಫಲಿತಾಂಶ ದಾಖಲಾಗುತ್ತದೆ. ಜೊಕೊ ಮುಂದಿನ ಸುತ್ತಿಗೇರುತ್ತಾರೆ ಎಂದು ಊಹಿಸಲಾಗಿತ್ತು. ಆದರೆ ಆಗಿದ್ದೇ ಬೇರೆ. ಬ್ರೆಜಿಲ್‌ನ ಕಿರಿಯನೆದುರು ಜೊಕೊ ಮಂಡಿಯೂರಿದರು.

ಶನಿವಾರ ಪ್ರಮುಖ ಆಟಗಾರ ಅಲೆಕ್ಸಾಂಡರ್ ಜ್ವರೆವ್ 6-4, 6-3, 5-7, 6-2 ಸೆಟ್‌ಗಳಿಂದ ಕ್ವೆಂಟಿನ್ ಹೇಲಿಸ್ ವಿರುದ್ಧ ಗೆದ್ದು 4ನೇ ಸುತ್ತಿಗೇರಿದರು. ಝುಚಾರಿ ಸ್ವಜ್ದಾ 6-3, 6-4, 3-6, 4-6, 6-3 ಸೆಟ್‌ಗಳಿಂದ ಫ್ರಾನ್ಸಿಸ್ಕೊ ಸೆರುಂಡೊಲೊ ಗೆದ್ದರು. ಫ್ಲಾವಿಯೋ ಕೊಬೊಲ್ಲಿ 6-2, 6-2, 6-3 ಸೆಟ್‌ಗಳಿಂದ ಲರ್ನರ್ ಟಿಯೆನ್ ವಿರುದ್ಧ ಜಯ ಸಾಧಿಸಿದರು. ಮಹಿಳಾ ವಿಭಾಗದಲ್ಲಿ ಖ್ಯಾತ ಆಟಗಾರ್ತಿ ನವೋಮಿ ಒಸಾಕಾ 7-6, 6-7, 6-4ರಿಂದ ಇವಾ ಜೊವಿಕ್‌ರನ್ನು ಮಣಿಸಿ ಮುನ್ನುಗ್ಗಿದ್ದಾರೆ. ಅರಿನಾ ಸಬಲೆಂಕಾ 6-0, 7-5ರಿಂದ ದರಿಯಾ ಕಸತ್ಕಿನಾರನ್ನು ಸೋಲಿಸಿದರು.

ವಿಶ್ವ ನಂ.1 ಜೋಡಿ ಕಿಮ್ ಹೋ-ಸಿಯಂಗ್ ಜೇ ವಿರುದ್ಧ ಜಯಭೇರಿ

ಸಿಂಗಾಪುರ ಓಪನ್ ಫೈನಲ್‌ಗೆ ಸಾತ್ವಿಕ್-ಚಿರಾಗ್

ಸಿಂಗಾಪುರ: ದ.ಕೊರಿಯಾದ ವಿಶ್ವ ಚಾಂಪಿಯನ್ ಬ್ಯಾಡ್ಮಿಂಟನ್ ಜೋಡಿ ಕಿಮ್ ವೊನ್ ಹೋ-ಸಿಯೋ ಸಿಯಂಗ್ ಜೇರನ್ನು ಸೋಲಿಸುವ ಮೂಲಕ ಭಾರತದ ಸಾತ್ವಿಕ್ ರಾಂಕಿರೆಡ್ಡಿ-ಚಿರಾಗ್ ಶೆಟ್ಟಿ ಸಿಂಗಾಪುರ ಓಪನ್ ಫೈನಲ್‌ಗೇರಿದ್ದಾರೆ. ವಿಶ್ವ ನಂ.4 ಬ್ಯಾಡ್ಮಿಂಟನ್ ಜೋಡಿಯಾದ ಸಾತ್ವಿಕ್-ಚಿರಾಗ್ 21-19, 21-18 ಗೇಮ್‌ಗಳಿಂದ ಇದೇ ಮೊದಲ ಬಾರಿಗೆ ಕೊರಿಯಾದ ಜೋಡಿ ವಿರುದ್ಧ ಗೆಲುವು ಸಾಧಿಸಿತು. ಈ ವರ್ಷದ ವಿಶ್ವಪ್ರವಾಸದಲ್ಲಿ ಭಾರತೀಯ ಜೋಡಿಗಿದು 2ನೇ ಫೈನಲ್ ಪ್ರವೇಶ.

ಇದಕ್ಕೂ ಮುನ್ನ ಥಾಯ್ಲೆಂಡ್ ಓಪನ್ ಫೈನಲ್‌ಗೇರಿತ್ತು. 2 ಬಾರಿ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಕಂಚಿನ ಪದಕ ಗೆದ್ದಿರುವ ಭಾರತೀಯ ಜೋಡಿ, ನೇರ ಗೇಮ್‌ಗಳ ವಿಜಯ ಸಾಧಿಸಿತು. ಮೊದಲ ಗೇಮ್‌ನಲ್ಲಿ 8-13, 13-17 ರಿಂದ ಹಿಂದುಳಿದಿತ್ತು. ನಂತರ ಬಿಗಿಯಾಗಿ ಆಡಿ ಗೇಮ್ ಅನ್ನೇ ಜೈಸಿತು. ಒಟ್ಟು 52 ನಿಮಿಷಗಳ ಕಾಲ ಸೆಣಸಾಟ ನಡೆಯಿತು.

ಮತ್ತೊಮ್ಮೆ ಹಾರರ್ ಚಿತ್ರದಲ್ಲಿ ರಶ್ಮಿಕಾ

ಸ್ಯಾಂಡಲ್‌ವುಡ್ ಸಾನ್ವಿ ರಶ್ಮಿಕಾ ಮಂದಣ್ಣ ಪ್ಯಾನ್ ಇಂಡಿಯಾ ನಟಿಯಾಗಿ ಗುರುತಿಸಿಕೊಂಡಿದ್ದಾರೆ. ಕನ್ನಡ ಮಾತ್ರವಲ್ಲ ಪರಭಾಷೆಯಲ್ಲಿಯೂ ಬಲು ಬೇಡಿಕೆ ಪಡೆದುಕೊಂಡಿದ್ದಾರೆ. ಈ ಹಿಂದಿನ ಸಿನಿಮಾಗಳಲ್ಲಿ ಗ್ಲಾಮರ್ ಲುಕ್‌ನಲ್ಲಿ, ಐತಿಹಾಸಿಕ ಪಾತ್ರಗಳಲ್ಲಿ ಕಾಣಿಸಿಕೊಂಡ ರಶ್ಮಿಕಾ, ಥಮ ಚಿತ್ರದಲ್ಲಿ ಹಾರರ್ ಸ್ಟೋರಿಯನ್ನು ಆಯ್ದುಕೊಂಡು ಭೂತದ ಪಾತ್ರದಲ್ಲಿ ಕಾಣಿಸಿಕೊಂಡು ಗಮನಸೆಳೆದರು. ಥಮ ಭರ್ಜರಿ ಯಶಸ್ಸು ಪಡೆಯಿತು. ಈಗ ರಶ್ಮಿಕಾ ಮತ್ತೊಮ್ಮೆ ಭೂತದ ಪಾತ್ರವನ್ನೇ ಆಯ್ದುಕೊಂಡಿದ್ದಾರೆ. ಹೌದು, ತಮಿಳಿನಲ್ಲಿ ಮೂಡಿಬಂದ ಕಾಂಚನ ಸರಣಿಯ ಸಿನಿಮಾಗಳು ಅದ್ಭುತ ಪ್ರದರ್ಶನ ಕಂಡವು. ಈಗ ಆ ಸರಣಿಯ ಮುಂದಿವರಿದ ಭಾಗವಾಗಿ ಕಾಂಚನ 4 ಸೆಟ್ಟೇರಲಿದೆ. ಈ ಚಿತ್ರವನ್ನು ರಾಘವ ಲಾರೆನ್ಸ್ ನಿರ್ದೇಶನ ಮಾಡುತ್ತಿದ್ದು ಜತೆಗೆ ನಾಯಕನಾಗಿಯೂ ನಟಿಸುತ್ತಿದ್ದಾರೆ. ಪೂಜಾ ಹೆಗ್ಡೆ ಚಿತ್ರದ ನಾಯಕಿಯಾಗಿ ನಟಿಸುತ್ತಿದ್ದು, ರಶ್ಮಿಕಾ ಅತಿಥಿ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ ಎಂಬುದು ವಿಶೇಷ. ಇದು ಭೂತದ ಪಾತ್ರವಾಗಿದ್ದು, ರಶ್ಮಿಕಾ ಅವರ ಪಾತ್ರ ಫ್ಲಾಶ್ ಬ್ಯಾಕ್‌ನಲ್ಲಿ ಸಾಗಲಿದೆ. ಈ ಚಿತ್ರದ ಜತೆಗೆ ಥಮ ಚಿತ್ರದ ಸೀಕ್ವೆಲ್ ಮೂಡಿಬರಲಿದ್ದು, ಅದರಲ್ಲಿಯೂ ರಶ್ಮಿಕಾ ಪಾತ್ರ ಮುಂದುವರಿಯಲಿದೆ. ಹಿಂದಿನ ಭಾಗದಂತೆ ಈ ಸಿನಿಮಾದಲ್ಲಿಯೂ ಹಾಟ್ ಅವತಾರದಲ್ಲಿ ರಶ್ಮಿಕಾ ಮಿಂಚಲಿದ್ದಾರೆ ಎನ್ನಲಾಗುತ್ತಿದೆ.

ಈ ಸಿನಿಮಾಗಳ ಜತೆ ಜತೆಗೆ ಮೈಸಾ ಸಿನಿಮಾದಲ್ಲಿಯೂ ರಶ್ಮಿಕಾ ಬಣ್ಣ ಹಚ್ಚಲಿದ್ದಾರೆ. ಮೈಸಾ ಸಸ್ಪೆನ್ಸ್, ಥ್ರಿಲ್ಲರ್ ಜತೆಗೆ ಒಂದಷ್ಟು ಹಾರರ್ ಅಂಶಗಳನ್ನು ಒಳಗೊಂಡಿದೆ. ಇನ್ನು ಪತಿ ವಿಜಯ್ ದೇವರಕೊಂಡ ಅವರೊಂದಿಗೆ ರಣಬಾಲಿ ಚಿತ್ರದಲ್ಲಿಯೂ ಅಭಿನಯಿಸುತ್ತಿದ್ದಾರೆ. ರಣಬಾಲಿ ಐತಿಹಾಸಿಕ ಕಥೆಯನ್ನು ಒಳಗೊಂಡಿದ್ದು, ಅದ್ದೂರಿಯಾಗಿ ಮೂಡಿಬರಲಿದೆ.

ಗೆಲುವಿನ ನಿರೀಕ್ಷೆಯಲ್ಲಿ ಪೂಜಾ ಹೆಗ್ಡೆ

ಬಹುಭಾಷಾ ನಟಿ ಪೂಜಾ ಹೆಗ್ಡೆ ಒಂದು ಕಾಲದಲ್ಲಿ ಲಕ್ಕಿ ಹೀರೊ ಇನ್ ಎಂದೇ ಖ್ಯಾತಿ ಪಡೆದಿದ್ದರು. ಬಾಲಿವುಡ್, ಕಾಲಿವುಡ್, ಟಾಲಿವುಡ್ ಅಂಗಳದಲ್ಲಿಯೂ ಮಿಂಚಿ, ಬೇಡಿಕೆಯ ನಟಿಯಾಗಿ ಗುರುತಿಸಿಕೊಂಡಿದ್ದರು. ಆದರೆ ಪೂಜಾ ಅಭಿನಯದ ಮೋಸ್ಟ್ ಎಲಿಜಬಲ್ ಬ್ಯಾಚುರಲ್ ಸಿನಿಮಾ ನಿರೀಕ್ಷಿತ ಪ್ರದರ್ಶನ ಕಾಣದೆ ಹೀನಾಯವಾಗಿ ಸೋತಿತು. ಅಲ್ಲಿಂದ ಪೂಜಾ ನಟಿಸಿದ ಹಲವು ಸಿನಿಮಾಗಳು ಸೋತವು. ತಮಿಳಿನ ರೆಟ್ರೋ ಸಿನಿಮಾ ಕೂಡ ಪ್ರೇಕ್ಷಕರನ್ನು ಸೆಳೆಯಲು ವಿಫಲವಾಯಿತು. ಇದರಿಂದ ಪೂಜಾ ಹೆಗ್ಡೆ ಅವರಿಗೆ ಬೇಡಿಕೆ ಕುಸಿಯಿತು. ನಾಯಕಿಯಾಗಿ ಮಿಂಚಿದ್ದ ಪೂಜಾ, ಕೂಲಿ ಚಿತ್ರದಲ್ಲಿ ಮೋನಿಕಾ... ಎನ್ನುತ್ತಾ ಐಟಂ ಸಾಂಗ್ ನಲ್ಲಿ ಹೆಜ್ಜೆ ಹಾಕಿದರು. ಮುಂದೆ ಪೂಜಾ ಐಟಂ ಸಾಂಗ್ ಗಳಿಗೆ ಸೀಮಿತವಾಗುತ್ತಾರಾ ಎನ್ನುವಾಗಲೇ ಪೂಜಾ ಹೆಗ್ಡೆ ವಿಜಯ್ ಜತೆಗೆ ಜನನಾಯಗನ್ ನಲ್ಲಿ ನಾಯಕಿಯಾಗಿ ಬಣ್ಣ ಹಚ್ಚಿದ್ದರು. ಜನನಾಯಗನ್ ತೆರೆಗೆ ಸಿದ್ಧವಾಗಿದ್ದು ಭರ್ಜರಿಯಾಗಿ ಸದ್ದು ಮಾಡುವುದು ಖಚಿತವಾಗಿದೆ.

ಈಗ ಬಾಲಿವುಡ್ ಅಂಗಳಕ್ಕೂ ಕಾಲಿಟ್ಟಿರುವ ಕರಾವಳಿ ಚೆಲುವೆ, ಹೈ ಜವಾನಿ ತೋ ಇಷ್ಕ್ ಹೋನಾ ಹೈ ಸಿನಿಮಾದಲ್ಲಿ ನಟಿಸಿದ್ದಾರೆ.

ಇನ್ನೇನು ಈ ಚಿತ್ರ ತೆರೆಗೆ ಬರಲಿದೆ. ಈ ಸಿನಿಮಾದ ಬಗ್ಗೆ ಅಪಾರ ನಿರೀಕ್ಷೆ ಹೊಂದಿರುವ ಪೂಜಾ ಗೆಲುವಿನ ಲಯಕ್ಕೆ ಮರಳಲು ಕಾತರರಾಗಿದ್ದಾರೆ. ವರುಣ್ ಧವನ್ ನಾಯಕನಾಗಿ ನಟಿಸಿರುವ ಈ ಚಿತ್ರವನ್ನು ಡೇವಿಡ್ ಧವನ್ ನಿರ್ದೇಶನ ಮಾಡಿದ್ದಾರೆ.

ಈಗಾಗಲೇ ಈ ಚಿತ್ರ ಹಾಡುಗಳ ಮೂಲಕವೇ ಸದ್ದು ಮಾಡುತ್ತಿದೆ. ಪೂಜಾ ಹೆಗ್ಡೆ ಕರುನಾಡಿನ ಬೆಡಗಿ. ಕನ್ನಡ ಸಿನಿಮಾಗಳನ್ನು ನೋಡಿ ಮೆಚ್ಚಿಕೊಂಡಾಡುವ ಕರಾವಳಿ ಸುಂದರಿ, ಮುಂದೆ ಸ್ಯಾಂಡಲ್‌ವುಡ್ ಸಿನಿಮಾಗಳಲ್ಲಿ ನಟಿಸುವ ಇಂಗಿತ ವ್ಯಕ್ತಪಡಿಸಿದ್ದಾರೆ.

ಬಂದರ್‌ನಲ್ಲಿ ಕುಣಿದ ರಾಜ್ ಶೆಟ್ಟಿ

ಕನ್ನಡ ಚಿತ್ರರಂಗದಲ್ಲಿ ನಟನಾಗಿ, ನಿರ್ದೇಶಕನಾಗಿ, ನಿರ್ಮಾಪಕನಾಗಿ ಗುರುತಿಸಿಕೊಂಡಿರುವ ರಾಜ್ ಶೆಟ್ಟಿ ಈಗ ಬಾಲಿವುಡ್ ಅಂಗಳಕ್ಕೂ ಕಾಲಿಟ್ಟಿದ್ದಾರೆ. ಅನುರಾಗ್ ಕಶ್ಯಪ್ ನಿರ್ದೇಶನದ ಬಂದರ್ ಸಸ್ಪೆನ್ಸ್, ಥ್ರಿಲ್ಲರ್ ಸಿನಿಮಾವಾಗಿದ್ದು ಬಾಬಿ ಡಿಯೋಲ್ ನಾಯಕರಾಗಿ ಅಭಿನಯಿಸಿ ದ್ದಾರೆ. ಇದರ ಜತೆಗೆ ರಾಜ್ ಶೆಟ್ಟಿ ಕೂಡ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ರಾಜ್ ಶೆಟ್ಟಿ ಗರುಡ ಗಮನ ವೃಷಭ ವಾಹನ ಚಿತ್ರದಲ್ಲಿ ಕಾಣಿಸಿಕೊಂಡಂತೆ ಈ ಚಿತ್ರದಲ್ಲಿಯೂ ಸಿಂಪಲ್ ಲುಕ್ ನಲ್ಲಿ ಮಿಂಚಿದ್ದಾರೆ. ಅವರ ಲುಕ್ ನೋಡಿ ಅಭಿಮಾನಿಗಳು ಖುಷಿಯಾಗಿದ್ದರು.

ಈಗ ಬಂದರ್ ನ ಹಾಡು ಬಿಡುಗಡೆಯಾಗಿದ್ದು ಇದರಲ್ಲಿ ರಾಜ್ ಶೆಟ್ಟಿ ಕುಣಿದು ಕುಪ್ಪಳಿಸಿದ್ದಾರೆ. ಈ ಹಾಡಿನಲ್ಲಿಯೂ ರಾಜ್ ಥೇಟ್ ಗರುಡ ಗಮನ ವೃಷಭ ವಾಹನ ಚಿತ್ರದ ದೃಶ್ಯದಲ್ಲಿ ಇರುವಂತೆ ಕುಣಿದಿದ್ದಾರೆ. ಇದನ್ನು ನೋಡಿ ಫ್ಯಾನ್ಸ್ ಖುಷಿಯಾಗಿದ್ದಾರೆ. ಜೈಲಿನ ಹಿನ್ನೆಲೆಯಲ್ಲಿ ಸಾಗುವ ಗೀತೆ ಇದಾಗಿದ್ದು ಅದ್ಭುತವಾಗಿ ಹಾಡು ಮೂಡಿಬಂದಿದೆ. ಈ ಸಿನಿಮಾದ ಮೂಲಕ ರಾಜ್ ಶೆಟ್ಟಿ ಬಾಲಿವುಡ್ ಅಂಗಳದಲ್ಲಿಯೂ ಛಾಪು ಮೂಡಿಸಲಿದ್ದಾರೆ.

ಕ್ರೇಜಿಸ್ಟಾರ್ ಮ್ಯೂಸಿಕಲ್ ಜರ್ನಿ

ಕ್ರೇಜಿಸ್ಟಾರ್ ರವಿಚಂದ್ರನ್ ಹುಟ್ಟುಹಬ್ಬದ ಸಂಭ್ರಮದಲ್ಲಿದ್ದಾರೆ. ತಮ್ಮ ನೆಚ್ಚಿನ ನಟನಿಗೆ ಅಭಿಮಾನಿಗಳು ಶುಭಕೋರಿ ಸಂಭ್ರಮಿಸಿದ್ದಾರೆ. ತಮ್ಮ ಹುಟ್ಟುಹಬ್ಬಕ್ಕೆ ರವಿಮಾಮ ಹಾಡಿನ ಉಡುಗೊರೆ ನೀಡಿದ್ದಾರೆ. ಕ್ರೇಜಿ ಪಯಣ ಹಾಡಿನಲ್ಲಿ ಅದ್ಭುತವಾಗಿ ಮೂಡಿಬಂದಿದೆ. ಅಜ್ಜ ಅಜ್ಜಿ ಟು ಜೆನ್ ಜಿ ಎಂದು ಹಾಡಿನಲ್ಲಿದೆ.

ರಾಮಾಯಣ ಮಹಾಭಾರತ ಇಲ್ಲದೆ ಯಾವುದೇ ಪಯಣ ಮುಂದುವರಿಯೋದಿಲ್ಲ ಎಂದು ಆರಂಭವಾಗುವ ಈ ಗೀತೆ ಅದ್ಭುತ ಸಂಗೀತದ ಮೂಲಕ ಮನಸೂರೆಗೊಳ್ಳುತ್ತದೆ. ಅಪ್ಪ ನಂಬಿಕೆ..ಅಮ್ಮನ ಪ್ರೀತಿ ಈ ಪ್ರಯಾಣಕೆ ಉಸಿರು ಅವರೇ ಎಂಬ ಸಾಲುಗಳು ಗಮನಸೆಳೆಯುತ್ತವೆ. ಹಸಿರಾಗಲು ನಿಮ್ಮ ಪ್ರೀತಿ ಹರುಷ ಸ್ಪರ್ಶ ಈ ಕನ್ನಡ ಮಣ್ಣಿನಿಂದಲೇ ... ಈ ಕರ್ನಾಟಕದ ಹೃದಯದಿಂದಲೇ.. ನಿಮ್ಮ ಪ್ರೀತಿಯ ಜತೆಯಲ್ಲಿಯೇ ಅಂದೂ... ಇಂದು...ಎಂದೂ...ಮುಂದು.. ಎಂಬ ಸಾಲುಗಳು ಮನಕ್ಕೆ ನಾಟುತ್ತವೆ.

ರವಿಚಂದ್ರನ್ ಅವರೇ ಈ ಗೀತೆಗೆ ಸಾಹಿತ್ಯ ರಚಿಸಿದ್ದಾರೆ. ಈ ಹಾಡಿನಲ್ಲಿ ರವಿಚಂದ್ರನ್ ಕಾಣಿಸಿಕೊಂಡಿದ್ದು ವಿಭಿನ್ನ ಲುಕ್ ನಲ್ಲಿ ಕಾಣಿಸಿಕೊಂಡಿದ್ದಾರೆ. ಕ್ರೇಜಿಸ್ಟಾರ್ ನೋಡಿ ಅಭಿಮಾನಿಗಳು ಖುಷಿಯಾಗಿದ್ದಾರೆ.

ವಿರಾಮ

ಓದುವ ಲೋಕಕ್ಕೆ ಓದುವ ನಿಲ್ದಾಣ

ವಿಶ್ವವಾಣಿ
31.05.2026
ಭಾನುವಾರ

ಅಳುವ ಕಡಲೊಳು ತೇಲಿಬಂದ ನಗೆಯ ಹಾಯಿದೋಣಿ!

» ಬ್ರಹ್ಮಾನಂದಂ

» ಕನ್ನಡಕ್ಕೆ : ವಿಶ್ವೇಶ್ವರ ಭಟ್

ನಾನು ನಿಮ್ಮ ಬ್ರಹ್ಮಾನಂದಂ
ಅನು: ವಿಶ್ವೇಶ್ವರ ಭಟ್
ಪ್ರ : ವಿಶ್ವವಾಣಿ ಪುಸ್ತಕ
ಬೆಂಗಳೂರು
ಸಂಪರ್ಕ: 63623 93966
ಬೆಲೆ ರು. 375/-



ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ, ತೆಲುಗು ಚಿತ್ರ ನಟ ಬ್ರಹ್ಮಾನಂದಂ ಅವರು ಶಿಕ್ಷಕರಾಗಿದ್ದುಕೊಂಡೇ, ನಟನೆಯನ್ನು ಕೈಗೆತ್ತಿಕೊಂಡು ಯಶಸ್ಸನ್ನು ಕಂಡರು. ಹಾಸ್ಯನಟರಾಗಿ ಅವರು ತೆಲುಗು ಚಿತ್ರರಂಗದಲ್ಲಿ ದಾಖಲೆಯನ್ನೇ ಬರೆದರು. ಅದಕ್ಕಿಂತಲೂ ಮಿಗಿಲಾಗಿ, ಜನರನ್ನು ನಗಿಸಿದರು, ಹೊಟ್ಟೆ ಹುಣ್ಣಾಗಿಸುವಂತೆ ನಗಿಸಿದರು! ಬೇರೆಯವರನ್ನು ನಗಿಸುವ ಕಲೆಯನ್ನು ಜನ್ಮದಿಂದಲೇ ಕಲಿತು ಬಂದವರಂತೆ, ತಮ್ಮ ಸುತ್ತಲಿನ ಎಲ್ಲರನ್ನೂ ನಗಿಸಿ, ವಾತಾವರಣದಲ್ಲಿ ಸಂತಸವನ್ನೇ ತುಂಬಿದರು. ಇವರ ನಗಿಸುವ ಕಲೆ ಎಷ್ಟು ಉನ್ನತಮಟ್ಟದಲ್ಲಿತ್ತೆಂದರೆ, ತೆಲುಗು ಭಾಷೆಯಲ್ಲಿ ಎಂ.ಎ. ಪದವಿ ಪ್ರವೇಶ ಪಡೆಯಲು ನಡೆದ ಸಂದರ್ಶನದಲ್ಲಿ, ಸಂದರ್ಶಕರ ಸೂಚನೆಯ ಮೇರೆಗೆ ಮಿಮಿಕ್ರಿ ಮಾಡಿ, ಸಂದರ್ಶನಕ್ಕೆ ಕುಳಿತ ಪ್ರೊಫೆಸರ್ ಮತ್ತು ಅವರ ತಂಡವನ್ನೇ ನಗೆಯ ಕಡಲಿನಲ್ಲಿ ತೇಲಿಸಿದರು! ಬ್ರಹ್ಮಾನಂದಂ ಅವರು ತಮ್ಮ ಅನುಭವಗಳನ್ನು ಆತ್ಮಕಥೆಯಾಗಿ ಸೊಗಸಾಗಿ ಬರೆದುಕೊಂಡಿದ್ದಾರೆ. ಅದರ ಕನ್ನಡ ಅನುವಾದವನ್ನು ವಿಶ್ವೇಶ್ವರ ಭಟ್ ಅವರು ಮಾಡಿದ್ದು, 'ನಾನು ನಿಮ್ಮ ಬ್ರಹ್ಮಾನಂದಂ' ಹೆಸರಿನ ಈ ಚಂದದ ಪುಸ್ತಕ ಇದೀಗ ಪ್ರಕಟಗೊಂಡಿದೆ. ಆ ಪುಸ್ತಕದ ಆಯ್ದ ಭಾಗಗಳು ಇಲ್ಲಿವೆ.

ಮತ್ತೊಂದು ಅನಿರೀಕ್ಷಿತ ಸವಾಲು ನನಗಾಗೇ ಕಾದುಕುಳಿತ ಹಾಗಿತ್ತು ಆ ಸಂದರ್ಭ. ಏನೇ ಆಗಲಿ ಪ್ರದರ್ಶನ ನೀಡಲೇಬೇಕು, ಸರಿ ಅದಕ್ಕೆ ತಕ್ಕಂತೆ ನನ್ನ ಯೋಜನೆ ಹೀಗಿತ್ತು. 1. ಮಧ್ಯಾಹ್ನದೊಳಗಾಗಿ ಕ್ಲಾಸ್ ಮುಗಿಸಬೇಕು. 2. ನಂತರ ಭೀಮಾವರಂ ಬಸ್ ಹಿಡಿಯುವುದು. 3. ಅಲ್ಲಿಂದ ಭೀಮಾವರಂಗೆ ಹೋಗಲು ಇನ್ನೊಂದು ಬಸ್ ಹಿಡಿಯುವುದು. 4. ನ್ಯಾಶನಲ್ ಕಾಲೇಜಿನಲ್ಲಿ ಪ್ರದರ್ಶನ ನೀಡುವುದು. 5. ಸಂಭಾವನೆ ತೆಗೆದುಕೊಳ್ಳುವುದು. 6.ಕಾರ್ಯಕ್ರಮ ಮುಗಿಸಿ ಅತ್ತಿಲಿಗೆ ಮರಳಿ ಲಕ್ಷ್ಮೀಯೊಂದಿಗೆ ಚಿಕ್ಕಪುಟ್ಟ ಅನುಭವಗಳನ್ನು ಹಂಚಿಕೊಂಡು ಇಬ್ಬರು ನಗುವುದು. ಹೀಗೆ ಮನಸ್ಸಿನಲ್ಲೇ ಏನೇನೋ ಯೋಜನೆ ಹಾಕಿಕೊಂಡೆ. ಮನಸ್ಸು ಹಗುರವಾಗಿಸಿಕೊಂಡು ಮುಖದ ಮೇಲೊಂದು ಸಮಾಧಾನದ ನಗೆ ಬೀರಿದೆ. ಹೀಗೆ ಒಂದು ದಿನ ಬರೀ ಯೋಜನೆ ಹಾಕಿಕೊಳ್ಳುವುದರಲ್ಲೇ ಕಳೆದೆ. ಆದರೂ ಸ್ವಲ್ಪಮಟ್ಟಿಗೆ ಏನಾದರೂ ತೊಂದರೆ ಆಗಬಹುದು ಎಂಬ ಅನುಮಾನವಂತೂ ಇದ್ದೇ ಇತ್ತು.

ಮಚಲಿಪಟ್ಟಣದ ಕಾರ್ಯಕ್ರಮದಲ್ಲಿ ಜನರನ್ನು ನಗೆಗಡಲಿನಲ್ಲಿ ತೇಲಿಸಿ ಹೊಟ್ಟೆ ಹುಣ್ಣಾಗುವಂತೆ ನಗಿಸುವೆ ಎಂದು ಮಾತು ಕೊಟ್ಟಿದ್ದೇನೆ. ಇದಕ್ಕೆ ಪ್ರತಿಯಾಗಿ ನನಗೆ ಸಂಭಾವನೆಯ ರೂಪದಲ್ಲಿ ಸಿಗುವ ಮೊತ್ತ ಹದಿನೈದು ನೂರು ರುಪಾಯಿಗಳು. ಅಂದರೆ ನನ್ನ ನಾಲ್ಕು ತಿಂಗಳ ಸಂಬಳಕ್ಕೆ ಸಮ. ಒಂದು ಕಡೆ ಕೊಟ್ಟ ಮಾತನ್ನು ಉಳಿಸಿಕೊಳ್ಳುವ ಹಂಬಲ, ಮತ್ತೊಂದೆಡೆ ಹದಿನೈದು ನೂರು ರುಪಾಯಿಗಳ ದೊಡ್ಡ ಮೊತ್ತ ಪಡೆಯುವ ಅನಿವಾರ್ಯತೆ. ಯಾವುದೇ ಕಾರಣಕ್ಕೂ ಈ ಅವಕಾಶವನ್ನು ತಪ್ಪಿಸಿಕೊಳ್ಳಬಾರದೆಂಬ ನಿರ್ಧಾರ ಗಟ್ಟಿಯಾಗಿತ್ತು. ಕಾರ್ಯಕ್ರಮ ಇದ್ದ ದಿನ ಬೆಳಗ್ಗೆ ಲಘು ಉಪಾಹಾರ ಸೇವಿಸಿ ಬೇಗನೆ ಮನೆಯಿಂದ ಹೊರಟೆ. ಅವಸರವಾಗಿ ಹೆಜ್ಜೆ ಇಡುತ್ತ ಅತ್ತಿಲಿ ಕಾಲೇಜು ತಲುಪಿದೆ. ನಾನು ಈ ದಿನ ಕಾಲೇಜಿಗೆ ಬರುವುದೇ ಇಲ್ಲ ಎಂದುಕೊಂಡಿದ್ದ ನನ್ನ ಸಹೋದ್ಯೋಗಿ ವೈರಿಗಳು ಎಂದಿಗಿಂತ ಸ್ವಲ್ಪ ಬೇಗನೆ ಬಂದು ನನ್ನ ಕೆಲಸಗಳನ್ನು ಲಗುಬಗೆಯಿಂದ ಮಾಡುತ್ತಿದ್ದ ನನ್ನನ್ನು ನೋಡಿ ಅಚ್ಚರಿಯಾಗಿದ್ದರಷ್ಟೇ ಅಲ್ಲ, ಕಸಿವಿಸಿಗೊಂಡಿದ್ದರು ಕೂಡ. ನಾನು ಕಾಲೇಜಿಗೆ ಖಂಡಿತ ಬರುವುದಿಲ್ಲ, ಇದೇ ಸಮಯ ಸಾಧಿಸಿ ಆಡಳಿತ ಮಂಡಳಿಗೆ ನನ್ನ ಬಗ್ಗೆ ಇಲ್ಲಸಲ್ಲದ್ದನ್ನು ಹೇಳಬೇಕೆಂದುಕೊಂಡಿದ್ದ ಅವರ ಯೋಜನೆಯೆಲ್ಲ ಬುಡಮೇಲಾಗುತ್ತಿದ್ದುದನ್ನು ತಮ್ಮ ಕಣ್ಣುಗಳಿಂದ ನೋಡಲು ಆಗದೇ ಚಡಪಡಿಸಿಬಿಟ್ಟಿದ್ದರು. ಈ ಹಗೆ ಎನ್ನುವುದು ಮನುಷ್ಯರನ್ನು ನೆಮ್ಮದಿಯಿಂದ ಇರಲು ಬಿಡುವುದಿಲ್ಲ ನೋಡಿ. ಅಂದು ಬೇಕೆಂದೇ ಹೆಚ್ಚಿನ, ಅನವಶ್ಯ ಕೆಲಸಗಳನ್ನು ನನ್ನ ಮೇಲೆ ಹೇರಿ ಇದನ್ನು ಇವತ್ತೇ ಮಾಡಬೇಕು ಎಂದು ಹೇಳಿದರು. ನಾನು ನಾಳೆ ಮಾಡಬಹುದಲ್ಲ ಎಂದು ವಿನಂತಿಸಿಕೊಂಡಿದ್ದಕ್ಕೆ 'ಕಾಲೇಜಿನ ಕೆಲಸಕ್ಕಿಂತ ವೈಯಕ್ತಿಕ ಕೆಲಸವೇ ನನಗೆ ಹೆಚ್ಚಾಯಿತು' ಎಂಬ ಧಾಟಿಯಲ್ಲಿ ಕುಹಕವಾಡಿದರು. ನಾನು ಪ್ರತಿಯಾಗಿ ವಾದಿಸಲಿಲ್ಲ. ನಾನೇನೋ ಮಾತನಾಡುವುದು, ಅದಕ್ಕೆ ಅವರೊಂದು ಹೇಳುವುದು, ಇದೆಲ್ಲ ನನಗೆ ಬೇಡವಾಗಿತ್ತು. ಅವರು ಕೊಟ್ಟ ಪತ್ರಿಕೆಗಳ ಎಲ್ಲ ಕೆಲಸವನ್ನು ಆದಷ್ಟು ಬೇಗ ಮುಗಿಸಿ ಪಾಠ ಮಾಡಬೇಕಿದ್ದ ತರಗತಿಗೆ ತೆರಳಿದೆ. ಕ್ಲಾಸ್ ಮುಗಿಸಿ ಕಾಲೇಜಿನಿಂದ ಹೊರಟಾಗ ಸಮಯ ಸುಮಾರು ಮಧ್ಯಾಹ್ನದ ಹನ್ನೆರಡೂವರೆ.

ಮಿಸ್ಸಾದ ಬಸ್!

ಸಂಜೆಯಾಗುವುದರೊಳಗಾಗಿ ಮಚಲಿಪಟ್ಟಣಂ ಸೇರಬೇಕಿತ್ತು. ಹಾಕಿಕೊಂಡ ಯೋಜನೆಯ ಪ್ರಕಾರ ಮೊದಲ ಹಂತ ಯಶಸ್ವಿ. ಇನ್ನು ಭೀಮಾವರಂ ಬಸ್ಸು ಹಿಡಿಯುವುದು. ನನ್ನ ಶಕ್ತಿ ಮೀರಿ ದಾಪುಗಾಲು ಇಟ್ಟು ಸಮೀಪದ ಬಸ್ ನಿಲ್ದಾಣ ತಲುಪಿದೆ. ಬಸ್ ನಿಲ್ದಾಣಕ್ಕೆ ಆಗಷ್ಟೇ ತಲುಪಿದ್ದೆ, ಭೀಮಾವರಂ ಬಸ್ಸು ಅನತಿ ದೂರದಲ್ಲಿದ್ದಾಗಲೇ ಹೊರಟೇಬಿಟ್ಟಿತು. ಅಯ್ಯೋ ವಿಧಿಯೆ! ಮನಸ್ಸಿನಲ್ಲೇ ಗೊಣಗಿದೆ. ಕಣ್ಣಮುಂದೆಯೇ ಭೀಮಾವರಂಗೆ ಹೋಗುವ ಬಸ್ಸನ್ನು ತಪ್ಪಿಸಿಕೊಂಡಿದ್ದೆ. ಇನ್ನು ಮುಂದಿನ ಬಸ್ಸು ಹೊರಡಲು ಕಡಿಮೆಯೆಂದರೂ ಎರಡು-ಮೂರು ಗಂಟೆ ಕಾಯಬೇಕಿತ್ತು. ಮುಂದಿನ ಬಸ್ ಹಿಡಿದು ಮಚಲಿಪಟ್ಟಣಂ ಕಾರ್ಯಕ್ರಮಕ್ಕೆ ಹಾಜರಾಗುವುದು ಸಾಧ್ಯವೇ ಇರಲಿಲ್ಲ. ಒಂದೇ ಸಂಜೆಯಲ್ಲಿ ನನ್ನ ಸಂಬಳದ ನಾಲ್ಕುಪಟ್ಟು ಸಂಪಾದನೆಯನ್ನು ಕಳೆದುಕೊಳ್ಳಲು ನಾನು ಸಿದ್ಧನಿರಲಿಲ್ಲ. ಏನು ಮಾಡಬೇಕೆಂದು ತೋಚದೇ ಚಡಪಡಿಸುತ್ತ ನಿಂತೆ. ಬೇರೆ ಯಾವ ದಾರಿಯಿದೆ ಎಂದು ತಲೆಕೆಡಿಸಿಕೊಳ್ಳುತ್ತ ಉದ್ವಿಗ್ನ ಮನಸ್ಕನಾಗಿ ನಿಂತಿದ್ದೆ.

'ಆಕಿವೀಡು! ಆಕಿವೀಡು!' ಎಂದು ದೂರದಿಂದ ಬೊಬ್ಬೆ ಹೊಡಿದವರಂತೆ ಧ್ವನಿ ಕೇಳಿಸಿತು. ಹೊಡೆದದ್ದು ಬೊಬ್ಬೆಯಾಗಿದ್ದರು ನಾನಿದ್ದ ಆ ಭಯಂಕರ ಸ್ಥಿತಿಯಲ್ಲಿ ಅದು ನನಗೆ ಸಂಗೀತದಂತೆ ಕೇಳಿಸಿತು. ತಿರುಗಿ ನೋಡಿದರೆ 'ಆಕಿವೀಡು'ಗೆ ಒಂದು ಮೆಟಡೋರ್ ಹೊರಟಿತ್ತು. ಡ್ರೈವರ್ ನಾನು ನಿಂತಿದ್ದನ್ನು ಗಮನಿಸಿ ನನ್ನ ಹತ್ತಿರ ಗಾಡಿ ನಿಲ್ಲಿಸಿ 'ಆಕಿವೀಡು' ಎಂದಷ್ಟೇ ಹೇಳಿ ನನ್ನ ಪ್ರತಿಕ್ರಿಯೆಗಾಗಿ ಕಾಯ್ದ. ಸರಿ, ಆಕಿವೀಡು ತಲುಪಿ ಅಲ್ಲಿಂದ ಮಚಲಿಪಟ್ಟಣಂ ತಲುಪಿದರಾಯಿತು ಎಂದುಕೊಂಡು 'ಹೌದು' ಎಂದು ತಲೆ ಅಳ್ಳಾಡಿಸಿ ಒಳಗೆ ನುಸುಳಿದೆ. ಒಳಗೆ ಕೂಡಲು ಕೂಡ ಜಾಗವಿಲ್ಲದಷ್ಟು ಜನ. ನನ್ನ ಅದೃಷ್ಟಕ್ಕೆ ಇಷ್ಟಾದರೂ ಸಿಕ್ಕಿತಲ್ಲ ಎನ್ನುತ್ತ ಅರ್ಧಂಬರ್ಧ ಸೀಟಿನಲ್ಲಿ ಹೇಗೋ ಒತ್ತಿ ಕುಳಿತೆ. ಈ ಮೆಟಡೋರ್ ನಿತ್ಯ ಅತ್ತಿಲಿಯಿಂದ ಆಕಿವೀಡಿಗೆ ಅಡ್ಡಾಡುತ್ತಿತ್ತು ಎಂದು ಆಮೇಲೆ ತಿಳಿಯಿತು. ಗಾಡಿ ತುಂಬಿದ್ದರೂ ಇನ್ನು ಸ್ವಲ್ಪ ದುಡ್ಡು ಮಾಡಬೇಕೆಂಬ ಆಸೆಯಿಂದ ಇನ್ನಷ್ಟು ಪ್ರಯಾಣಿಕರನ್ನು ಗಾಡಿ ಹತ್ತಿಸಿಕೊಳ್ಳುವ ಚಿಂತೆಯಲ್ಲಿದ್ದ ಡ್ರೈವರ್. ನನಗೋ ಗಾಡಿ ಯಾವಾಗ ಹೊರಟೀತು ಎಂಬುದೇ ಚಿಂತೆ. ಕೊನೆಗೂ ಒಂದೆರಡು ಪ್ರಯಾಣಿಕರನ್ನು ಹತ್ತಿಸಿಕೊಂಡು ಹೊರಟಿತು ನಮ್ಮ ಗಾಡಿ. ಈಗ ಮನಸ್ಸಿಗೆ ಸ್ವಲ್ಪ ನಿರಾಳವೆನಿಸಿತು.

ಬ್ರೇಕ್ ಹಾಕಿದ ಪುಷ್ಪಕ ವಿಮಾನ

ಗದ್ದಲದಿಂದ ತುಂಬಿದ ಗಾಡಿ ನನ್ನ ಪಾಲಿಗೆ ಆಗ ಪುಷ್ಪಕ ವಿಮಾನದಂತೆ ಕಂಡಿತು. ಸ್ವಲ್ಪ ದೂರ ಹೋಗಿದ್ದನಷ್ಟೇ ಇದ್ದಕ್ಕಿದ್ದಂತೆ ಜೋರಾಗಿ ಬ್ರೇಕ್ ಹಾಕಿದ. ನಾನು ಮುಗ್ಗರಿಸಿ ಡ್ರೈವರ್ ಸೀಟಿನ ಹಿಂಬದಿಗೆ ಅಪ್ಪಳಿಸಿದೆ. ನನ್ನ ಜತೆಗಿದ್ದ ಪ್ರಯಾಣಿಕರು ಕೋಪಗೊಂಡು ಡ್ರೈವರ್‌ಗೆ ಬೈಯತೊಡಗಿದರು. ಮುಂದೆ ರೈಲು ದಾಟಬೇಕಿದೆ ಅದಕ್ಕೆ ಬ್ರೇಕ್ ಹಾಕಿದೆ ಎಂದು ಪ್ರಯಾಣಿಕರಿಗಿಂತ ಜೋರಾಗಿ ಉತ್ತರಿಸಿದ ಡ್ರೈವರ್. ಇನ್ನು ರೈಲು ದಾಟುವುದಕ್ಕೆ ಮೊದಲೇ ಕಾಯುತ್ತ ನಿಂತ ಕಿಲೋಮೀಟರ್ ಉದ್ದದಲ್ಲಿ ಇದ್ದ ವಾಹನಗಳಲ್ಲಿ ನಮ್ಮ ವಾಹನವೇ ಕೊನೆಯದು. ನನಗ್ಯಾಕೋ ಇದು ಸರಿ ಕಾಣಲಿಲ್ಲ. ಮೆಟಡೋರ್ ಕೂಡ ಒಳ್ಳೆಯ ಕಂಡೀಷನ್‌ನಲ್ಲಿ ಇರಲಿಲ್ಲ. ಇಂಥ ಗಾಡಿಯಲ್ಲಿ ನಾನು ಕಾರ್ಯಕ್ರಮಕ್ಕೆ ನಿಗದಿತ ಸಮಯಕ್ಕೆ ತಲುಪಲು ದೇವರಾಣೆ ಸಾಧ್ಯವಿಲ್ಲ ಎಂದುಕೊಂಡು ನನ್ನ ಅದೃಷ್ಟಕ್ಕೆ ಹಿಡಿ ಶಾಪ ಹಾಕುತ್ತ ಕೆಳಗಿಳಿದೆ. ಉಳಿದ ಪ್ರಯಾಣಿಕರು ಕೂಡ ನನ್ನನ್ನೇ ಹಿಂಬಾಲಿಸಿದರು. ಪರಿಸ್ಥಿತಿಯ ಕೈಗೊಂಬೆಯಾದ ನಾನು ಹುಚ್ಚುಹಿಡಿದವನಂತೆ ಏನೇನೋ ಯೋಚಿಸುತ್ತ ನಿಂತಿದ್ದೆ.

ಅಷ್ಟರಲ್ಲಿ ರೇಲ್ವೆ ಗೇಟಿನ ಬಳಿ ಮಿಂಚುತ್ತಿದ್ದ ಕೆಂಪು ಬಣ್ಣದ ಕಾರು ಕಣ್ಣಿಗೆ ಬಿತ್ತು. ನನ್ನ ಹತ್ತಿರವೂ ಒಂದು ಕಾರು ಇದ್ದಿದ್ದರೆ ಇಷ್ಟೆಲ್ಲ ಅನುಭವಿಸಬೇಕಿಲ್ಲ ಎಂದು ಮನಸ್ಸಿನಲ್ಲಿ ಹೇಳಿಕೊಂಡೆ. ಕೂಡಲೆ ಏನೋ ಹೊಳೆದಂತಾಗಿ ಆ ಕಾರ್ ಹತ್ತಿರ ಹೋಗಿ ಡ್ರೈವರ್‌ಗೆ ವಿನಂತಿಸಿಕೊಂಡೆ. ಕಾರ್ ಎಲ್ಲಿಗಾದರೂ ಹೋಗಲಿ, ನಾನು ಮಚಲಿಪಟ್ಟಣಂ ಸಮೀಪದ ಗುಡಿವಾಡವರೆಗೂ ಹೋದರೆ ಸಾಕು, ಅಲ್ಲಿಂದ ಮಚಲಿಪಟ್ಟಣಂಗೆ ಹೇಗೋ ಹೋಗಬಹುದು ಎಂಬುದು ನನ್ನ ವಿಚಾರವಾಗಿತ್ತು. ನನ್ನನ್ನು ತಲೆಯಿಂದ ಬುಡದವರೆಗೆ ನೋಡಿ 'ಇದು ಬಾಡಿಗೆ ಕಾರು' ಎಂದು ಶುಭ್ರವಾದ ಖಾದಿ ಬಟ್ಟೆ ಹಾಕಿಕೊಂಡು, ಮ್ಯಾಗಜಿನ್ ಓದುತ್ತ ಕುಳಿತಿದ್ದ ಪ್ರಯಾಣಿಕರನ್ನು ತೋರಿಸುತ್ತ ಹೇಳಿದ ಡ್ರೈವರ್. ಅಂದುಕೊಂಡ ಯೋಜನೆ ಫಲಿಸದ್ದಕ್ಕೆ ಬೇಸರವಾಯಿತು. ಆ ಪ್ರಯಾಣಿಕರು ಕುತೂಹಲಕ್ಕಾಗಿ 'ಏನು ನಡೆಯುತ್ತಿದೆ ಇಲ್ಲಿ' ಎಂದು ಕೇಳಿದರು. ಡ್ರೈವರ್ ಎಲ್ಲ ವಿವರಿಸಿದ. ಮುಂದಿನ ಸೀಟು ಹೇಗೂ ಖಾಲಿ ಇತ್ತು. ಎಲ್ಲವನ್ನು ತಾಳ್ಮೆಯಿಂದ ಕೇಳಿದ ಆ ಮಹಾನುಭಾವರು ಮುಂದಿನ ಸೀಟಿನಲ್ಲಿ ಕೂಡಬಹುದೆಂದು ಸಮ್ಮತಿಸಿದರು.

ಅಬ್ಬ! ಮನಸ್ಸಿನಲ್ಲಿ ಮಂಡಿಗೆ ತಿಂದಷ್ಟು ಸಂತೋಷ. ಅವರ ಔದಾರ್ಯಕ್ಕೆ ಧನ್ಯವಾದ ಹೇಳುತ್ತ ಕಾರಿನಲ್ಲಿ ಕುಳಿತೆ. ರೇಲ್ವೆ ಗೇಟ್ ಕೂಡ ತೆರೆಯಿತು. ಕಾರು ರಾಕೆಟ್ ವೇಗದಲ್ಲಿ ಹೊರಟಿತು. ಹಿಂದೆ ಸೈಕಲ್ ವೇಗದಲ್ಲಿ ಒದ್ದಾಡುತ್ತ ಬರುತ್ತಿದ್ದ ಮೆಟಡೋರ್ ನೋಡನೋಡುತ್ತಿದ್ದಂತೆಯೇ ಮಾಯವಾಯಿತು. ಕೊನೆಗೂ ಅರ್ಧ ದಾರಿಯಲ್ಲಿ ಮೆಟಡೋರ್ ಧಿಕ್ಕರಿಸಿ ನನ್ನ ಅದೃಷ್ಟವನ್ನು ಪರೀಕ್ಷಿಸಿ, ಯಶಸ್ವಿಯಾಗಿ ಕಾರು ಹತ್ತಿದ್ದು ಸಾರ್ಥಕವೆನಿಸಿತು. ಹಿಂದೆ ಕುಳಿತ ಆ ಮಹಾನುಭಾವ ನಾನು ಹೋಗಬೇಕಿದ್ದ ಸ್ಥಳದ ಕುರಿತಾಗಿ ವಿಚಾರಿಸಿದರು. ತಕ್ಷಣ 'ಸರ್ ಮಚಲಿಪಟ್ಟಣಂಗೆ' ಎಂದೆ. ಕೂಡಲೆ ಮುಂದುವರಿದು 'ಗುಡಿವಾಡಗೆ ಬಿಟ್ಟರೆ ಸಾಕು, ಅಲ್ಲಿಂದ ಮಚಲಿಪಟ್ಟಣಂ ಬಸ್ ಹಿಡಿಯುತ್ತೇನೆ' ಎಂದು ಮಾತು ಸೇರಿಸಿದೆ. ನನ್ನ ಮಾತು ಕೇಳಿ ನಕ್ಕು ತಾವು ಕೂಡ ಅಲ್ಲಿಗೇ ಹೋಗುತ್ತಿರುವುದಾಗಿ ಹೇಳಿದರು. ಆಹಾ! ಈಗಂತು ನನ್ನ ಸಂತೋಷ ಇಮ್ಮಡಿಯಾಗಿತ್ತು. ನನಗೆ ಮಚಲಿಪಟ್ಟಣಂವರೆಗೂ ತಲುಪಿಸಬಹುದಾ ಎಂದು ವಿನಂತಿಸಿದೆ. ಓಹ್ ಅದಕ್ಕೇನಂತೆ! ಎಂದರು ಆ ವ್ಯಕ್ತಿ. ಇಷ್ಟೊತ್ತು ನಡೆದ ಈ ಪ್ರಹಸನದಲ್ಲಿ ಮೊಟ್ಟ ಮೊದಲ ಬಾರಿಗೆ ನಿರಾತಂಕದ, ನಿರಾಳವಾದ ನಿಟ್ಟುಸಿರು ಬಿಟ್ಟೆ. ನಾನು ಪ್ರದರ್ಶಿಸಲಿದ್ದ ಮಿಮಿಕ್ರಿ ಕಾರ್ಯಕ್ರಮದ ಕುರಿತಾಗಿ ಅವರಿಗೆ ಹೇಳಿದೆ. ನಾನು ಈಗಾಗಲೇ ಲೆಕ್ಚರರ್ ಕೆಲಸವನ್ನು ನಿಭಾಯಿಸಿಕೊಂಡು ಕಲಾಪ್ರದರ್ಶನಕ್ಕೂ ನನ್ನನ್ನು ತೊಡಗಿಸಿಕೊಂಡ ವಿಷಯವನ್ನು ಅರಿತ ಅವರು ನನ್ನ ಬಗ್ಗೆ ವಿಶೇಷ ಅಭಿಮಾನಪಟ್ಟಿದ್ದನ್ನು ಅವರ ಮುಖಚರ್ಯೆಯೇ ಹೇಳುತ್ತಿತ್ತು. ನನ್ನ ಬಗ್ಗೆ ಅವರಿಗಿದ್ದ ಗೌರವವನ್ನು ವ್ಯಕ್ತಪಡಿ ಸಲು ಇದೊಂದು ಅವಕಾಶವೇನೋ ಎಂಬಂತೆ, ಕಾರ್ಯಕ್ರಮ ನಡೆಯಲಿದ್ದ ಸ್ಥಳಕ್ಕೆ ನೇರವಾಗಿ ನನ್ನನ್ನು ತಲುಪಿಸುತ್ತೇನೆಂದು ಹೇಳಿದರು. ಆ ಮಹಾನುಭಾವರ ಔದಾರ್ಯಕ್ಕೆ ನಾನು ಸೋತುಹೋದೆ. ಮಾತು ಬಾರದೆ ಮೌನವಾಗಿಯೇ ಅಂತಃಕರಣ ಪೂರ್ವಕವಾಗಿ ಕೃತಜ್ಞತೆ ಸಲ್ಲಿಸಿದೆ.

ಕಾರು ತನ್ನ ವೇಗವನ್ನು ಮತ್ತಷ್ಟು ಹೆಚ್ಚಿಸಿ ಮಚ್ಚಲಿಪಟ್ಟಣದ ನ್ಯಾಶನಲ್ ಕಾಲೇಜಿನ ಆವರಣದಲ್ಲಿ ಬಂದು ನಿಂತಿತು. ಸಹಾಯಕ್ಕಾಗಿ ಅವರಿಗೆ ಮತ್ತೊಮ್ಮೆ ಧನ್ಯವಾದ ಹೇಳಿದೆ. ಸೂರ್ಯ ಮುಳುಗುವುದರೊಳಗಾಗಿ ನನ್ನ ಗುರಿಯನ್ನು ತಲುಪಿದ್ದೆ. ಕೂಡಲೇ ಕಾರ್ಯಕ್ರಮದ ಸಂಘಟಕರನ್ನು ಭೇಟಿಯಾದೆ. ಅವರು ಕೂಡ ಅತ್ಯಂತ ಆದರದಿಂದ ನನ್ನನ್ನು ಸ್ವಾಗತಿಸಿ ಕಾರ್ಯಕ್ರಮದಲ್ಲಿ ನನಗೆ ಕೊಟ್ಟ ಸಮಯ ಮತ್ತು ಕಾರ್ಯಕ್ರಮಕ್ಕೆ ಸಂಬಂಧಿಸಿದ ವಿವರಗಳನ್ನೆಲ್ಲ ಹೇಳಿ, ತಯಾರಿಗಾಗಿ ಇನ್ನು ಅರ್ಧ ಗಂಟೆಯ ಕಾಲಾವಕಾಶ ಇರುವುದಾಗಿ ಹೇಳಿದರು. ತಯಾರಿ ಮಾಡಿಕೊಳ್ಳುವಂಥದ್ದೇನೂ ಇರಲಿಲ್ಲ. ಹೀಗಾಗಿ ನಾನು ಆಗಲೇ ಕಾರ್ಯಕ್ರಮ ನೀಡಲು ಸಿದ್ಧನಾಗಿದ್ದೆ. ಅಂದುಕೊಂಡಂತೆ ಕಾರ್ಯಕ್ರಮ ಯಶಸ್ವಿಯಾಯಿತು. ವಿದ್ಯಾರ್ಥಿಗಳಿಂದ ಹಿಡಿದು ಪ್ರೊಫೆಸರ್‌ವರೆಗೂ ನನ್ನ ಮಿಮಿಕ್ರಿಯಿಂದ ನಗೆಗಡಲಿನಲ್ಲಿ ತೇಲಿಹೋದರು. ಈ ರೀತಿ ಪ್ರೇಕ್ಷಕರಿಂದ ಒಳ್ಳೆಯ ಪ್ರತಿಕ್ರಿಯೆ ಸಿಕ್ಕಿದ್ದು ನನಗೂ ಕೂಡ ತೃಪ್ತನಾಗುವಂತೆ ಮಾಡಿತು. ಕಾರ್ಯಕ್ರಮವೆಲ್ಲ ಮುಗಿದ ಮೇಲೆ ಸಂಘಟಕರು ತಮ್ಮ ಮಾತಿನಂತೆ ಸಂಭಾವನೆ ನೀಡಿದರು.

ಇವರೆಲ್ಲರನ್ನು ಕಳಿಸಿದವರು ಯಾರು?

ಎಲ್ಲ ಮುಗಿಸಿ ಅತ್ತಿಲಿಗೆ ಹೊರಡಲಿರುವ ಬಸ್ ಹಿಡಿದು ಮನೆಗೆ ಬಂದೆ. ಬೆಳಗ್ಗೆಯಿಂದ ಇಲ್ಲಿಯವರೆಗೆ ನಡೆದ ಎಲ್ಲ ಘಟನೆಗಳನ್ನು ಮೆಲುಕು ಹಾಕತೊಡಗಿದೆ. ಮೊದಲು ಮಚಲಿಪಟ್ಟಣಂ ಬಸ್ ತಪ್ಪಿಸಿಕೊಂಡಿದ್ದು, ನಂತರ ಮೆಟಡೋರ್ ಸಿಕ್ಕಿದ್ದು, ಅಲ್ಲಿಂದ ಆ ದಯಾಮಯಿ ಮನುಷ್ಯನ ಕಾರು ಹತ್ತಿದ್ದು, ಕಾರ್ಯಕ್ರಮ ಯಶಸ್ವಿಯಾಗಿದ್ದು ಹೀಗೆ ಎಲ್ಲವೂ ಕಣ್ಣುಕಟ್ಟಿದಂತೆ ಮರುಕಳಿಸಿದವು. ಒಂದು ರೀತಿಯಲ್ಲಿ ಈ ಎಲ್ಲ ಅನಿರೀಕ್ಷಿತ ತಿರುವುಗಳು ಮತ್ತು ಅವಿಸ್ಮರಣೀಯ, ಆಶ್ಚರ್ಯಕರ ಸಹಾಯ ಇವೆಲ್ಲವನ್ನು ಯಾರಿಗಾದರೂ ಹೇಳಿದರೆ ಅವರು ನಂಬಬಹುದೇ? ನಂಬಲಿ, ಬಿಡಲಿ, ನಾನಂತು ಈ ಎಲ್ಲ ಘಟನೆಗಳಿಗೆ ಸಾಕ್ಷಿಯಾಗಿದ್ದಂತು ನಿಜ. ಇವೆಲ್ಲದರ ಮಧ್ಯೆ, ನಾನು ಅಂದುಕೊಂಡಿದ್ದನ್ನು ಕೊನೆಗೂ ಸಾಧಿಸಿದ ಸಾರ್ಥಕ ಭಾವನೆ ನನ್ನನ್ನು ಮತ್ತಷ್ಟು ಹಗುರವಾಗಿಸಿತ್ತು. ಆ ಮೆಟಡೋರ್ ಅಥವಾ ಕಾರು, ನನಗೆ ಸಹಾಯ ಮಾಡಿದ ಮನುಷ್ಯ ಇವರನ್ನೆಲ್ಲ ಕಳುಹಿಸಿದವರು ಯಾರು? ನನಗೆ ಎದುರಾಗಲಿದ್ದ ಈ ಪ್ರತಿಕೂಲ ಸನ್ನಿವೇಶಗಳ ಬಗ್ಗೆ ಮೊದಲೇ ಯಾರಿಗಾದರು ಅರಿವಿತ್ತಾ? ನ್ಯಾಶನಲ್ ಕಾಲೇಜನ್ನು ಸರಿಯಾದ ಸಮಯಕ್ಕೆ ತಲುಪುವಂತೆ ಮಾಡಿದ ಆ ಶಕ್ತಿ ಯಾವುದು? ಕೊಟ್ಟ ಮಾತಿಗೆ ತಪ್ಪದಂತೆ ನಡೆಯುವ ಹಾಗೆ ನನ್ನನ್ನು ಪ್ರೇರೇಪಿಸಿದವರು ಯಾರು?

ಮತ್ಯಾರು ಅವನೇ! ಅಂದು ನದಿಯಲ್ಲಿ ಮುಳುಗುತ್ತಿದ್ದಾಗ ಕಾಪಾಡಿದವನು. ಒಂದಾದ ಮೇಲೊಂದು ಅವಕಾಶ ಕಲ್ಪಿಸಿದವನು. ನನ್ನ ಬಾಳಿನಲ್ಲಿ ಲಕ್ಷ್ಮೀಯಂಥ ಹುಡುಗಿಯನ್ನು ಬಾಳಸಂಗಾತಿಯಾಗಿ ಕಳುಹಿಸಿದವನು. ನನ್ನ ಬಗ್ಗೆ ಸಂಪೂರ್ಣವಾಗಿ ಅರಿತುಕೊಂಡು ಕಾಳಜಿ ಮಾಡುವವನು. ಛಲಬಿಡದೇ ಅಂದುಕೊಂಡಿದ್ದನ್ನು ಸಾಧಿಸಲು ಪ್ರಯತ್ನಿಸುತ್ತಿರುವ ಸಾಧಕರಿಗೆ ಕೊನೆಯ ಹಂತದವರೆಗೂ ತನ್ನ ಕರುಣೆಯನ್ನು ಹರಿಸುವವನು. ಈ ಬ್ರಹ್ಮಾಂಡ ಒಂದು ವೇಳೆ ಒಂದು ಚಕ್ರದಂತೆ ಎಂದು ನಾವು ಭಾವಿಸುವುದಾದರೆ, ನಾವು ಆ ಚಕ್ರದ ಮೇಲಿದ್ದ ಧೂಳಿನ ಕಣ ಅಷ್ಟೆ, ಕೊನೆಗೂ ತನ್ನಿಚ್ಛೆಯಂತೆ ಚಕ್ರ ತಿರುಗಿಸುವ ಭಗವಂತ ನಮ್ಮ ಸ್ಥಾನ ಯಾವುದು ಎಂದು ನಿರ್ಧರಿಸುತ್ತಾನೆ. ಇಂದು ಈ ಸ್ಥಾನಕ್ಕೆ ನನ್ನನ್ನು ತಂದು ನಿಲ್ಲಿಸಲು ನನಗೆ ಆಶೀರ್ವದಿಸಿದ ಸರ್ವಶಕ್ತ. ಇಷ್ಟೆಲ್ಲ ಕರುಣಿಸಿದ ಅವನಿಗೆ ನಾನು ಪ್ರತಿಯಾಗಿ ಕೊಡುವುದಾದರು ಏನು? ಕೈಜೋಡಿಸಿ ಆ ದಯಾಸಾಗರನಿಗೆ ಅವನ ಕರುಣೆಗಾಗಿ, ಅವನ ಆಶೀರ್ವಾದಕ್ಕಾಗಿ, ನಮ್ಮ ಬಗ್ಗೆ ಅವನಿಗಿರುವ ನಿಷ್ಪಕ್ಷಪಾತ ಮಮತೆಗಾಗಿ ಅಂತರಾಳದಿಂದ ಧನ್ಯವಾದಗಳನ್ನು ಸಮರ್ಪಿಸುವುದು. ಇಷ್ಟೇ ನಮ್ಮ ಯೋಗ್ಯತೆ. (ಪ್ರತಿಕ್ರಿಯಿಸಿ : viramapost@gmail.com)

ಮಂತ್ರಿ ಬಂದದ್ದರಿಂದ ದೇವರ ದರ್ಶನವಾಯಿತು!

ಪ್ರತಿ ಸಲ ತಿರುಮಲೆಗೆ ಹೋದಾಗ ಸಮರ್ಪಣಾ ಭಾವದಿಂದ ನಾನು ಆ ವೆಂಕಟೇಶ್ವರನಿಗೆ ವಂದಿಸುತ್ತೇನೆ. ನಮ್ಮ ಅಪ್ಪ-ಅಮ್ಮ ಒಂದು ಮಾತು ಹೇಳಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳುತ್ತೇನೆ. ನಾನು ಬಹಳ ಚಿಕ್ಕವನಿದ್ದಾಗ ಒಮ್ಮೆ ತಿರುಪತಿ ವೆಂಕಟೇಶ್ವರನ ದೇವಸ್ಥಾನಕ್ಕೆ ನನ್ನನ್ನು ಕರೆದುಕೊಂಡು ಹೋಗಿದ್ದರು. ಅಷ್ಟು ಗದ್ದಲದಲ್ಲಿ ನನಗೆ ಸರಿಯಾಗಿ ದರ್ಶನ ಆಗುವುದಿಲ್ಲವೆಂದರಿತ ಅಪ್ಪ ನನ್ನನ್ನು ತಮ್ಮ ಹೆಗಲಿನ ಮೇಲೆ ಕೂರಿಸಿಕೊಂಡು ಆ ದಿವ್ಯ ವಿಗ್ರಹವನ್ನು ಕಣ್ತುಂಬಿಕೊಳ್ಳುವಂತೆ ಮಾಡಿದ್ದರು. ಬಹುಶಃ ದೇವರು ಅಪ್ಪನ ಹೆಗಲಿನ ಮೇಲೆಯೇ ನನ್ನನ್ನು ಹರಸಿದ್ದನೆಂದು ಕಾಣುತ್ತದೆ. ಇಡೀ ಜೀವನದ ತುಂಬ ವೆಂಕಟೇಶ್ವರ ನನ್ನನ್ನು ತನ್ನ ಹೆಗಲ ಮೇಲೆ ಹೊತ್ತುಕೊಂಡು ಮೆರೆಸಿ ಅನುಗ್ರಹಿಸಿದ. ಇದಾದ ಎಷ್ಟೋ ವರ್ಷಗಳ ನಂತರ ನಾನು ಚಿತ್ರೀಕರಣದ ನಿಮಿತ್ತ ತಿರುಪತಿಗೆ ಹೋಗುವ ಸಂದರ್ಭ ಒದಗಿಬಂತು. ಆಗ ನನ್ನಷ್ಟು ಖುಷಿಪಟ್ಟವರೇ ಯಾರು ಇರಲಿಕ್ಕಿಲ್ಲ. ಚಿತ್ರೀಕರಣವನ್ನೆಲ್ಲ ಮುಗಿಸಿ ಬಿಡುವು ಮಾಡಿಕೊಂಡು ತಿರುಮಲೆಗೆ ಹೋಗುವುದೆಂದು ನಿರ್ಧರಿಸಿದೆ. ಅಷ್ಟರಲ್ಲಿ ನಮ್ಮ ತಂಡದಲ್ಲಿದ್ದವರೊಬ್ಬರು 'ನಮ್ಮ ಚಿತ್ರೀಕರಣವೆಲ್ಲ ಮುಗಿಯುವ ಹೊತ್ತಿಗೆ ದೇವಸ್ಥಾನದ ಬಾಗಿಲು ಹಾಕಿರುತ್ತದೆ' ಎಂದು ಹೇಳಿದರು. ನನಗೆ ತುಂಬ ಬೇಸರವಾಯಿತು. ಆದರೆ ಇದರಲ್ಲಿ ಹೊಸತೇನಿದೆ? ನನ್ನ ಜೀವನದಲ್ಲಿ ಈ ರೀತಿಯ ಅದೆಷ್ಟು ಅನಿರೀಕ್ಷಿತಗಳನ್ನು ನೋಡಿದವನು ನಾನು ಎಂದು ನಕ್ಕು ಸುಮ್ಮನಾದೆ. ಬಹುಶಃ ವೆಂಕಟೇಶ್ವರನಿಗೆ ಈಗ ನನ್ನ ಕರೆಸಿಕೊಳ್ಳುವ ಇಚ್ಛೆ ಇಲ್ಲ, ನಾಳೆ ಬೆಳಗ್ಗೆ ಹೋದರಾಯಿತು ಅಂದುಕೊಂಡು ನನಗೆ ನಾನೇ ಸಮಾಧಾನ ಹೇಳಿಕೊಂಡೆ. ಚಿತ್ರೀಕರಣಕ್ಕೆ ಸ್ವಲ್ಪ ಖಿನ್ನ ಮನಸ್ಕನಾಗಿಯೇ ಹೋದರೂ ದೇವರ ದಯೆಯಿಂದ ಚಿತ್ರೀಕರಣ ಸುಸೂತ್ರವಾಗಿ ಸಾಗಿತು. ನಿರ್ದೇಶಕರು ನನ್ನ ಕೆಲಸ ನೋಡಿ ಬಹಳ ಖುಷಿಪಟ್ಟರು. ಸರಿ, ಇನ್ನು ಮುಂಗಡವಾಗಿ ಕಾಯ್ದಿರಿಸಿದ ನನ್ನ ಕೋಣೆಗೆ ಹೋಗಬೇಕು ಎಂದುಕೊಂಡು ತಯಾರಾಗುತ್ತಿದ್ದೆ. ದೂರದಿಂದ ಕಾಣುತ್ತಿದ್ದ ಶೇಷಾದ್ರಿ ಬೆಟ್ಟದ ವಿಹಂಗಮ ನೋಟ ನನ್ನನ್ನು ಸೆಳೆಯುತ್ತಿತ್ತು. ಏನೂ ಪ್ರಯೋಜನವಿಲ್ಲ. ಇನ್ನೇನು ಹೊರಟಿದ್ದೆ, ಯಾರೋ ಬಂದು, 'ಇಂದು ಯಾರೋ ಮಂತ್ರಿಗಳೊಬ್ಬರು ತಿಮ್ಮಪ್ಪನ ದರ್ಶನಕ್ಕೆ ಬರುತ್ತಿದ್ದಾರೆ. ಅದಕ್ಕೆ ಬಾಗಿಲು ಸ್ವಲ್ಪ ತಡವಾಗಿ ಹಾಕುತ್ತಾರಂತೆ' ಎಂದು ಹೇಳಿದರು. ಒಂದು ಕ್ಷಣ ಕೂಡ ತಡಮಾಡದೇ ಅಲ್ಲಿಂದ ಕಾಲ್ಕಿತ್ತೆ. ತಿಮ್ಮಪ್ಪನ ದೇವಸ್ಥಾನದ ಅಂಗಳವನ್ನು ಸಮೀಪಿಸುತ್ತಿದ್ದಂತೆ ನನ್ನ ದೇವರು ಕೊನೆಗೂ ನನ್ನ ತುಡಿತವನ್ನು ಅರ್ಥ ಮಾಡಿಕೊಂಡು ದರ್ಶನ ನೀಡಿದ ಎಂದುಕೊಳ್ಳುತ್ತ ಸಣ್ಣ ನಗೆ ನಕ್ಕು ಆ ಪರಮಾತ್ಮನ ದಿವ್ಯ ದರ್ಶನವನ್ನು ಪಡೆದೆ. ಮೊದಲ ಬಾರಿ ಒಂದು ಅಲೌಕಿಕ ಅನುಭವವಾಯಿತು. (ಪುಟ 195)

ಬೆಳಗ್ಗೆ ಶಿಕ್ಷಕ ರಾತ್ರಿ ಮಿಮಿಕ್ರಿ ಕಲಾವಿದ!

ಬರಬರುತ್ತಾ ಒಂದೇ ಆದಾಯದಿಂದ ಮನೆ ನಡೆಸುವುದು ತುಂಬ ಕಷ್ಟವಾಗತೊಡಗಿತು. ತಿಂಗಳ ಸಂಬಳ ಯಾವುದಕ್ಕೂ ಸಾಕಾಗುತ್ತಿರಲಿಲ್ಲ. ಇನ್ನೊಂದು ಆದಾಯದ ಮೂಲವನ್ನು ಕಂಡುಕೊಳ್ಳಲೇಬೇಕೆಂದು ನಿರ್ಧರಿಸಿದಾಗ ನನಗೆ ಹೊಳೆದಿದ್ದು 'ಮಿಮಿಕ್ರಿ' ಕಲೆ. ಮುಂಚೆ ಹೇಳಿದಂತೆ ಆಗ ಮಿಮಿಕ್ರಿ ಒಂದು ಹೊಸ ಪ್ರದರ್ಶನ ಕಲೆಯಾಗಿ ಬಹಳ ಬೇಡಿಕೆಯಲ್ಲಿತ್ತು. ತೆಲುಗಿನಲ್ಲಿ ಮಿಮಿಕ್ರಿ ಕಲಾವಿದರು ಅಷ್ಟಾಗಿ ಇರಲಿಲ್ಲ. ಇದೇ ಅವಕಾಶವನ್ನು ಬಳಸಿಕೊಂಡ ನಾನು ಮಿಮಿಕ್ರಿ ಪ್ರದರ್ಶನಗಳನ್ನು ನೀಡಲಾರಂಭಿಸಿದೆ. ಒಂದೆರಡು ಕಾರ್ಯಕ್ರಮಗಳಾಗುತ್ತಿದ್ದಂತೆಯೇ ಅವಕಾಶಗಳ ಮಹಾಪೂರವೇ ಹರಿದುಬಂತು. ಶಾಲೆ, ಕಾಲೇಜುಗಳಲ್ಲಿ, ಸಾಂಸ್ಕೃತಿಕ ಸಂಜೆಗಳಲ್ಲಿ ಮದುವೆಯಂಥ ಖಾಸಗಿ ಕಾರ್ಯಕ್ರಮಗಳಲ್ಲಿ, ಸಭೆ ಸಮಾರಂಭಗಳಲ್ಲಿ, ಹೀಗೆ ಹಾಸ್ಯದ ಅವಶ್ಯಕತೆ ಇದ್ದೆಡೆಗೆಲ್ಲ ಕಾರ್ಯಕ್ರಮ ನೀಡಲಾರಂಭಿಸಿದೆ. ನನ್ನ ಪ್ರದರ್ಶನ ದಿನೇದಿನೆ ಒಳ್ಳೆಯ ಪ್ರಚಾರ ಪಡೆಯತೊಡಗಿತು. ಆಯೋಜಕರು ಕೂಡ ನನ್ನ ಕಲೆಗೆ ಮೆಚ್ಚಿ ಒಳ್ಳೆಯ ಸಂಭಾವನೆ ನೀಡುತ್ತಿದ್ದರು. ದಿನಗಳೆದಂತೆ ಮಿಮಿಕ್ರಿ ನನಗೆ ಹೆಸರು ತಂದುಕೊಟ್ಟಿತು. ಯಾವುದೇ ಸಾಂಸ್ಕೃತಿಕ ಕಾರ್ಯಕ್ರಮಗಳ ಪಟ್ಟಿಯಲ್ಲಿ ನನ್ನ ಪ್ರದರ್ಶನಕ್ಕೆ ಮುಂಚೂಣಿಯ ಪ್ರಾಧಾನ್ಯ ಇರುತ್ತಿತ್ತು. ವಿಜಯವಾಡ ಆಕಾಶವಾಣಿ ಕೇಂದ್ರದಲ್ಲಿ ಕೂಡ ನನ್ನ ಕಾರ್ಯಕ್ರಮ ಪ್ರಸಾರವಾಯಿತು. ವಿಶೇಷ ಅತಿಥಿಯಾಗಿ ಆಕಾಶವಾಣಿಯಲ್ಲಿ ನೀಡಿದ ಕಾರ್ಯಕ್ರಮದಿಂದ ಜನಪ್ರಿಯತೆ ಇನ್ನಷ್ಟು ಹೆಚ್ಚಿತು. ಮಿಮಿಕ್ರಿಗಾಗಿ ನನಗೆ ನೂರಾರು ಅವಕಾಶಗಳು ಬರತೊಡಗಿದ್ದರೂ ನನ್ನ ಶಿಕ್ಷಕ ವೃತ್ತಿಯನ್ನೆಂದೂ ನಾನು ಕಡೆಗಣಿಸಿರಲಿಲ್ಲ. ಬೆಳಗ್ಗೆ ಒಬ್ಬ ಶಿಕ್ಷಕನಾಗಿ ವೃತ್ತಿಧರ್ಮವನ್ನು ನಿಭಾಯಿಸಿದರೆ ರಾತ್ರಿ ಒಬ್ಬ ಮಿಮಿಕ್ರಿ ಕಲಾವಿದನಾಗಿ ಜನರನ್ನು ಹೊಟ್ಟೆಹುಣ್ಣಾಗುವಂತೆ ನಗಿಸುತ್ತಿದ್ದೆ. ಏಕಕಾಲಕ್ಕೆ ಅನೇಕ ಕಾರ್ಯ ಮಾಡುವ ಸಾಹಸಕ್ಕೆ ಮತ್ತೆ ಕೈಹಾಕಿದ್ದೆ. (ಪುಟ 114)

ಪದ್ಮಶ್ರೀ ಪ್ರಶಸ್ತಿ ಬಂದಾಗ

ನಾಗಶೇಷುವನ್ನು ಮ್ಯಾನೇಜರ್ ಆಗಿ ನೇಮಕ ಮಾಡಿಕೊಂಡಿದ್ದು ಜೀವನದಲ್ಲಿ ನಾನು ತೆಗೆದುಕೊಂಡ ಅತ್ಯುತ್ತಮ ನಿರ್ಧಾರಗಳಲ್ಲಿ ಒಂದು. ಆತ ಚಿತ್ರೀಕರಣದ ದಿನಾಂಕಗಳನ್ನು ಕ್ರಮಬದ್ಧವಾಗಿ ಹೊಂದಿಸುತ್ತಿದ್ದರಿಂದಲೇ ನನಗೆ ಸಾಕಷ್ಟು ಚಿತ್ರೀಕರಣಗಳನ್ನು ಯಾವುದೇ ಗೊಂದಲವಿಲ್ಲದೆ ಸರಾಗವಾಗಿ ಮಾಡಲು ಸಾಧ್ಯವಾಯಿತು. ಮುಖ್ಯವಾಗಿ ನನ್ನ ಕುಟುಂಬದೊಂದಿಗೆ ಕಾಲಕಳೆಯಲು ಸಾಕಷ್ಟು ಸಮಯ ಸಿಕ್ಕಿತು. ಹೀಗಾಗಿ ಮುಂಬರುವ ಚಿತ್ರಗಳ ದಿನಾಂಕಗಳು ಒಂದು ಕ್ರಮಬದ್ಧ ರೀತಿಯಲ್ಲಿ ಇರುತ್ತಿದ್ದವು. 'ಬ್ರಹ್ಮಪುತ್ರುಡು' ಚಿತ್ರೀಕರಣದ ಸಮಯದಲ್ಲಿ ನಡೆದ ಆ ಘಟನೆಯಿಂದ ನಾನಿನ್ನು ಸಂಪೂರ್ಣವಾಗಿ ಹೊರಬಂದಿದ್ದಿಲ್ಲ. ಒಂದು ಸುಳ್ಳು ಆರೋಪದಿಂದ ರಾಮಾನಾಯ್ಡು ಅಂಥ ದಿಗ್ಗಜರ ಬ್ಯಾನರ್‌ನಿಂದ ನಾನು ಹೊರಗೆ ಬಂದ ಸಂಗತಿ ದೊಡ್ಡ ಆಘಾತವೇ ಆಗಿತ್ತು. ಇದರಿಂದ ಸುರೇಶ್ ನಿರ್ಮಾಣ ಸಂಸ್ಥೆ ಮತ್ತು ನನ್ನ ನಡುವೆ ಒಂದು ಅಂತರ ಸೃಷ್ಟಿಯಾಗಿತ್ತು. ರಾಮಾನಾಯ್ಡು ದೊಡ್ಡ ಮನಸ್ಸಿನ ಮನುಷ್ಯ. ಈ ಬಿಕ್ಕಟ್ಟನ್ನು ಸರಿಪಡಿಸಲೆಂದೇ ವೆಂಕಟೇಶ್ ನಾಯಕ ನಟನಾಗಿ ಅಭಿನಯಿಸಿದ ಚಿತ್ರ 'ಪ್ರೇಮ'ದಲ್ಲಿ ನನಗೆ ರಾಮಾನಾಯ್ಡು ಅವಕಾಶ ನೀಡಿದರು. ಅಲ್ಲಿಂದ ಸುರೇಶ್ ನಿರ್ಮಾಣ ಸಂಸ್ಥೆಯ ಬಹುಪಾಲ ಚಿತ್ರಗಳಲ್ಲಿ ಅಭಿನಯಿಸುವ ನನ್ನ ಚಿತ್ರ ಪಯಣ ಮುಂದುವರಿಯಿತು. ರಾಮಾನಾಯ್ಡು ಅವರ ದೊಡ್ಡತನಕ್ಕೆ ಇದೊಂದು ಸಾಕ್ಷಿ. ರಾಮಾನಾಯ್ಡು ಅವರ ಒಡನಾಟದ ಒಂದು ಆತ್ಮೀಯ ಸಂಗತಿಯನ್ನು ನಿಮ್ಮೊಂದಿಗೆ ಹಂಚಿಕೊಳ್ಳದಿದ್ದರೆ ಈ ಪುಸ್ತಕ ಪೂರ್ಣವಾಗುವುದಿಲ್ಲ.

ನನಗೆ 'ಪದ್ಮಶ್ರೀ' ಪುರಸ್ಕಾರ ಸಿಕ್ಕ ಮೇಲೆ ಇಡಿ ಚಿತ್ರೋದ್ಯಮವೇ ಸಂಭ್ರಮಿಸಿ ಪ್ರಶಂಸೆಗಳ ಸುರಿಮಳೆಯನ್ನೇ ಸುರಿಸಿತು. ರಾಮಾನಾಯ್ಡು ನನಗೆ ಕರೆ ಮಾಡಿ ಅಭಿನಂದಿಸಿದ ಮೊದಲ ವ್ಯಕ್ತಿ. ಪದ್ಮಶ್ರೀಯಂಥ ಶ್ರೇಷ್ಠ ಪ್ರಶಸ್ತಿ ದೊರೆತಿದ್ದರ ಬಗ್ಗೆ ಅವರು ಹರ್ಷ ವ್ಯಕ್ತಪಡಿಸಿದ ರೀತಿಯನ್ನು ನಾನೆಂದು ಮರೆಯಲಾರೆ. ನನ್ನನ್ನು ಶ್ಲಾಘಿಸುವುದಷ್ಟೇ ಅಲ್ಲದೆ ತಮ್ಮ ಮನೆಗೆ ನನಗೆ ಊಟಕ್ಕೆ ಆಮಂತ್ರಣ ನೀಡಿದರು. ನನಗೆ ನಂಬಲಿಕ್ಕಾಗಲಿಲ್ಲ. ಅವರು ನಿಜಕ್ಕೂ ಆಹ್ವಾನಿಸುತ್ತಿದ್ದಾರಾ ಎಂದು ಮತ್ತೊಮ್ಮೆ ಖಚಿತಪಡಿಸಿಕೊಂಡೆ. ನನ್ನ ಮಾತಿಗೆ ನಕ್ಕು 'ನೀನು ನಮ್ಮ ಹೆಮ್ಮೆ ಬ್ರಹ್ಮಾನಂದಂ. ಸಹಕುಟುಂಬವಾಗಿ ಮನೆಗೆ ಬಾ' ಎಂದರು. ಮರುದಿನ ಮಧ್ಯಾಹ್ನ ನಾನು ನನ್ನ ಸಂಸಾರದೊಂದಿಗೆ ರಾಮಾನಾಯ್ಡು ಅವರ ಮನೆಗೆ ಬಂದೆವು. ಮನೆಗೆ ಹೋಗುತ್ತಿದ್ದಂತೆ ಅವರ ಕುಟುಂಬದಿಂದ ಅದ್ದೂರಿ ಸ್ವಾಗತ ಸಿಕ್ಕಿತು. ಸಂಭ್ರಮವನ್ನು ಆಚರಿಸಲು ಮುಂಚಿತವಾಗಿಯೇ ಎಲ್ಲ ಸಿದ್ಧತೆಗಳನ್ನು ಮಾಡಿಕೊಂಡಿದ್ದರು. ಲಕ್ಷ್ಮೀ, ನಾನು ಮತ್ತು ಮಕ್ಕಳು ಊಟದ ಮೇಜಿನ ಮೇಲೆ ಕುಳಿತುಕೊಳ್ಳಲು ಅವರ ಮಕ್ಕಳಾದ ವೆಂಕಟೇಶ್ ಮತ್ತು ಸುರೇಶ್ ಇಬ್ಬರು ಅತ್ಯಂತ ಸೌಜನ್ಯದಿಂದ ನನ್ನನ್ನು ಅಭಿನಂದಿಸುತ್ತ

ಮೇಜಿನವರೆಗೆ ನಮಗೆ ಕರೆದುಕೊಂಡು ಹೋದರು. ಅಂಥ ಶ್ರೀಮಂತ ಕುಟುಂಬ ಮನಸ್ಸು ಮಾಡಿದ್ದರೆ ಊಟ ಬಡಿಸಲು ಸಹಾಯಕರನ್ನು ನೇಮಿಸಿಕೊಳ್ಳುವುದೇನು ದೊಡ್ಡ ವಿಷಯವೇನಲ್ಲ. ಆದರೆ ಅವರು ಸ್ವತಃ ನಮಗೆ ಅತ್ಯಂತ ಪ್ರೀತಿಯಿಂದ ಊಟ ಬಡಿಸಿದರು. ಆ ಕುಟುಂಬದ ಆತಿಥ್ಯ ನೋಡಿ ಕಲಿತುಕೊಳ್ಳುವ ಹಾಗಿತ್ತು. ವೆಂಕಟೇಶ್ ಮತ್ತು ಸುರೇಶ್ ನಿಜಕ್ಕೂ ತುಂಬ ವಿನಯವಂತ ಮಕ್ಕಳು. ನಾವು ಕೂಡ ಅವರ ಕುಟುಂಬದಲ್ಲಿ ಒಬ್ಬರು ಎನ್ನಿಸುವಂತೆ ಮಾಡಿತ್ತು ಅವರ ಪ್ರೀತಿ ಮತ್ತು ಆದರ. (ಪುಟ 135)

ಪುಸ್ತಕ ವಿಮಾನ

» ಸುಬ್ರಾಯ ಮತ್ತೀಹಳ್ಳಿ

ಮಾತು
ಮದ್ದಳೆ
ಲೇ: ಗ.ನಾ.ಭಟ್ಟ
ಪ್ರ: ಮಹಿಮಾ ಪ್ರಕಾಶನ
ಮೈಸೂರು
ಬೆಲೆ ರು.300/-

ತತ್ವದ ಸಲೆ ತರ್ಕದ ಬಲೆ

ಮಾತನ್ನೇ ಸಂವಹನೆಯ ಮಾಧ್ಯಮವನ್ನಾಗಿರಿಸಿ, ಅಪರೂಪದ ಕಲಾಮಾಧ್ಯಮವಾಗಿ ರೂಪುಗೊಂಡಿರುವ ತಾಳಮದ್ದಲೆಯ ಕುರಿತು ಈ ಕೃತಿ ಪ್ರಮುಖ ಎನಿಸುವ ವಿಚಾರಗಳನ್ನು ಮಂಡಿಸಿರುವುದು ಗಮನಾರ್ಹ.

ಮಾನವ ಬದುಕಿನ ಮುಖ್ಯವಾದ ಸಂಪತ್ತೇ ಮಾತು. ಮನುಷ್ಯನ ನಿಜವಾದ ಅಸ್ತಿತ್ವ ರೂಪುಗೊಂಡಿರುವುದೇ ಮಾತಿನಿಂದ. ಮಾತು ಉಸಿರು, ಮಾತು ಅಸ್ತ್ರ. ಮಾತೇ ಅನುಪಮ ಅಸ್ಮಿತೆ. ಮಾನವ ಸಂಬಂಧಗಳ ಸುವರ್ಣ ಸೇತುವೆ. ಮಾತನ್ನೇ ಪ್ರಧಾನ ಸಂವಹನೆಯ ಮಾಧ್ಯಮವನ್ನಾಗಿಸಿ, ಅದನ್ನೇ ಅತ್ಯುನ್ನತ ಕಲಾಮಾಧ್ಯಮವನ್ನಾಗಿಸಿದ ಮಲೆನಾಡು ಮತ್ತು ಕರಾವಳಿಗಳ ತಾಳ ಮದ್ದಳೆ ಎಂಬ ಕಲಾಪ್ರಕಾರ, ಕನ್ನಡ ಭಾಷೆಗೊಂದು ಅನನ್ಯ ಕೊಡುಗೆ. ಉನ್ನತ ಮನಸ್ಸುಗಳು ಒಗ್ಗೂಡಿ, ಅತ್ಯುನ್ನತ ಮೌಲ್ಯಗಳನ್ನು ಅನುಸಂಧಾನಿಸಿ ಕೊಂಡು, ಸಂಸ್ಕೃತಿ ಪರಂಪರೆಯ ಆಳ ಎತ್ತರ ವಿಸ್ತಾರಗಳನ್ನು ಸಮಕಾಲೀನ ಸಂದರ್ಭಕ್ಕೆ ಅನ್ವಯಿಸಿಕೊಳ್ಳುತ್ತ, ಭೂತ ವರ್ತಮಾನ ಮತ್ತು ಭವಿಷ್ಯಗಳ ಅಂಗಳದಲ್ಲಿ ಮಾನವ ಬದುಕಿನ ನಿಜದ ಶೋಧನೆಗಿಳಿದ ಈ ನೆಲದ ಕಲಾವಿದರುಗಳ ಸಾಹಸ ಜಗತ್ತಿನಲ್ಲೇ ಅಪರೂಪ.

ಅಂಥಹದ್ದೊಂದು ವಿಶಿಷ್ಟ ಕಲಾಪ್ರಕಾರದ ಬಗೆಗೆ ಇತ್ತೀಚಿನ ವರ್ಷಗಳಲ್ಲಿ ಸಾಕಷ್ಟು ಕೃತಿಗಳು ಪ್ರಕಟಗೊಳ್ಳುತ್ತಿವೆ. ಡಾ. ಶಿವರಾಮ ಕಾರಂತರಂತಹ ದಿಗ್ಗಜ ಸಾಹಿತಿಗಳ ಗಮನಸೆಳೆದ, ಅಮೆರಿಕ ದೇಶದ ಮಾರ್ಥಾ ಆಸ್ಟಿನ್‌ನಂತಹ ಕಲಾಸಂಶೋಧಕಿಯನ್ನು ಆಕರ್ಷಿಸಿದ ಯಕ್ಷಗಾನ ರಂಗಭೂಮಿ, ಜಾಗತಿಕ ಮನ್ನಣೆ ಪಡೆದುಕೊಳ್ಳುತ್ತಿರುವುದರ ಜೊತೆಗೇ ಹತ್ತು ಹಲವು ವಿವಾದಗಳಿಗೂ ಸಿಲುಕಿರುವುದು ವಿಷಾದನೀಯ. ಬಣ್ಣ ಗಾನ ವಾದನ ನೃತ್ಯ ಅರ್ಥ ಮತ್ತು ಅಭಿನಯಗಳಿಂದ ಸಮೃದ್ಧಗೊಂಡಿರುವ ಯಕ್ಷಗಾನ ಮತ್ತು ಅದಕ್ಕೆ ಸರಿದೊರೆಯಾಗಿ ಬೆಳೆದು ಬಾಳುತ್ತಿರುವ ಆಪ್ತ ರಂಗಭೂಮಿಯ ತಾಳಮದ್ದಳೆ ಎಂಬ ಕಲಾ ಮಾಧ್ಯಮ, ಸುಶಿಕ್ಷಿತರ ಆಗಮನದೊಂದಿಗೆ, ತಾತ್ವಿಕತೆ, ಸಾಂಸ್ಕೃತಿಕತೆ, ವೈಚಾರಿಕತೆ, ಮತ್ತು ಪಾರಂಪರಿಕತೆಗಳನ್ನ ತನ್ನ ಒಡಲೊಳಗೆ ಹೀರುತ್ತ, ಸಮಕಾಲೀನ ಮಾನವ ಬದುಕಿನ ದ್ವಂದ್ವ ಸಂಘರ್ಷಗಳಿಗೂ ಸಮರ್ಥವಾಗಿ ಸ್ಪಂದಿಸುತ್ತಿದೆ.

ಇತ್ತೀಚೆಗೆ ಪ್ರಕಟವಾಗಿರುವ, ತಾಳಮದ್ದಳೆ ಅರ್ಥಧಾರಿ, ಸಂಸ್ಕೃತ ಭಾಷಾತಜ್ಞ, ಗ.ನಾ.ಭಟ್ ಮೈಸೂರುರವರ 'ಮಾತು ಮದ್ದಳೆ' ಕೃತಿ ಗಮನ ಸೆಳೆಯುತ್ತಿದೆ. ನಮ್ಮ ಜನಪದ-ಸಾಂಸ್ಕೃತಿಕ ಪರಂಪರೆಯಲ್ಲಿ ಮಾತಿನ ವೈಭವವನ್ನು ಶ್ರವ್ಯ ರಸದೊಂದಿಗೆ ಜೀವಂತವಾಗಿಟ್ಟಿರುವ ವಿಶಿಷ್ಟ ಕಲಾರೂಪವೆಂದರೆ ತಾಳಮದ್ದಲೆಯೇ. ಇದು ಕೇವಲ ಮನರಂಜನೆಯ ಸಾಧನವಲ್ಲ; ಸಂವಾದ, ತತ್ವಚಿಂತನೆ, ಸಾಹಿತ್ಯ, ಸಂಗೀತ, ಪುರಾಣಜ್ಞಾನ ಮತ್ತು ಮಾನವಸ್ವಭಾವಗಳ ಸಂಯೋಜನೆಯಾದ ಅಪೂರ್ವ ಕಲಾಸಾಧನೆ. ಯಕ್ಷಗಾನದ ದೇಹಕ್ಕೆ ನಾಟ್ಯ-ವೇಷಭೂಷಣಗಳಿದ್ದರೆ, ತಾಳಮದ್ದಲೆಯ ಆತ್ಮವೇ ಮಾತು. ಇಲ್ಲಿ ಕಲಾವಿದನ ಶಕ್ತಿ ಅವನ ವಾಕ್ಚಾತುರ್ಯದಲ್ಲಿ, ಸಾಹಿತ್ಯಪಾಂಡಿತ್ಯದಲ್ಲಿ, ಸಂದರ್ಭ ಗ್ರಹಣದಲ್ಲಿ ಮತ್ತು ತರ್ಕಬದ್ಧ ಅಭಿವ್ಯಕ್ತಿಯಲ್ಲಿ ಅಡಗಿದೆ.

ತಾಳ ಮದ್ದಳೆ, ಕೃತಿ, ಕಲಾತ್ಮಕ ವಿನ್ಯಾಸ, ಪಾತ್ರಪ್ರವೇಶ, ಭಾಗವತಿಕೆಯ ಮಹತ್ವ, ಅರ್ಥ ಧ್ವನಿ, ಭಾಷಾ ವೈಭವ ಮತ್ತು ಸಮಾಜದೊಂದಿಗೆ ಅದರ ಜೀವಂತ ಸಂಬಂಧವನ್ನು ಸಮಗ್ರವಾಗಿ ಪರಿಚಯಿಸುವ ಪ್ರಯತ್ನವಾಗಿದೆ ಮೌಖಿಕ ಪರಂಪರೆಯಾಗಿ ಪೀಳಿಗೆಯಿಂದ ಪೀಳಿಗೆಗೆ ಹರಿದು ಬಂದ ಈ ಕಲೆಯು, ಕೇವಲ ವೇದಿಕೆಯ ಪ್ರದರ್ಶನವಲ್ಲ; ಅದು ಚಿಂತನೆಯ ಸಂಸ್ಕೃತಿ. ಇಲ್ಲಿ ಮಾತು ಕೇವಲ ಉಚ್ಚಾರಣೆಯಲ್ಲ ಅದು ವ್ಯಕ್ತಿತ್ವದ ಪ್ರಕಾಶ, ಜ್ಞಾನದ ಹರಿವು ಮತ್ತು ಶ್ರೋತೃಮನಸ್ಸನ್ನು ಆವರಿಸುವ ಕಲಾತ್ಮಕ ಅನುಭವ ಎಂಬುದನ್ನು ವರ್ತಮಾನದ ತಾಳಮದ್ದಲೆಯ ಪ್ರಯೋಗಗಳನ್ನು ಗಮನದಲ್ಲಿಟ್ಟುಕೊಂಡು, ರಾಮಾಯಣ ಪ್ರಸಂಗಗಳು ಮತ್ತು ಮೂಲ ವಾಲ್ಮೀಕಿ ರಾಮಾಯಣದ ತುಲನಾತ್ಮಕ ಅಭ್ಯಾಸಗೈದ ಗ್ರಂಥವಿದು.

ಯಕ್ಷಗಾನದ ಆದಿಕವಿ ಎಂದೇ ಕರೆಯಬಹುದಾದ ಪಾರ್ಥಿಸುಬ್ಬನ, ಹಲವು ಮಹತ್ವಪೂರ್ಣ ರಾಮಾಯಣಾಧಾರಿತ ಕೃತಿಗಳನ್ನು ತುಲನಾತ್ಮಕವಾಗಿ ವಿಶ್ಲೇಷಣೆಗೈದ ಲೇಖಕರು, ಮೂಲಕ್ಕೂ ಯಕ್ಷಕೃತಿಗೂ ಏರ್ಪಟ್ಟ ದ್ವಂದ್ವಗಳನ್ನೂ ಗಮನಕ್ಕೆ ತರುತ್ತಾರೆ.

ಕೃತಿಕಾರರು ಕನ್ನಡ ಮತ್ತು ಸಂಸ್ಕೃತ ಭಾಷೆಗಳ ಪ್ರಾಚೀನ ಕೃತಿಗಳನ್ನು ತಲಸ್ಪರ್ಶಿ ಅಧ್ಯಯನಗೈದವರು. ಆ ಬಗೆಗೆ ಪ್ರಭುತ್ವಪೂರ್ಣವಾಗಿ ಮಾತನಾಡಬಲ್ಲವರು. ರಾಮಾಯಣ ಮಹಾಕಾವ್ಯವನ್ನಾಧರಿಸಿದ, 'ಶ್ರೀರಾಮ ಪಟ್ಟಾಭಿಷೇಕ'ದಿಂದ ಆರಂಭಿಸಿ 'ಶ್ರೀರಾಮ ನಿರ್ಯಾಣ'ದ ವರೆಗಿನ 15 ವೈವಿಧ್ಯಮಯ ಯಕ್ಷಗಾನ ಪ್ರಸಂಗಗಳ ರಂಗಪ್ರಯೋಗಗಳನ್ನು ಸೂಕ್ಷ್ಮವಾಗಿ ಅವಲೋಕಿಸುತ್ತ, ಅಲ್ಲಿ ಸೃಷ್ಟಿಯಾಗುವ ಪೌರಾಣಿಕ ಆವರಣ, ತಾತ್ವಿಕ ಜಿಜ್ಞಾಸೆ, ಆಧ್ಯಾತ್ಮಿಕ ಅನುಭೂತಿಯನ್ನು, ಗುರುತಿಸುತ್ತ, ಒಟ್ಟೂ ಪ್ರಯೋಗದ ಯಶಸ್ಸು, ಅರ್ಥಧಾರಿಗಳ ಸೋಲು ಗೆಲುವು ಮತ್ತು ಮೂಲಕೃತಿಯಿಂದ ಅದು ಭಿನ್ನವೋ ಅಭಿನ್ನವೋ ಎಂಬುದನ್ನು ಗುರುತಿಸಲು ಪ್ರಯತ್ನಿಸುತ್ತಾರೆ. ಲೇಖಕರ ನುಡಿಯಲ್ಲಿ ತಾಳಮದ್ದಲೆ ಕಲಾರಂಗದ ವಾಸ್ತವ ಸ್ಥಿತಿಯನ್ನು ಕಂಡರಿಸುತ್ತ, ಕಲಾಪ್ರೇಮಿಯಾಗಿ, ಕಲಾವಿದರಾಗಿ, ತಮ್ಮ ಖಚಿತ ಅಭಿಪ್ರಾಯವನ್ನು ಮಂಡಿಸುತ್ತಾರೆ.

ಈ ಪುಸ್ತಕವು ತಾಳಮದ್ದಲೆಯ ಬಗೆಗೆ ಆಸಕ್ತಿ ಹೊಂದಿದ ವಿದ್ಯಾರ್ಥಿಗಳು, ಕಲಾವಿದರು, ಸಂಶೋಧಕರು ಮತ್ತು ಸಾಮಾನ್ಯ ರಸಿಕರಿಗೆ ಒಂದು ಪ್ರವೇಶದ್ವಾರವಾಗುವ ಶಕ್ತಿ ಹೊಂದಿದೆ. ಅದಕ್ಕಿಂತಲೂ ಸದ್ಯದ ಅರ್ಥಧಾರಿಗಳಿಗೆ ಸೂಕ್ತ ಕಿವಿಮಾತಾಗಿದೆ. ರಾಮಾಯಣದ ತಾತ್ವಿಕ ಸೌಂದರ್ಯವನ್ನು ಕವಿಭಾವದಲ್ಲೇ ವರ್ಣಿಸುವುದರ ಜೊತೆಗೆ, ವರ್ತಮಾನದ ತಾಳಮದ್ದಳೆಯ ಅಯೋಮಯ ಸ್ಥಿತಿಯೆಡೆಗೆ ವಿಮರ್ಶಾತ್ಮಕವಾಗಿ ದೃಷ್ಟಿಸುತ್ತಾರೆ. ಕವಿ ವಾಲ್ಮೀಕಿಯ ತಾತ್ವಿಕ ಮಾನವೀಯ ಮತ್ತು ಆಧ್ಯಾತ್ಮಿಕ ಸೂಕ್ಷ್ಮವನ್ನು ಕವಿಮನಸ್ಸಿನಿಂದಲೇ ಅರ್ಥೈಸಿಕೊಂಡು, ನಮ್ಮ ಈ ನೆಲದ ಅಸ್ಮಿತೆಯಾದ ತಾಳಮದ್ದಳೆಯಲ್ಲಿ ಅವುಗಳನ್ನು ಅನ್ವಯಿಸಿಕೊಳ್ಳಬೇಕೆಂಬ ಹಕ್ಕೊತ್ತಾಯವನ್ನು ಮಂಡಿಸುತ್ತಿರುವ ಲೇಖಕ ಗ.ನಾ ಭಟ್ಟರ ಕಳಕಳಿ ಮೆಚ್ಚುವಂತಹದ್ದಾಗಿದೆ. ಮಾತಿನ ಕಲೆಯ ಈ ಅಪೂರ್ವ ಪರಂಪರೆಯನ್ನು ಅರಿಯುವ ಪ್ರಯಾಣದಲ್ಲಿ ಈ ಕೃತಿ ಸಣ್ಣದಾದರೂ ಅರ್ಥಪೂರ್ಣ ಹೆಜ್ಜೆಯಾಗಿದೆ.

ಕಿರು ಚೌಕಟ್ಟಿನ ಹಿರಿಯ ಕಥೆಗಳು

» ರಾಯಭಾರಿ

'ಕಥೆಗಳ ಪಯಣ, ಕಥೆಗಳತ್ತ ಪಯಣ' ಎಂಬ ಟ್ಯಾಗ್‌ಲೈನ್ ಹೊತ್ತ ಈ ಪುಸ್ತಕವು, ಸಣ್ಣಕಥೆಗಳಿಗೊಂದು ಹೊಸ ಚೌಕಟ್ಟನ್ನು ಒದಗಿಸುವ ಪ್ರಯತ್ನ ಮಾಡಿದೆ. ಇದರಲ್ಲಿರುವ ಹೆಚ್ಚಿನ ಕಥೆಗಳು ಎರಡರಿಂದ ಮೂರು ಪುಟದ ಕಥೆಗಳು; ಚುಟುಕಾದ ಕಥೆಗಳು ಎಂದು ಮೇಲ್ನೋಟಕ್ಕೆ ಅನಿಸಿದರೂ, ಓದಿದ ನಂತರ ಬೇರೊಂದೇ ರೀತಿಯಲ್ಲಿ ಕರೆಸಿಕೊಳ್ಳಬಲ್ಲ ಹಿರಿತನ, ತಾಕತ್ತು ಈ ಕಥೆಗಳಿವೆ. ಇಲ್ಲಿರುವ 49 ಕಥೆಗಳು ವಿಭಿನ್ನ, ವಿಶಿಷ್ಟ ಮತ್ತು ಕಥೆಗಾರ, ಹಿರಿಯ ಲೇಖಕ ಕೆ.ಸತ್ಯನಾರಾಯಣ ಅವರು ಕಥೆ ರಚಿಸುವಲ್ಲಿ ನಡೆಸಿರುವ ಹೊಸ ಪ್ರಯೋಗದ ಫಲಿತವಾಗಿ ರೂಪುಗೊಂಡಿರುವಂತಹವು. ಈಗಾಗಲೇ ದೀರ್ಘ ಚೌಕಟ್ಟಿನ ಹಲವು ಕಥೆಗಳನ್ನು ಬರೆದಿರುವ ಈ ಕಥೆಗಾರರು, ಇಂತಹ ಪ್ರಯೋಗಗಳನ್ನು ಮಾಡಿದಾಗ



ಸರಯೂ ದಡದಲ್ಲಿ ಮಾರುತಿ ಭಕ್ತರು
ಲೇ: ಕೆ. ಸತ್ಯನಾರಾಯಣ
ಪ್ರ: ಸಪ್ನಬುಕ್ ಹೌಸ್ ಬೆಂಗಳೂರು
ಬೆಲೆ ರು.170/-

ಹೊರಬಂದ ಬರಹಗಳನ್ನು ಓದಲು ನಿಜಕ್ಕೂ ಕುತೂಹಲ ಎನಿಸುತ್ತದೆ. ಇಲ್ಲಿನ ಕಥೆಗಳು ಓದುಗರನ್ನು ಚಿಂತನೆಗೆ ಹಚ್ಚುವಂತಿದ್ದರೂ, ಕೆಲವು ಕಥೆಗಳು ನಗುವನ್ನೂ ಹುಟ್ಟಿಸುತ್ತವೆ, ಆ ನಗುವಿನ ಹಿಂದೆ ಮನವನ್ನು ಕಾಡುವ ಭಾವವೂ ಮೂಡಿಬಂದೀತು. ಜತೆಗೆ, ನೋವಿನ ಎಳೆಗಳಿರುವ ಕಥೆಗಳು ಓದುಗರ ಭಾವಕೋಶಕ್ಕೆ ಕೈ ಹಾಕುತ್ತವೆ ಎನ್ನಬಹುದು. ಈ ನಗು, ನೋವು, ಚಿಂತನೆ, ಭಾವ ಇವೆಲ್ಲಕ್ಕಿಂತ ಮಿಗಿಲಾಗಿ, ಕಡಿಮೆ ಪುಟಗಳಲ್ಲಿ ಕಥೆಯನ್ನು ಕಟ್ಟಿಕೊಡುವ ವಿಶಿಷ್ಟ ಶೈಲಿಯು ಹೆಚ್ಚು ಗಮನ ಸೆಳೆಯುತ್ತವೆ. ಕೆಲವು ಕಥೆಗಳಲ್ಲಿ ಪ್ರಬಂಧದ ಛಾಯೆ ಕಾಣಿಸಿದರೆ, ಇನ್ನು ಕೆಲವು ಕಥೆಗಳಿಗೆ ವಿಡಂಬನೆಯೇ ಜೀವಾಳ. ಕಥೆ ಕಟ್ಟುವುದರಲ್ಲಿ ಇಂತಹ ಪ್ರಯೋಗಗಳು ಹೆಚ್ಚು ಹೆಚ್ಚು ಆದಾಗ, ಹೊಸದೊಂದೇ ಸಾಹಿತ್ಯ ಪ್ರಕಾರವು ನಮ್ಮಲ್ಲಿ ರೂಪುಗೊಂಡೀತು! ಇಪ್ಪತ್ತನೆಯ ಶತಮಾನದಲ್ಲಿ ನವ್ಯ ಸಾಹಿತ್ಯ ಬೆಳೆದದ್ದು ಹಾಗೆಯೇ ಅಲ್ಲವೆ? ಕಥೆಗಳನ್ನು ಓದಲು ಹಾತೊರೆಯುವ ಓದುಗರು ಅಗತ್ಯವಾಗಿ ಓದಬಹುದಾದ ಕಥಾಸಂಕಲನವಿದು.

» ಶಶಿ

ಮಾಗಿದ ಮನಸ್ಸು ಬರೆದ ಕವಿತೆಗಳು

ಮೊಗಸಾಲೆಯವರ ಈ ಹೊಸ ಕವನ ಸಂಕಲನದಲ್ಲಿ, ಕವಿ ಬರೆದಿರುವ 'ನಾನು ಮತ್ತು ನನ್ನ ಕಾವ್ಯ' ಎಂಬ ಮಹತ್ವಪೂರ್ಣ ಲೇಖನವು, ಲೇಖಕನ ಅರಿಕೆಯ ರೂಪದಲ್ಲಿ ಅಡಕಗೊಂಡಿದ್ದು, ಕಾವ್ಯಾಭ್ಯಾಸಿಗಳೆಲ್ಲರೂ ಓದುವಂತಿದೆ. ಹೇಗೆ ಯುವಕನೊಬ್ಬನು ಸಾಹಿತ್ಯಕೃಷಿಯಲ್ಲಿ ತೊಡಗಿ, ಕವಿಯಾಗುತ್ತಾ ವಿಕಸನಹೊಂದುತ್ತಾನೆ ಎಂಬುದರ ಒಳನೋಟಗಳು ಈ ಬರಹದಲ್ಲಿವೆ. 'ಕವಿತೆ ಬರೆಯುವುದು ಬಹಳ ಸುಲಭ ಎಂಬಂತಿರುವ ಈ ದಿನಗಳಲ್ಲಿ, ಕವಿಗಳ ಸಂಖ್ಯೆ ಹೆಚ್ಚುತ್ತಿರುವ ಈ ದಿನಮಾನದಲ್ಲಿ ನಾನು ಕವಿ ಹೌದೋ ಅಲ್ಲವೋ ಎಂಬ ಸಂಶಯ ನನ್ನಲ್ಲೂ ಒಮ್ಮೊಮ್ಮೆ ಹುಟ್ಟುವುದುಂಟು. ಸುಮಾರು ಅರವತ್ತು ವರುಷಗಳಿಂದ ಕಾವ್ಯ ಕೃಷಿ ಮಾಡುತ್ತಾ ಬಂದಿರುವ ನನಗೆ ಕವಿತೆ ಎನ್ನುವುದು ಪೂರ್ತಿ ಅರ್ಥ ಆದಂತಿಲ್ಲ. ..' ಹಿರಿಯ ಕವಿ ಹೇಳುವ ಈ ಮಾತುಗಳು ಇಂದಿನ ತಲೆಮಾ ರಿನ ಕವಿಗಳಿಗೆ ಒಂದು ಪಾಠದಂತಿದೆ. ಕವಿಯು ಮುಂದುವರಿದು, ಕೊನೆಯಲ್ಲಿ, 'ಈಗ ನಾನು ಕಾವ್ಯದ ಹೊಸ ಹೊಸ ಆಯಾಮ ಮತ್ತು ಅವಸ್ಥಾಂತರಗಳಲ್ಲಿ ಮುಳುಗಿ ಎದ್ದು ಹೊರಬಂದು ನಿಂತಿದ್ದೇನೆ. ಹಾಗಾಗಿ ಇಲ್ಲಿನ ಕವಿತೆಗಳು ಕಳೆದ ಶತಮಾನದ ಕೊನೆಯ ಮತ್ತು ಈ ಶತಮಾನದಲ್ಲಿ ನಮ್ಮ ಕಾವ್ಯ ಪ್ರಕಾರವು



ಹೇ ರಾಮ್
ಲೇ: ಡಾ. ನಾ. ಮೊಗಸಾಲೆ
ಪ್ರ: ಸಾಹಿತ್ಯ ಪ್ರಕಾಶನ ಹುಬ್ಬಳ್ಳಿ
9448110034
ಬೆಲೆ ರು.180/-

ಹಾದುಬಂದ ತಿರುವುಗಳಲ್ಲಿ ಒಂದು ಮಿತಿಯಲ್ಲಿ 'ಸ್ವರೂಪ' ಪಡೆದಿರಬಹುದು ಎಂದು ನಂಬಿದ್ದೇನೆ. ಬಹುಶಃ ಇದು ಇಂದಿನ ನಮ್ಮ ಕಾವ್ಯ ಧರ್ಮದ ಆಶಯವೇ ಆಗಿರಬೇಕು ಎಂದು ನೀವೂ ಒಪ್ಪಿದರೆ ನನ್ನ ಕಾವ್ಯಕ್ರಿಯೆಗೆ ಸಾರ್ಥಕ್ಯ ಒದಗಿಬಂದ ಹಾಗೆ ಆಗುತ್ತದೆ' ಎಂದು ಬಿನ್ನಯಿಸಿಕೊಂಡಿದ್ದಾರೆ. ಕಳೆದ ಆರು ದಶಕಗಳಿಂದ ಕವಿತೆ ಮತ್ತು ಇತರ ಪ್ರಕಾರದ ಸಾಹಿತ್ಯವನ್ನು ರಚಿಸುತ್ತಾ ಬಂದಿರುವ ಹಿರಿಯ ಸಾಹಿತಿಯ ವಿನಯವನ್ನೂ ಇಲ್ಲಿ ಕಾಣಬಹುದು.

ನಾ.ಮೊಗಸಾಲೆಯವರ ಹೊಸ ಕವನಗಳು ಅಡಕಗೊಂಡಿರುವ ಈ ಕವನ ಸಂಕಲನದ ಹೆಸರು 'ಹೇ.. ರಾಮ್'!' ಸಹ ಧ್ವನಿಪೂರ್ಣ. ಇಲ್ಲಿ ಗಾಂಧೀಜಿಯವರ ಪ್ರಸ್ತಾಪವಿರುವ ಕೆಲವು ಕವನಗಳೂ ಇವೆ. ಒಟ್ಟು 60ಕ್ಕೂ ಹೆಚ್ಚು ಅರ್ಥಪೂರ್ಣ ಕವನಗಳಿರುವ, ಸುಬ್ರಾಯಚೊಕ್ಕಾಡಿಯವರ ಪ್ರೀತಿಯ ಶುಭಾಶಯ ಹೊಂದಿರುವ, ಈ ಸಂಕಲನವನ್ನು, ಹಿರಿಯ ಅನುಭವಿ ಕವಿಯೊಬ್ಬರ, ಮಾಗಿದ ಮನಸ್ಸಿನ ಧ್ವನಿಗಳು ಎಂದು ಓದಿಕೊಳ್ಳಬಹುದು; ಇದೊಂದು ಕುತೂಹಲಹುಟ್ಟಿಸುವ ಕವನ ಸಂಕಲನ.

» ಪ್ರೊ. ಜಿ. ಎನ್. ಉಪಾಧ್ಯ. ಮುಂಬೈ

ದಾಸ ಸಾಹಿತ್ಯ ಒಂದು ಮತದ್ದಲ್ಲ

'ಹರಿದಾಸ ಸಾಹಿತ್ಯ' ಇದು ಖ್ಯಾತ ಸಂಶೋಧಕ, ಲೇಖಕ ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ ಅವರ ಮಹತ್ವದ ಅಧ್ಯಯನಪೂರ್ಣ ಕೃತಿ. ಹರಿದಾಸ ಸಾಹಿತ್ಯದ ಚಾರಿತ್ರಿಕ ಅವಲೋಕನ, ವಿಶ್ಲೇಷಣೆ ಈ ಕೃತಿಯ ಹೂರಣ. ಕನ್ನಡ ಅನುಭಾವ ಸಾಹಿತ್ಯ ಹಾಗೂ ದಾಸಸಾಹಿತ್ಯದ ಬಹು ನೆಲೆಗಳ ಜಿಜ್ಞಾಸೆ ಈ ಕೃತಿಯಲ್ಲಿ ಒಡೆದು ತೋರುತ್ತದೆ. ಕನ್ನಡ ದಾಸ ಸಾಹಿತ್ಯದ ಸಂಶೋಧಕರಲ್ಲಿ ಮೊದಲ ಸಾಲಿನಲ್ಲಿ ಬರುವ ಹೆಸರು ಡಾ.ಕೃಷ್ಣ ಕೊಲ್ಹಾರ ಕುಲಕರ್ಣಿ ಅವರದು. ಹರಿದಾಸರು ಕೇವಲ ಕನ್ನಡ ಕಷ್ಟೇ ಸೀಮಿತರಾದವರಲ್ಲ. ಅವರು ನಾನಾ ಭಾಷೆಗಳಲ್ಲಿ ವ್ಯವಹರಿಸಿದ್ದರು. ಡಾ. ಕುಲಕರ್ಣಿ ಅವರದು ಬಹುಭಾಷಿಕ ಸಂವೇದನೆ. ಹೀಗಾಗಿ ದಾಸ ಸಾಹಿತ್ಯವನ್ನು ಅದರ ಪ್ರಸ್ತುತತೆಯನ್ನು ಹೊಸ ಹೊಸ ಆಯಾಮಗಳಿಂದ, ವಿಭಿನ್ನ ನೆಲೆಗಳಲ್ಲಿ ನೋಡಿ ವಿಶ್ಲೇಷಿಸಿರುವುದು ಈ ಕೃತಿಯ ಹೆಚ್ಚುಗಾರಿಕೆ.

ಜನಸಾಮಾನ್ಯರ ಮನೋವಿಕಾಸಕ್ಕೆ ದಾಸ ಸಾಹಿತ್ಯ ಶ್ರಮಿಸಿದೆ. ಅದು ಜನರನ್ನು ಸುಸಂಸ್ಕೃತರನ್ನಾಗಿ ಮಾಡುದೆ. ದಾಸರದು ಜನತಾ



ಹರಿದಾಸ ಸಾಹಿತ್ಯ
ಲೇ: ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ
ಪ್ರ: ವಿಜಯ ಪ್ರಕಾಶನ ವಿಜಯಪುರ
9036163026
ಬೆಲೆ ರು.200/-

ಶಿಕ್ಷಣ ಪ್ರಕಾರ. ದೇವರ ಸಾನ್ನಿಧ್ಯವನ್ನು ಪಡೆಯಲು ಜನಸಾಮಾನ್ಯರಿಗಿದ್ದ ಎಲ್ಲ ತೊಡಕುಗಳನ್ನು ನಿವಾರಣೆ ಮಾಡಿದ್ದು ದಾಸ ಸಾಹಿತ್ಯದ ಬಹು ಮುಖ್ಯ ಲಕ್ಷಣ.ಕಳೆದ ಐದು ಶತಮಾನಗಳಿಂದ ಇಂದಿನವರೆಗೂ ನಮ್ಮ ನಾಡಿನ ಜನಜೀವನವನ್ನು ಉತ್ತಮಗೊಳಿಸಲು ದಾಸ ಸಾಹಿತ್ಯವು ಮಹತ್ವದ ಸೇವೆಯನ್ನು ಸಲ್ಲಿಸುತ್ತಿದೆ.

ದಾಸ ಸಾಹಿತ್ಯವು ಜನರ ಮಧ್ಯ, ಜನರಿಂದ, ಜನರ ಮುಂದೆಯೇ ಹುಟ್ಟಿದ ಸಾಹಿತ್ಯ. ಮನೆ ಮನೆ, ಓಣಿ ಓಣಿಗಳಲ್ಲಿ ತಿರುಗಾಡುತ್ತ, ಹಾಡುತ್ತ, ಕುಣಿಯುತ್ತ ಸಾಗುವಾಗ ಕಂಡ ಲೋಕಾನುಭವಗಳು. ಭಾವ ತನ್ಮಯತೆಯಲ್ಲಿ ಮೂಡಿ ಬಂದ ಈ ಕೃತಿಗಳು ಕವಿತೆಯ ಎಲ್ಲ ಕಾವ್ಯಾಂಶಗಳಿಂದ ತುಂಬಿ ನಿಂತುವು. ಸಾಹಿತ್ಯ ಮತ್ತು ಸಂಗೀತದ ಸಾಮರಸ್ಯ ಪ್ರತೀಕವಾದ ಈ ರಚನೆಗಳು ಶುದ್ಧ ಭಾವಗೀತೆಗಳಾದುವು, ಜೀವನದ ರಸ ಪುಷ್ಟಿಗೆ ಈ ಕೀರ್ತನೆಗಳು ಬಹಳ ಸಹಾಯವನ್ನು ಮಾಡಿವೆ ಎಂಬುದನ್ನು ಇಲ್ಲಿ ವಿವರಿಸಿದ್ದಾರೆ.

ದಾಸ ಸಾಹಿತ್ಯವನ್ನು ಒಂದು ಮತಕ್ಕೆ ಅಂಟಿಸಿ, ಮತೀಯ ಸಾಹಿತ್ಯ ಎಂದು ಅಲ್ಲಲ್ಲಿ ಹೇಳಲಾಗುತ್ತದೆ. ದಾಸಕೂಟದ ನೋಟ ವಿಶಾಲವಾದುದು. ವ್ಯಾಸರಾಯರು, ಕನಕದಾಸರ ಮೇಲೆ ಪ್ರೀತಿ ತೋರಿದ್ದನ್ನು ಎಲ್ಲರೂ ಬಲ್ಲರು.

ಹಂಪಿಯಲ್ಲಿದ್ದ ರಾಮಾವಧೂತರಿಂದ ಮುಸ್ಲಿಮ ಧರ್ಮದ, ಪಿಂಜಾರ ಶೇಖ ಬಡೇಸಾಬ (1882-1940)ರು ರಾಮದಾಸರಾದರು; ಶ್ರೀರಾಮ ಎಂಬ ಅಂಕಿತದಿಂದ 770 ಕೀರ್ತನೆಗಳನ್ನು ರಚಿಸಿದ್ದಾರೆ. ಅವುಗಳೆಲ್ಲವೂ ಪ್ರಕಟವಾಗಿವೆ. ಅವರು ತಮ್ಮದೊಂದು ಕೀರ್ತನೆಯಲ್ಲಿ, 'ಕುಲವಂತನೇ ನೀನು ಎಲೋ ಪರಮಾನಂದ, ಕುಲಹೀನನೇ ನಾನು ಪೇಳೆಲವೋ ಸ್ವಾಮಿ' ಎಂದು ಭಗವಂತನನ್ನೇ ಕೇಳಿದ್ದಾರೆ. ರಾಯಚೂರು ಹತ್ತಿರದ ಚಂದರಕಿಯ ಬೇಡದೊರೆಗಳು ಗೋಪಾಲದಾಸರ ಪ್ರಭಾವದಿಂದ ಭಾಗವತರಾದರು. ಕೋಸಗಿಯ ಗುರುಜಗನ್ನಾಥದಾಸರ ಪ್ರಭಾವದಿಂದ ಹಲವಾರು ನೇಕಾರರು ಹರಿದಾಸರಾದರು. ಅಸ್ಕಿಹಾಳ ಗೋವಿಂದದಾಸರಿಂದ ಅನೇಕ ಕ್ಷೌರಿಕರು ಹರಿದಾಸರಾದರು. ಮಾನವೀಯ ಶಾಮಸುಂದರ ವಿಠಲದಾಸರು ತಳಸಮುದಾಯದ ಮೂರ್ತೆಪ್ಪನನ್ನು ತಮ್ಮ ಆಪ್ತ ವರ್ಗಕ್ಕೆ ಸೇರಿಸಿಕೊಂಡರು; ಹರಿದಾಸನನ್ನಾಗಿ ಮಾಡಿದರು. ಚಂಡರಕಿ ರಾಘವೇಂದ್ರದಾಸರ ಪ್ರಭಾವದಿಂದ ಹೂಗಾರನೊಬ್ಬ ಭೀಮದಾಸರೆನಿಸಿ ಅಥಣಿಯಲ್ಲಿ ಅಭಿನವ ಮಂತ್ರಾಲಯವನ್ನೇ ನಿರ್ಮಿಸಿದರು. ಹಲವಾರು ಕೃತಿಗಳನ್ನು ರಚನೆ ಮಾಡಿದರು. ಇವು ಕೆಲವು ಉದಾಹರಣೆಗಳು ಅಷ್ಟೇ. ಹೀಗೆ ದಾಸ ಸಾಹಿತ್ಯದ ಸಾಧನೆಯನ್ನು ಡಾ. ಕುಲಕರ್ಣಿ ಅವರು ಯಾವುದೇ ವಿಸ್ತಾರವಾಗಿ ಚಿತ್ರಿಸಿದ್ದಾರೆ.

ಸಾಹಿತ್ಯದ ಬಹು ಮುಖ್ಯ ಉದ್ದೇಶ ಅದು ಜನರ ಮನಸ್ಸನ್ನು ಮುಟ್ಟಬೇಕು, ತಟ್ಟಬೇಕುದಾಸ. ಸಾಹಿತ್ಯ ಪ್ರತಿಯೊಬ್ಬರ ಮನ ಮುಟ್ಟುವಲ್ಲಿ ಯಶಸ್ವಿಯಾಗಿದೆ ಎಂಬ ಸತ್ಯ ಈ ಕೃತಿಯಲ್ಲಿ ಅಡಗಿದೆ. ಕನ್ನಡ ದಾಸ ಸಾಹಿತ್ಯವನ್ನು ಹೊಸದಾಗಿ ನೋಡುವ ಪ್ರಯತ್ನ ಈ ಕೃತಿ. ದಾಸಸಾಹಿತ್ಯವನ್ನು ಇತಿಹಾಸದ ದಿನಗಳ ಹಿನ್ನೆಲೆಯಲ್ಲಿ ಹಾಗೂ ಸಮಾಜಮುಖಿ ದೃಷ್ಟಿಕೋನದಿಂದ ಪರಿವೀಕ್ಷಿಸುವ ಗ್ರಂಥಗಳು ಹೆಚ್ಚು ಮೌಲಿಕವಾಗುತ್ತವೆ. ಪರಿಚಯಾತ್ಮಕ ಗ್ರಂಥಗಳಿಗಿಂತಲೂ ವಿಭಿನ್ನವಾಗಿ ಓದುಗರನ್ನು ಚಿಂತನೆಗೆ ಹಚ್ಚುವ, ಹೊಸ ಹೊಸ ಸಾಧ್ಯತೆಗಳನ್ನು ಆವಿಷ್ಕಾರಗೊಳಿಸುವ ರೀತಿಯ ಅಧ್ಯಯನ ಹೆಚ್ಚು ಸ್ವಾಗತಾರ್ಹವಾಗುತ್ತವೆ. ಈ ದೃಷ್ಟಿಯಿಂದ ಪ್ರಸ್ತುತ ಕೃತಿ ಒಂದು ಉತ್ತಮ ಕೊಡುಗೆಯಾಗಿದೆ.

» ಡಾ.ಕರವೀರಪ್ರಭು ಕ್ಯಾಲಕೊಂಡ

ವೈದ್ಯಕೀಯ ಶಿಕ್ಷಣಕ್ಕೆ ಆಕರ ಗ್ರಂಥ

ಅನುಭವೀ ವೈದ್ಯರೊಬ್ಬರು ತಮ್ಮೆಲ್ಲಾ ಅನುಭವವನ್ನು ಧಾರೆ ಎರೆದು ರಚಿಸಿರುವ ಈ ಗ್ರಂಥ ಸಂಪುಟವು ವೈದ್ಯಕೀಯ ವಿದ್ಯಾರ್ಥಿಗಳಿಗೆ ಉತ್ತಮ ಆಕರಗ್ರಂಥವಾಗಿ ರೂಪುಗೊಂಡಿರುವುದು ವಿಶೇಷ. ಇದು ಡಾ.ಎಸ್.ಪಿ.ಯೋಗಣ್ಣನವರ 50 ನೇ ಕೃತಿ.

'ಆರೋಗ್ಯವಿಶ್ವಕೋಶ' ಮೂರು ಸಂಪುಟಗಳಲ್ಲಿ ರಚಿತವಾಗಿದ್ದು, ಸುಮಾರು 2200 ಪುಟಗಳನ್ನು ಒಳಗೊಂಡಿದೆ. ಇವು ಜನಸಾಮಾನ್ಯ ರಿಗೆ ಮತ್ತು ವೈದ್ಯರಿಗೆ ಉಪಯುಕ್ತ ಕೃತಿಗಳಾಗಿವೆ. ವೈದ್ಯರಿಗೆ ಸಮಗ್ರ ಆರೋಗ್ಯ ದರ್ಶನದ 'ರಿಫ್ರೆಶರ್ ಕೋರ್ಸ್ 'ಆದ ಅನುಭವ ನೀಡುತ್ತದೆಂದರೆ ತಪ್ಪಾಗಲಿಕ್ಕಿಲ್ಲ.

ವೈದ್ಯಕೀಯ ವಿಜ್ಞಾನವನ್ನು ಓದಿ ಅರಗಿಸಿಕೊಂಡು ಜನಸಾಮಾನ್ಯರಿಗೆ ಅರ್ಥವಾಗುವಂತೆ ಬರೆಯುವುದು ಒಂದು ಕಲೆ. ಅಂತಹ ಕಲೆ ಡಾ.ಯೋಗಣ್ಣನವರಿಗೆ ಕರಗತ'ವಾಗಿದೆ. ವೈದ್ಯಕೀಯ ಶಾಸ್ತ್ರದ ಎಲ್ಲ ವಿಷಯಗಳ 'ಸ್ಟ್ಯಾಂಡರ್ಡ್ ಟೆಕ್ಸ್ಟ್ ಬುಕ್' ಅಧ್ಯಯನ ಮಾಡಿ ವಿಷಯಗಳನ್ನು ಕ್ರಮಬದ್ಧವಾಗಿ ಹೊಂದಿಸಿ ಓದುಗರಿಗೆ ನೀಡುವಲ್ಲಿ ಯಶಸ್ವಿಯಾಗಿದ್ದಾರೆ. ಮೂಲ ಆಂಗ್ಲ ತಾಂತ್ರಿಕ ವೈದ್ಯ ಪದಗಳಿಗೆ ಅಪಚಾರವಾಗದಂತೆ, ಅವುಗಳ ನೈಜ ಅರ್ಥಗಳು ತಿರುಚದಂತೆ ಹಲವು ಕನ್ನಡ ಹೊಸ ಪದಗಳನ್ನು ಸೃಷ್ಟಿಸಿದ್ದಾರೆ. ಗ್ರಂಥಗಳ ಪ್ರಾರಂಭದಲ್ಲಿ ನೀಡಿರುವ ಪರಿವಿಡಿ

ಆರೋಗ್ಯ
ವಿಶ್ವಕೋಶ
ಲೇ: ಡಾ. ಎಸ್
.ಪಿ.ಯೋಗಣ್ಣ
ಮೈಸೂರು

ಉಪಯುಕ್ತವಾಗಿದೆ. ಈ ಮೂರು ಸಂಪುಟಗಳಲ್ಲಿ ವೈದ್ಯಕೀಯ ವಿಜ್ಞಾನದ ಎಲ್ಲಾ ವಿಷಯಗಳನ್ನು ಸಂಪುಟಗಳಲ್ಲಿ ಅಳವಡಿಸಿ ಸಂಕ್ಷಿಪ್ತವಾಗಿ ಪ್ರತಿಯೊಂದು ವಿಷಯವನ್ನು ವಿವರಿಸಿರುವುದು ಮನೋಜ್ಞವಾಗಿದೆ. 'ಆರೋಗ್ಯ ವಿಶ್ವಕೋಶ'ದ ಮೂರು ಸಂಪುಟಗಳಲ್ಲಿ, ಒಟ್ಟು 38 ಮುಖ್ಯ ಶಿರ್ಷಿಕೆಗಳ ಅಡಿಯಲ್ಲಿ ಸುಮಾರು 2322 ಉಪಶೀರ್ಷಿಕೆಲ್ಲಿ ಸಂಕ್ಷಿಪ್ತವಾಗಿ, ಸರಳ ಕನ್ನಡದಲ್ಲಿ ವಿವರಿಸಿದ್ದಾರೆ.

ಯಾವುದೇ ಅಂಗಾಂಗದಿಂದ ಬರುವ ಕಾಯಿಲೆ ಬಗ್ಗೆ ತಿಳಿಸುವ ಮೊದಲು ಆ ಅಂಗದ ಅಂಗರಚನಾಶಾಸ್ತ್ರ, ಶರೀರ ಕ್ರಿಯಾ ಶಾಸ್ತ್ರ ರೋಗಶಾಸ್ತ್ರ, ಸೂಕ್ಷ್ಮ ಜೀವಿಶಾಸ್ತ್ರಗಳ ಬಗ್ಗೆ ಸ್ಪಷ್ಟ ವಿವರಣೆ ನೀಡಿ, ನಂತರ ಔಷಧಶಾಸ್ತ್ರದ ಕುರಿತು ಹೇಳುತ್ತಾರೆ. ಇಷ್ಟಕ್ಕೆ ಬಿಟ್ಟರೆ ಅಪೂರ್ಣವಾಗುತ್ತದೆಂದು, ಆರೋಗ್ಯಕರ ಜೀವನಶೈಲಿಯ ಬಗ್ಗೆ ಮನಮುಟ್ಟುವಂತೆ ತಿಳಿಸುತ್ತಾರೆ. ಯಾವ ರೋಗದ ಬಗ್ಗೆಯೂ ಭಯ ಹುಟ್ಟುವಂತೆ ಮಾಡದೇ, ಅನುಸರಿಸಬೇಕಾದ ಎಚ್ಚರಿಕೆ ಕ್ರಮಗಳ ಬಗ್ಗೆ ಹಸಿಗೋಡೆಯಲ್ಲಿ ಹಳ್ಳಿಟ್ಟಂತೆ ಹೇಳಿ, ಓದುಗರಲ್ಲಿ ಜಾಗೃತಿ ಮೂಡಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಮುಂಬರುವ ದಿನಗಳಲ್ಲಿ ಕನ್ನಡದಲ್ಲಿ ವೈದ್ಯಕೀಯ ಶಿಕ್ಷಣ ಪ್ರಾರಂಭಗೊಂಡರೆ, ಈ ಆರೋಗ್ಯ ವಿಶ್ವಕೋಶ ಅತ್ಯುತ್ತಮ 'ರೆಫರಲ್ ಗ್ರಂಥ'ವಾಗುವುದರಲ್ಲಿ ಸಂಶಯವಿಲ್ಲ.

ವಿಶ್ವವಾಣಿ ಅಂಕಿತ ಟಾಪ್ ಟೆನ್

1



ನಾನು ನಿಮ್ಮ ಬ್ರಹ್ಮಾನಂದಂ
(1000ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿ ದಾಖಲೆ ನಿರ್ಮಿಸಿದ, ಸಾಮಾನ್ಯ ಶಿಕ್ಷಕನೊಬ್ಬ ಅಸಾಮಾನ್ಯ ನಟನಾದ ಕಥೆ.)
ಲೇ: ಬ್ರಹ್ಮಾನಂದಂ
ಕನ್ನಡಕ್ಕೆ: ವಿಶ್ವೇಶ್ವರ ಭಟ್
ಪ್ರ: ವಿಶ್ವವಾಣಿ ಪುಸ್ತಕ, ಬೆಂಗಳೂರು
ಬೆಲೆ: ರೂ 375/-

2



ಕಾಡಿನ ಗೆಳೆಯರ ಕಾಡುವ ಕಥೆಗಳು
(ಮರುಭೂಮಿಯಲ್ಲಿ ಆನೆಗಳಿವೆಯೇ? ಚಿರತೆ ಬಾವಲಿಯನ್ನು ಬೇಟೆಯಾಡುತ್ತದೆಯೇ? ಈ ಪುಸ್ತಕ ಓದಿ)
ಲೇ: ಸಂಜಯ್ ಗುಬ್ಬಿ
ಪ್ರ: ಅಂಕಿತ ಪುಸ್ತಕ, ಬೆಂಗಳೂರು
ಬೆಲೆ: ರೂ 230/-

3

ನಾದಯೋಗಿ ಡಾ| ರಾಜಕುಮಾರ್
(ಗಾಯಕರಾಗಿಯೂ ರಾಜಕುಮಾರ್ ಪ್ರಸಿದ್ಧರು. ಅವರ ಸಂಗೀತ ಪಯಣದ ಪರಿಚಯ ಇಲ್ಲಿದೆ)
ಲೇ: ಆರ್. ಮಂಜುನಾಥ್ ಚವಾಣ್, ಡಾ| ಸೌಮ್ಯ ಮಂಜುನಾಥ್
ಅನು: ಸವಿತಾ ಜೋಶಿ
ಪ್ರ: ಟೋಟಲ್ ಕನ್ನಡ, ಬೆಂಗಳೂರು
ಬೆಲೆ: ರೂ 199/-

4



ಅಜಿತ್ ದೋವಲ್
(ಭಾರತದ ಭದ್ರತಾ ಸಲಹೆಗಾರ, ವಿದೇಶಾಂಗ ನೀತಿಗೆ ಹೊಸ ಭಾಷ್ಯ ಬರೆದ ಸಾಹಸಿಯ ಸಾಹಸಗಳು)
ಲೇ: ರವೀಂದ್ರ ಜೋಶಿ
ಪ್ರ: ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ
ಬೆಲೆ: ರೂ 150/-

5



ಹೂ ಮೂವ್ಡ್ ಮೈ ಚೀಸ್
(ನಿಮ್ಮ ಜೀವನ ಮತ್ತು ಉದ್ಯೋಗದಲ್ಲಿ ಬದಲಾವಣೆಯನ್ನು ನಿಭಾಯಿಸುವ ಒಂದು ಅದ್ಭುತ ವಿಧಾನ-ಈ ಪುಸ್ತಕ)
ಲೇ: ಸ್ಪೆನ್ಸರ್ ಜಾನ್ಸನ್
ಅನು: ಸತೀಶ್ ಜೋಶಿ
ಪ್ರ: ವಾವ್ ಪ್ರಕಾಶನ, ಪೂನಾ
ಬೆಲೆ: ರೂ 175/-

6

ದಡ ಸೇರಿಸು ತಂದೆ
(ಈ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕೃತ ಕಥಾ ಸಂಕಲನ)
ಲೇ: ಅಮರೇಶ ನುಗಡೋಣಿ
ಪ್ರ: ಪಲ್ಲವ ಪ್ರಕಾಶನ, ಚನ್ನಪಟ್ಟಣ
ಬೆಲೆ: ರೂ 200/-

7



ವೀರ ತಪಸ್ವಿ ಪರುಶುರಾಮ
(ಅವತಾರ ಪುರುಷ, ಮುನಿಕುಮಾರನಾಗಿ ಜನಿಸಿ, ಕ್ಷಾತ್ರವನ್ನು ಮೆರೆದು, ನೂತನ ಸೃಷ್ಟಿಯನ್ನು ಮಾಡಿದ ಪುರಾಣ ಪುರುಷನ ಕಥೆ)
ಲೇ: ಡಿ. ಎಸ್.ಶ್ರೀಧರ
ಪ್ರ: ಸಾಹಿತ್ಯ ಭಂಡಾರ, ಬೆಂಗಳೂರು
ಬೆಲೆ: ರೂ 375/-

8



ಇರಾನ್ ಗುಡ್ ಬ್ಯಾಡ್ ಅಗ್ಲಿ
(ಯುದ್ಧದಲ್ಲಿ ಮುಳುಗಿ ಹೋಗಿರುವ ಇರಾನಿನ ಇತಿಹಾಸ ಮತ್ತು ಅದು ಬೆಳೆದು ಬಂದ ಬಗೆಯನ್ನು ವಿವರಿಸುವ ಕೃತಿ)
ಲೇ: ಗೋಪಾಲಕೃಷ್ಣ ಕುಂಟಿನಿ
ಪ್ರ: ಸಾವಣ್ಣ ಎಂಟರ್ ಪ್ರೈಸಸ್, ಬೆಂಗಳೂರು
ಬೆಲೆ: ರೂ 150/-

9



ಕಪ್ಪು ಹುಂಜ
(ಭಿನ್ನ ರೀತಿಯ, ಕುತೂಹಲ ಕೆರಳಿಸುವ ಪತ್ತೇದಾರಿ ಕಾದಂಬರಿ)
ಲೇ: ಬಿ. ವಿ ಮನೋಹರ್
ಪ್ರ: ಸ್ನೇಹ ಬುಕ್ ಹೌಸ್, ಬೆಂಗಳೂರು
ಬೆಲೆ: ರೂ 160/-

10

ಗರಿ ಬಿಚ್ಚಿ ಗಗನದೆಡೆಗೆ
(ಯಾವುದೇ ಶಿಕ್ಷಣ ಪದ್ಧತಿಗೆ ಬದ್ಧರಾಗದೆ, ಮಕ್ಕಳನ್ನು ಕೇವಲ ಮಕ್ಕಳಾಗಿ ಬೆಳೆಸುವ ಶಾಲೆ 'ಸಡ್‌ಬರಿ ವ್ಯಾಲಿ ಸ್ಕೂಲ್' ಕಥೆ ಇದು)
ಲೇ: ಡೇನಿಯಲ್ ಗ್ರೀನ್ ಬರ್ಗ್
ಅನು: ನಿವೇದಿತಾ ಎಚ್
ಪ್ರ: ನವಕರ್ನಾಟಕ ಪ್ರಕಾಶನ, ಬೆಂಗಳೂರು
ಬೆಲೆ: ರೂ 195/-

ಮಾಹಿತಿ: ಅಂಕಿತಪುಸ್ತಕ, 53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004. ದೂರವಾಣಿ: 26617100/26617755
ಮೊಬೈಲ್ ನಂ: 9019190502

ರಾಜಕೀಯಕ್ಕೂ ಬಂತಾ ಜಿರಳೆ ಕಾಟ?

ಗಟಾರದಲ್ಲಿರುವ ಜಿರಳೆಗಳನ್ನೇ ಹೀರೋ ಮಾಡಿ, ಅವುಗಳ ಹೆಸರಿನಲ್ಲಿ ಹೋರಾಟ ನಡೆಸುವ ಹೊಸ ನಡೆಯು ಎಲ್ಲರಲ್ಲಿ ಕುತೂಹಲ ಮೂಡಿಸಿದೆ; ಜಿರಳೆಗಳು ಹಲವರ ನೆಚ್ಚಿನ ರೂಪಕಗಳಾಗಿವೆ. ಆದರೆ, ಹೆಣ್ಣುಮಕ್ಕಳ ಪ್ರೀತಿಯನ್ನು ಜಿರಳೆಗಳು ಪಡೆಯುವುದು ಹೇಗೆ?

» ರವಿ ಮಡೋಡಿ

ಇತ್ತೀಚೆಗೆ ಫೇಸ್‌ಬುಕ್‌ನಲ್ಲಿ ಒಂದು ಚಿತ್ರ ಕಣ್ಣಿಗೆ ಬಿತ್ತು. ರಾತ್ರಿ ಮೂರು ಗಂಟೆಯ ಸಮಯ. ಅಡುಗೆಮನೆಯಲ್ಲಿ ಜಿರಳೆಯೊಂದು ಆರಾಮವಾಗಿ ಕುರ್ಚಿಯ ಮೇಲೆ ಕುಳಿತು, ಕಾಲ ಮೇಲೆ ಕಾಲನ್ನು ಹಾಕಿ, ಕಣ್ಣಿಗೆ ಕನ್ನಡಕವನ್ನು ಏರಿಸಿ ಏನನ್ನೋ ಮೆಲ್ಲುತ್ತಿತ್ತು. ಆ ಚಿತ್ರವನ್ನು ನೋಡಿ ಕ್ಷಣಕಾಲ ನಗು ಬಂದರೂ ಅದರಲ್ಲಿದ್ದ ನಿಜಾರ್ಥ ಮಾರ್ಮಿಕ! ನಮ್ಮ ಅಡುಗೆಮನೆಯ ರಾತ್ರಿಯ ಅಸಲಿ ಸಾಮ್ರಾಟ ಅವನೇ ಎಂಬುದಕ್ಕೆ ಬಹುಶಃ ಯಾರಿಗೂ ಅನುಮಾನವಿದ್ದಂತಿಲ್ಲ. ನಾವು ಮನೆ ಖರೀದಿಸಿದ ಸಾಲದ ಇಎಂಐ ನಾವು ಕಟ್ಟುತ್ತಿರಬಹುದು, ರಿಜಿಸ್ಟ್ರೇಷನ್ ಪೇಪರ್ ಮೇಲೆ ನಮ್ಮದೇ ಫೋಟೋ ಇರಬಹುದು, ಆರ್ ಸಿ ಸಿ ಕಾಂಕ್ರೀಟ್ ರೂಫ್ ಕೂಡ ನಮ್ಮದೇ ಇರಬಹುದು. ಆದರೆ ಅದು ಮಾಡುವ ಉಪಟಳವನ್ನು ಎಣಿಸಿಕೊಳ್ಳುವಾಗ ಅದೇ ನಮ್ಮ ಯಜಮಾನ ಆಗಿಬಿಡುತ್ತದೆ.

ನಮಗೆ ನಮ್ಮ ಬಗ್ಗೆ ಕೆಲವು ಬಾರಿ ಹೆಮ್ಮೆ ಎನಿಸುವುದು ನಮ್ಮ ಬೆಳವಣಿಗೆಯ ಬಗ್ಗೆ. ನಾವು ಹಳ್ಳಿಯಿಂದ ಪೇಟೆಗೆ ಬಂದಿರಬಹುದು, ಕೆಲಸದ ಸ್ಥಳದಲ್ಲಿ ಸಾಲು ಸಾಲು ಪ್ರಗತಿ ಕಂಡಿರಬಹುದು; ಅವೆಲ್ಲವೂ ನಮ್ಮ ಪ್ರಗತಿಯನ್ನು ಹೇಳಿಬಿಡುತ್ತವೆ. ಆದರೆ ಈ ಪ್ರಪಂಚದಲ್ಲಿ ಏನನ್ನೂ ಮಾಡದೆಯೂ ತನ್ನ ಸ್ಥಾನವನ್ನು ಮತ್ತು ಮನ್ನಣೆಯನ್ನು ಗಳಿಸಿರುವುದು ಈ ಜಿರಳೆಗಳು ಮಾತ್ರ. ಈ ಪುಣ್ಯಾತ್ಮ ಮಾತ್ರ ಬದಲಾಗದೇ ನೂರಾರು ಶತಮಾನಗಳಿಂದ ಹಾಗೆಯೇ ಇದ್ದಾನೆ. ಆದರೂ ಆತನಿಗೆ ತಾನಿರುವ ಬಗ್ಗೆ ಹೆಮ್ಮೆ. ಬೆಳವಣಿಗೆ ಹೊಂದಬೇಕು ಎನ್ನುವ ಬಗ್ಗೆ ಯಾವುದೇ ಉಸಾಪರಿಯೇ ಇಲ್ಲ. ಈ ಜಗತ್ತಿನಲ್ಲಿ ಅದರ ಸ್ಥಾನವನ್ನು ಕಸಿಯುವುದಕ್ಕಾಗಲಿ ಅಥವಾ ಅದು ಕೆಳಗೆ ಕುಸಿಯುವಂತೆ ಮಾಡುವುದಕ್ಕಾಗಲಿ ಇಂದಿಗೂ ಯಾರಿಂದಲೂ ಸಾಧ್ಯವಾಗಿಲ್ಲ. ಕಾಲಕಾಲಕ್ಕೆ ಬದಲಾಗದ ಮತ್ತು ತನ್ನ ಸ್ಥಾನವನ್ನು ಬಿಟ್ಟು ಕದಲದ ಒಂದು ಶಾಶ್ವತ ಮನಸ್ಸು ಅಂದರೆ ಅದು ಈ ಪುಣ್ಯಾತ್ಮ ಮಾತ್ರ.

ನಾವು ಬೆಳಗ್ಗೆಯಿಂದ ಸಂಜೆಯವರೆಗೆ ಇಡೀ ಮನೆಯನ್ನು ಗುಡಿಸಿ, ಒರೆಸಿ, ಫಿನೈಲ್ ಹಾಕಿ ಸಾರಿಸಿ, ಎಲ್ಲವನ್ನೂ ಒಂದು ತರಹ ಕನ್ನಡಿಯಂತೆ ಹೊಳೆಯುವಂತೆ ಮಾಡಿಟ್ಟಿರುತ್ತೇವೆ. ನಮ್ಮ ಸ್ವಚ್ಛತೆಯ ಬಗ್ಗೆ ನಮಗೊಂದು ಹೆಮ್ಮೆ ಮೂಡಿರುತ್ತದೆ. ಆದರೆ ಅದು ಹೆಚ್ಚು ನಿಮಿಷ ಉಳಿಯುವುದಿಲ್ಲ. ಆ ರಾತ್ರಿ ಮನೆಯ ಲೈಟ್ ಆಫ್ ಮಾಡಿ ನಾವೆಲ್ಲಾ ಕಂಬಳಿ ಹೊದ್ದು ನೆಮ್ಮದಿಯಿಂದ ಮಲಗಿರುವಾಗ ಅಡುಗೆಮನೆಯ ಕತ್ತಲ ಗರ್ಭದಿಂದ ಈ ಜಿರಳೆಗಳ ಡೇ ಲೈಫ್ ಶುರುವಾಗುತ್ತದೆ.

ದಿಕ್ಕಾಪಾಲಾಗಿ ಓಡುವ ಶೂರರು

ರಾತ್ರಿ ಹೊತ್ತು ನೀರು ಕುಡಿಯಲು ಕಿಚನ್ ಕಡೆ ಹೋಗಿ ಧಡಕ್ಕನೆ ಲೈಟ್ ಆನ್ ಮಾಡಿದರೆ ಸಾಕು, ಅಲ್ಲಿನ ದೃಶ್ಯ ಯಾವುದೇ ರಸ್ತೆಯಲ್ಲಿ ಹಠಾತ್ತಾಗಿ ಟ್ರಾಫಿಕ್ ಪೊಲೀಸ್ ಬಂದಾಗ ಗಾಡಿಗಳು ದಿಕ್ಕಾಪಾಲಾಗಿ ಓಡುವ ದೃಶ್ಯವನ್ನು ನೆನಪಿಸುತ್ತದೆ. ಕಣ್ಣು ಮುಚ್ಚಿ ಬಿಡುವುದರೊಳಗೆ ಖಾಲಿ ಡಬ್ಬದ ಹಿಂದೆಯೋ, ಗ್ಯಾಸ್ ಸಿಲಿಂಡರ್ ಕೆಳಗೋ ಮಾಯವಾಗಿಬಿಡುತ್ತವೆ. ಇವುಗಳ ಆ ವೇಗವನ್ನು ನೋಡಿದ ಕ್ಷಣದಲ್ಲೇ ನಾವು ಕ್ಲೀನ್ ಮಾಡಿದ್ದೇವೆ, ನಾವು ಶುಂಠಿ ಕೊಂಬು ಎಂಬ ನಮ್ಮ ಇಡೀ ಅಹಂಕಾರ ನುಚ್ಚುನೂರಾಗಿ ಹೋಗುತ್ತದೆ. ಇವು ನಮ್ಮ ಮಾನ ತೆಗೆಯುವುದಕ್ಕಾಗಿಯೇ ಹುಟ್ಟಿದವೋ ಎಂಬಂತೆ ಭಾಸವಾಗುತ್ತದೆ.

ಸಾವಿಲ್ಲದ ಸರದಾರ!

ಹಾಗಾಗಿಯೇ ಇವುಗಳ ಬಗ್ಗೆ ಆಸಕ್ತಿ ಮತ್ತು ಕುತೂಹಲ ಯಾವಾಗಲೂ ಇದ್ದೇ ಇರುತ್ತದೆ. ಭೂಮಿಯಲ್ಲಿ ಪುರಾತನವೆಂದರೆ ಅವು ಡೈನೋಸಾರ್‌ಗಳು ಎಂದು ಭಾವಿಸಿದ್ದೆವು. ಆದರೆ ಜಿರಳೆಗಳು ಅವಕ್ಕೂ ಮುಂಚೆಯೇ ಭೂಮಿಯ ಮೇಲೆ ಇದ್ದವು. ನೋಡಿ, ಕಾಲಚಕ್ರದ ಓಟದಲ್ಲಿ ಅಷ್ಟು ದೊಡ್ಡ ಡೈನೋಸಾರ್‌ಗಳಿಗೇ ಸಾವು ಬಂತು ಮತ್ತು ಅವುಗಳ ಸಂತತಿಯೇ ನಾಶವಾಯಿತು. ಅವುಗಳ ಸಾವಿಗೆ ಇವುಗಳ ಪಾತ್ರವೂ ಇದ್ದಿರಬಹುದೇನೋ ಎಂಬ ಅನುಮಾನ ಮೂಡುತ್ತದೆ. ಜಿರಳೆಗಳಿಗೆ ಸಾವೇ ಇಲ್ಲದ ಚಿರಂಜೀವಿ ಪಟ್ಟವನ್ನು ಪ್ರಕೃತಿ ದೊರಕಿಸಿಬಿಟ್ಟಿತಲ್ಲ. ಅದು ಎಷ್ಟೆಂದರೆ ಪ್ರಪಂಚಕ್ಕೆ ಅಣುಬಾಂಬ್ ಬಿದ್ದರೂ, ಎಲ್ಲವೂ ಸರ್ವನಾಶವಾದರೂ ಇವು ಮಾತ್ರ ಸಾಯುವುದಿಲ್ಲವಂತೆ.

ನೀವು ಇವುಗಳ ಮುಖವನ್ನು ಹತ್ತಿರದಿಂದ ನೋಡಿರಬಹುದು. ಅಲ್ಲಿ ಒಂದು ಸಣ್ಣ ನಗೆ ಯಾವಾಗಲೂ ಇರುತ್ತದೆ ಎಂಬುದು ನನಗೆ ಮಾತ್ರವೇ ಕಾಣಿಸುತ್ತದೋ ಗೊತ್ತಿಲ್ಲ. ಅದರ ಹಿಂದಿನ ನಗೆಯ ಕಾರಣ ತಿಳಿದಿಲ್ಲ. ಯಾಕೋ ನಮ್ಮನ್ನು ಅಣಕಿಸುವಂತೆ ಕಾಣುತ್ತದೆ. ಅಥವಾ ತಾವು ಡೈನೋಸಾರ್‌ಗಳ ಜೊತೆ ಕುಳಿತು ಇಡ್ಲಿ ಸಾಂಬಾರ್ ತಿಂದ ಹಳೆಯ ನೆನಪಿನಲ್ಲೇ ಮೀಸೆ ತಿರುವುತ್ತಾ ಕುಳಿತಿರುವುದೋ ಅಥವಾ ಅವ ನಮ್ಮ ಹಳೇ ಕ್ಲಾಸ್‌ಮೇಟ್, ಕ್ಲೋಸ್ ಫ್ರೆಂಡ್ ಎನ್ನುವಂತಹ ಒಂದು ಆಪ್ತವಾದ ಭಾವವಿದ್ದರೆ ಅಚ್ಚರಿಪಡಬೇಕಿಲ್ಲ.

ಹಾರುವ ಜಿರಳೆ!

ಇಂತಹ ಕಂತ್ರಿ ಜಿರಳೆಗಳನ್ನು ಕೊಲ್ಲುವುದಕ್ಕೆ ನಾವು ಯಾವತ್ತೂ ಹಿಂದೆ ಬಿದ್ದಿಲ್ಲ, ಅವು ನಮ್ಮ ಹಿಂದೆ ಬಿದ್ದಿರುವಾಗ. ಮನುಷ್ಯರಾಗಿ ನಮ್ಮ ತಂತ್ರಜ್ಞಾನ ಮತ್ತು ಸೈನ್ಸ್ ಬಗ್ಗೆ ಎಷ್ಟೇ ಬೀಗಿದರೂ ಇದರ ಮೀಸೆಯನ್ನು ಬಾಗಿಸುವುದಕ್ಕೂ ಅಸಾಧ್ಯವಾಗಿದ್ದೇವೆ. ಅವನ್ನು ಸರ್ವನಾಶ ಮಾಡುತ್ತೇವೆ ಎಂಬ ಅಹಂಕಾರವನ್ನು ಕಳಚಿ ಇಟ್ಟಿದ್ದೇವೆ. ನಮ್ಮ ಕೀಟನಾಶಕಗಳ ಮುಂದೆ ಈ ಜಿರಳೆ ಮಾಡುವ ಆಕ್ಟಿಂಗ್ ಡ್ರಾಮಾವನ್ನು ನೋಡಿಯೇ ಕಲಿಯಬೇಕು. ಸ್ಪ್ರೇ ಹೊಡೆದ ತಕ್ಷಣ ತಲೆ ಸುತ್ತಿ ಬಿದ್ದಂತೆ ನಟಿಸಿ ಕಾಲುಗಳನ್ನು ಮೇಲಕ್ಕೆ ಮಾಡಿ ಮಲಗುತ್ತದೆ. ನಾವು ಸತ್ತೇ ಹೋಯಿತು ಎಂದುಕೊಂಡು ಅದನ್ನು ಎತ್ತಿ ಹಾಕಲು ಪೊರಕೆ ತರಲು ಹೋಗುವಷ್ಟರಲ್ಲಿ ಸದ್ದಿಲ್ಲದೆ ಎದ್ದು ಸರ್ಪ್ರೈಸ್ ಎನ್ನುತ್ತಾ ಕಾಣ್ಮರೆಯಾಗಿಬಿಡುತ್ತದೆ. ಅದರಲ್ಲೂ ಈ ರೆಕ್ಕೆ ಬಂದಿರುವ ಹಾರುವ ಜಿರಳೆ ಇದೆಯಲ್ಲ ಅದು ಜಗತ್ತಿನ ಅತ್ಯಂತ ಭಯಾನಕ ಜೀವಿ. ನೆಲದ ಮೇಲಿರುವಾಗ ಅತ್ಯಂತ ಪಾಪದ ಜೀವಿಯಂತೆ ನಟಿಸುವ ಇದು ಒಮ್ಮೆ ರೆಕ್ಕೆ ಬಿಚ್ಚಿ ಗಾಳಿಯಲ್ಲಿ ಹಾರಲು ಶುರುಮಾಡಿದರೆ ಇಡೀ ಮನೆಯಲ್ಲಿ ಯುದ್ಧಕಾಲದ ಸೈರನ್ ಮೊಳಗಿದಂತಾಗುತ್ತದೆ.

ಇವುಗಳ ಆಹಾರ ಪದ್ಧತಿಯಂತೂ ಅತಿ ಸರಳ. ಸಿಕ್ಕಿದ್ದೇ ಫುಡ್, ಸಿಕ್ಕಿದ್ದೇ ಬೆವರೇಜ್. ಅದು ಅನ್ನದ ಅಗುಳಿನಿಂದ ಹಿಡಿದು ಗೋಡೆಯ ಪೇಂಟ್, ಹಳೆಯ ಪೇಪರ್, ಸೋಪಿನ ತುಂಡು ಎಲ್ಲವನ್ನೂ ತಿನ್ನುತ್ತವೆ. ಅವನ್ನೆಲ್ಲ ಜೀರ್ಣಿಸಿಕೊಳ್ಳುವ ಇವುಗಳ ಅತಿಮಾನುಷ ಜಠರ ಕುಂಭಕರ್ಣನಿಗೆ ಹತ್ತಿರದ ಸಂಬಂಧಿಯಂತೆ ಕಾಣಿಸಿಬಿಡುತ್ತದೆ. ಆದರೆ ಅದರ ಒಂದು ಗುಣವನ್ನು ಮೆಚ್ಚಬೇಕು. ಏನೂ ಇಲ್ಲದಿದ್ದರೂ ನಾನು ಬದುಕಬಲ್ಲೆ ಎನ್ನುವ ಇವುಗಳ ಆತ್ಮವಿಶ್ವಾಸ ನೋಡಿದರೆ, ಮನುಷ್ಯರಾದ ನಮಗೇಕೆ ಇಷ್ಟೊಂದು ಆಸೆ ಆಕಾಂಕ್ಷೆಗಳು ಮತ್ತು ಹಪಾಹಪಿಗಳು ಎಂದು ಒಮ್ಮೊಮ್ಮೆ ವೈರಾಗ್ಯ ಮೂಡುತ್ತದೆ. ಹೇಸಿಗೆಯಾದರೂ ನಮ್ಮ ಇಷ್ಟ ಕಷ್ಟಗಳು ಏನೇ ಇರಲಿ ಜಿರಳೆ ಮಾತ್ರ ಸದಾ ಕಾಲ ನಮ್ಮೊಂದಿಗಿರುತ್ತದೆ ಎಂಬುದನ್ನು ಸಮಾಧಾನವಾಗಿ ನಮಗೆ ನಾವೇ ಹೇಳಿಕೊಳ್ಳಬಹುದು. ಸದಾಕಾಲ ನಮ್ಮ ತಲೆಯನ್ನು ಕಾಯ್ದುಕೊಳ್ಳುವ ನಾವು, ಇವು ತಲೆ ಹೋದರೂ ಒಂದು ವಾರ ಬದುಕುವ ಅದರ ಛಲ, ಕತ್ತಲಲ್ಲೂ ದಾರಿ ಹುಡುಕುವ ಅದರ ಜಾಣ್ಮೆ ಮತ್ತು ಯಾರನ್ನೂ ಕೇರ್ ಮಾಡದೆ ತನ್ನದೇ ಜಗತ್ತಿನಲ್ಲಿ ಬದುಕುವ ಅದರ ಅಪ್ರತಿಮ ಜೀವನ ಪ್ರೀತಿ ಇದೆಯಲ್ಲ ಅದಕ್ಕೆ ಹ್ಯಾಟ್ಸಾಫ್ ಹೇಳಲೇಬೇಕು.

ನಿರುದ್ಯೋಗಿ ಅಲ್ಲ!

ಅಂದ ಹಾಗೆ ಇತ್ತೀಚೆಗೆ ರಾಜಕೀಯದಲ್ಲೂ ಇವುಗಳ ಹೆಸರಿನಲ್ಲಿ ಹೊಸದೊಂದು ಜಿರಳೆ ಪಕ್ಷ ಬೇರೆ ಹುಟ್ಟಿಕೊಂಡಿದೆಯಂತೆ. ಇದು ನಿರುದ್ಯೋಗಿಗಳ ಪಕ್ಷವಂತೆ. ಅಂದ ಹಾಗೆ ಜಿರಳೆ ನಿರುದ್ಯೋಗಿಯೇ? ನನಗಂತೂ ಹಾಗೆ ಅನಿಸುವುದಿಲ್ಲ. ತನ್ನ ಕೆಲಸವನ್ನು ಯಾವ ಅಂಜು ಅಳುಕು ಇಲ್ಲದೆ ಮಾಡುವ ಜೀವ ಅದು. ಹಾಗಾಗಿ ಅದೊಂದು ಸರಿಯಾದ ಹೆಸರು ಎಂದು ಹೇಳಿಕೊಳ್ಳುವುದು ಕಷ್ಟ. ಆದರೆ ಪಕ್ಷದ ವಿಚಾರವಾಗಿ ಒಂದು ಗಮ್ಮತ್ತಿನ ವಿಷಯ ಏನೆಂದರೆ ಆ ಪಕ್ಷ ಇನ್ನೂ ಕೇವಲ ಡಿಜಿಟಲ್ ಮೋಡ್‌ನಲ್ಲಿ ಅಂದರೆ ಸೋಶಿಯಲ್ ಮೀಡಿಯಾದಲ್ಲಿ ಮಾತ್ರ ಓಡಾಡುತ್ತಿರುವುದು. ಅದು ಒಂದು ತರಹ ಒಳ್ಳೆಯದೇ ಆಯಿತು ಅನ್ನಿ. ಇಲ್ಲದಿದ್ದರೆ ಇವರು ತಮ್ಮ ಪ್ರಣಾಳಿಕೆಯನ್ನು ಪೇಪರ್‌ನಲ್ಲಿ ಪ್ರಿಂಟ್ ಮಾಡಿ ತಂದರೆ, ನಮ್ಮ ಜಿರಳೆಗಳು ಮಾತ್ರ ಇವರು ತಮ್ಮದೇ ಪಕ್ಷದವರು ಎಂಬ ಯಾವುದೇ ಕೇರ್ ಮಾಡದೇ ಆ ಪೇಪರ್ ಅನ್ನೇ ಕತ್ತರಿಸಿ ಡಿನ್ನರ್ ಮಾಡಿ ಮುಗಿಸಿಬಿಡುತ್ತಿದ್ದವು. ಬಹುಶಃ ಆ ಪಕ್ಷದ ಹೈಕಮಾಂಡ್‌ಗೂ ಈ ಅಡುಗೆಮನೆಯ ಜಿರಳೆಗಳ ಹಸಿವಿನ ಬಗ್ಗೆ ಚೆನ್ನಾಗಿ ತಿಳಿದಿದೆ ಅನ್ನಿಸುತ್ತೆ. ಇದಕ್ಕಿಂತ ಹೆಚ್ಚಾಗಿ ಅತಿ ದೊಡ್ಡ ಗಮ್ಮತ್ತಿನ ವಿಚಾರವೆಂದರೆ, ಹೊರಗಡೆ ಜಗತ್ತಿನಲ್ಲಿ ಎಲ್ಲರೂ ನಾನು ನಾನಾಗಿ ಇರಿ ಎಂದು ಜ್ಞಾನೋಪದೇಶ ಮಾಡುತ್ತಿದ್ದರೆ, ಇವರು ಮಾತ್ರ ನಾನು ಜಿರಳೆ, ನಾನು ಕಾಕ್ರೋಚ್ ಎಂದೆಲ್ಲ ಬೋರ್ಡ್ ಹಾಕಿಕೊಂಡು ಓಡಾಡುತ್ತಿದ್ದಾರೆ. ಇರಲಿ ಅದು ಅವರವರ ಅಭಿರುಚಿ.

ಹೆಣ್ಣುಮಕ್ಕಳ ಪ್ರೀತಿ ಗಳಿಸೀತೇ ಜಿರಳೆ?

ಆದರೆ ಪಾಪ ಎನ್ನುವ ವಿಚಾರವೆಂದರೆ ತಾವೇ ಜಿರಳೆ ಅಂತ ಬೋರ್ಡ್ ಹಾಕಿಕೊಂಡರೆ ಹೆಣ್ಣುಮಕ್ಕಳು ವೋಟ್ ಹಾಕಿ ಬೆಂಬಲಿಸುತ್ತಾರಾ ಎಂದು. ಜಿರಳೆ ಹತ್ತಿರ ಬಂದರೆ ಕಿರುಚಿ ಮಾರುದ್ದ ಜಿಗಿಯುವ ಅವರು ಇವರನ್ನು ಹೇಗೆ ಒಪ್ಪಿಕೊಂಡು ಅಪ್ಪಿಕೊಳ್ಳುತ್ತಾರೆ ಎನ್ನುವುದೇ ಸದ್ಯದ ಕುತೂಹಲ ಬಿಡಿ. ಅಷ್ಟಕ್ಕೂ ಈ 'ಜಿರಳೆ ಪಾರ್ಟಿಯವನು' ಎಂದು ಬೋರ್ಡ್ ಹಾಕಿಕೊಂಡು ತಿರುಗುವ ನಾಯಕರನ್ನು ಅವರ ಸ್ವಂತ ಮನೆಯ ಹೆಣ್ಣುಮಕ್ಕಳು ಮನೆಯೊಳಗೆ ಸೇರಿಸಿಕೊಳ್ಳುತ್ತಾರಾ ಎಂಬುದನ್ನು ನೋಡಬೇಕು. ಹಾಗಾಗಿ ಈ ಪಕ್ಷದವನು ಎಂದು ರಾಜಕೀಯದಲ್ಲಿ ಮೀಸೆ ತಿರುವುವವರಿಗೆ ಜನ ಎಂತಹ ಹಿಟ್ ಸ್ಪ್ರೇ ಹೊಡೆಯುತ್ತಾರೆ ಅಥವಾ ಯಾವ ತರಹದ ಲಕ್ಷ್ಮಣ ರೇಖೆ ಹಾಕಿ ಇವರನ್ನು ಮೂಲೆಗೆ ಕೂರಿಸುತ್ತಾರೆ ಎಂಬುದನ್ನು ಕಾಲವೇ ನಿರ್ಧರಿಸಬೇಕು. ಒಟ್ಟಿನಲ್ಲಿ ಇನ್ನು ಮುಂದೆ ಏನಾಗುವುದೋ ಗೊತ್ತಿಲ್ಲ. ಈ ಜಿರಳೆಗಳನ್ನು ಓಡಿಸುವುದಕ್ಕೆ ದೇಶಕ್ಕೆ ಎಂತಹ ಹೊಸ ಬ್ರಾಂಡ್ ಹಿಟ್ ಬೇಕಾಗುತ್ತದೋ ಅಥವಾ ಈ ಜಿರಳೆ ಪಾರ್ಟಿಯನ್ನು ತಂದವರೇ ರಾಜಕೀಯದ ಮಾರ್ಕೆಟ್‌ನಲ್ಲಿ ಸೂಪರ್ ಹಿಟ್ ಆಗಿಬಿಡುತ್ತಾರೋ ಎಂಬುದನ್ನು ಕಾದು ನೋಡೋಣ. ಏನಂತೀರಾ?

ಪ್ರತಿಜ್ಞೆಯೊಂದು ನೆರವೇರಿದ ಕ್ಷಣ!

ದೂರದ ಅಮೆರಿಕದಲ್ಲಿ ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದ ಚಟುವಟಿಕೆಗಳು ನಡೆಯುತ್ತಲೇ ಇರುತ್ತವೆ. ಅಂತಹ ಒಂದು ಅನನ್ಯ ಸಾಹಸ ಇತ್ತೀಚೆಗೆ ಡಲ್ಲಾಸ್‌ನಲ್ಲಿ ನಡೆಯಿತು.

» ತ್ರಿವೇಣಿ ಶ್ರೀನಿವಾಸರಾವ್, ಶಿಕಾಗೊ

'ಸಿಮ್ ಮೂರ್ತಿ' ಎಂದೇ ಅಮೆರಿಕ ಮತ್ತು ಕೆನಡ ಕನ್ನಡಿಗರಿಗೆ ಪರಿಚಿತರಾಗಿರುವವರು, ಎಸ್. ನರಸಿಂಹ ಮೂರ್ತಿಯವರು. ಅವರಿಗೀಗ 95 ವರ್ಷ! ವೃತ್ತಿಜೀವನದಲ್ಲಿ ಇಂಜಿನಿಯರ್ ಆಗಿ ಭಾರತ, ಜರ್ಮನಿ, ಯುಕೆ, ಕೆನಡಾ ಮತ್ತು ಆಫ್ರಿಕಾದ ಹಲವು ದೇಶಗಳಲ್ಲಿ ಸೇವೆ ಸಲ್ಲಿಸಿರುವ ಜಾಗತಿಕ ಕನ್ನಡಿಗ. ಅವರ ಪತ್ನಿ ದಿವಂಗತ ಡಾ. ನಳಿನಿ ಮೂರ್ತಿಯವರು ವಿಜ್ಞಾನ ಸಂಶೋಧಕಿ, ಸಂವಹನ ತಂತ್ರಜ್ಞೆ ಮತ್ತು ಬರಹಗಾರ್ತಿ. ಬಿಸಿಲು ಮಳೆ, ಬೀಸಿ ಬಂದ ಬಿರುಗಾಳಿ, ಹೊಸಬಾಳು, ಬಂಗಾರದ ಜಿಂಕೆ, ಊರ್ಮಿಳಾ, ಪ್ರತಿಜ್ಞೆ ಮುಂತಾದ ಕೃತಿಗಳ ಮೂಲಕ ಕನ್ನಡ ಸಾಹಿತ್ಯಕ್ಕೆ ಕೊಡುಗೆ ನೀಡಿದವರು. ತಮ್ಮ ಪತಿ ನರಸಿಂಹ ಮೂರ್ತಿಯವರೊಂದಿಗೆ ಬರೆದ ಲೇಖನಗಳು 'ಸಾಹಿತ್ಯ ವಿಜ್ಞಾನ' ಎಂಬ ಕೃತಿಯಾಗಿ ಪ್ರಕಟಗೊಂಡಿವೆ. ಕೇವಲ ಐವತ್ತೈದು ವಯಸ್ಸಿನಲ್ಲೇ ಅವರು ಸಾಧಿಸಿದ ಸಾಹಿತ್ಯವೈಜ್ಞಾನಿಕ ಸಾಧನೆ ಅಪಾರ; ಅನಾರೋಗ್ಯದ ಕಾರಣದಿಂದ ಬಹು ಬೇಗ ಅಗಲಿದರು; ಅಕ್ಟೋಬರ್ 20, 1992ರಂದು ಕೆನಡಾದಲ್ಲಿ ನಿಧನರಾದರು.

ಆದರೆ, ಪತಿ 'ಸಿಮ್ ಮೂರ್ತಿ'ಯವರು ಪತ್ನಿಯ ಸಾಹಿತ್ಯಕ ಕೊಡುಗೆಯನ್ನು ಜೀವಂತವಾಗಿರಿಸಿದ್ದಾರೆ! ಪತ್ನಿ ಬರೆದ ಕಾದಂಬರಿಯನ್ನು ಇಂಗ್ಲಿಷ್‌ಗೆ ಅನುವಾದ ಮಾಡಿಸುವ ಮೂಲಕ, ಸಾಹಿತ್ಯಕ್ಕೂ ಕೊಡುಗೆ ನೀಡಿದ್ದಾರೆ. ಇದೇ ಮೇ ತಿಂಗಳ 1, 2, 3ರಂದು ಕನ್ನಡ ಸಾಹಿತ್ಯ ರಂಗವು ಡಲ್ಲಾಸಿನ ಮಲ್ಲಿಗೆ ಕನ್ನಡ ಕೂಟದ ಸಹಯೋಗದೊಂದಿಗೆ ತನ್ನ 12ನೆಯ ಸಮ್ಮೇಳನವನ್ನು ಯಶಸ್ವಿಯಾಗಿ ಆಚರಿಸಿತು. ಸಿಮ್ ಮೂರ್ತಿಯವರು ತಮ್ಮ ಪತ್ನಿ ನಳಿನಿಯವರು ಬರೆದಿದ್ದ ಪ್ರತಿಜ್ಞೆ ಕಾದಂಬರಿಯನ್ನು ಲೇಖಕ ಮೈಸೂರು ನಟರಾಜರಿಂದ (ಯು.ಎಸ್.ನಲ್ಲಿ ನೆಲೆಸಿದ್ದಾರೆ) ಇಂಗ್ಲಿಷಿಗೆ ಅನುವಾದ ಮಾಡಿಸಿ, ಅದನ್ನು ಸಮ್ಮೇಳನಾರ್ಥಿಗಳಿಗೆಲ್ಲರಿಗೂ ಉಚಿತವಾಗಿ ದೊರೆಯುವಂತೆ ಮಾಡಿದ್ದರು. ಮುದ್ರಣದ ಎಲ್ಲಾ ಖರ್ಚುವೆಚ್ಚವನ್ನೂ ಮೂರ್ತಿಯವರೇ ಭರಿಸಿದ್ದುದು ವಿಶೇಷ.

ಅದಕ್ಕಿಂತ ಮಹತ್ವದ ವಿಷಯವೆಂದರೆ, ತೊಂಬತ್ತೈದರ ವಯಸ್ಸಿನ ಸಿಮ್ ಮೂರ್ತಿಯವರು ತಾವು ವಾಸವಿರುವ ಕೆನಡಾದಿಂದ ಅಮೆರಿಕಾದ ಡಲ್ಲಾಸಿಗೆ ಏಕಾಂಗಿಯಾಗಿ ಆಗಮಿಸಿ, ಸಮ್ಮೇಳನದಲ್ಲಿ ಭಾಗವಹಿಸಿದ್ದು! ಮೂರ್ತಿಯವರು ಕನ್ನಡ ಸಾಹಿತ್ಯ ರಂಗದ ಸಮ್ಮೇಳನಗಳಲ್ಲಿ ಈ ಹಿಂದೆಯೂ ಭಾಗವಹಿಸಿದ್ದರು. ದೂರದ ಕೆನಡಾದಿಂದ ವಿಮಾನದಲ್ಲಿ ಬಂದು, ಸಮ್ಮೇಳನಕ್ಕೆ ಗಾಲಿ ಕುರ್ಚಿಯಲ್ಲಿ ಬಂದಿಳಿದ ಅವರ ಉತ್ಸಾಹವನ್ನು ಕಂಡು ನಾನು ದಂಗಾದೆ!

ಸಮ್ಮೇಳನದಲ್ಲಿ, ನಾಗತಿಹಳ್ಳಿ ಚಂದ್ರಶೇಖರ್ ಅವರ ಸಮ್ಮುಖದಲ್ಲಿ ನಟರಾಜರು ಅನುವಾದಿಸಿದ ನಳಿನಿಯವರ ಕೃತಿ 'ಭೀಷ್ಮಾಸ್ ವೌ' (ಪ್ರತಿಜ್ಞೆ) ಬಿಡುಗಡೆಯಾಯಿತು. ವಯಸ್ಸಿನ ಕಾರಣದಿಂದ ವೇದಿಕೆಯ ಮೇಲೇರಲಾಗದ ಸಿಮ್ ಮೂರ್ತಿಯವರಿಗೆ ನಾಗತಿಹಳ್ಳಿಯವರು ಅವರಿದ್ದಲ್ಲೇ ಬಂದು ಪುಸ್ತಕವನ್ನು ನೀಡಿದರು. ಅದೊಂದು ಹೃದಯಂಗಮವಾದ ದೃಶ್ಯ. ವರ್ಷಗಳ ಹಿಂದೆ ಅಗಲಿದ ಪತ್ನಿಗೆ ಪತಿಯೊಬ್ಬ ಸಲ್ಲಿಸಿದ ಪ್ರೀತಿಪೂರ್ವಕ ಶ್ರದ್ಧಾಂಜಲಿಯಂತೆ ನನಗೆ ಭಾಸವಾಯಿತು. 3 ದಿನದ ಸಮ್ಮೇಳನ ಮುಗಿಸಿ ಮೂರ್ತಿಯವರು ಹೋಟೆಲಿನಿಂದ ಹೊರಟು ನಿಂತಾಗ ನಾನು ಅಲ್ಲೇ ಇದ್ದೆ. 'ಹೋಗಿ ಬರುತ್ತೇನೆ' ಎಂದು ಮಗುವಿನಂತೆ ಮುದ್ದಾಗಿ ನಗುತ್ತಾ ಕೈಬೀಸಿ ಹೊರಟರು. ಅದಾವ ಭಾವ ನನ್ನ ಮನಸ್ಸಿನಲ್ಲಿ ತುಂಬಿಬಂದಿತೋ ಕಾಣೆ, ಕಣ್ಣುಗಳಿಂದ ಹನಿಗಳು ತುಳುಕಿದವು.

ಪ್ರತಿಕ್ರಿಯೆ

ಸಂಜೆಯ ಗುಬ್ಬಿಯವರ ಪುಸ್ತಕದ ಆಯ್ದ ಭಾಗದ 'ಚಿರತೆಯ ಅಪರೂಪದ ಬೇಟೆ' ತುಂಬಾ ಸೊಗಸಾಗಿದೆ. ಬರಹ ಖುಷಿಯಿಂದ ಓದಿಸಿಕೊಂಡು ಹೋಗುತ್ತದೆ. ಆಹಾರ ತಿನ್ನುವ ವಿಷಯದಲ್ಲಿ ನಾಚಿಕೆ ಇಲ್ಲದೆ ಪ್ರಾಣಿ ಎಂಬ ಗುಬ್ಬಿಯವರ ಮಾತು ನಿಜವೇನೊ. ಇಂದಿನ ತಾಯಂದಿರು ಎಷ್ಟೇ ಚೆನ್ನಾದ ತಿಂಡಿ ಮಾಡಿಕೊಟ್ಟರೂ ಅದು ಬೇಡ, ಇದು ಸೇರುವುದಿಲ್ಲ ಎಂದು ವರಾತ ತೆಗೆಯುವ ಮಕ್ಕಳಿಗೆ ಚಿರತೆ ತೋರಿಸಿ 'ತಿಂದರೆ ಹೀಗೆ ಆ ಚಿರತೆಯಂತೆ ಏನೂ ಕೊಟ್ಟರೂ ಸ್ವಾಹಾ ಮಾಡಬೇಕು' ಎಂದು ಹೇಳಬಹುದು. ದೇವರಾಯನ ದುರ್ಗದಲ್ಲಿ ಕ್ಯಾಮೆರಾ ಟ್ರ್ಯಾಪಿಂಗ್ ಮುಖಾಂತರ ಚಿರತೆಯ ಬಾಯಲ್ಲಿ ಕಂಡ ಹೊಸ ಮೆನು ಬಾವಲಿ ಚಿತ್ರ ನೋಡಿದ ಯಾರಿಗಾದರೂ ಅದು ಆಶ್ಚರ್ಯವೆನಿಸದೆ ಇರದು. ಏಕೆಂದರೆ ಹಿಂದೊಮ್ಮೆ ನಮ್ಮ ಮನೆಯ ಮುಂದೆ ಇದ್ದ ಗಸಗಸೆ ಹಣ್ಣಿನ ಗಿಡಕ್ಕೆ ರಾತ್ರಿಯಾಯಿತೆಂದರೆ ಬಾವಲಿಗಳ ಹಿಂಡು ದಾಂಗುಡಿ ಇಡುತಿದ್ದವು. ವೇಗವಾಗಿ ಅತ್ತಇತ್ತ ಹಾರಾಡುತ್ತಿರುತ್ತಿದ್ದವು. ಅದನ್ನು ಚಿರತೆ ಹಿಡಿಯುವುದು ಎಂದರೆ ಬಲು ಅಚ್ಚರಿ! ಚಿರತೆಯಿಂದ ಹಗಲಲ್ಲಾಗಲಿ ಅಥವಾ ರಾತ್ರಿಯಲ್ಲಾಗಲಿ, ನೆಲದಲ್ಲಾಗಲಿ ಮರದ ಮೇಲಾಗಲಿ ಯಾವ ಪ್ರಾಣಿಯೂ ಸುರಕ್ಷತವಾಗಿದ್ದೇನೆಂದು ಹೇಳಿಕೊಳ್ಳಲಾಗದು ಎಂಬ ಗುಬ್ಬಿಯವರ ಮಾತು ಅರ್ಥಗರ್ಭಿತ.

● **ಕಮಲಾಕರ ಕೆ ಆರ್**, ತಲವಾಟ

'ಆಪರೇಷನ್ ಬೇಡ' ಎಂದ ವೈದ್ಯರ ಪ್ರಾಮಾಣಿಕತೆ ಬಗ್ಗೆ ವಿರಾಮದಲ್ಲಿ ಪ್ರಕಟಗೊಂಡ ಬರಹವು, ನನ್ನ ಅಂತಹದೇ ಅನುಭವವನ್ನು ನೆನಪಿಸಿತು. ಮೂಗು ಕಟ್ಟಿಕೊಂಡು ಉಸಿರಾಟ ಕಷ್ಟವಾಗಿದ್ದಾಗ ಹತ್ತಿರದ ಖಾಸಗಿ ಆಸ್ಪತ್ರೆಗೆ ಹೋದೆ. ಪ್ರಸಿದ್ಧ ಈ.ಎನ್.ಟಿ. ವೈದ್ಯರು ಮೂಗಿನಲ್ಲಿ ದುರ್ಮಾಂಸ ಬೆಳೆದಿದೆ ಎಂದು ಸ್ಕ್ಯಾನ್ ಮಾಡಿ ತೋರಿಸಿ ಆಪರೇಷನ್‌ಗೆ ಕೇವಲ 60–65 ಸಾವಿರ ಆಗಬಹುದು, ಬೇಗ ಮಾಡಿಸಿದರೆ ಒಳಿತು, ಇಲ್ಲವಾದರೆ ಮೂಗಿನ ದ್ವಾರ ಪೂರ್ತಿ ಬಂದಾಗಬಹುದು, ಯೋಚಿಸಿ ಎಂದರು. ಹೇಗಾದರಾಗಲಿ ಎಂದು ಇನ್ನೊಬ್ಬರು ಆಯುರ್ವೇದ ಕೇಂದ್ರಕ್ಕೆ ಹೋದೆ; ಅವರ ಸಲಹೆ ಪಡೆದು ಸುಮಾರು 2500 ರೂ. ಖರ್ಚು ಮಾಡಿ ನಸ್ಯ ಚಿಕಿತ್ಸೆ ಹಾಗೂ ಮಾತ್ರೆಗಳನ್ನು ತೆಗೆದುಕೊಂಡು ಆಪರೇಷನ್ ಇಲ್ಲದೆ ಕೆಲವೇ ವಾರಗಳಲ್ಲಿ ಗುಣಪಡಿಸಿಕೊಂಡೆ. ಒಟ್ಟಾರೆ ಆರೋಗ್ಯ ಸಮಸ್ಯೆ ಬಂದು ಆಪರೇಷನ್ ಹಾಗೂ ದುಬಾರಿ ಚಿಕಿತ್ಸೆ ಹೇಳಿದಾಗ, ಅವಸರ ಮಾಡದೇ, ಸೂಕ್ತ ಎರಡನೆಯ ವೈದ್ಯರ ಸಲಹೆ ಪಡೆಯುವುದು ಒಳಿತು ಎನಿಸುತ್ತದೆ.

● **ಬಿ.ಕೆ.ಗೋಪಿನಾಥ್** ಮೈಸೂರು

ವಿರಾಮ ಪುರವಣಿಯಲ್ಲಿ ಪ್ರಕಟಗೊಂಡ ಮುಖಪುಟ ಲೇಖನ ಓದಿ ಆಶ್ಚರ್ಯ ಎನಿಸಿತು. ಚಿರತೆಗಳು ಬಾವಲಿಯನ್ನು ಬೇಟೆಯಾಡುತ್ತವೆ ಎಂದು ಲೇಖಕ ಸಂಜಯ್ ಗುಬ್ಬಿಯವರು ಸಚಿತ್ರ ಸಮೇತ ವಿವರಿಸಿರುವುದು, ಈ ಪರಿಸರದ ವಿಸ್ಮಯಗಳ ಇನ್ನೊಂದೇ ಲೋಕವನ್ನು ತೆರೆದಿಟ್ಟಿತು. ಮರದ ತುದಿಯಲ್ಲಿ ವಾಸಿಸುತ, ಸದಾ ಹಾರಾಡುವ ಸಸ್ತನಿ ಬಾವಲಿಯನ್ನು ಚಿರತೆಗಳು ಬೇಟೆಯಾಡುವುದಾದರೂ ಹೇಗೆ?

● **ಕೆ.ಎಸ್.ಹೆಬ್ಬಾರ್**, ಜೆ.ಪಿ.ನಗರ

ಪ್ರತಿ ವಾರ ಪ್ರಕಟವಾಗುತ್ತಿರುವ 'ಆಸ್ಕ್ ದ ಎಡಿಟರ್' ಅಂಕಣವನ್ನು ಓದಲು ಬಹಳ ಖುಷಿ ಎನಿಸುತ್ತದೆ. ಇಲ್ಲಿನ ಉತ್ತರಗಳಲ್ಲಿ ಕೆಲವು ಕಚಗುಳಿ ಇಡುತ್ತವೆ, ಇನ್ನು ಕೆಲವು ಮಾರ್ಗದರ್ಶನ ನೀಡುತ್ತವೆ. ಜ್ಞಾನಾರ್ಜನೆಯ ಜತೆಯಲ್ಲೇ, ಚುರುಕಾದ, ಚಿನಕುರಳಿಯಂತಹ ಬರಹವಿರುವ ಇಂತಹ ಪ್ರಶ್ನೋತ್ತರ ಅಂಕಣವು, ಕನ್ನಡದಲ್ಲೇ ಅಪರೂಪ ಎನಿಸಿದೆ. ಧನ್ಯವಾದ.

● **ಯಲ್ಲಪ್ಪ ದೊಡ್ಡಮನಿ**, ನಾಗರಬಾವಿ

ಚುಟುಕಗಳು

» ಮಹಾಂತೇಶ ಮಾಗನೂರ

ಬೆಂಗಳೂರಿನ
ಹತ್ತಿರದ ಜಿಲ್ಲೆಗಳಿಗೆ
ಹೊಸ ಹೆಸರ
ಇಡುತ್ತಿದ್ದಾರೆ ಅವಸರದಿ
ಅಂದು ದಕ್ಷಿಣ
ಈಗ ಉತ್ತರದ ಸರದಿ

ಮೂರು ರೂಪಾಯಿ
ಇಂಧನ ಬೆಲೆ ಹೆಚ್ಚಳಕ್ಕೆ
ಹೆಚ್ಚಾಗಬಹುದು
ಕಾಫಿಗೆ ಐದು ಇಡ್ಲಿಗೆ ಹತ್ತು

ದೋಸೆಗೆ ಇಪ್ಪತ್ತು
ಇದು ಸಮಯ ಸಾಧಕರ ತಾಕತ್ತು

ಬೇರೆಯವರು ಗೆದ್ದರೆ
ಇದು ಷಡ್ಯಂತ
ಜೊತೆಗೆ ವಿದ್ಯುನ್ಮಾನ ಮತಯಂತ್ರ
ತಮ್ಮ ಗೆಲುವಿಗೆ ಮಾತ್ರ
ಅಭಿವೃದ್ಧಿಯೇ ಮಂತ್ರ!

ವೈಭವ ಎಂಬ ಹುಡುಗನ
ಕಣ್ಣಿಗೆ ಕಾಣುವವು
ಬರೀ ಬೌಂಡರಿ ಸಿಕ್ಸರ್
ಅವನ ಬ್ಯಾಟು
ಬೌಲರ್‌ಗಳನ್ನು ರುಬ್ಬುವ ಮಿಕ್ಸರ್

ದುಬಾರಿ ಉಪ್ಪು ಎಂಬ ಮಕ್ಮಲ್ ಟೋಪಿ!

ಉಪ್ಪಿನ ಸೇವನೆ ಮಿತವಾಗಿರಲಿ ಎಂಬುದು ವೈದ್ಯರ ಸಲಹೆ. ಆದರೆ, ಬಿಳಿ ಉಪ್ಪಿನ ಬದಲು ಪಿಂಕ್ ಸಾಲ್ಟ್ ತಿನ್ನಿ ಎಂಬ ಇತ್ತೀಚಿನ ಪ್ರಚಾರವು, ಜನಸಾಮಾನ್ಯರನ್ನು ತಪ್ಪುದಾರಿಗೆ ಎಳೆಯುತ್ತಿದೆಯೇ?

» ಡಾ. ಶಶಿಕಿರಣ್ ಉಮಾಕಾಂತ್

ಇತ್ತೀಚೆಗೆ ಅನೇಕರು ಸಾಮಾನ್ಯವಾಗಿ ದೊರಕುವ ಅಯೋಡಿನ್‌ಯುಕ್ತ ಬಿಳಿ ಉಪ್ಪನ್ನು ಬದಿಗಿಟ್ಟು (ಕಿಲೋ ಬೆಲೆ ಸುಮಾರು ರು.20/–), 200 ರೂಪಾಯಿ ಕೊಟ್ಟು ಹಿಮಾಲಯನ್ ಪಿಂಕ್ ಸಾಲ್ಟ್ ತಂದು ಅಡುಗೆಗೆ ಬಳಸುತ್ತಿದ್ದಾರೆ. 'ಇದು ಬಿಪಿ ಕಡಿಮೆ ಮಾಡುತ್ತದೆ, ಅನೇಕ ಕಾಯಿಲೆ ಗುಣಪಡಿಸುತ್ತದೆ' ಎಂದು ವಾಟ್ಸಾಪ್ ಫಾರ್ವರ್ಡ್‌ಗಳಲ್ಲಿ ಓದಿ, ಇದನ್ನೇ ಸಂಜೀವಿನಿ ಎಂದು ನಂಬಿದ್ದಾರೆ. ಆದರೆ ವೈದ್ಯ ವಿಜ್ಞಾನದ ಪ್ರಕಾರ, ಇದು ಎಷ್ಟರ ಮಟ್ಟಿಗೆ ಸತ್ಯ? ಬನ್ನಿ ನೋಡೋಣ.

ಸೋಡಿಯಂ ಸತ್ಯ: ಉಪ್ಪು ಬೆಳ್ಳಗಿರಲಿ, ಗುಲಾಬಿ ಬಣ್ಣವಿರಲಿ ಅಥವಾ ಕಪ್ಪಗಿರಲಿ.. ಅದರ ರಾಸಾಯನಿಕ ಹೆಸರು 'ಸೋಡಿಯಂ ಕ್ಲೋರೈಡ್'. ಮಾಮೂಲಿ ಬಿಳಿ ಉಪ್ಪಿನಲ್ಲಿ ಶೇ. 99ರಷ್ಟು ಸೋಡಿಯಂ ಕ್ಲೋರೈಡ್ ಇದ್ದರೆ, ಈ ಪಿಂಕ್ ಸಾಲ್ಟ್‌ನಲ್ಲಿ ಅದು ಶೇ. 98ರಷ್ಟಿರುತ್ತದೆ. ಅಂದರೆ, ಪಿಂಕ್ ಸಾಲ್ಟ್ ಅನ್ನು ಅತಿಯಾಗಿ ತಿಂದರೂ ರಕ್ತದೊತ್ತಡ ಏರುವುದು ಅಷ್ಟೇ ಖಚಿತ. ಗುಲಾಬಿ ಬಣ್ಣದ ಉಪ್ಪು ಬಿಪಿ ಕಡಿಮೆ ಮಾಡುತ್ತದೆ ಎನ್ನುವುದು ಶುದ್ಧ ಸುಳ್ಳು.

ಬಣ್ಣದ ಹಿಂದಿನ ರಹಸ್ಯ: ಹಿಮಾಲಯದ ಉಪ್ಪಿಗೆ ಆ ಗುಲಾಬಿ ಬಣ್ಣ ಬರಲು ಕಾರಣ, ಅದರಲ್ಲಿರುವ ಕಬ್ಬಿಣದ ಆಕ್ಸೈಡ್ ಮತ್ತು ಇತರ ಅತೀ ಸ್ವಲ್ಪ ಪ್ರಮಾಣದ ಖನಿಜಗಳು. ಈ ಖನಿಜಗಳು ಸಹಾಯಕಾರಿಯಾದರೂ ಸಹಾ, ಅವು ಅತ್ಯಲ್ಪವಾಗಿರುವುದರಿಂದ ನಿಮ್ಮ ದೇಹದ ದೈನಂದಿನ ಅಗತ್ಯವನ್ನು ಪೂರೈಸುವಷ್ಟು ಸಿಗಬೇಕೆಂದರೆ, ನೀವು ಅಪಾಯಕಾರಿ ಪ್ರಮಾಣದಲ್ಲಿ ಉಪ್ಪನ್ನು ಸೇವಿಸಬೇಕಾಗುತ್ತದೆ.

ದಶಕಗಳ ಹಿಂದೆ ನಮ್ಮ ದೇಶದಲ್ಲಿ 'ಗಾಯಿಟರ್' (ಥೈರಾಯ್ಡ್ ಊದಿಕೊಳ್ಳುವ ಕಾಯಿಲೆ) ಮತ್ತು ಥೈರಾಯ್ಡ್ ರೋಗಗಳು ವಿಪರೀತವಾಗಿದ್ದವು. ಮಕ್ಕಳ ಮೆದುಳಿನ ಬೆಳವಣಿಗೆಯ ಮೇಲೂ ಥೈರಾಯ್ಡ್ ಸಮಸ್ಯೆಗಳು ಪರಿಣಾಮ ಬೀರುತ್ತಿದ್ದವು. ಇದನ್ನು ತಡೆಯಲೆಂದೇ ಸರ್ಕಾರ ಬಿಳಿ ಉಪ್ಪಿಗೆ ಸಾರ್ವಜನಿಕ ಆರೋಗ್ಯದ ದೃಷ್ಟಿಯಿಂದ 'ಅಯೋಡಿನ್' ಸೇರಿಸಿ ಮಾರಾಟ ಮಾಡಲು ಕಡ್ಡಾಯಗೊಳಿಸಿತು. ಇದರಿಂದಾಗಿ ನಮ್ಮ ದೇಶ ಆ ಕಾಯಿಲೆಗಳಿಂದ ಬಹುಪಾಲು ಮುಕ್ತವಾಯಿತು.

ಆದರೆ, ಈಗ ಪ್ರಚಾರದಲ್ಲಿರುವ ದುಬಾರಿ ಪಿಂಕ್ ಸಾಲ್ಟ್‌ನಲ್ಲಿ ನೈಸರ್ಗಿಕವಾಗಿ ಅಯೋಡಿನ್ ಇರುವುದಿಲ್ಲ ಮತ್ತು ಬಹುತೇಕ ಬ್ರ್ಯಾಂಡ್‌ಗಳು ಅದನ್ನು ಸೇರಿಸುವುದೂ ಇಲ್ಲ. ನಿಮ್ಮ ಮನೆಯ ದಿನನಿತ್ಯದ ಅಡುಗೆಗೆ ಬಿಳಿ ಉಪ್ಪನ್ನು ಸಂಪೂರ್ಣವಾಗಿ ನಿಲ್ಲಿಸಿ ಕೇವಲ ಪಿಂಕ್ ಸಾಲ್ಟ್ ಬಳಸಿದರೆ, ಗರ್ಭಿಣಿಯರು ಮತ್ತು ಬೆಳೆಯುವ ಮಕ್ಕಳಿಗೆ ಅಯೋಡಿನ್ ಕೊರತೆಯಾಗಿ ಥೈರಾಯ್ಡ್ ಸಮಸ್ಯೆಗಳು ಮರುಕಳಿಸುವ ಅಪಾಯವಿದೆ.

ಕ್ಷ ಕಿರಣ

ತಪ್ಪು ಕಲ್ಪನೆಗಳು ಮತ್ತು ವಾಸ್ತವ

ತಪ್ಪು ಕಲ್ಪನೆ: ಪಿಂಕ್ ಸಾಲ್ಟ್ ತಿಂದರೆ ಬಿಪಿ (ರಕ್ತದೊತ್ತಡ) ಹೆಚ್ಚಾಗುವುದಿಲ್ಲ.

ವಾಸ್ತವ: ಮನುಷ್ಯನ ಬಿಪಿ ಹೆಚ್ಚಿಸುವುದು ಉಪ್ಪಿನಲ್ಲಿರುವ 'ಸೋಡಿಯಂ'. ಬಿಳಿ ಉಪ್ಪು ಮತ್ತು ಪಿಂಕ್ ಉಪ್ಪು ಎರಡರಲ್ಲೂ ಸೋಡಿಯಂ ಪ್ರಮಾಣ ಹೆಚ್ಚು–ಕಡಿಮೆ ಒಂದೇ ಇರುತ್ತದೆ.

ತಪ್ಪು ಕಲ್ಪನೆ: ಪಿಂಕ್ ಸಾಲ್ಟ್‌ನಲ್ಲಿ ದೇಹಕ್ಕೆ ಬೇಕಾದ 84 ಬಗೆಯ ಖನಿಜಗಳಿವೆ.

ವಾಸ್ತವ: ಸೂಕ್ಷ್ಮವಾಗಿ ಪರೀಕ್ಷೆ ಮಾಡಿದರೆ ಅಂತಹ ಖನಿಜಗಳು ಸಿಗಬಹುದು. ಆದರೆ ಅವುಗಳ ಪ್ರಮಾಣ ಅದೆಷ್ಟು ಕಡಿಮೆ ಎಂದರೆ, ಅದರಿಂದ ದೇಹಕ್ಕೆ ಯಾವುದೇ ಗಣನೀಯ ಲಾಭವಾಗುವುದಿಲ್ಲ. ಇದೊಂದು ಮಾರ್ಕೆಟಿಂಗ್ ತಂತ್ರವಷ್ಟೇ. ಆ ಖನಿಜಗಳಿಗಾಗಿ ಉಪ್ಪು ತಿನ್ನುವ ಬದಲು ಸೊಪ್ಪು, ತರಕಾರಿ, ಹಣ್ಣು ತಿಂದರೆ ಹೆಚ್ಚು ಲಾಭವಿದೆ. ಆದ್ದರಿಂದ ಮನೆಯ ದೈನಂದಿನ ಅಡುಗೆಗೆ, ಸಾರು–ಸಾಂಬಾರ್‌ಗೆ ಕಡ್ಡಾಯವಾಗಿ 'ಅಯೋಡಿನ್‌ಯುಕ್ತ ಬಿಳಿ ಉಪ್ಪನ್ನೇ' ಬಳಸಿ. ನಿಮಗೆ ಪಿಂಕ್ ಸಾಲ್ಟ್‌ನ ರುಚಿ, ಬಣ್ಣ ಇಷ್ಟವಾದರೆ ಅದನ್ನು ಸಲಾಡ್ ಅಥವಾ ಹಣ್ಣುಗಳ ಮೇಲೆ ಉದುರಿಸಿಕೊಂಡು ತಿನ್ನಲು ಮಾತ್ರ ಸೀಮಿತಗೊಳಿಸಿ.

ಸೋಶಿಯಲ್ ಮೀಡಿಯಾ ವ್ಯಾಪಾರಿಗಳ ಮಾತು ಕೇಳಿ ನಿಮ್ಮ ಆರೋಗ್ಯವನ್ನು, ವಿಶೇಷವಾಗಿ ಮಕ್ಕಳ ಥೈರಾಯ್ಡ್ ಆರೋಗ್ಯವನ್ನು ಪಣಕ್ಕಿಡಬೇಡಿ. ಬಣ್ಣ ಮತ್ತು ಆಕರ್ಷಕ ಪ್ಯಾಕಿಂಗ್ ಹಿಂದಿರುವ ಮಾರ್ಕೆಟಿಂಗ್ ತಂತ್ರಕ್ಕೆ ಬಲಿಯಾಗದಿರಿ. ಸಾಮಾನ್ಯವಾಗಿ ದೊರಕುವ ಅಯೋಡಿನ್ ಯುಕ್ತ ಉಪ್ಪೇ ನಿಮಗೆ ಶ್ರೀರಕ್ಷೆ. ಒಟ್ಟಾರೆ, ಉಪ್ಪಿನ ಸೇವನೆ ಹಿತಮಿತವಾಗಿರಲಿ.

ಒಂದು ತಿಂಗಳಲ್ಲೇ ಎರಡನೆಯ ಹನಿಮೂನ್‌ಗೆ ಬೇಡಿಕೆ ಇಟ್ಟಿದ್ದಾಳೆ!

Ask the Editor

• ವಿಶ್ವೇಶ್ವರ ಭಟ್

ಸತಾಯಿಸುವ ಪ್ರಶ್ನೆಗಳಿಗೆ ಸಂತೈಸುವ ಉತ್ತರ

ಯಾವುದೇ ವಿಷಯದ ಬಗ್ಗೆ ಏನು ಪ್ರಶ್ನೆಯನ್ನಾದರೂ ಕೇಳಿ
asktheeditorvv@gmail.com

ಕೆ.ಸಿ. (ಇಮೇಲ್ ಮೂಲಕ)

- **ಭಟ್ರೇ, ನಮ್ಮ ಮದುವೆ ಏಪ್ರಿಲ್‌ನಲ್ಲಿ ಆಯ್ತು. ಹನಿಮೂನಿಗೂ ಹೋಗಿ ಬಂದ್ವಿ. ಆದರೆ ಈಗ ಬೆಂಗಳೂರಿಗೆ ಬಂದ್ಮೇಲೆ ನನ್ನ ಹೆಂಡತಿ ಮತ್ತೊಮ್ಮೆ ಹನಿಮೂನಿಗೆ ಹೋಗೋಣ ಅಂತ ಹೇಳುತ್ತಿದ್ದಾಳೆ! ಒಂದು ತಿಂಗಳಾದ ಮೇಲೂ ಹನಿಮೂನ್ ಲೈಫ್ ಮುಂದುವರಿಸುವುದು ನನಗೆ ಕಷ್ಟವಾಗುತ್ತಿದೆ. ಮದುವೆಯ ಸಿಹಿ ನಿಧಾನವಾಗಿ ಬಿಸಿಯಾಗುತ್ತಿದೆ. ಇದಕ್ಕೆ ನಿಮ್ಮ ಸಲಹೆ ಏನು?**

– ಕೆಸಿ ಅವರೇ, ನಿಮ್ಮ ಕಥೆ ಕೇಳುತ್ತಿದ್ದರೆ 'ಹನಿಮೂನ್' ಎಂಬುದು ಈಗ 'ಹನಿ-ಮೌಂಟೇನ್' ಆಗಿ ನಿಮ್ಮ ಮೇಲೆ ಬೀಳುತ್ತಿರುವಂತೆ ಕಾಣುತ್ತಿದೆ! ಏಪ್ರಿಲ್‌ನಲ್ಲಿ ಮದುವೆಯಾಗಿ, ಹನಿಮೂನ್ ಮುಗಿಸಿ ಬೆಂಗಳೂರಿನ ಟ್ರಾಫಿಕ್ ಮತ್ತು ಕೆಲಸದ ಒತ್ತಡಕ್ಕೆ ಮರಳಿದ ಮೇಲೆ ಮತ್ತೆ 'ಹನಿಮೂನ್' ಅಂದರೆ, ಅದು ಯಾವುದೇ ಸಂಸಾರ ಎಂಬ ಬಜೆಟ್‌ನಲ್ಲಿ ಮಂಡನೆಯಾಗದ 'ಹೆಚ್ಚುವರಿ ಅನುದಾನ'ದ ಬೇಡಿಕೆಯಿದ್ದಂತೆ.

ನೋಡಿ, ಹನಿಮೂನ್ ಎಂಬುದು ಒಂದು ಮಧುರವಾದ ಆರಂಭವೇ ಹೊರತು ಅದೊಂದು ನಿರಂತರ ಪ್ರಕ್ರಿಯೆಯಲ್ಲ. ಮದುವೆಯ ಆರಂಭದ ದಿನಗಳಲ್ಲಿ ಎಲ್ಲವೂ ಹೊಸದಾಗಿ, ಸುಂದರವಾಗಿ ಕಾಣುವುದು ಸಹಜ. ನಿಮ್ಮ ಹೆಂಡತಿಗೆ ಇನ್ನೂ ಆ 'ರೊಮ್ಯಾಂಟಿಕ್ ಗುಂಗು' ಇಳಿದಿಲ್ಲದಿರಬಹುದು. ಆದರೆ ಸಂಸಾರ ಎಂಬ ಬಂಡಿ ನಡೆಯುವುದು ಹನಿಮೂನ್ ರೆಸಾರ್ಟ್‌ಗಳಲ್ಲಲ್ಲ, ಬೆಂಗಳೂರಿನ ಮನೆಯ ರೇಷನ್ ಅಂಗಡಿ ಮತ್ತು ಆಫೀಸ್ ಫೈಲುಗಳ ನಡುವೆ! ಇದನ್ನು ಅವರಿಗೆ ಪ್ರೀತಿಯಿಂದ ಮನವರಿಕೆ ಮಾಡಿಕೊಡಿ; ಮತ್ತೆ ಹದಿನೈದು ದಿನಗಳ ಹನಿಮೂನ್ ಅಸಾಧ್ಯ ಎಂದು ನೇರವಾಗಿ ಹೇಳುವ ಬದಲು, ಒಂದು 'ಮಧ್ಯಮ ಮಾರ್ಗ' ಕಂಡುಕೊಳ್ಳಿ. ಬೆಂಗಳೂರಿನ ಸುತ್ತಮುತ್ತಲಿನ ನಂದಿ ಬೆಟ್ಟ, ಚಿಕ್ಕಮಗಳೂರು ಅಥವಾ ಕೊಡಗಿಗೆ ಒಂದು ವೀಕೆಂಡ್ ಟ್ರಿಪ್ ಪ್ಲಾನ್ ಮಾಡಿ. 'ದೊಡ್ಡ ಹನಿಮೂನ್‌ಗಿಂತ ಇಂಥ ಸಣ್ಣ ಸಣ್ಣ ಟ್ರಿಪ್‌ಗಳು ಹೆಚ್ಚು ಮಜಾ ನೀಡುತ್ತವೆ' ಎಂದು ಅವರಿಗೆ 'ಬ್ರೈನ್ ವಾಶ್' ಮಾಡಿ. ಇದು ಮಸೂದೆಗೆ ತಂದ 'ಅಮೆಂಡ್‌ಮೆಂಟ್' (ತಿದ್ದುಪಡಿ) ಇದ್ದಂತೆ!

ಮನೆಯಲ್ಲೇ ಹನಿಮೂನ್ ವಾತಾವರಣ ನಿರ್ಮಿಸಿ. ಸಂಜೆ ಹೋಟೆಲ್‌ಗೆ ಹೋಗುವುದು ಅಥವಾ ಒಟ್ಟಿಗೆ ಅಡುಗೆ ಮಾಡುವುದು ಕೂಡ ಒಂದು ರೀತಿಯ ಹನಿಮೂನ್ ಲೈಫ್‌ಗಿಂತ ಕಡಿಮೆಯಿಲ್ಲ. ಹನಿಮೂನ್ ಎಂಬುದು ಜಾಗದಲ್ಲಲ್ಲ, ಮನಸ್ಸಿನಲ್ಲಿದೆ ಎಂಬ ತತ್ವವನ್ನು ಚರ್ಚಿಸಿ.

ಮದುವೆಯ ಹೊಸತರಲ್ಲಿ ಇಂಥ ಬೇಡಿಕೆಗಳು ಬರುವುದು ಸಹಜ. ಅದನ್ನು ಸಿಟ್ಟಿನಿಂದ ಎದುರಿಸಬೇಡಿ, ಬದಲಾಗಿ ಹಾಸ್ಯ ಪ್ರಜ್ಞೆಯಿಂದ ನಿಭಾಯಿಸಿ. 'ನಮ್ಮ ಇಡೀ ಜೀವನವೇ ಒಂದು ಹನಿಮೂನ್ ಆಗಿರುವಾಗ, ಪ್ರತ್ಯೇಕವಾಗಿ ಮತ್ತೆಲ್ಲಿಗೆ ಹೋಗುವುದು?' ಎಂಬ ಒಂದು ಪಂಚಿಂಗ್ ಡೈಲಾಗ್ ಹೊಡೆದು ನೋಡಿ!

ಪಿ.ವಿ.ಸದಾಶಿವ, (ಇಮೇಲ್ ಮೂಲಕ)

- **ಭಟ್ರೇ, ನೀವು ತಂದೆ - ಮಗನ ಸಂಬಂಧದ ಬಗ್ಗೆ ಪುಸ್ತಕ ಬರೆದಿದ್ದೀರಿ. ತಂದೆ ಮಗನಿಗೆ ಏನು ಕಲಿಸಬೇಕು, ಮಗ ಹೇಗಿರಬೇಕು ಎಂಬುದನ್ನು ತುಂಬಾ ಚೆನ್ನಾಗಿ ವಿವರಿಸಿದ್ದೀರಿ. ಆದರೆ ತಂದೆ-ಮಗಳ ಸಂಬಂಧ, ತಾಯಿ ಮಗಳ ಸಂಬಂಧ, ಅಥವಾ ತಾಯಿ ಮಗನ ಸಂಬಂಧದ ಬಗ್ಗೆ ನೀವು ಏನೂ ಬರೆದಿಲ್ಲ. ಅದರ ಬಗ್ಗೆ ಬರೆಯುವ ಯೋಚನೆ ನಿಮಗಿದೆಯೇ?**

– ಸದಾಶಿವ ಅವರೇ, ನೀವು ಕೇಳಿದ ಪ್ರಶ್ನೆ ಬಹಳ ಅರ್ಥಪೂರ್ಣವಾಗಿದೆ. ತಂದೆ-ಮಗನ ಸಂಬಂಧದ ಬಗ್ಗೆ ಬರೆಯುವಾಗ ಆ ಬಾಂಧವ್ಯದ ಆಳ ಮತ್ತು ತಂದೆಯಾಗಿ ಮಗನಿಗೆ ನೀಡಬೇಕಾದ ಮಾರ್ಗದರ್ಶನದ ಬಗ್ಗೆ ನನ್ನ ಅನುಭವಗಳನ್ನು ಹಂಚಿಕೊಂಡಿದ್ದೆ. ಆದರೆ, ನೀವು ಹೇಳಿದಂತೆ ಕುಟುಂಬದ ಇತರ ಪ್ರಮುಖ ಕೊಂಡಿಗಳಾದ ತಂದೆ-ಮಗಳು, ತಾಯಿ-ಮಗಳು ಮತ್ತು ತಾಯಿ-ಮಗನ ಸಂಬಂಧಗಳೂ ಅಷ್ಟೇ ವಿಶೇಷ ಮತ್ತು ಸಂಕೀರ್ಣವಾದವುಗಳು. ಖಂಡಿತವಾಗಿಯೂ ಈ ವಿಷಯಗಳ ಬಗ್ಗೆ ಬರೆಯುವ ಆಲೋಚನೆ ನನಗಿದೆ. ಪ್ರತಿಯೊಂದು ಸಂಬಂಧವೂ ತನ್ನದೇ ಆದ ವಿಶಿಷ್ಟ ಆಯಾಮಗಳನ್ನು ಹೊಂದಿರುತ್ತವೆ.

ಒಬ್ಬ ಹೆಣ್ಣುಮಗುವಿಗೆ ತನ್ನ ತಂದೆಯೇ ಮೊದಲ 'ಹೀರೋ'. ಆಕೆ ಜಗತ್ತನ್ನು ನೋಡುವ ರೀತಿಯನ್ನು ತಂದೆಯ ಪ್ರೀತಿ ಮತ್ತು ಭರವಸೆ ರೂಪಿಸುತ್ತದೆ. ತಂದೆಯಾದವನು ಮಗಳಿಗೆ ಆತ್ಮವಿಶ್ವಾಸ ಮತ್ತು ಸ್ವಾವಲಂಬನೆಯನ್ನು ಹೇಗೆ ಕಲಿಸಬೇಕು ಎಂಬುದು ಚರ್ಚಿಸಬೇಕಾದ ವಿಷಯ.

ಕುಟುಂಬ ಎಂಬುದು ಕೇವಲ ರಕ್ತಸಂಬಂಧವಲ್ಲ, ಅದು ಭಾವನೆಗಳ ಮಹಾಸಾಗರ. ತಂದೆ-ಮಗನ ಸಂಬಂಧದಲ್ಲಿ ಶಿಸ್ತು ಮತ್ತು ಜವಾಬ್ದಾರಿಯ ಪಾಠಗಳಿದ್ದರೆ, ಉಳಿದ ಸಂಬಂಧಗಳಲ್ಲಿ ಮಮತೆ ಹಾಗೂ ಪರಸ್ಪರ ಗೌರವದ ವಿಭಿನ್ನ ಆಯಾಮಗಳಿವೆ. ತಂದೆ ಮತ್ತು ಮಗಳ ಸಂಬಂಧವು ಅತ್ಯಂತ ನಾಜೂಕಾದದ್ದು. ಮಗಳಿಗೆ ತಂದೆ ರಕ್ಷಣೆಯ ಕೋಟೆಯಂತೆ ಕಾಣುತ್ತಾನೆ. ತಂದೆ ತನ್ನ ಮಗಳಿಗೆ ಕೇವಲ ಆಸ್ತಿಯನ್ನಷ್ಟೇ ಅಲ್ಲ, ಜಗತ್ತಿನ ಕಠಿಣ ಸವಾಲುಗಳನ್ನು ಎದುರಿಸುವ ಧೈರ್ಯವನ್ನೂ ನೀಡಬೇಕು. ಮಗಳು ಬೆಳೆದು ಪರರ ಮನೆಗೆ ಹೋದರೂ, ತಂದೆಯ ಮೇಲಿನ ಗೌರವ ಮತ್ತು ಪ್ರೀತಿ ಎಂದಿಗೂ ಕುಂದುವುದಿಲ್ಲ.

ತಾಯಿ ಮತ್ತು ಮಗಳ ನಡುವೆ ಒಂದು ರೀತಿಯ 'ಅದೃಶ್ಯ ಕನ್ನಡಿ' ಇರುತ್ತದೆ. ಮಗಳು ತಾಯಿಯಲ್ಲಿ ತನ್ನ ಭವಿಷ್ಯವನ್ನು ಕಂಡರೆ, ತಾಯಿ ಮಗಳಲ್ಲಿ ತನ್ನ ಬಾಲ್ಯವನ್ನು ಕಾಣುತ್ತಾಳೆ. ಸಂಸ್ಕಾರ, ಸಂಯಮ ಮತ್ತು ಮನೆಯನ್ನು ನಿಭಾಯಿಸುವ ಕಲೆ ತಾಯಿಯಿಂದ ಮಗಳಿಗೆ ಪರಂಪರೆಯಾಗಿ ಹರಿಯುತ್ತದೆ. ಇದು ಕೇವಲ ಸಂಬಂಧವಲ್ಲ, ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ಸಾಗುವ ಜೀವನದ ಪಾಠ. ಇನ್ನು ತಾಯಿ ಮತ್ತು ಮಗನ ಸಂಬಂಧವು ಒಬ್ಬ ಪುರುಷನ ವ್ಯಕ್ತಿತ್ವವನ್ನು ರೂಪಿಸುವಲ್ಲಿ ನಿರ್ಣಾಯಕ. ಒಬ್ಬ ತಾಯಿ ತನ್ನ ಮಗನಿಗೆ ಹೆಣ್ಣನ್ನು ಗೌರವಿಸುವುದನ್ನು ಕಲಿಸಿದರೆ, ಆತ ಸಮಾಜದಲ್ಲಿ ಉತ್ತಮ ನಾಗರಿಕನಾಗುತ್ತಾನೆ. ಮಗನಿಗೆ ತಾಯಿಯೇ ಮೊದಲ ಗುರು ಮತ್ತು ಪ್ರೇರಣೆ.

ಈ ಎಲ್ಲ ಸಂಬಂಧಗಳ ಬಗ್ಗೆ ಬರೆಯುವಾಗ, ಅವುಗಳ ಹಿಂದಿನ ಮೌಲ್ಯಗಳು ಮತ್ತು ಬದಲಾಗುತ್ತಿರುವ ಇಂದಿನ ಜೀವನಶೈಲಿಯಲ್ಲಿ ಈ ಬಾಂಧವ್ಯಗಳನ್ನು ಹೇಗೆ ಉಳಿಸಿಕೊಳ್ಳಬೇಕು ಎಂಬುದನ್ನು ಚರ್ಚಿಸುವುದು ನನ್ನ ಉದ್ದೇಶ. ಪ್ರತಿಯೊಂದು ಮನೆಯ ಕಥೆಯೂ ಈ ಭಾವನೆಗಳ ಸುತ್ತಲೇ ಸುತ್ತುವುದರಿಂದ, ಈ ವಿಷಯದ ಮೇಲೆ ಬರೆಯುವುದು ಓದುಗರಿಗೆ ಆಪ್ತವಾಗಲಿದೆ ಎಂಬ ನಂಬಿಕೆ ನನಗಿದೆ. ನಮ್ಮ ಬರವಣಿಗೆ ಕೇವಲ ಮಾಹಿತಿ ನೀಡುವುದಕ್ಕಷ್ಟೇ ಸೀಮಿತವಾಗಿರಬಾರದು; ಅದು ಓದುಗರ ಭಾವನೆಗಳನ್ನು ತಟ್ಟಬೇಕು ಮತ್ತು ಅವರ ಜೀವನಕ್ಕೆ ಒಂದಿಷ್ಟು ಮೌಲ್ಯವನ್ನು ಸೇರಿಸಬೇಕು. ಸದ್ಯಕ್ಕೆ ನನ್ನ ಇತರ ಕೆಲವು ಪುಸ್ತಕಗಳ ಕೆಲಸಗಳು ನಡೆಯುತ್ತಿವೆ, ಅವುಗಳ ನಡುವೆಯೇ ಈ ಸಂಬಂಧಗಳ ಕುರಿತಾದ ಆಲೋಚನೆಗಳನ್ನು ಟಿಪ್ಪಣಿ ಮಾಡಿಕೊಳ್ಳುತ್ತಿದ್ದೇನೆ.

ಮುಂದಿನ ದಿನಗಳಲ್ಲಿ ಈ ಕುರಿತು ಖಂಡಿತವಾಗಿಯೂ ಬರೆಯುತ್ತೇನೆ. ನಿಮ್ಮ ಈ ಸಲಹೆ ನನ್ನ ಬರವಣಿಗೆಯ ಆಸಕ್ತಿಯನ್ನು ಮತ್ತಷ್ಟು ಹೆಚ್ಚಿಸಿದೆ.

ರಾಮ್ ಕೆ.ರಾವ್, (ಇಮೇಲ್ ಮೂಲಕ)

- **ಸಂಪಾದಕರೇ, ನನಗೆ ಸ್ವಂತ ಮನೆ ಬೇಕು, ಹೆಂಡತಿಗೆ ಫ್ಲಾಟ್ ಬೇಕು! ನನಗೆ ಕಾಂಪೌಂಡ್ ಬೇಕು, ಅವಳಿಗೆ ಕ್ಲಬ್ ಹೌಸ್ ಬೇಕು. ನನಗೆ ಟೆರೇಸ್ ಬೇಕು, ಅವಳಿಗೆ ಲಿಫ್ಟ್ ಬೇಕು : ಈ ರೀತಿ ಮನೆಯಲ್ಲಿ ದಿನವೂ ವಿಧಾನಮಂಡಲ ಕಲಾಪ! ಆದರೆ ಮಸೂದೆ ಪಾಸ್ ಆಗ್ತಿಲ್ಲ! ನಿಮ್ಮ ಸಲಹೆ ಏನು? ಮನೆ ಕಟ್ಟೋಣವಾ, ಫ್ಲಾಟ್ ಖರೀದಿಸೋದಾ?**

– ರಾವ್ ಅವರೇ, ನಿಮ್ಮ ಮನೆಯಲ್ಲಿ ನಿತ್ಯವೂ 'ವಿಧಾನ ಮಂಡಲ ಕಲಾಪ' ನಡೆಯುತ್ತಿರುವುದು ತಮಾಷೆಯಾಗಿದೆ. ನೋಡಿ, ಪ್ರಜಾಪ್ರಭುತ್ವದಲ್ಲಿ ಆಡಳಿತ ಪಕ್ಷ (ಹೆಂಡತಿ) ಮತ್ತು ಪ್ರತಿಪಕ್ಷದ (ನೀವು) ನಡುವೆ ಸಹಮತಿ ಇಲ್ಲದೇ ಯಾವುದೇ ಮಸೂದೆ ಪಾಸ್ ಆಗುವುದು ಕಷ್ಟ. ಇಲ್ಲಿ ಸ್ಪೀಕರ್ ಕೂಡ ನೀವೇ ಆಗಿರುವುದರಿಂದ ಪರಿಸ್ಥಿತಿ ಇನ್ನು ಜಟಿಲವಾಗಿದೆ. ನಿಮ್ಮ ಈ ಗೃಹ ಸಮರದ 'ಡೆಡ್‌ಲಾಕ್' ಮುರಿಯಲು ನಾನೊಂದು ಸಣ್ಣ 'ಸಂಸದೀಯ' ಸಲಹೆ ನೀಡುತ್ತೇನೆ.

ಕಾಂಪೌಂಡ್ ಎಂದರೆ ಅದು ಬರಿ ಗೋಡೆಯಲ್ಲ, ನಮ್ಮದೇ ಆದ ಖಾಸಗಿ ಸಾಮ್ರಾಜ್ಯ. ಅಲ್ಲಿ ಗಿಡ ಬೆಳೆಸಬಹುದು, ವಾಕಿಂಗ್ ಮಾಡಬಹುದು. ಇನ್ನು ಟೆರೇಸ್ ಮೇಲೆ ಚಂದ್ರನ ಬೆಳಕಿನಲ್ಲಿ ಕಾಫಿ ಕುಡಿಯುವ ಸುಖವೇ ಬೇರೆ. ಆದರೆ ನೆನಪಿಡಿ, ಸ್ವಂತ ಮನೆ ಎಂದರೆ ಸೆಕ್ಯೂರಿಟಿ, ಕಸ ವಿಲೇವಾರಿ, ಪೈಪ್ ಲೈನ್ ರಿಪೇರಿ ಎಲ್ಲವೂ ನಿಮ್ಮದೇ ಜವಾಬ್ದಾರಿ. ಫ್ಲಾಟ್ ಸಂಸ್ಕೃತಿಯಲ್ಲಿ 'ರೆಡಿಮೇಡ್' ಲೈಫ್ ಸ್ಟೈಲ್ ಸಿಗುತ್ತದೆ. ಸೆಕ್ಯೂರಿಟಿ ತಲೆನೋವಿಲ್ಲ, ಮಕ್ಕಳ ಆಟಕ್ಕೆ ಪಾರ್ಕ್ ಇರುತ್ತದೆ, ಕ್ಲಬ್ ಹೌಸ್‌ನಲ್ಲಿ ಸಂಜೆ ವಾಕಿಂಗ್ ಮಾಡಬಹುದು. ಲಿಫ್ಟ್ ಎಂಬುದು ವಯಸ್ಸಾದಂತೆ ಅನಿವಾರ್ಯವಾಗುವ ಸೌಲಭ್ಯ. ಹಾಗಾದರೆ ಮಸೂದೆ ಪಾಸ್ ಮಾಡುವುದು ಹೇಗೆ?

ನನ್ನ ಪ್ರಕಾರ, ಈ ಸಮಸ್ಯೆಗೆ 'ಸಮ್ಮಿಶ್ರ ಸರ್ಕಾರ'ದ ಮಾದರಿಯೇ ಸೂಕ್ತ! ಅಂದರೆ 'ರೋ ಫ್ಲಾಟ್' (Row Flat) ಅಥವಾ 'ಗೇಟೆಡ್ ಕಮ್ಯುನಿಟಿ ವಿಲ್ಲಾ' (Gated Community Villa) ದತ್ತ ಯೋಚಿಸಿ. ನೀವು ಒಂದು ಲೇಔಟ್‌ನಲ್ಲಿ ಪ್ಲಾಟ್ ತಗೊಂಡು ಮನೆ ಕಟ್ಟಿದರೆ, ನಿಮಗೆ ನಿಮ್ಮದೇ ಕಾಂಪೌಂಡ್ ಮತ್ತು ಟೆರೇಸ್ ಸಿಗುತ್ತದೆ. ಅದೇ ಸಮಯದಲ್ಲಿ ಆ ಲೇಔಟ್‌ನಲ್ಲಿ ಕಾಮನ್ ಆಗಿ ಕ್ಲಬ್ ಹೌಸ್, ಪಾರ್ಕ್ ಮತ್ತು ಸೆಕ್ಯೂರಿಟಿ ಇರುವುದರಿಂದ ನಿಮ್ಮ ಹೆಂಡತಿಯ ಆಸೆಯೂ ಈಡೇರುತ್ತದೆ. ಇನ್ನು ನಗರದ ಮಧ್ಯಭಾಗದಲ್ಲಿ ಫ್ಲಾಟ್ ಸಂಸ್ಕೃತಿಯೇ ಅನಿವಾರ್ಯ ಎಂದಾದರೆ, 'ಪೆಂಟ್ ಹೌಸ್' ಮಾದರಿಯ ಫ್ಲಾಟ್ ನೋಡಿ. ಅಲ್ಲಿ ಲಿಫ್ಟ್ ಇರುತ್ತದೆ, ಜತೆಗೆ ಟೆರೇಸ್ ನಿಮ್ಮದೇ ಖಾಸಗಿ ಆಸ್ತಿಯಾಗಿರುತ್ತದೆ.

ಕೊನೆಯದಾಗಿ, ಮನೆ ಕಟ್ಟುವುದು ಒಂದು ದೊಡ್ಡ ಸಾಹಸ. ಖರ್ಚು, ಮುಂದಿನ 20 ವರ್ಷದ ಸೌಲಭ್ಯಗಳು ಮತ್ತು ಮರುಮಾರಾಟದ ಮೌಲ್ಯವನ್ನು ಲೆಕ್ಕ ಹಾಕಿ. ಬಜೆಟ್ ಮತ್ತು ಮೆಂಟಲ್ ಪೀಸ್ ಎರಡನ್ನೂ ಬ್ಯಾಲೆನ್ಸ್ ಮಾಡುವುದು ಮುಖ್ಯ. ಸದ್ಯಕ್ಕೆ ನಿಮ್ಮ ಮನೆಯ ಕಲಾಪವನ್ನು 'ಮುಂದೂಡದೆ' (Adjourn), ಇಬ್ಬರೂ ಸೇರಿ ಕೆಲವು ವಿಲ್ಲಾ ಪ್ರಾಜೆಕ್ಟ್ ನೋಡಿ ಬನ್ನಿ. ಆಗ ಪತ್ನಿ ಮಹಾಶಯರಿಗೆ ಕಾಂಪೌಂಡ್ ಇಷ್ಟವಾಗಬಹುದು ಅಥವಾ ನಿಮಗೆ ಕ್ಲಬ್ ಹೌಸ್ ಇಷ್ಟವಾಗಬಹುದು! ಮನೆಯಲ್ಲಿ 'ಮಸೂದೆ' ಪಾಸ್ ಆದ ಮೇಲೆ ನನಗೆ ಸಿಹಿ ಹಂಚುವುದನ್ನು ಮರೆಯಬೇಡಿ!

ಸಿ.ಶ್ರೀಲೀಲಾ, (ಇಮೇಲ್ ಮೂಲಕ)

- **ಭಟ್ರೇ, ಪ್ರತಿ ಫಂಕ್ಷನ್‌ನಲ್ಲೂ ನಿಮ್ಮ ಡ್ರೆಸ್ ಕೋಡ್ ನೋಡಿ ನನಗೆ ಒಂದೇ ಡೌಟು! ನೀವು ನಿಮ್ಮ ವಾರ್ಡ್ ರೋಬ್‌ಗೆ ಬೀಗಹಾಕಿದ್ದೀರಾ ಅಂತ. ಯಾವಾಗಲೂ ಒಂದೇ ಸ್ಟೈಲ್! ಒಮ್ಮೆ ಬ್ಲೇಜರ್ ಹಾಕಿ, ಫುಲ್ ಮೇಕ್ ಓವರ್ ಟ್ರೈ ಮಾಡಿದ್ರೆ ಹೇಗಿರುತ್ತೆ?**

– ಶ್ರೀಕಾಂತ ಅವರೇ, ನಿಮ್ಮ ಮಾತು ಕೇಳಿ ನಿಜಕ್ಕೂ ಮನಸಾರೆ ನಕ್ಕೆ! ನನ್ನ ವಾರ್ಡ್‌ರೋಬ್‌ಗೆ ಬೀಗ ಹಾಕಿಲ್ಲ, ಆದರೆ ನನ್ನ ಸ್ಟೈಲ್‌ಗೆ ನಾನೇ ಒಂದು ಸಣ್ಣ 'ಲೈಫ್ ಟೈಮ್ ಲಾಕ್' ಹಾಕಿಕೊಂಡಿರುವುದು ನಿಜ. ನಿಮ್ಮ ಈ ಕಲ್ಪನೆ – ನಾನು ಬ್ಲೇಜರ್ ಧರಿಸಿ, ಕಂಪ್ಲೀಟ್ ಮೇಕ್ ಓವರ್ ಮಾಡಿಕೊಂಡು ವೇದಿಕೆ ಹತ್ತುವುದು – ಕೇಳಲು ಮಜವಾಗಿದೆ. ಆದರೆ ನನ್ನ ಈ 'ಯಾವಾಗಲೂ ಒಂದೇ ಸ್ಟೈಲ್' ಹಿಂದೆ ಒಂದು ಕಟ್ಟುನಿಟ್ಟಾದ ಪತ್ರಿಕೋದ್ಯಮದ ಶಿಸ್ತು ಮತ್ತು ವೈಯಕ್ತಿಕ ಫಿಲಾಸಫಿ ಇದೆ.

ನನ್ನ ಮಟ್ಟಿಗೆ ಉಡುಪು ಎಂಬುದು ಕೇವಲ ಫ್ಯಾಷನ್ ಅಲ್ಲ, ಅದು ನಮ್ಮ ವ್ಯಕ್ತಿತ್ವದ ವಿಸ್ತರಣೆ. ಸ್ಟೀವ್ ಜಾಬ್ಸ್ ಕಪ್ಪು ಟರ್ಟಲ್ ನೆಕ್ ಟಿ-ಶರ್ಟ್, ಜುಕರ್‌ಬರ್ಗ್ ಬೂದು ಬಣ್ಣದ ಟಿ-ಶರ್ಟ್ ಧರಿಸುವುದರ ಹಿಂದೆ ಒಂದು ಥಿಯರಿ ಇದೆ. ಅದನ್ನೇ 'ಡಿಸಿಷನ್ ಫಟೀಗ್' (Decision Fatigue) ತಪ್ಪಿಸುವುದು ಎನ್ನುತ್ತಾರೆ. ಪ್ರತಿದಿನ 'ಇವತ್ತು ಯಾವ ಬಟ್ಟೆ ಹಾಕಲಿ?' ಎಂದು ಯೋಚಿಸುವ ಸಮಯ ಮತ್ತು ಶಕ್ತಿಯನ್ನು ಉಳಿಸಿ, ಅದನ್ನು ಹೆಚ್ಚು ಕ್ರಿಯೇಟಿವ್ ಕೆಲಸಗಳಿಗೆ ಬಳಸಬಹುದು ಎಂಬುದು ನನ್ನ ನಂಬಿಕೆ. ಹತ್ತಾರು ವರ್ಷಗಳಿಂದ ಓದುಗರು ನನ್ನನ್ನು ಒಂದು ನಿರ್ದಿಷ್ಟ ರೂಪದಲ್ಲಿ ನೋಡಿ ರೂಢಿಸಿಕೊಂಡಿದ್ದಾರೆ. ಆ 'ಕಂಫರ್ಟ್ ಜೋನ್' ಮತ್ತು ಸರಳತೆ ನನಗೆ ಇಷ್ಟ.

ಒಂದು ಕಾಲವಿತ್ತು, ನಾನು ಎಲ್ಲೇ ಹೋದರೂ ಟಿಪ್-ಟಾಪ್ ಆಗಿ ಬ್ಲೇಜರ್ ಧರಿಸಿ, ಕುತ್ತಿಗೆಗೆ ಟೈ ಬಿಗಿದು 'ಕಾರ್ಪೊರೇಟ್ ಲುಕ್'ನಲ್ಲಿ ಮಿಂಚುತ್ತಿದ್ದೆ. ಆಗ ಅದು ನನಗೆ ಖುಷಿ ಕೊಡುತ್ತಿತ್ತು. ಆದರೆ ಹೋಗುತ್ತಾ ಹೋಗುತ್ತಾ ಆ ಬ್ಲೇಜರ್ ನನಗೆ ಶಿಸ್ತಿನ ಹೆಸರಲ್ಲಿ ಹಾಕಿದ 'ಕವಚ'ದಂತೆ ಕಾಡತೊಡಗಿತು. ಬಿಸಿಲಿದ್ದರೂ, ಮಳೆಯಿದ್ದರೂ ಆ ಕೋಟು ಧರಿಸಿ ಓಡಾಡುವುದು ಒಂದರ್ಥದಲ್ಲಿ ಬೋರಾಯಿತು. ಅಷ್ಟೇ ಅಲ್ಲ, ಆ ಉಡುಪು ನನ್ನ ಮತ್ತು ಸಾಮಾನ್ಯ ಓದುಗರ ನಡುವೆ ಒಂದು ಸಣ್ಣ ಗೋಡೆಯನ್ನು ಕಟ್ಟಿದಂತೆ ಭಾಸವಾಗುತ್ತಿತ್ತು. ಆಗ ಯಾರೋ ನನಗೆ ಇದೇ ಪ್ರಶ್ನೆ ಕೇಳಿರಬೇಕು – 'ಭಟ್ರೇ, ನೀವ್ಯಾಕೆ ಯಾವತ್ತೂ ಬ್ಲೇಜರ್ ಮತ್ತು ಟೈನಲ್ಲಿ ಕಾಣಿಸಿಕೊಳ್ಳುತ್ತೀರಿ?' ಹೀಗಾಗಿ ನಾನು ಈಗಿನ ಔಟ್‌ಫಿಟ್‌ಗೆ ಶಿಫ್ಟ್ ಆಗಿರಬಹುದು. ಈಗಿನ ಸ್ಟೈಲ್ ನನಗೆ ಅಭಿವ್ಯಕ್ತಿ ಸ್ವಾತಂತ್ರ್ಯ ನೀಡಿದೆ. ಬ್ಲೇಜರ್‌ನ ಬಿಗುವಿಗಿಂತ, ಈಗಿನ ಈ ಸಹಜತೆ ನನ್ನ ವ್ಯಕ್ತಿತ್ವಕ್ಕೆ ಹೆಚ್ಚು ಹತ್ತಿರವಾಗಿದೆ.

ನೀವು ಹೇಳಿದಂತೆ ಮತ್ತೆ ಬ್ಲೇಜರ್ ಹಾಕಿದರೆ, ಅದು ನನಗೆ ಹಳೆಯ 'ಯೂನಿಫಾರ್ಮ್'ಗೆ ಮರಳಿದಂತಾಗುತ್ತದೆ. ಜೀವನದಲ್ಲಿ ಒಂದೇ ರೀತಿ ಇರುವುದು ಬೋರು ಎಂಬ ಕಾರಣಕ್ಕೆ ನಾನು ಬದಲಾದೆ, ಈಗ ಮತ್ತೆ ಹಳೆಯದಕ್ಕೆ ಮರಳುವುದು ಅಷ್ಟು ಸುಲಭವಲ್ಲ! ಈಗಿನ ಈ ಲುಕ್‌ನಲ್ಲಿ ಇರುವ 'ಕಂಫರ್ಟ್' ಬ್ಲೇಜರ್‌ನ ಆ ಗಾಂಭೀರ್ಯದಲ್ಲಿ ಸಿಗಲು ಸಾಧ್ಯವೇ ಇಲ್ಲ. ಆದರೂ ನಾನು ವಿದೇಶ ಪ್ರಯಾಣದಲ್ಲಿ ಬ್ಲೇಜರ್‌ನ್ನು ಹೆಚ್ಚು ಇಷ್ಟಪಡುತ್ತೇನೆ. ಮುಂದಿನ ಸಲ ಹಾಗೆ ಬ್ಲೇಜರ್ ಹಾಕಿದಾಗ ಫೋಟೋ ತೆಗೆದು ನಿಮಗೆ ಕಳಿಸುತ್ತೇನೆ, ಆಯ್ತಾ?!

ಸಂಗೀತಾ, (ಇಮೇಲ್ ಮೂಲಕ)

- **ಸಂಪಾದಕರೇ, ನಮ್ಮ ಮನೆಯ ದೊಡ್ಡ ಬಿಕ್ಕಟ್ಟು ಶುರುವಾಗುವುದು ಕಿಚನ್‌ನಲ್ಲಿ. ಅತ್ತೆ ಅಡುಗೆಮನೆಯಿಂದ ಕಾಲು ಕೀಳುವ ಯೋಚನೆಯಲ್ಲಿದ್ದಾರೆ. ನನ್ನ ಪತಿರಾಯನಿಗೆ ಫುಲ್ ಟೆನ್ಶನ್. ಅಮ್ಮ ಅಲ್ಲಿಂದ ಕಾಲ್ಕಿತ್ತರೆ ಅಡುಗೆ ಯಾರು ಮಾಡ್ತಾರೆ? ಅಂತ! ನಾನು ಈ ಸಮಸ್ಯೆಗೆ ಹೇಗೆ ಪ್ರತಿಕ್ರಿಯಿಸಲಿ?**

– ಸಂಗೀತ ಅವರೇ, ಅಡುಗೆಮನೆಯ ಈ ರಾಜೀನಾಮೆ ಪರ್ವ ಬಹುಶಃ ಪ್ರತಿ ಮನೆಯಲ್ಲೂ ನಡೆಯುವ ಒಂದು ಸದ್ದಿಲ್ಲದ ಕ್ರಾಂತಿ! ನಿಮ್ಮ ಪತಿರಾಯರು ಟೆನ್ಶನ್‌ನಲ್ಲಿರುವಾಗ, 'ನಾನಿದ್ದೇನೆ ಅಲ್ವಾ?' ಎಂದು ಆತುರದಲ್ಲಿ ಭರವಸೆ ನೀಡಬೇಡಿ. ಆ ಜವಾಬ್ದಾರಿಯನ್ನು ತಕ್ಷಣವೇ ಹೆಗಲಿಗೆ ಏರಿಸಿಕೊಂಡರೆ, ಅದು ನಿಮ್ಮ ಖಾಯಂ ಇಲಾಖೆಯಾಗುವ ಅಪಾಯವಿರುತ್ತದೆ! ಅತ್ತೆಯವರು ಅಡುಗೆಮನೆಯಿಂದ ನಿವೃತ್ತಿ ಬಯಸುತ್ತಿದ್ದರೆ, ಅದನ್ನು ಪ್ರೀತಿಯಿಂದ ಸ್ವಾಗತಿಸಿ. 'ಇಷ್ಟು ವರ್ಷ ನಮಗಾಗಿ ಕಷ್ಟಪಟ್ಟಿದ್ದೀರಿ, ಇನ್ಮೇಲೆ ನೀವು ವಿಶ್ರಾಂತಿ ಪಡೆಯಿರಿ' ಎಂದು ಅವರಿಗೆ ಸಾಂತ್ವನ ಹೇಳಿ, ಗೌರವದ ವಿದಾಯ ಹೇಳಿ.

ಪತಿಯ ಆತಂಕಕ್ಕೆ ಉತ್ತರವಾಗಿ, 'ನಾವಿಬ್ಬರೂ ಸೇರಿ ಹೊಸ ರೆಸಿಪಿಗಳನ್ನು ಕಲಿಯೋಣ' ಅಥವಾ 'ವಾರಾಂತ್ಯದಲ್ಲಿ ನೀವೇ ಅಡುಗೆ ಮನೆಯ ಉಸ್ತುವಾರಿ ವಹಿಸಿಕೊಳ್ಳಿ' ಎಂದು ಮಂದಹಾಸದೊಂದಿಗೆ ಸಲಹೆ ನೀಡಿ. ಪರಿಸ್ಥಿತಿ ಕೈಮೀರುತ್ತಿದ್ದರೆ ಒಬ್ಬ ಅಡುಗೆ ಸಹಾಯಕಿಯನ್ನು ನೇಮಿಸಿಕೊಳ್ಳುವ ಬಗ್ಗೆ ಪ್ರಸ್ತಾಪಿಸಿ. ಇದು ಮನೆಯ ಶಾಂತಿ ಮತ್ತು ನಿಮ್ಮಿಬ್ಬರ ಸಂಬಂಧಕ್ಕೆ ಮದ್ದು.

ನೆನಪಿಡಿ, ಕಿಚನ್ ಎನ್ನುವುದು ಕೇವಲ ಅಡುಗೆ ಮಾಡುವ ಜಾಗವಲ್ಲ, ಅದು ಅಧಿಕಾರ ಹಸ್ತಾಂತರದ ಕೇಂದ್ರವೂ ಹೌದು! ಇಲ್ಲಿ ತಾಳ್ಮೆಯಷ್ಟೇ ಚತುರತೆಯೂ ಮುಖ್ಯ. ಅತ್ತೆಯವರ ನಿರ್ಧಾರಕ್ಕೆ ಬೆಂಬಲ ನೀಡುತ್ತಲೇ, ಅಡುಗೆಯ ಭಾರ ನಿಮ್ಮೊಬ್ಬರ ಮೇಲೆಯೇ ಬೀಳದಂತೆ ನೋಡಿಕೊಳ್ಳಿ.

» ಡಾ. ಸುರೇಂದ್ರನಾಥ್ ಡಿ.ಆರ್.

ಜಲವರ್ಣ ಕಲಾವಿದನಿಗೆ ವರ್ಣಶ್ರೀ ಪ್ರಶಸ್ತಿ!



ಕಲೆ ಎಂಬುದು ಕೇವಲ ಗೋಡೆಯ ಅಲಂಕಾರವಲ್ಲ, ಅದು ಒಂದು ನಾಡಿನ ಸಂಸ್ಕೃತಿ, ಇತಿಹಾಸ ಮತ್ತು ಆತ್ಮವನ್ನು ಮುಂದಿನ ಪೀಳಿಗೆಗೆ ದಾಟಿಸುವ ಸೇತುವೆ. ಈ ಮಾತಿಗೆ ತಮ್ಮ ಬದುಕನ್ನೇ ಮುಡಿಪಾಗಿಟ್ಟಿರುವ ಚಿತ್ರದುರ್ಗ ಜಿಲ್ಲೆಯ ಜೋಗಿ ಬೋರನಹಟ್ಟಿ ಗ್ರಾಮದ ಚಿತ್ರಕಲಾವಿದ ದಿನೇಶ್ ಬಿ. ಅವರಿಗೆ ಈಗ ಕರ್ನಾಟಕ ಲಲಿತಕಲಾ ಅಕಾಡೆಮಿಯ 'ವರ್ಣಶ್ರೀ ಪ್ರಶಸ್ತಿ' ಲಭಿಸಿದೆ. ಕೋಟೆನಾಡಿನ ಜೊತೆ ವಿಜಯನಗರ ಮತ್ತು ಚಾಲುಕ್ಯರ ನಾಡಿನ ಕಲ್ಲು, ಮಣ್ಣು, ಗುಡ್ಡಗಾಡು ಪ್ರದೇಶ, ಹರಿಯುವ ನೀರು, ಪುಷ್ಕರಣಿಗಳು, ಕಲ್ಲಿನ ರಥ, ಪುರಾತನ ದೇವಾಲಯಗಳನ್ನು ತಮ್ಮ ಜಲವರ್ಣದ ಮೂಲಕ ಜಗತ್ತಿಗೆ ಪರಿಚಯಿಸಿದ ಇವರ ಕಲಾಯಾನ ನಿಜಕ್ಕೂ ಸ್ಫೂರ್ತಿದಾಯಕ.

ಜಲವರ್ಣವು ಇವರಿಗೆ ಬಲು ಪ್ರಿಯ; ಬದಾಮಿ ಮತ್ತು ವಿಜಯಪುರದ ಐತಿಹಾಸಿಕ ತಾಣಗಳು ಇವರ ಕುಂಚದಲ್ಲಿ ಮೂಡಿಬರುವುದನ್ನು ನೋಡುವುದೇ ಒಂದು ವಿಶೇಷ ಅನುಭವ.

ಕಲಾಶಿಕ್ಷಕ ದಿನೇಶ್ ಬಿ. ಅವರು ಹುಟ್ಟಿದ್ದು ಚಿತ್ರದುರ್ಗ ಜಿಲ್ಲೆಯ ಜೋಗಿ ಬೋರನಹಟ್ಟಿಯಲ್ಲಿ. ಆದರೆ ಇವರನ್ನು ಕಲಾವಿದನನ್ನಾಗಿ ಗುರುತಿಸಿದ್ದು ವಿಜಯನಗರದ ಹಂಪಿ ಮತ್ತು ಚಾಲುಕ್ಯರ ರಾಜಧಾನಿ ಬಾದಾಮಿ. ಬಾಲ್ಯದಿಂದಲೇ ಚಿತ್ರಕಲೆಯ ಗೀಳು. ಚಿತ್ರದುರ್ಗದ ಎಸ್.ಜೆ.ಎಂ ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಐದು ವರ್ಷದ ಎ.ಎಂ. (ಆರ್ಟ್ ಮಾಸ್ಟರ್) ಕೋರ್ಸ್‌ನಲ್ಲಿ ಶಿಕ್ಷಣ ಪಡೆದವರು, ಚಿತ್ರಕಲೆ ಶಿಕ್ಷಣವನ್ನು ಡಿಪ್ಲೋಮಕ್ಕೆ ಸಮೀಕರಣಗೊಳಿಸದೆ ಪದವಿ, ಸ್ನಾತಕೋತ್ತರ ಪದವಿಯ ಬೆನ್ನತ್ತಿ ಹೋದದ್ದು ಕನ್ನಡ ವಿಶ್ವವಿದ್ಯಾಲಯ ಹಂಪಿಗೆ. ಇಲ್ಲಿ ಸ್ನಾತಕೋತ್ತರ ಪದವಿ ಜೊತೆ ಎಂ.ಫಿಲ್ ಪದವಿಯನ್ನು ಪಡೆದರು.

ಇವರು ಹಂಪಿ ಪರಿಸರದಲ್ಲಿ ಇದ್ದಷ್ಟು ಕಲ್ಲುಬಂಡೆಗಳ ನಡುವೆ ಬಿಸಿಲು, ಮಳೆ ಎನ್ನದೆ ಜಲವರ್ಣದ ಚಿತ್ರರಚನೆಯಲ್ಲಿ ತಲ್ಲೀನರಾಗುತ್ತಿದ್ದರು. ಅದಕ್ಕೆ ಸಾಕ್ಷಿ ಎಂಬಂತೆ ನೂರಾರು ಹಂಪಿ ಪರಿಸರದ ಜಲವರ್ಣದ ಚಿತ್ರಕೃತಿಗಳೇ ಸಾಕ್ಷಿ. ಇದರ ನಂತರದ ಹಾದಿಯೇ ಬಾದಾಮಿಯ ಕೆಂಪು ಬಂಡೆಗಳು, ಭೂತನಾಥ ದೇವಾಲಯದ ಸಾಲುಗಳು ಮತ್ತು ಅಗಸ್ತ್ಯ ತೀರ್ಥದ ನೀರಿನಲ್ಲಿ ಪ್ರತಿಬಿಂಬಿಸುವ ದೇವಾಲಯಗಳ ನೆರಳು. ಹಂಪಿಯ ಕಲ್ಲಿನ ರಥದಿಂದ ಹಿಡಿದು ಬಾದಾಮಿಯ ಗುಹಾಂತರ ದೇವಾಲಯಗಳವರೆಗೆ, ಇವರ ಕುಂಚ ನಿಸರ್ಗ ಮತ್ತು ಇತಿಹಾಸವನ್ನು ಬೆಸೆದಿದೆ.

ಜಲವರ್ಣದಲ್ಲಿ ವಿಶೇಷ ಒಲವು

ಇವರ ಪಾರದರ್ಶಕ ಜಲವರ್ಣ ಶೈಲಿ ತುಂಬಾ ಗಮನಸೆಳೆಯುವಂತಹದ್ದು. ಇವರು ಸ್ಟುಡಿಯೋಗೆ ಸೀಮಿತವಾಗದೆ ಸ್ಥಳದಲ್ಲೇ ಚಿತ್ರರಚಿಸುವ ಆಸಕ್ತಿ. ಬಾದಾಮಿಯ ಅಗಸ್ತ್ಯ ತೀರ್ಥದ ದಡದಲ್ಲಿ ಕುಳಿತು, ಆ ಕ್ಷಣದ ಬೆಳಕು, ನೆರಳು, ವಾತಾವರಣವನ್ನು ನೇರವಾಗಿ ಕ್ಯಾನ್ವಾಸ್‌ಗೆ ಇಳಿಸಿರುವ ಹಲವು ಚಿತ್ರಗಳುಂಟು. ಇವರ ಜಲವರ್ಣದಲ್ಲಿ ಒಂದು ವಿಶಿಷ್ಟ ಹೊಳಪು ಮತ್ತು ಲವಲವಿಕೆ ಇದೆ. ಬಾದಾಮಿಯ ಕೆಂಪು ಬಂಡೆಗಲ್ಲಿನ ಗಾಂಭೀರ್ಯ, ಹಂಪಿಯ ಕಲ್ಲಿನ ರಥದ ಕರಾರುವಾಕ್ಕಾದ ವಿನ್ಯಾಸ, ಬನಶಂಕರಿ ದೇವಾಲಯದ ಪಾವಿತ್ರ್ಯ – ಎಲ್ಲವೂ ನೀರಿನಂತೆ ತಿಳಿಯಾಗಿದೆ. ಕೇವಲ ದೇವಾಲಯಗಳಲ್ಲ. ಐತಿಹಾಸಿಕ ಕಲ್ಲಿನ ಕೋಟೆಯ ಗೋಡೆಗಳು, ಹಳ್ಳಿಗಳ ದೃಶ್ಯ, ಮಲೆನಾಡಿನ ಮಳೆ – ಹೀಗೆ ಕರ್ನಾಟಕದ ಮಣ್ಣಿನ ವಾಸನೆಯೇ ಇವರ ಚಿತ್ರಗಳ ಜೀವಾಳ. ದಿನೇಶ್ ಅವರ ಕುಂಚದಲ್ಲಿ ನಿಸರ್ಗ ದೃಶ್ಯಗಳು ಕಲಾಕೃತಿಯಾಗಿ ಮೂಡುವಲ್ಲಿ ಜಲವರ್ಣ ಅತ್ಯುತ್ತಮ ಮಾಧ್ಯಮ. ಹಂಪಿ ಮಡಿಲಿನ ನಿಸರ್ಗ ಹಾಗೂ ಮಾನವ ನಿರ್ಮಿತ ತಾಣಗಳು ಇವರ ಕುಂಚದಲ್ಲಿ ಅಚ್ಚುಕಟ್ಟಾಗಿ ಮೂಡಿಬಂದಿವೆ.

ಕಲಾಮನೆಯ ಕನಸುಗಾರ

ದಿನೇಶ್ ಬಿ. ಅವರಲ್ಲಿ ಚಿತ್ರಕಾರನ ಜತೆ, ಒಬ್ಬ ಸಾಂಸ್ಕೃತಿಕ ಚಿಂತಕನೂ ಅಡಗಿದ್ದಾನೆ. ಇವರು ಬಾದಾಮಿಗೆ ಆಗಮಿಸಿದಾಗ ಆ ಐತಿಹಾಸಿಕ ಮತ್ತು ಪ್ರಸಿದ್ಧ ಊರಿನಲ್ಲಿ, ಸ್ಥಳೀಯ ಕಲಾವಿದರಿಗೆ, ಪ್ರವಾಸಿಗರಿಗೆ ಚಿತ್ರಕಲೆ ಪರಿಚಯಿಸಲು ಒಂದು ವೇದಿಕೆಯೇ ಇರಲಿಲ್ಲ. ಆಗ ಇವರು ಸ್ಥಳೀಯರ ಸಹಕಾರದಿಂದ 'ಕಲಾಮನೆ' ಎಂಬ ಒಂದು ತಾಣವನ್ನು ವಿನ್ಯಾಸಗೊಳಿಸಿದರು. ಇದರ ಮೂಲಕ ಮಕ್ಕಳಿಗೆ, ಯುವಕರಿಗೆ ಉಚಿತವಾಗಿ ಚಿತ್ರಕಲೆ ಕಲಿಸಿದರು. ಬಾಲ್ಯವಿವಾಹ ವಿರೋಧಿ, ಸಂಪೂರ್ಣ ನೈರ್ಮಲ್ಯ ಅಭಿಯಾನದಂತಹ ಸಾಮಾಜಿಕ ವಿಷಯಗಳ ಬಗ್ಗೆ ಕಲೆಯ ಮೂಲಕ ಜಾಗೃತಿ ಮೂಡಿಸಿದರು.

ಈ ಕಲಾಮನೆಯಲ್ಲಿ ಇನ್ನೊಂದು ಉತ್ತಮ ಕೆಲಸ ನಡೆಯುತ್ತದೆ: ಪ್ರವಾಸಿಗರು ಸಹ ಕಲೆಯಲ್ಲಿ ಭಾಗವಹಿಸುವಂತಹ ಸಂವಹನ ಇಲ್ಲಿ ನಡೆದಿದೆ! ಬಾದಾಮಿಗೆ ಬರುವ ದೇಶ-ವಿದೇಶಿ ಪ್ರವಾಸಿಗರಿಗೆ ಸ್ಥಳದಲ್ಲೇ ಚಿತ್ರ ಬಿಡಿಸಿ ಕೊಡುವ ಸಂಪ್ರದಾಯವನ್ನು ಹುಟ್ಟುಹಾಕಿದರು ಮತ್ತು ಆ ಮೂಲಕ, ಪ್ರವಾಸಿಗರಿಗೆ ನಮ್ಮ ನಾಡಿನ ಕಲೆಯನ್ನು, ಪರಂಪರೆಯನ್ನು ಪೂಚಯಿಸಿ, ಕಲಾ ರಾಯಭಾರಿಯೂ ಆದರು.

ಗೌರವಗಳು

ಇವರ ಕಲಾಸೇವೆಯನ್ನು ಗುರುತಿಸಿ ಈಗ ಕರ್ನಾಟಕ ಲಲಿತಕಲಾ ಅಕಾಡೆಮಿಯು 2025-26ನೇ ಸಾಲಿಗೆ ವರ್ಣಶ್ರೀ ಪ್ರಶಸ್ತಿಗೆ ಆಯ್ಕೆ ಮಾಡಿರುತ್ತದೆ. ಇದು ಕೇವಲ ದಿನೇಶ್ ಬಿ. ಅವರಿಗೆ ಸಂದ ಗೌರವವಲ್ಲ, ಬದಲಾಗಿ ಸ್ಥಳದಲ್ಲೇ ಕುಳಿತು, ನೆಲದ ಸಂಸ್ಕೃತಿಯನ್ನು ದಾಖಲಿಸುವ ನೂರಾರು ಜಲವರ್ಣ ಕಲಾವಿದರಿಗೆ ಸಂದ ಗೌರವ ಎಂದೇ ಹೇಳಬೇಕು. 'ನಾನೊಬ್ಬ ಕಲಾಶಿಕ್ಷಕನಾಗಿ ಚಿತ್ರಕಲೆ ವಿಷಯದ ಬಗ್ಗೆ ಜ್ಞಾನದ ಅರಿವು ಮೂಡಿಸುವ ಕೆಲಸ ಮಾಡುತ್ತಿದ್ದೇನೆ. ಜಲವರ್ಣದ ನಿಸರ್ಗ ಚಿತ್ರ ರಚಿಸುವುದೆಂದರೆ ನನಗೆ ಬಹಳ ಇಷ್ಟ. ಚಿತ್ರ, ಬಣ್ಣ, ಬ್ರೆಷ್‌ಗಳೇ ನನ್ನ ಜೀವಾಳ' ಹೀಗೆಂದು, ವರ್ಣಶ್ರೀ ಪ್ರಶಸ್ತಿಗೆ ಭಾಜನರಾದ ಸಂದರ್ಭದಲ್ಲಿ ಬಿ.ದಿನೇಶ್ ಅವರು ವಿನೀತರಾಗಿ ಹೇಳುತ್ತಾರೆ ಮತ್ತು ಎಂದಿನಂತೆ, ಬಿಸಿಲು, ಮಳೆ, ಗಾಳಿ ಎನ್ನದೆ ಐತಿಹಾಸಿಕ ಸ್ಥಳಗಳಲ್ಲಿ ಕುಳಿತು, ನಮ್ಮ ಪರಂಪರೆಯನ್ನು ದಾಖಲಿಸುತ್ತಿದ್ದಾರೆ. ಇವರ ಕುಂಚದಿಂದ ಮೂಡುವ ಪ್ರತಿ ಚಿತ್ರವೂ 'ನೋಡಿ, ಇದು ನಮ್ಮ ಕರ್ನಾಟಕ' ಎಂದು ಹೆಮ್ಮೆಯಿಂದ ಜಗತ್ತಿಗೆ ಸಾರುತ್ತದೆ. ವರ್ಣಶ್ರೀ ಪ್ರಶಸ್ತಿ ಇವರ ಮುಡಿಗೇರಿದ್ದು ಅತ್ಯಂತ ಅರ್ಹವಾದ ಸನ್ಮಾನ. ಜತೆಗೆ, ಇವರು ಇತರ ಹಲವು ಗೌರವ ಮತ್ತು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

ಇವರ ಕಲಾಯಾನದಲ್ಲಿ ನಮ್ಮ ನಾಡಿನ ಐತಿಹಾಸಿಕ ಸ್ಥಳಗಳು ಇನ್ನಷ್ಟು ವಿಪುಲವಾಗಿ, ವಿವರವಾಗಿ, ಸಮೃದ್ಧವಾಗಿ ಮೂಡಿ ಬರಲಿ, ಯುವ ಕಲಾವಿದರಿಗೆ ದಾರಿದೀಪವಾಗಲಿ.

» ಲಕ್ಷ್ಮೀಕಾಂತ್ ಎಲ್ ವಿ ತುಮಕೂರು

ಮತ್ತೆ ಆರಂಭಗೊಂಡಿದೆ ಅಕ್ಷರಪೂಜೆ!

ಕಳೆದ ಕೆಲವು ತಿಂಗಳುಗಳಿಂದ ಆ ಕಟ್ಟಡ ಕೇವಲ ಇಟ್ಟಿಗೆ-ಸಿಮೆಂಟ್‌ಗಳ ನಿರ್ಜೀವ ಗೋಡೆಯಾಗಿತ್ತು. ಆಟದ ಮೈದಾನದಲ್ಲಿ ಒಣಗಿದ ಎಲೆಗಳು ಮೌನವಾಗಿ ಬಿದ್ದಿದ್ದವು. ಕಿಟಕಿ ಗಾಜುಗಳ ಮೇಲೆ ಧೂಳಿನ ತೆಳುಪರದೆ ಆವರಿಸಿತ್ತು; ಆದರೆ ಇಂದು ಆ ಮೌನಕ್ಕೆ ಮುಕ್ತಿ ಸಿಕ್ಕಿದೆ. ಮತ್ತೆ ಜೂನ್ ತಿಂಗಳ ಮುಂಗಾರಿನ ತಂಪು ಗಾಳಿ ಬೀಸುತ್ತಿದ್ದಂತೆ, ಶಾಲೆಯ ಹೊಸ್ತಿಲು ಜೀವಕಳೆಯನ್ನು ತುಂಬಿಕೊಂಡಿದೆ.

ಬೇಸಿಗೆಯ ರಜೆಯ ಮೌನವನ್ನು ಮುರಿದು ಚಿಣ್ಣರ ಹೆಜ್ಜೆಗಳು ಮತ್ತೆ ಶಾಲೆಯ ಅಂಗಳದ ಕಡೆಗೆ ಮುಖ ಮಾಡಿವೆ. ಶಾಲೆಯ ಆರಂಭವೆಂದರೆ ಕೇವಲ ಒಂದು ಕ್ಯಾಲೆಂಡರ್ ದಿನಾಂಕದ ಬದಲಾವಣೆಯಲ್ಲ; ಅದು ಮಕ್ಕಳ ಉತ್ಸಾಹಕ್ಕೆ ಮರುಜೀವ ನೀಡುವ ಪ್ರಕೃತಿಯ ನಿಯಮದಂತಿದೆ. ಒಣಗಿದ ಮರಕ್ಕೆ ಮಳೆಬಿದ್ದಾಗ ಚಿಗುರೊಡೆಯುವಂತೆ, ಕಂದಮ್ಮಗಳ ಹೆಜ್ಜೆಯ ಸಪ್ಪಳ ಹಾಗೂ ಕಿಲಿಕಿಲಿ ನಗುವಿನ ಹೊಸ ಗಿಲಿಗಿಲಿ ಕೇಳಿ ಶಾಲೆಯ ಹಳೆಯ ಬೆಂಚುಗಳು, ಕಪ್ಪುಹಲಗೆಗಳು ತಾವೂ ಜೀವಂತವಾಗಿರುವುದನ್ನು ನೆನಪಿಸಿಕೊಳ್ಳುತ್ತಿವೆ.

ಹೊಸ ಪಲ್ಲವಿ ಬಣ್ಣದ ಚೀಲ, ಕಣ್ಣಿನ ಕನಸು ಮತ್ತು ಮುಗ್ಧತೆಯ ನಾದ ಬೆಳಗಿನ ಜಾವದ ಸೂರ್ಯನ ಕಿರಣಗಳು ಭೂಮಿಯನ್ನು ಸ್ಪರ್ಶಿಸುವ ಮುನ್ನವೇ ಮನೆಗಳಲ್ಲಿ ಒಂದು ರೀತಿಯ ಸಂಭ್ರಮದ ಗಡಿಬಿಡಿ ಆರಂಭವಾಗಿದೆ. ಮಕ್ಕಳ ಹೆಗಲ ಮೇಲಿರುವ ಆ ಹೊಸ ಬಣ್ಣದ ಬ್ಯಾಗುಗಳಿವೆಯಲ್ಲ, ಅವು ಕೇವಲ ಪುಸ್ತಕಗಳನ್ನು ಹೊತ್ತ ಚೀಲಗಳಲ್ಲ; ಅವುಗಳೊಳಗೆ ಪೋಷಕರ ನೂರು ಕನಸುಗಳು, ಹಾರೈಕೆಗಳು ಮತ್ತು ಮಗುವಿನ ಮುಗ್ಧ ಜಗತ್ತಿನ ಕಲ್ಪನೆಗಳು ಅಡಗಿವೆ. ಹೊಸ ಪುಸ್ತಕಗಳ ಆ ಘಮ ಮಗುವಿಗೆ ಜ್ಞಾನದ ಮೊದಲ ಪರಿಮಳವನ್ನು ಆಸ್ವಾದಿಸಲು ಪ್ರೇರೇಪಿಸುತ್ತದೆ. ಪ್ರತಿಯೊಂದು ಮಗುವೂ ಒಂದು ಕದಡದ ಜಲದಂತೆ; ಶಾಲೆ ಎಂಬ ಸಾಗರವನ್ನು ಸೇರಲು ಹೊರಟ ನದಿಯ ಉಪನದಿಗಳಿವು. ಹೊಸದಾಗಿ ಸೀಳಿದ ಪೆನ್ಸಿಲ್‌ನ ಮೊನೆ ಹೇಗೆ ಬರೆಯಲು ಸಿದ್ಧವಾಗುತ್ತದೆಯೋ, ಹಾಗೆ ಮಕ್ಕಳ ಮನಸ್ಸು ಮತ್ತು ಅವರ ಹೆಜ್ಜೆಯ ಗಿಲಿಗಿಲಿ ಸದ್ದು ಹೊಸ ಪಾಠಗಳನ್ನು ಕಲಿಯಲು ಹಪಹಪಿಸುತ್ತಿರುತ್ತದೆ.

ದಾರಿಯುದ್ದಕ್ಕೂ ಗೆಳೆಯರನ್ನು ಕಂಡಾಗ ಮೊಳೆಯುವ ಆ ಮುಗುಳ್ನಗೆ, ಆ ಮುಗ್ಧತೆ, ವಾಸ್ತವದ ಜಗತ್ತಿನ ಕಪಟವಿಲ್ಲದ ಶುದ್ಧ ಪ್ರೀತಿಯನ್ನು ಹಾಗೂ ಅಂಗಳದಲ್ಲಿ ಹರಡಲಿರುವ ಸಂಭ್ರಮದ ಗಿಲಿಗಿಲಿಯನ್ನು ಬಿಂಬಿಸುತ್ತದೆ. ಶಾಲೆಯ ಅಂಗಳದಲ್ಲಿ ವಾಸ್ತವದ ನೆರಳು ಮತ್ತು ಭಾವನೆಗಳ ಸಮ್ಮಿಲನ

ಶಾಲೆಯ ಗೇಟು ದಾಟಿ ಒಳಬರುತ್ತಿದ್ದಂತೆ ದೃಶ್ಯ ಬದಲಾಗುತ್ತದೆ, ಅಲ್ಲಿ ಭಾವನೆಗಳ ಮಹಾಪೂರವೇ ಹರಿಯುತ್ತದೆ. ಎಲ್‌ಕೆಜಿ, ಯುಕೆಜಿಯ ಪುಟ್ಟ ಕಂದಮ್ಮಗಳಿಗೆ ತಾಯಿಯ ಕೈಬಿಡಿಸಿ ಶಾಲೆಯ ಒಳಗೆ ಹೋಗುವುದು ಒಂದು ದೊಡ್ಡ ಸಾಹಸ. ತಾಯಿಯ ಸೆರಗನ್ನು ಗಟ್ಟಿಯಾಗಿ ಹಿಡಿದು, ಕಣ್ಣೀರು ಸುರಿಸುತ್ತಾ ಅಳುವ ಆ ಹಠದಲ್ಲಿ ನನ್ನ ಪ್ರಪಂಚವೇ ನನ್ನ ಅಮ್ಮ ಎಂಬ ಸತ್ಯವಿದೆ. ಅದೇ ಹೊತ್ತಿಗೆ, ಐದನೇ-ಆರನೇ ತರಗತಿಯ ಹಿರಿಯ ಮಕ್ಕಳು ಹಳೆಯ ಗೆಳೆಯರನ್ನು ಕಂಡು ಬಿಗಿದಪ್ಪಿಕೊಳ್ಳುವ, ಬೇಸಿಗೆ ರಜೆಯ ಕಥೆಗಳನ್ನು ಉತ್ಸಾಹದಿಂದ ಹೇಳುವ ದೃಶ್ಯ ಶಾಲೆಯ ಅಂಗಳದಲ್ಲಿ ಹೊಸದೊಂದು ಉತ್ಸಾಹದ ಗಿಲಿಗಿಲಿಯನ್ನು ಸೃಷ್ಟಿಸುತ್ತದೆ.

ತೋಟಗಾರರು

ತರಗತಿಯ ಬಾಗಿಲಿನಲ್ಲಿ ನಿಂತು ಮುಗುಳ್ನಗುವಿನಿಂದ ಸ್ವಾಗತಿಸುವ ಶಿಕ್ಷಕರು ಕೇವಲ ಪಾಠ ಹೇಳಿಕೊಡುವ ಯಂತ್ರಗಳಲ್ಲ; ಅವರು ಒಣಗುತ್ತಿರುವ ಗಿಡಕ್ಕೆ ನೀರೆಯುವ ತೋಟಗಾರರು. ಮಗುವಿನ ಕಣ್ಣೀರನ್ನು ಒರೆಸಿ, ನಾನಿದ್ದೇನೆ ಎಂದು ಕೈಹಿಡಿದು ಕರೆದೊಯ್ಯುವ ಶಿಕ್ಷಕಿಯ ರೂಪದಲ್ಲಿ ಮಗುವಿಗೆ ಮತ್ತೊಬ್ಬ ತಾಯಿ ಕಾಣಸಿಗುತ್ತಾಳೆ, ಅಳುತ್ತಿದ್ದ ಮಗುವಿನ ಮುಖದಲ್ಲೂ ನಗು ಮೂಡಿ ಅಂಗಳದ ಗಿಲಿಗಿಲಿ ಹೆಚ್ಚಾಗುತ್ತದೆ.

ಆದರೆ ವಾಸ್ತವದ ನೆಲೆಯಲ್ಲಿ ನೋಡಿದಾಗ, ಇಂದಿನ ಶಿಕ್ಷಣ ವ್ಯವಸ್ಥೆ ಮತ್ತು ಶಾಲೆಯ ಆರಂಭದ ದಿನಗಳು ಕೇವಲ ಸಂಭ್ರಮವಷ್ಟೇ ಆಗಿ ಉಳಿದಿಲ್ಲ, ಅದರ ಹಿಂದೆ ಪೋಷಕರ ಆರ್ಥಿಕ ಸವಾಲುಗಳೂ ಇವೆ. ಹೆಚ್ಚುತ್ತಿರುವ ಡೊನೇಶನ್ ಮತ್ತು ಫೀಸುಗಳ ಹೊರೆ, ಪುಸ್ತಕ ಹಾಗೂ ಸಮವಸ್ತ್ರಗಳ ಬೆಲೆ ಏರಿಕೆ, ಮಗುವನ್ನು ಉತ್ತಮ ಶಾಲೆಗೆ ಸೇರಿಸಲೇಬೇಕೆಂಬ ಒತ್ತಡಗಳು ಪೋಷಕರನ್ನು ಹೈರಾಣಾಗಿಸುತ್ತವೆ. ಈ ಎಲ್ಲಾ ವಾಸ್ತವದ ಕಹಿ ಸತ್ಯಗಳ ನಡುವೆಯೂ, ಮಗುವಿನ ಮುಖದ ಮೇಲಿನ ಆ ನಗು ಪೋಷಕರ ಎಲ್ಲಾ ನೋವುಗಳನ್ನು ಮರೆಸುತ್ತದೆ.

ಕಪ್ಪುಹಲಗೆಯ ಮೇಲಿನ ಅಕ್ಷರ ಪ್ರಪಂಚ ಮತ್ತು ಆಟದ ಮೈದಾನದ ಆರ್ಭಟ ತರಗತಿಯೊಳಗೆ ಮಕ್ಕಳು ಕುಳಿತಾಗ ಮೂಡುವ ಶಿಸ್ತು ಕಣ್ಣಿಗೆ ಚಂದ. ಶಿಕ್ಷಕರು ಕಪ್ಪುಹಲಗೆಯ ಮೇಲೆ ಬಳಪದಿಂದ ಬರೆಯುವ ಮೊದಲ ಅಕ್ಷರದ ಸದ್ದು, ಜ್ಞಾನದ ದೇಗುಲದ ಘಂಟಾನಾದದಂತೆ ಕೇಳಿಸುತ್ತದೆ. ಅ, ಆ ಎಂಬ ಸ್ವರಗಳು ಅಥವಾ ಎ, ಬಿ ಎಂಬ ವರ್ಣಮಾಲೆಗಳು ಕೇವಲ ಅಕ್ಷರಗಳಲ್ಲ; ಅವು ಮಗುವಿನ ಭವಿಷ್ಯವನ್ನು ರೂಪಿಸುವ ಕೊಡಲಿಪೆಟ್ಟುಗಳು. ಆಟದ ಮೈದಾನದಲ್ಲಿ ಧೂಳೆಬ್ಬಿಸುತ್ತಾ ಓಡುವ ಮಕ್ಕಳ ಪಾದಗಳು, ಬಿದ್ದರೂ ನಗುತ್ತಾ ಏಳುವ ಆ ಛಲ, ಜೀವನದಲ್ಲಿ ಸೋಲು-ಗೆಲುವನ್ನು ಹೇಗೆ ಎದುರಿಸಬೇಕೆಂಬ ಮೊದಲ ಪಾಠವನ್ನು ಕಲಿಸುತ್ತವೆ.

ಮತ್ತೊಮ್ಮೆ ಜೂನ್ ಬಂದಿದೆ; ಇತ್ತ ಮುಂಗಾರು ಮಳೆಯ ಹನಿಗಳು ಬೀಳುತ್ತಿರುವಂತೆ, ಪುಟಾಣಿ ಮಕ್ಕಳು ಸಡಗರದಿಂದ, ಸಂಭ್ರಮದಿಂದ ಶಾಲೆಯ ಅಂಗಳದತ್ತ ಧಾವಿಸುತ್ತಿದ್ದಾರೆ. ಎಲ್ಲಾ ಮಕ್ಕಳು ಶಾಲೆಗೆ ಹೋಗುವುದು ದೇಶದ ಪ್ರಗತಿಯ ಸಂಕೇತ.

ಚಿಣ್ಣರ ಹೆಜ್ಜೆಗಳು ಶಾಲೆಯತ್ತ ಉತ್ಸಾಹದಿಂದ ಸಾಗುತ್ತಿರುವುದು, ದೇಶದ ಪ್ರಗತಿಯ ದಾರಿಯ ಮುನ್ಸೂಚನೆ. ಸ್ಥಿತಿವಂತರ, ಅನುಕೂಲ ಇರುವವರ ಮಕ್ಕಳ ಜತೆಯಲ್ಲೇ, ಕಾರ್ಮಿಕರ, ಬಡಜನರ ಮಕ್ಕಳೂ ಸಹ ಭರದಿಂದ ಹೆಜ್ಜೆ ಹಾಕಿ, ಎಲ್ಲರೂ ಈ ಜೂನ್ ತಿಂಗಳಲ್ಲಿ ಶಾಲೆಗೆ ಹೋಗಬೇಕು! ಈ ಹೆಜ್ಜೆಗಳು ಕೇವಲ ಶಾಲೆಯ ಅಂಗಳವನ್ನು ಮಾತ್ರವಲ್ಲ, ಇಡೀ ಸಮಾಜದ ಭವಿಷ್ಯದ ಹಾದಿಯನ್ನು ಸುಗಮವ ಶಕ್ತಿ ಹೊಂದಿವೆ. ಕಪ್ಪುಹಲಗೆಯ ಮೇಲಿನ ಅಕ್ಷರಗಳು ಮಕ್ಕಳ ಬಾಳಿನ ಬೆಳಕಾಗಲಿ, ಅವರ ಮುಗ್ಧ ನಗುವಿನ ಗಿಲಿಗಿಲಿ ಈ ಜಗದ ಕತ್ತಲೆಯನ್ನು ದೂರಾಗಿಸಲಿ!